ಮಂಗಳವಾರ, ನವೆಂಬರ್ 21, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಛಠ್ ಪೂಜೆ

ಛಠ್ ಪೂಜೆಯ ಅಂಗವಾಗಿ ಮಹಿಳೆಯರು ಆಗ್ರಾದ ತಾಜ್‌ಮಹಲ್ ಸಮೀಪದ ಯಮುನಾ ನದಿ ದಂಡೆಯಲ್ಲಿ ಸೋಮವಾರ ವಿಧಿವಿಧಾನಗಳನ್ನು ನೆರವೇರಿಸಿದರು



ರಿಸರ್ವ್ ಬ್ಯಾಂಕ್ - ಏಕೀಕೃತ ಲೋಕಪಾಲ ಯೋಜನೆ

ದೂರು ಸಲ್ಲಿಸಲು
https://cms.rbi.org.inಗೆ
ಭೇಟಿ ನೀಡಿ

ಆರ್‌ಬಿಐ ನಿಯಂತ್ರಿತ ಘಟಕಗಳ ವಿರುದ್ಧ ದೂರುಗಳ ಪರಿಹಾರಕ್ಕಾಗಿ ಏಕೈಕ ಸೌಲಭ್ಯ

30 ದಿನಗಳೊಳಗೆ ದೂರಿಗೆ ಪರಿಹಾರ ಸಿಗದಿದ್ದರೆ, ಅಥವಾ ಆರ್‌ಬಿಐ ಮುಖೇನ ನಿಯಮಿತ ಬ್ಯಾಂಕ್/ಎನ್‌ಬಿಎಫ್‌ಸಿ/ಕ್ರೆಡಿಟ್ ಇನ್‌ಫಾರ್ಮೇಶನ್ ಕಂಪನೀಸ್/ಸಿಸ್ಟಮ್ ಪಾರ್ಟಿಸಿಪೆಂಟ್ ಮುಖೇನ ತೃಪ್ತಿದಾಯಕ ಪರಿಹಾರ ಸಿಗದಿದ್ದರೆ ನೀವು ಲೋಕಪಾಲ/ಆರ್‌ಬಿಐ ಒಂಬುಡ್ಸ್‌ಮನ್‌ಗೆ ಆ ದೂರನ್ನು ಸಲ್ಲಿಸಬಹುದು

ಸೇವಾನ್ಯೂನ್ಯತೆಗೆ ಸಂಬಂಧಿಸಿದ ದೂರುಗಳಿಗೂ ಅನ್ವಯ (ಪಟ್ಟಿಯಲ್ಲಿ ಇಲ್ಲದ ದೂರುಗಳನ್ನು ಹೊರತುಪಡಿಸಿ)

ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ https://cms.rbi.org.inನಲ್ಲಿ ಅಥವಾ ಅಂಚೆ ಮೂಲಕ ಕೇಂದ್ರೀಕೃತ ರಸೀದಿ ಮತ್ತು ಸಂಸ್ಕರಣಾ ಕೇಂದ್ರ, ಭಾರತೀಯ ರಿಸರ್ವ್ ಬ್ಯಾಂಕ್, ಚಂಡೀಗಢ–160017, ಇಲ್ಲಿ ಸಲ್ಲಿಸಿ

ದೂರು ನಿರ್ವಹಣಾ ವ್ಯವಸ್ಥೆಯಲ್ಲಿ (https://cms.rbi.org.in) ನಿಮ್ಮ ದೂರಿನ ಸ್ಥಿತಿಯನ್ನು ಟ್ರ್ಯಾಕ್ ಮಾಡಿ

☎ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ **14448** ಗೆ

ಸಮಯ: ವಾರದ ದಿನಗಳಂದು ರಾಷ್ಟ್ರೀಯ ರಜಾದಿನಗಳನ್ನು ಹೊರತುಪಡಿಸಿ:

- ಬೆಳಿಗ್ಗೆ 8:00 ರಿಂದ ರಾತ್ರಿ 10:00ರ ತನಕ ಇಂಗ್ಲೀಷ್ ಮತ್ತು ಹಿಂದಿಯಲ್ಲಿ
- ಬೆಳಿಗ್ಗೆ 9:30 ರಿಂದ ಸಂಜೆ 5:15 ರ ತನಕ , 10 ಪ್ರಾದೇಶಿಕ ಭಾಷೆಗಳಲ್ಲಿ (ಅಸ್ಸಾಮಿ, ಬೆಂಗಾಲಿ, ಗುಜರಾತಿ, ಕನ್ನಡ, ಮರಾಠಿ, ಮಲಯಾಳಂ, ಒಡಿಯಾ, ಪಂಜಾಬಿ, ತೆಲುಗು ಮತ್ತು ತಮಿಳ್)

ಆರ್‌ಬಿಐ ಹೇಳುತ್ತೆ... ಜಾಣರಾಗಿರಿ, ಜಾಗರೂಕರಾಗಿರಿ!
RESERVE BANK OF INDIA
RESERVE BANK OF INDIA

ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in

ಹೆಚ್ಚಿನ ಮಾಹಿತಿಗಾಗಿ https://rbikehtahai.rbi.org.inಗೆ ಭೇಟಿ ನೀಡಿ / ಫೀಡ್‌ಬ್ಯಾಕ್ ನೀಡಲು rbikehtahai@rbi.org.inಗೆ ಬರೆಯಿರಿ

‘ದಪ್ಪ ಚರ್ಮಕ್ಕೆ ಹೋರಾಟವೇ ಅಸ್ತ್ರ ದರ್ಪ, ದಬ್ಬಾಳಿಕೆಗೆ ಸೊಪ್ಪು ಹಾಕಲ್ಲ’

• ಎಸ್ ರವಿಪ್ರಕಾಶ್

ಪ್ರಜಾವಾಣಿ ಸಂದರ್ಶನ

‘ರಾಜ್ಯದ ಸಮಗ್ರ ಹಿತವೇ ನಮ್ಮ ಗುರಿ. ವಿಧಾನಸಭೆಯಲ್ಲಿ ಚರ್ಚೆ, ಚಿಂತನ- ಮಂಥನಕ್ಕೆ ಆದ್ಯತೆ. ಸಣ್ಣ ಪುಟ್ಟ ವಿಚಾರಗಳಿಗೆಲ್ಲ ಸದನದ ಸಮಯವನ್ನು ಹಾಳು ಮಾಡುವುದಿಲ್ಲ. ಧರಣಿ, ಸಭಾತ್ಯಾಗ ನಮ್ಮ ಕಡೆಯ ಅಸ್ತ್ರ. ಸರ್ಕಾರ ಸಮಸ್ಯೆಗಳಿಗೆ ಕಿವುಡಾದಾಗ, ದಪ್ಪ ಚರ್ಮದವರಂತೆ ವರ್ತಿಸಿದಾಗ ಹೋರಾಟ ಅನಿವಾರ್ಯ. ದರ್ಪ, ದಬ್ಬಾಳಿಕೆ, ಬೇಜವಾಬ್ದಾರಿ, ದಮನದ ನಡವಳಿಕೆಗಳಿಗೆ ಸೊಪ್ಪು ಹಾಕುವುದಿಲ್ಲ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ವಿಪಕ್ಷ ನಾಯಕರಾದ ಬಳಿಕ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಮನದ ಮಾತು ಹಂಚಿಕೊಂಡಿದ್ದಾರೆ.

- **ವಿಧಾನಸಭೆಯ ಆಡಳಿತದ ಸಾಲಿನಲ್ಲಿ ಘಟಾನುಘಟಿ ನಾಯಕರೇ ಇದ್ದಾರೆ. ಸಿದ್ದರಾಮಯ್ಯ ಜತೆ ನಿಮ್ಮ ಸಂಬಂಧವೂ ಚೆನ್ನಾಗಿದೆ. ಹೀಗಿದ್ದಾಗ ವಿಪಕ್ಷ ನಾಯಕನ ಸ್ಥಾನ ನಿಭಾಯಿಸುವುದು ಕಷ್ಟವಲ್ಲವೇ?**

ಯಾವ ಹುದ್ದೆಯನ್ನು ನಿರ್ವಹಿಸುತ್ತೇವೆಯೋ ಅದಕ್ಕೆ ತಕ್ಕಂತೆ ಇರಬೇಕು. ಗೃಹ ಸಚಿವನಾಗಿದ್ದಾಗ ನಿಷ್ಠುರವಾಗಿಯೇ ಕೆಲಸ ಮಾಡಿದ್ದೆ. ಕಂದಾಯ ಸಚಿವನಾಗಿದ್ದಾಗ ರಾಜ್ಯದ ಉದ್ದಗಲ ಓಡಾಡಿ ಜನರ ಸಣ್ಣಪುಟ್ಟ ಸಮಸ್ಯೆಗಳಿಗೂ ಸ್ಪಂದಿಸಿದ್ದೆ. ಹೋರಾಟದ ಹಿನ್ನೆಲೆ ಇರುವ ಯಾವುದೇ ವ್ಯಕ್ತಿಗೆ ಯಾರ ಎದುರು ನಿಂತು ಮಾತನಾಡಲು ಅಳುಕು, ಅಂಜಿಕೆ ಇರುವುದಿಲ್ಲ. ವಿಪಕ್ಷ ನಾಯಕ ಎಂದರೆ ಗದರಿಸುವುದು- ಅಬ್ಬರಿಸುವುದಲ್ಲ. ಗಟ್ಟಿ ಮಾತುಗಳಲ್ಲಿ ಸರ್ಕಾರದ ಕಿವಿ ಹಿಂಡಬೇಕು. ನಮ್ಮ ಎದುರು ಯಾರಿದ್ದಾರೆ ಎನ್ನುವುದು ಮುಖ್ಯ ಅಲ್ಲ. ವಿರೋಧಿ ಸ್ಥಾನದಲ್ಲಿ ಗೆಳೆಯರು, ಗುರುಗಳು, ಸ್ನೇಹಿತರು, ಬಂಧು- ಬಳಗ ಯಾರೇ ಇದ್ದರೂ ಧೈರ್ಯಗೆಡದೇ ಹೋರಾಡು ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಆ ಮಾತುಗಳೇ ನನಗೆ ಮಾರ್ಗದರ್ಶನ. ಯಾರ ಜತೆಗೂ ಹೊಂದಾಣಿಕೆ ಪ್ರಶ್ನೆಯೇ ಇಲ್ಲ.

- **ನಿಮ್ಮ ಮತ್ತು ಅಧ್ಯಕ್ಷರ ಆಯ್ಕೆ ಪಕ್ಷದಲ್ಲಿ ದೊಡ್ಡ ಪ್ರಮಾಣದಲ್ಲಿ ಅಸಮಾಧಾನ ಹುಟ್ಟು ಹಾಕಿದೆಯಲ್ಲವೇ? ಇದನ್ನು ಹೇಗೆ ತಣಿಸುತ್ತೀರಿ?**

ನನಗೆ ನೀಡಿದ ಹುದ್ದೆಯ ಬಗ್ಗೆ ಯಾರೂ ಅಸಮಾಧಾನ ವ್ಯಕ್ತಪಡಿಸಿಲ್ಲ. ನನ್ನ ಹಿರಿತನವನ್ನು ಎಲ್ಲರೂ ಒಪ್ಪಿದ್ದಾರೆ. ಅಸಮಾಧಾನಗೊಂಡವರನ್ನು ಮಾತನಾಡಿಸಿ, ಸಮಾಧಾನ ಪಡಿಸುವ ಕೆಲಸ ನಾನು ಮತ್ತು ಅಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಒಟ್ಟಿಗೆ ಮಾಡುತ್ತಿದ್ದೇವೆ. ನನ್ನ ಮತ್ತು ವಿಜಯೇಂದ್ರ ಮಧ್ಯೆ ಉತ್ತಮ ಬಾಂಧವ್ಯವಿದೆ. ನಮ್ಮ ಜೋಡಿ ಡಿಕೆಶಿ-ಸಿದ್ದರಾಮಯ್ಯ ಜೋಡಿಯಂತಲ್ಲ. ನಮ್ಮದು ಹಳೇ ಬೇರು ಹೊಸ ಚಿಗುರು. ನಮ್ಮ ಅಧ್ಯಕ್ಷರಿಂದ ಕಾರ್ಯಕರ್ತರ ಪಡೆ ಉತ್ಸಾಹದಿಂದ ಪುಟಿದೆದ್ದಿದೆ.

- **ಜೆಡಿಎಸ್ ಜತೆಗೆ ಹೊಂದಾಣಿಕೆ ಹೇಗಿರುತ್ತದೆ?**

ಜೆಡಿಎಸ್–ಬಿಜೆಪಿಯ 20–20 ಸರ್ಕಾರ ಅತ್ಯುತ್ತಮ ಸರ್ಕಾರವಾಗಿತ್ತು. ಎರಡೂ ಪಕ್ಷಗಳ ಮಧ್ಯೆ ಉತ್ತಮ ಬಾಂಧವ್ಯವಿತ್ತು. ಈಗಲೂ ಅದು ಮುಂದುವರೆಯುತ್ತದೆ. ಲೋಕಸಭೆ ಚುನಾವಣೆಯಲ್ಲಿ ಎರಡೂ ಪಕ್ಷಗಳು ಸೇರಿ 28 ಸ್ಥಾನ ಗೆಲ್ಲುವ ವಿಶ್ವಾಸವಿದೆ. ನಮ್ಮದು ಸಹಜ ಮೈತ್ರಿ.

‘ಹಿರಿತನ, ಹೋರಾಟದ ಹಿನ್ನೆಲೆಯೇ ಆಯ್ಕೆಗೆ ಕಾರಣ’

‘ಹಿರಿತನ ಮತ್ತು ಸರ್ಕಾರದಲ್ಲಿ ಮಾಡಿದ ಕೆಲಸಗಳನ್ನು ಪರಿಗಣಿಸಿ ವರಿಷ್ಠರು ಆಯ್ಕೆ ಮಾಡಿದ್ದಾರೆ. ನಾನು ಹೋರಾಟದ ಹಿನ್ನೆಲೆಯಿಂದ ಬಂದವನು. ತುರ್ತುಪರಿಸ್ಥಿತಿಯಲ್ಲಿ ಇಂದಿರಾಗಾಂಧಿ ವಿರುದ್ಧ ಹೋರಾಟ ಮಾಡಿ ಜೈಲಿಗೆ ಹೋಗಿದ್ದೆ. ಆಗ ನನ್ನ ವಯಸ್ಸು 17. ಬಿಜೆಪಿ ನಗರ ಅಧ್ಯಕ್ಷನಾಗಿದ್ದಾಗ ಪ್ರತಿ ವಾರ ಹೋರಾಟ ಹಮ್ಮಿಕೊಳ್ಳುತ್ತಿದ್ದೆ. ನಮ್ಮ ಸರ್ಕಾರ ರಚನೆ ಆದ ಸಂದರ್ಭದಲ್ಲಿ ಶಾಸಕರ ಸಂಖ್ಯೆ ಕಡಿಮೆ ಆದಾಗ ಶಾಸಕರನ್ನು ಹೊಂದಿಸುವ ಮತ್ತು ಟ್ರಬಲ್ ಶೂಟರ್ ಆಗಿಯೂ ಕೆಲಸ ಮಾಡಿರುವುದನ್ನು ವರಿಷ್ಠರು ಗಮನಿಸಿದ್ದಾರೆ. ಪಕ್ಷದಲ್ಲಿ ಯಾವುದೇ ಗುಂಪಿನ ಜತೆ ಗುರುತಿಸಿಕೊಂಡವನಲ್ಲ. ಎಲ್ಲ ನಾಯಕರ ಜತೆಗೂ ಇದ್ದೆ. ಇದು ನನ್ನ ಆಯ್ಕೆಗೆ ಕಾರಣ‘ ಎಂದು ಅಶೋಕ ಪ್ರತಿಪಾದಿಸಿದರು.


ಆರ್.ಅಶೋಕ

ನಮ್ಮದೇನೂ ‘ಫ್ರೀ ಬೀಸ್’ ಅಲ್ಲ ಬದುಕು ಕಟ್ಟಿ ಕೊಡುವ ಗ್ಯಾರಂಟಿ’

ಪ್ರಜಾವಾಣಿ ವಾರ್ತೆ

‘ನಮ್ಮ ‘ಗ್ಯಾರಂಟಿ’ಗಳು ‘ಫ್ರೀ ಬೀಸ್’ (ಉಚಿತ ಕೊಡುಗೆ) ಅಲ್ಲ. ಜನರ ಬದುಕು ಕಟ್ಟಿ ಕೊಡುವ ಯೋಜನೆಗಳು. ಜನರ ಬದುಕು ದಿವಾಳಿಯಾಗುತ್ತಿದ್ದ ಹೊತ್ತಿನಲ್ಲಿ ಬದಲಾವಣೆ ತರುವ ಕೆಲಸವನ್ನು ಮಾಡಿದ್ದೇವೆ. ಬೆಲೆ ಏರಿಕೆಯು ಜನರ ಪಿಕ್ ಪಾಕೆಟ್ ಮಾಡುತ್ತಿರುವ ದಿನಗಳಲ್ಲಿ ಪಾಕೆಟ್ ತುಂಬಿಸುವ ಕೆಲಸ ಮಾಡಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯ ಸರ್ಕಾರಕ್ಕೆ ಆರು ತಿಂಗಳು ತುಂಬಿದ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಸರ್ಕಾರದ ಸಾಧನೆ, ಭವಿಷ್ಯದ ಸವಾಲುಗಳ ಬಗ್ಗೆ ಮಾತನಾಡಿದ ಅವರು, ‘ದೇಶದ ಅನೇಕ ರಾಜ್ಯಗಳು ಈಗ ನಮ್ಮ ಈ ಯೋಜನೆಗಳನ್ನು ನಕಲು ಮಾಡುತ್ತಿವೆ’ ಎಂದರು.

- **‘ಗ್ಯಾರಂಟಿ’ಗಳಿಂದ ಅಭಿವೃದ್ಧಿಗೆ ಅನುದಾನವೇ ಇಲ್ಲ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರಲ್ಲ?**

ಕೊಟ್ಟ ಮಾತು ಉಳಿಸಿಕೊಳ್ಳುವುದು ನಮ್ಮ ಆದ್ಯತೆಯಾಗಿತ್ತು. ಹೀಗಾಗಿ ‘ಗ್ಯಾರಂಟಿ’ಗಳಿಗೆ ಆದ್ಯತೆ ನೀಡಿದ್ದೇವೆ. ಹಾಗೆಂದು, ಯಾವ ಅಭಿವೃದ್ಧಿ ಯೋಜನೆಗಳೂ ಸ್ಥಗಿತವಾಗಿಲ್ಲ. ರಸ್ತೆ, ಆರ್‌ಡಿಪಿಆರ್, ಕುಡಿಯುವ ನೀರು ವಿಷಯದಲ್ಲಿ ಕಾಮಗಾರಿಗಳು ಮುಂದುವರಿದಿವೆ.

- **‘ಶಕ್ತಿ’, ‘ಗೃಹಲಕ್ಷ್ಮಿ’ ಮಹಿಳಾ ಸಮುದಾಯಕ್ಕೆ ಶಕ್ತಿ ತುಂಬಿದೆಯೇ?**

ದಸರಾ ಮತ್ತು ಹಾಸನಾಂಬೆಯನ್ನು ನೋಡಲು ಬಂದ ಮಹಿಳಾ ಜನಸಾಗರ ‘ಶಕ್ತಿ’ಯ ಫಲ. ಕಳೆದ ವರ್ಷ ಹಾಸನಾಂಬೆಯನ್ನು ನೋಡಲು 6 ಲಕ್ಷ ಜನ ಬಂದಿದ್ದರು. ₹ 3.50 ಕೋಟಿ ಸಂಗ್ರಹವಾಗಿತ್ತು. ಈ ವರ್ಷ 14 ಲಕ್ಷ ಜನ ಬಂದಿದ್ದು, ₹ 8.45 ಕೋಟಿ ಸಂಗ್ರಹವಾಗಿದೆ. ಗೃಹಲಕ್ಷ್ಮಿ ಯೋಜನೆ ಪ್ರತಿ ತಿಂಗಳು ಒಂದು ಕೋಟಿ ಮಹಿಳೆಯರಿಗೆ ತಲುಪುತ್ತಿದೆ. ಸುಮಾರು 6 ಲಕ್ಷ ಕುಟುಂಬಗಳಿಗೆ ನಾನಾ ಕಾರಣಗಳಿಗೆ ಗೃಹಲಕ್ಷ್ಮಿ ತಲುಪಿಲ್ಲ. ಸಮಸ್ಯೆಗಳನ್ನು ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- **‘ಗ್ಯಾರಂಟಿ’ ನಡುವೆ ಕಣ್ಣಿಗೆ ಕಾಣುವಂಥ ಅಭಿವೃದ್ಧಿ ಕೆಲಸಗಳು ಯಾವುದೂ ಇಲ್ವಲ್ಲ?**

ಯಾಕಿಲ್ಲ? ಆರು ತಿಂಗಳ ಅವಧಿಯಲ್ಲಿ ಜನ ಸಂಭ್ರಮಿಸುವಂಥ ಆಡಳಿತವನ್ನು ಸರ್ಕಾರ ನೀಡಿದೆ. ನನ್ನ ಇಲಾಖೆಯನ್ನೇ (ಜಲಸಂಪನ್ಮೂಲ) ತೆಗೆದುಕೊಳ್ಳಿ. ಕಾವೇರಿ ವಿಚಾರದಲ್ಲಿ ರೈತರನ್ನು ಕಾಪಾಡಿದ್ದೇವೆ. ಮೇಕೆದಾಟು ಯೋಜನೆಯ ಅನುಷ್ಠಾನ ವಿಚಾರದಲ್ಲಿ ನಮಗೆ ಅನುಕೂಲಕರವಾದ ವಾತಾವರಣವಿದೆ. ಎತ್ತಿನಹೊಳೆ ಯೋಜನೆಗೆ ₹ 9,000 ಅನುದಾನಕ್ಕೆ ಕೇಂದ್ರಕ್ಕೆ ಬೇಡಿಕೆ ಇಟ್ಟಿದ್ದೇವೆ. ಆದರೆ, ಕೊಡುವುದಿಲ್ಲವೆಂದು ಕೇಂದ್ರದಿಂದ ಪತ್ರ ಬಂದಿದೆ.

- **ಬಿಜೆಪಿ ಸರ್ಕಾರದ ವಿರುದ್ಧದ ಭ್ರಷ್ಟಾಚಾರ, ಶೇ 40 ಲಂಚ ಆರೋಪ ಕೂಡಾ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣ. ನಿಮ್ಮ ಸರ್ಕಾರ ಬಂದ ಮೇಲೆ ಮುಂದುವರಿದಿದೆ ಎಂಬ ಆರೋಪ ಇದೆಯಲ್ಲ?**

ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತಿದೆ ಬಿಜೆಪಿ ಮಾಡುತ್ತಿರುವ ಆರೋಪ. ಕಳೆದ ಚುನಾವಣೆಯಲ್ಲಿ ಜನ ಅವರಿಗೆ ಎದ್ದೇಳಲು ಸಾಧ್ಯವಾಗದಷ್ಟು ಏಟು ಕೊಟ್ಟಿದ್ದಾರೆ. ಚುನಾವಣೆಯಲ್ಲಿ ಏನೇನೋ ಲೆಕ್ಕಾಚಾರ ಹಾಕಿದ್ದರು. ಅವರು ಇನ್ನೂ ಅದೇ ಗುಂಗಿನಲ್ಲಿದ್ದಾರೆ. ಸರ್ಕಾರ ಕಿತ್ತು ಹಾಕುತ್ತೇವೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಅದೇನು ಕಿತ್ತು ಹಾಕಲು ಪೈರಾ?

- **ಬಿಜೆಪಿ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕರ ಜಾತಿ ಸಮೀಕರಣ ಲೋಕಸಭೆ ಚುನಾವಣೆಯಲ್ಲಿ ನಿಮಗೆ ಹಿನ್ನಡೆಯಾಗಲಿದೆಯೇ?**

ಹೀಗೆ ಆಯ್ಕೆ ಆದ ತಕ್ಷಣ ಜನನಾಯಕರಾಗಲು ಸಾಧ್ಯವಿಲ್ಲ. ನಾಯಕತ್ವವನ್ನು ಬೆಳೆಸಿಕೊಳ್ಳಬೇಕು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಬಿಜೆಪಿಯವರಿಗೆ ಬೇಕಿಲ್ಲ. ಆ ಸಮುದಾಯಗಳ ಮೇಲೆ ಅವರಿಗೆ ನಂಬಿಕೆ ಇಲ್ಲ. ಹೀಗಾಗಿಯೇ ಈವರೆಗೂ ಆ ಸಮುದಾಯಗಳ ಒಬ್ಬರನ್ನೂ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಬಿಜೆಪಿ ಮಾಡಿಲ್ಲ. ಆದರೆ, ನಮಗೆ ಜಾತಿಗಿಂತ ನೀತಿ ಮುಖ್ಯ. ನನ್ನ ಮತ್ತು ಸಿದ್ದರಾಮಯ್ಯ ಅವರ ಸಾಮೂಹಿಕ ನಾಯಕತ್ವವನ್ನು ಒಪ್ಪಿಕೊಂಡು ಜನ ನಮಗೆ ಅಧಿಕಾರ ನೀಡಿದ್ದಾರೆ.

- **ಲೋಕಸಭೆ ಚುನಾವಣೆಯಲ್ಲಿ 20 ಸೀಟು ಗೆಲ್ಲುವುದಾಗಿ ಹೇಳುತ್ತಿದ್ದೀರಿ? ಹೇಗೆ ಸಾಧ್ಯ?**

ಬಿಜೆಪಿ, ಜೆಡಿಎಸ್ ದುರ್ಬಲವಾಗಿದೆ. ಜನ ನಮ್ಮತ್ತ (ಕಾಂಗ್ರೆಸ್) ನೋಡುತ್ತಿದ್ದಾರೆ. ಅದೇ ವಿಶ್ವಾಸ.

- **‘ಆಪರೇಷನ್ ಹಸ್ತ’ ಬೇಕಿತ್ತಾ?**

ನಮ್ಮ ಸಿದ್ಧಾಂತ ಒಪ್ಪಿಕೊಂಡು ಬರುತ್ತಿದ್ದಾರೆ. ಅಂಥವರನ್ನು ಸೇರಿಸಿಕೊಳ್ಳುತ್ತಿದ್ದೇವೆ. ಕೆಲವು ಕಡೆ ನಮಗೂ ಪಕ್ಷದ ಬಲ ಹೆಚ್ಚಿಸಿಕೊಳ್ಳಬೇಕಿದೆ. ತುಮಕೂರು ಗ್ರಾಮಾಂತರ, ದಾಸರಹಳ್ಳಿ, ಕೆ.ಆರ್. ಪುರ, ಶಿರಹಟ್ಟಿ, ಕುಂದಗೋಳ ಹೀಗೆ ಕೆಲವು ಕ್ಷೇತ್ರಗಳಲ್ಲಿ ಸಂಘಟನೆ ಬಲಪಡಿಸಲು ಅನ್ಯ ಪಕ್ಷಗಳ ಮಾಜಿ ಶಾಸಕರನ್ನು ಸೇರಿಸಿಕೊಂಡಿದ್ದೇವೆ. ಮತ ಪ್ರಮಾಣ ಹೆಚ್ಚಿಸಿಕೊಳ್ಳಲು ಅನಿವಾರ್ಯ.

‘ನಾನು ಅಧಿಕಾರದ ಸ್ಪರ್ಧೆಯಲ್ಲಿ ಇಲ್ಲ’

‘ನಾನು ಅಧಿಕಾರವನ್ನು ಕೇಳಿಕೊಂಡು ಎಂದೂ ಹೋಗಿಲ್ಲ. ಅವರು (ಹೈಕಮಾಂಡ್) ನನ್ನ ಮೇಲಿಟ್ಟ ನಂಬಿಕೆಯನ್ನು ಉಳಿಸಿಕೊಂಡಿದ್ದೇನೆ. ನಾನು ಸ್ಪರ್ಧೆಯಲ್ಲಿ ಇಲ್ಲ’ ಎಂದು ಶಿವಕುಮಾರ್ ಹೇಳಿದರು.

‘ಎರಡೂವರೆ ವರ್ಷದ ಬಳಿಕ ಅಧಿಕಾರ ಹಂಚಿಕೆ ಸೂತ್ರ ಜಾರಿ ಆಗಲಿದೆಯೇ’ ಎಂಬ ಪ್ರಶ್ನೆಗೆ, ‘ಈ ವಿಚಾರದಲ್ಲಿ ಯಾರು ಏನು ಬೇಕಾದರೂ ಹೇಳಿಕೊಳ್ಳಲಿ. ನಾನು ಪ್ರತಿಕ್ರಿಯಿಸುವುದಿಲ್ಲ. ಜನ ನಮಗೆ ಶಕ್ತಿ ಕೊಟ್ಟಿದ್ದಾರೆ. 136 ಶಾಸಕರಿಗೆ ಶಕ್ತಿ ತುಂಬುವುದು ನನ್ನ ಆದ್ಯತೆ’ ಎಂದರು.


ಡಿ.ಕೆ.ಶಿವಕುಮಾರ್

ಪ್ರಚೋದನಕಾರಿ ಸಂದೇಶ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಉಡುಪಿ: ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಸಂದೇಶ ಹಾಕಿದ ಆರೋಪದ ಮೇಲೆ ಹಫೀಜ್ ಮಹಮ್ಮದ್ ಎಂಬವರ ವಿರುದ್ಧ ಉಡುಪಿ ನಗರ ಠಾಣೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಪೂರ್ವತಯಾರಿ ಮಾಡಿಕೊಳ್ಳದೆ ಪ್ರವೀಣ್ ಚೌಗುಲೆಯನ್ನು ಕೊಲ್ಲುವ ಒಂದು ಸುಲಭದ ಅವಕಾಶವನ್ನು ನೇಜಾರಿನವರು ಕಳೆದುಕೊಂಡರು ಎಂದು ಹಫೀಜ್ ಮಹಮ್ಮದ್ ಪೋಸ್ಟ್ ಹಾಕಿದ್ದ. ಈತ ಶಿವಮೊಗ್ಗ ಮೂಲದವ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಪ್ರಿಯಾಂಕ್ ರಾಜೀನಾಮೆ ಪಡೆಯಿರಿ: ಸಿ.ಎಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮೈಸೂರಿನಲ್ಲಿ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ನಿವಾಸಕ್ಕೆ ಸೋಮವಾರ ಭೇಟಿ ನೀಡಿ ಆಶೀರ್ವಾದ ಪಡೆದರು. ಮುಖಂಡರಾದ ರಘು ಆರ್. ಕೌಟಿಲ್ಯ, ಶಿವಕುಮಾರ್, ಸಿದ್ದರಾಜು, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಎಂ. ರಾಜೇಂದ್ರ ಹಾಗೂ ಶಾಸಕ ಟಿ.ಎಸ್. ಶ್ರೀವತ್ಸ ಇದ್ದಾರೆ —ಪ್ರಜಾವಾಣಿ ಚಿತ್ರ

ಮೈಸೂರು: ‘ಬಿಜೆಪಿ ಕಾರ್ಯಕರ್ತ, ಚಿತ್ತಾಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಣಿಕಂಠ ರಾಠೋಡ ಅವರ ಮೇಲೆ ಸಚಿವ ಪ್ರಿಯಾಂಕ್ ಖರ್ಗೆ ರಾಜಕೀಯ ಪುಢಾರಿಗಳನ್ನು ಬಿಟ್ಟು ಶನಿವಾರ ಮಧ್ಯರಾತ್ರಿ ಹಲ್ಲೆ ಮಾಡಿಸಿದ್ದಾರೆ’ ಎಂದು ಆರೋಪಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ಮುಂದಿನ ದಿನಗಳಲ್ಲಿ ಎಲ್ಲವೂ ಸುಸೂತ್ರವಾಗಿರಬೇಕಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣವೇ ಆ ಸಚಿವರ ರಾಜೀನಾಮೆ ಪಡೆಯಬೇಕು’ ಎಂದು ಒತ್ತಾಯ ಮಾಡಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ‘ಆ ಸಚಿವರು, ತಾವು ಏನು ಮಾಡಿದರೂ ನಡೆಯುತ್ತದೆಂಬ ಅಧಿಕಾರದ ದರ್ಪದಲ್ಲಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಲಬುರಗಿಯಲ್ಲಿ ಗೂಂಡಾಗಿರಿ ನಡೆಯುತ್ತಿದೆ. ಮುಂದೆ ಅಕ್ಕಪಕ್ಕದ ಜಿಲ್ಲೆಗಳಿಗೆ ಹಾಗೂ ರಾಜ್ಯದಾದ್ಯಂತ ವ್ಯಾಪಿಸುತ್ತದೆ’ ಎಂದು ದೂರಿದರು.

‘ತೆಲಂಗಾಣದಲ್ಲಿ ಸಚಿವ ಜಮೀರ್ ಅಹಮದ್ ನೀಡಿರುವ ಹೇಳಿಕೆ ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ದಲಿತ ವಿರೋಧಿ. ಅವರ ಅಂತರಾಳದ ಮಾತುಗಳನ್ನು ಹುಡುಗಾಟಿಕೆಯಾಗಿ ತೆಗೆದುಕೊಳ್ಳಬಾರದು. ಕೂಡಲೇ ಅವರ ರಾಜೀನಾಮೆಯನ್ನೂ ಪಡೆಯಬೇಕು’ ಎಂದು ಒತ್ತಾಯಿಸಿದರು.

‘ಕೇಂದ್ರ ಸರ್ಕಾರದ ಮೇಲೆ ನಿತ್ಯವೂ ಗೂಬೆ ಕೂರಿಸುವುದು ಹಾಗೂ ಆರೋಪಿಸುವುದಷ್ಟೆ ರಾಜ್ಯ ಕಾಂಗ್ರೆಸ್ ಸರ್ಕಾರದ ಆರು ತಿಂಗಳ ಸಾಧನೆ. ಅಧಿಕಾರದ ಅಮಲಿನಲ್ಲಿ ತೇಲುತ್ತಿರುವ ಸರ್ಕಾರಕ್ಕೆ ಜನ ಶಾಪ ಹಾಕುತ್ತಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣ ಕುಂಠಿತವಾಗಿದೆ’ ಎಂದು ದೂರಿದರು.

‘ಬಿಜೆಪಿಯಲ್ಲಿ ಶೀಘ್ರದಲ್ಲೇ ಅಸಮಾಧಾನ ಸ್ಫೋಟಗೊಳ್ಳಲಿದೆ’ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಅಸಮಾಧಾನ ಎಲ್ಲಿ ಸ್ಫೋಟಗೊಳ್ಳಲಿದೆ ಎನ್ನುವುದು ಲೋಕಸಭಾ ಚುನಾವಣೆ ಬಂದಾಗ ಗೊತ್ತಾಗಲಿದೆ’ ಎಂದರು.

‘ಜೆಡಿಎಸ್ ಕೂಡ ಎನ್‌ಡಿಎ ಭಾಗ. ಅವರನ್ನು ಸೇರಿಸಿಯೇ ನಾವು 28 ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತಿರುವುದು’ ಎಂದು ಪ್ರತಿಕ್ರಿಯಿಸಿದರು.

‘ದತ್ತಮಾಲೆ ಧರಿಸುವುದಾಗಿ ಎಚ್.ಡಿ. ಕುಮಾರಸ್ವಾಮಿ ಹೇಳಿರುವುದು ಗೊತ್ತಿಲ್ಲ. ತಿಳಿದುಕೊಂಡು ಪ್ರತಿಕ್ರಿಯಿಸುತ್ತೇನೆ’ ಎಂದರು.

‘ಸಿದ್ದರಾಮಯ್ಯ ಕೆಳಗಿಳಿಸಲು ಡಿಕೆಶಿ ಕಾತರ’

‘ತಾವು ಜೋಡೆತ್ತುಗಳೆಂದು ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ಚುನಾವಣೆಯಲ್ಲಿ ಹೇಳಿಕೊಂಡಿದ್ದರು. ಈಗ ಹಾದಿ ಬೀದಿಯಲ್ಲಿ ಏನೇನು ಚರ್ಚೆಯಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಿತ್ತಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಎಷ್ಟು ಬೇಗ ಇಳಿಸುತ್ತೇನೆಯೋ ಎಂಬ ಕಾತರದಲ್ಲಿ ಡಿಕೆಶಿ ಕಾಯುತ್ತಿದ್ದಾರೆ. ಡಿಕೆಶಿಯನ್ನು ಬಲಿ ಹಾಕಲೆಂದು ಹಲವು ಡಿಸಿಎಂಗಳ ನೇಮಕಕ್ಕೆ ರಾಜಕೀಯ ಹುನ್ನಾರ ನಡೆಯುತ್ತಿದೆ’ ಎಂದು ವಿಜಯೇಂದ್ರ ಆರೋಪಿಸಿದರು.

‘ನಮ್ಮವರಾರೂ ಪಕ್ಷ ಬಿಡಲ್ಲ’

‘ನಮ್ಮವರಾರೂ ಪಕ್ಷ ಬಿಡುವುದಿಲ್ಲ. ವಾಪಸ್ ಬರುವವರೇ ಹೆಚ್ಚಿದ್ದಾರೆ. ಪಕ್ಷದ ಎಲ್ಲ ನಾಯಕರೂ ಒಗ್ಗಟ್ಟಿನಿಂದ ಹೋಗುತ್ತೇವೆ. ಮಾಜಿ ಸಚಿವ ಜನಾರ್ದನ ರೆಡ್ಡಿ ಅವರನ್ನೂ ಕರೆತರಲು ಪ್ರಯತ್ನಿಸುವೆ’ ಎಂದು ವಿಜಯೇಂದ್ರ ಪ್ರತಿಕ್ರಿಯಿಸಿದರು.

‘ಶಾಸಕರ ಅಭಿಪ್ರಾಯ ಪಡೆಯಲು ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿತ್ತು. ಹಿರಿಯರಾದ ಬಸನಗೌಡ ಪಾಟೀಲ ಯತ್ನಾಳ ಹಾಗೂ ರಮೇಶ ಜಾರಕಿಹೊಳಿ ಮೀಟಿಂಗ್ ಹಾಲ್‌ಗೆ ಬರಲಿಲ್ಲ. ಆದರೆ, ನಿರ್ಮಲಾ ಸೀತಾರಾಮನ್ ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಅಭಿಪ್ರಾಯ ತಿಳಿಸಿ ಹೋಗಿದ್ದಾರೆ. ಅವರಿಬ್ಬರನ್ನೂ ಶೀಘ್ರವೇ ಭೇಟಿಯಾಗುವೆ. ಸಿದ್ದರಾಮಯ್ಯ, ಕಾಂಗ್ರೆಸ್‌ನವರು ಆ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ’ ಎಂದರು.

ಚಿಕ್ಕನಾಯಕನಹಳ್ಳಿಗೆ ‘ಭಾರತ್ ಜೋಡೊ’ ಯಾತ್ರೆ ಬಂದಾಗ ರಾಹುಲ್‌ಗಾಂಧಿ ಅವರೊಂದಿಗೆ ಶಾರದಮ್ಮ (ಸಂಗ್ರಹ ಚಿತ್ರ)

ರಾಹುಲ್‌ಗೆ ಸೌತೆಕಾಯಿ ಉಡುಗೊರೆ ನೀಡಿದ್ದ ಅಜ್ಜಿ ನಿಧನ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ (ತುಮಕೂರು): ‘ಭಾರತ್ ಜೋಡೊ’ ಯಾತ್ರೆ ಸಮಯದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಸೌತೆಕಾಯಿ ಉಡುಗೊರೆ ನೀಡಿ ಗಮನ ಸೆಳೆದಿದ್ದ ಫುಟ್‌ಪಾತ್ ತರಕಾರಿ ವ್ಯಾಪಾರಿ ಶಾರದಮ್ಮ (78) ಸೋಮವಾರ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಒಬ್ಬ ಪುತ್ರನಿದ್ದು, ಪಟ್ಟಣದಲ್ಲಿ ಅಂತ್ಯ ಸಂಸ್ಕಾರ ನೆರವೇರಿತು.

2022 ಅಕ್ಟೋಬರ್ 9ರಂದು ಭಾರತ್ ಜೋಡೊ ಯಾತ್ರೆ ರಾಹುಲ್ ಗಾಂಧಿ ನೇತೃತ್ವದಲ್ಲಿ ಸಾಗಿತ್ತು. ಪಟ್ಟಣದ ಸಂತೆ ಬೀದಿಯಲ್ಲಿ ಅಜ್ಜಿಯೊಬ್ಬರು (ಶಾರದಮ್ಮ) ಕೈಯಲ್ಲಿ ಎರಡು ಸೌತೆಕಾಯಿ ಹಿಡಿದುಕೊಂಡು ನಿಂತಿದ್ದನ್ನು ಗಮನಿಸಿದ್ದ ರಾಹುಲ್ ತಕ್ಷಣ ಅಜ್ಜಿ ಬಳಿ ತೆರಳಿ ಸೌತೆಕಾಯಿ ಪಡೆದುಕೊಂಡಿದ್ದರು.

‘ನಿನ್ನ ಅಜ್ಜಿ ಇಂದಿರಮ್ಮನಿಂದ ಸಿಕ್ಕ (ಭೂ ಸುಧಾರಣೆ ಕಾಯ್ದೆಯಿಂದ) ಜಮೀನಿನಲ್ಲಿ ಬೆಳೆದ ಸೌತೆ ಇದು. ನಿನಗಾಗಿ ತಂದಿದ್ದೇನೆ’ ಎಂದು ಶಾರದಮ್ಮ ಭಾವುಕರಾಗಿದ್ದರು.

ಶಾರದಮ್ಮನನ್ನು ತಬ್ಬಿಕೊಂಡು ಭಾವುಕರಾಗಿದ್ದ ರಾಹುಲ್ ಅಜ್ಜಿ ತಂದಿದ್ದ ಸೌತೆಕಾಯಿ ಪಡೆದು ತಮ್ಮೊಂದಿಗೆ ಒಯ್ದಿದ್ದರು. ಇದು ಮಾಧ್ಯಮಗಳಲ್ಲೂ ಸಾಕಷ್ಟು ಪ್ರಚಾರ ಪಡೆದುಕೊಂಡಿತ್ತು.

ಯತೀಂದ್ರಗೆ ಸಾಂವಿಧಾನಿಕ ಹುದ್ದೆ ಸದನದಲ್ಲಿಯೇ ಚರ್ಚೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನುಗ್ಗೇಹಳ್ಳಿ (ಹಾಸನ): ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪುತ್ರ ಡಾ.ಯತೀಂದ್ರ ಅವರಿಗೆ ಕಾನೂನು ಬಾಹಿರವಾಗಿ ಸಾಂವಿಧಾನಿಕ ಹುದ್ದೆ ನೀಡಿದ್ದು, ಆ ಬಗ್ಗೆ ಮುಂಬರುವ ವಿಧಾನಸಭೆ ಅಧಿವೇಶನದಲ್ಲಿ ಚರ್ಚಿಸುವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಹೋಬಳಿಯ ಅತ್ತಿಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಖ್ಯಮಂತ್ರಿ ಪುತ್ರನಿಂದ ಅಧಿಕಾರಿಗಳ ವರ್ಗಾವಣೆ ಹೆಚ್ಚಾಗಿದೆ. ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಾಗಿ ಹೆದರಿಸಿ ಹಣ ವಸೂಲಿ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

‘ಮುಖ್ಯಮಂತ್ರಿ ಹಾಗೂ ಪ್ರಧಾನಿಯಾಗಿದ್ದ ನಮ್ಮ ತಂದೆ ಎಚ್.ಡಿ. ದೇವೇಗೌಡರು ನಮಗೆ ಅಂತಹ ಯಾವುದೇ ಅಧಿಕಾರ ನೀಡಿರಲಿಲ್ಲ’ ಎಂದರು.

‘ಸ್ಪೀಕರ್ ಕುರಿತು ಜಮೀರ್ ಅಹ್ಮದ್ ಹೇಳಿಕೆಯನ್ನು ಖಂಡಿಸುವೆ. ಸ್ಪೀಕರ್ ಸ್ಥಾನಕ್ಕೆ ತನ್ನದೇ ಗೌರವವಿದೆ. ಆ ಬಗ್ಗೆ ಸಚಿವರು ಬಹಿರಂಗ ಕ್ಷಮಯಾಚಿಸಬೇಕು. ಮುಖ್ಯಮಂತ್ರಿಗೆ ಕನಿಷ್ಠ ಸೌಜನ್ಯವಿದ್ದರೆ ಇಷ್ಟರೊಳಗೆ ಕ್ಷಮೆ ಕೇಳಬೇಕಿತ್ತು. ಆದರೆ, ಸಚಿವರಿಗೆ ನಿರ್ದೇಶನವನ್ನೂ ನೀಡದೇ ಉದ್ಧಟತನ ಪ್ರದರ್ಶಿಸಿದ್ದಾರೆ’ ಎಂದು ಅವರು ಹೇಳಿದರು.


ಕಲಿಯುವ ಹಕ್ಕು
ಕಲಿಸುವ
ಕರ್ತವ್ಯ ನಿಮ್ಮದು
ಹೋಗುವೆ ಶಾಲೆಗೆ
ನಾನು
ಕಳಿಸಬೇಡಿ ನನ್ನನ್ನು ಕೂಲಿಗೆ
ಆರೋಗ್ಯವಾಗಿರಲು ಶಿಕ್ಷಣ ಬೇಕು.
ನಾವು ಶಿಕ್ಷಣ ಕೊಡಿಸಲು ಸಿದ್ಧರಿದ್ದೇವೆ.
ಮಕ್ಕಳನ್ನು ಹಚ್ಚುವಿರಾ ದುಡಿಮೆಗೆ. ಹೋಗಲು ತಯಾರಿದ್ದಿರಾ ಜೈಲಿಗೆ?
ಬಾಲ್ಯ ಶಿಕ್ಷಣ ಮೂಲಭೂತ

ಜಾಗೃತಿ ‘ಅಂತರರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನಾಚರಣೆ’ ಅಂಗವಾಗಿ ಕಲಬುರಗಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳು ಜಾಗೃತಿ ಫಲಕಗಳನ್ನು ಹಿಡಿದಿದ್ದರು -ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷರ ಕಾರು ನಾಪತ್ತೆ: ದೂರು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷರ ಹೆಸರಿನಲ್ಲಿದ್ದ ಕಾರು ಭಾನುವಾರ ರಾತ್ರಿ ಕಳ್ಳತನವಾಗಿದೆ.

‘ಸಂಘದ ರಾಜ್ಯಾಧ್ಯಕ್ಷ ನಾನೇ ಇದ್ದು, ಇದರಲ್ಲಿ ಯಾವುದೇ ಗೊಂದಲವಿಲ್ಲ. ನನಗೆ ಸಂಘದಿಂದ ನೀಡಲಾಗಿದ್ದ ಕಾರು ನಾಪತ್ತೆಯಾಗಿದೆ. ಕಾರಿನ ಒಂದು ಕೀಲಿ ನನ್ನ ಬಳಿ, ಇನ್ನೊಂದು ಕೀಲಿ ಕಚೇರಿಯಲ್ಲಿತ್ತು. ಸೋಮವಾರ ಬೆಳಿಗ್ಗೆ ನೋಡಿದಾಗ ನನ್ನ ಮನೆ ಬಳಿ ಕಾರು ಇರಲಿಲ್ಲ’ ಎಂದು ಇಲ್ಲಿನ ಶಂಭುಲಿಂಗನಗೌಡ ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರು ಯಾರು ಕದ್ದುಕೊಂಡು ಹೋಗಿದ್ದಾರೆ ಎನ್ನುವುದು ಗೊತ್ತಿಲ್ಲ. ಆದರೆ ಕಾರು ಬೆಂಗಳೂರಿನಲ್ಲಿರುವ ಸಂಘದ ಕಚೇರಿ ಬಳಿಯಿದೆ ಎನ್ನುವ ಮಾಹಿತಿಯಿದೆ. ಈ ಕುರಿತು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ’ ಎಂದು ಹೇಳಿದರು.

ಘಟನೆ ವಿವರ: ಕೆಲ ತಿಂಗಳ ಹಿಂದೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಯಾರು ಎನ್ನುವುದು ಗೊಂದಲವಾಗಿತ್ತು. ಈ ಪ್ರಕರಣ ಈಗ ನ್ಯಾಯಾಲಯದಲ್ಲಿದೆ.

ಸಂಘಕ್ಕೆ ತಾವೇ ಅಧ್ಯಕ್ಷರೆಂದು ಮಂಡ್ಯದ ನಾಗೇಶ ಹಾಗೂ ಕಾರ್ಯದರ್ಶಿ ಚಂದ್ರಶೇಖರ ನುಗ್ಗಿ ಜಿಲ್ಲಾಧ್ಯಕ್ಷರ ಸಭೆ ನಡೆಸಿದ್ದಾರೆ. ಕಾರು ಯಾರೇ ತೆಗೆದುಕೊಂಡು ಹೋಗಿರಲಿ, ನನ್ನ ಗಮನಕ್ಕೆ ತರಬೇಕಿತ್ತಲ್ಲವೇ ಎಂದು ಪಾಟೀಲ ಅವರು ಪ್ರಶ್ನಿಸಿದರು.

‘ಸಂಘದ ಒಡೆತನದಲ್ಲಿರುವ ಇನ್ನೋವಾ ಕ್ರಿಸ್ಟಾ ಕಾರನ್ನು ಹಿಂತಿರುಗಿಸುವಂತೆ ಸೂಚಿಸಿ ಶಂಭುಲಿಂಗನಗೌಡ ಅವರಿಗೆ ನೋಟಿಸ್ ನೀಡಲಾಗಿತ್ತು. ಅವರೇ ಕಾರನ್ನು ಬೆಂಗಳೂರಿನ ಕಚೇರಿಗೆ ಕಳುಹಿಸಿ ಕೊಟ್ಟಿದ್ದಾರೆ’ ಎಂದು ಸಂಘದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಒಬ್ಬನಿಂದಲೇ ಅತ್ಯಾಚಾರ ಅಸಾಧ್ಯ: ಅಮರೇಗೌಡ

ಪ್ರಜಾವಾಣಿ ವಾರ್ತೆ

ಅಮರೇಗೌಡ ಬಯ್ಯಾಪುರ

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ಒಬ್ಬನಿಂದ ಅತ್ಯಾಚಾರ ಮಾಡಲು ಸಾಧ್ಯವಿಲ್ಲ, ಕನಿಷ್ಠ ನಾಲ್ಕೈದು ಜನರಾದರೂ ಬೇಕಾಗುತ್ತದೆ. ಹರಿಬ್ರಹ್ಮ ಬಂದರೂ ಒಬ್ಬನಿಂದ ಅತ್ಯಾಚಾರ ಸಾಧ್ಯವಿಲ್ಲ’ ಎಂದು ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಅವರು ಹೇಳಿದ್ದಾರೆ ಎನ್ನಲಾದ ಮಾತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ತಾಲ್ಲೂಕಿನ ಎಂ.ಗುಡದೂರು ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯೆಯೊಬ್ಬರ ಮೇಲೆ ನಡೆದಿದೆ ಎನ್ನಲಾದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದ ವಿಚಾರದಲ್ಲಿ ನ್ಯಾಯ ಕೊಡಿಸುವಂತೆ ಮಹಿಳೆಯ ಸಂಬಂಧಿ ಕೇಳಿದ್ದಕ್ಕೆ ಬಯ್ಯಾಪುರ ಆಡಿದ್ದಾರೆ ಎನ್ನಲಾದ ಮಾತುಗಳು ವಿವಾದದ ಸ್ವರೂಪ ಪಡೆದಿವೆ.

ದೂರುದಾರ ಮಹಿಳೆಯ ಮಾವ ಮತ್ತು ಬಯ್ಯಾಪುರ ನಡುವೆ ನಡೆದಿರುವ ದೂರವಾಣಿ ಸಂಭಾಷಣೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ತಾವರಗೇರಾ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲಾಗಿದ್ದು, ಆರೋಪಿ ಸಂಗನಗೌಡ ಅಂದಿನಿಂದ ನಾಪತ್ತೆಯಾಗಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಅಮರೇಗೌಡ ಬಯ್ಯಾಪುರ, ‘ದೂರವಾಣಿಯಲ್ಲಿ ಸಹಜವಾಗಿ ಮಾತನಾಡಿದ್ದೆ. ಅದರಲ್ಲಿ ಮಹಿಳೆಯರನ್ನು ಅವಮಾನಿಸುವುದು ಉದ್ದೇಶವಾಗಿರಲಿಲ್ಲ. ಕರೆ ಮಾಡಿದ ವ್ಯಕ್ತಿ ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷ ಬೆಂಬಲಿಸಿದ್ದ, ಮನೆಗೆ ಬಂದು ಸಹಾಯ ಕೇಳುತ್ತಿದ್ದ. ನಮ್ಮವನೇ ಎಂದು ಮಹಿಳೆಯ ಮರ್ಯಾದೆ ವಿಚಾರ, ಸುಳ್ಳು ಕೇಸ್ ಮಾಡುವುದು ಸರಿಯಲ್ಲ ಎಂದು ಒಂದಷ್ಟು ಸಲಹೆ ನೀಡಿದ್ದೆ’ ಎಂದರು. ಆದರೆ ಸಂಭಾಷಣೆ ವಿಚಾರವಾಗಿ ಏನನ್ನೂ ಹೇಳುವುದಿಲ್ಲ ಎಂದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ

ಎಸ್ಸಿಎಸ್ಟಿ: ಎಲ್ಲರಿಗೂ ‘ಸಹಕಾರಿ’ ಸದಸ್ಯತ್ವ

ಪ್ರಜಾವಾಣಿ ವಾರ್ತೆ

‘ಆರು ತಿಂಗಳ ಒಳಗೇ ಪೋಡಿ’

ಮಹದೇವಪ್ಪ

ಪರಿಶಿಷ್ಟ ಜಾತಿ ಮತ್ತು ವರ್ಗಗಳ 9 ಲಕ್ಷ ಪ್ರಕರಣಗಳಲ್ಲಿ ಸುಮಾರು ನಾಲ್ಕೂವರೆ ಲಕ್ಷ ಆಸ್ತಿಗಳ ಪೋಡಿ ಆಗಿಲ್ಲ. ಶೇ 50ರಷ್ಟು ಬಾಕಿ ಉಳಿದಿದೆ. ಆರು ತಿಂಗಳ ಒಳಗೇ ಪೋಡಿ ಮಾಡಿಕೊಡಬೇಕು ಎಂದು ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬಿಬಿಎಂಪಿ ಸೇರಿ ಹಲವು ಜಿಲ್ಲೆಗಳಲ್ಲಿ ಪರಿಗಣಿತ ವೆಚ್ಚದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿಕೊಂಡಿರುವುದು ಪ್ರಗತಿ ಪರಿಶೀಲನಾ ಸಭೆಯಲ್ಲಿ ಗಮನಕ್ಕೆ ಬಂದಿದೆ. ರಸ್ತೆಗಳ ಸುಧಾರಣೆಗೆ ₹4 ಕೋಟಿ, ವಿಮಾನ ನಿಲ್ದಾಣಕ್ಕೆ ₹11 ಕೋಟಿ ಹೀಗೆ ಸಾಕಷ್ಟು ಮೊತ್ತವನ್ನು ಕಾಮಗಾರಿಗೆ ಬಳಸಲಾಗಿದೆ ಎಂದು ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿಗೂ ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಣಿ ಮಾಡಿಸಲಾಗುವುದು. ಇದಕ್ಕೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಹೇಳಿದ್ದಾರೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುಷ್ಠಾನ ಕುರಿತು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಈ ಸಮುದಾಯ ಸಹಕಾರ ಸಂಘಗಳಲ್ಲಿ ಈವರೆಗೂ ನೋಂದಣಿ ಆಗಿಲ್ಲ. ಆದ್ದರಿಂದ ಎಲ್ಲರಿಗೂ ಸದಸ್ಯತ್ವ ನೀಡಬೇಕು ಎಂಬುದು ಸರ್ಕಾರದ ಚಿಂತನೆ. ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದವರು 1.4 ಕೋಟಿಯಷ್ಟು ಇದ್ದಾರೆ. ಇದರಿಂದ ಈ ವರ್ಗಕ್ಕೆ ಹಲವು ಪ್ರಯೋಜನ ಆಗಲಿದೆ ಎಂದು ಅವರು ವಿವರಿಸಿದರು.

ಕಳೆದ ಒಂಬತ್ತು ವರ್ಷಗಳಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ₹2 ಲಕ್ಷ ಕೋಟಿಗೂ ಹೆಚ್ಚು ಮೊತ್ತ ಖರ್ಚಾಗಿದೆ. ಸಾಧನೆ ಆಗಿರುವುದನ್ನು ದಾಖಲೆಗಳಲ್ಲಿ ತೋರಿಸುತ್ತಾರೆ. ಆದರೆ, ವಾಸ್ತವಿಕ ಸ್ಥಿತಿ ಏನು? ಎಷ್ಟರ ಮಟ್ಟಿಗೆ ಅನುಷ್ಠಾನ ಆಗಿದೆ. ಅದರಿಂದ ಈ ವರ್ಗದವರ ಜೀವನದಲ್ಲಿ ಆಗಿರುವ ಬದಲಾವಣೆಗಳೇನು ಎಂಬುದರ ಮೌಲ್ಯಮಾಪನ ವರದಿ ನೀಡಲು ಎಲ್ಲ ಇಲಾಖೆಗಳಿಗೂ ಸೂಚಿಸಲಾಗಿದೆ. ಐಸೆಕ್, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದಲೂ ಮೌಲ್ಯಮಾಪನ ನಡೆಸಲಾಗುವುದು ಎಂದು ಮಹದೇವಪ್ಪ ಹೇಳಿದರು.

ವಿವಿಧ ಇಲಾಖೆಗಳಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳ ದತ್ತಾಂಶ ಪೂರ್ಣ ಪ್ರಮಾಣದಲ್ಲಿ ಇಲ್ಲದಿರುವುದು ಸಭೆಯಲ್ಲಿ ಗಮನಕ್ಕೆ ಬಂದಿತು. ಆದ್ದರಿಂದ, ತಾಜಾ ದತ್ತಾಂಶವನ್ನು ಸಲ್ಲಿಸಬೇಕು. ಇದರಿಂದ ಬಿಡುಗಡೆಯಾದ ಹಣ ಮತ್ತು ಅನುಷ್ಠಾನಗೊಂಡ ಯೋಜನೆಗಳ ಮಾಹಿತಿ ಸಿಗುವುದಿಲ್ಲ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಸಚಿವರು ತಿಳಿಸಿದರು.

ಆರೋಪಿಗಳ ಮೊಬೈಲ್ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬ್ಲೂಟೂತ್ ಸಾಧನ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದ ಅಕ್ರಮ ಪ್ರಕರಣದಲ್ಲಿ ಆರೋಪಿಗಳಿಂದ ವಶಕ್ಕೆ ಪಡೆಯಲಾದ ಮೊಬೈಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಸೋಮವಾರ ಕಳುಹಿಸಲಾಗಿದೆ.

ಸುಮಾರು 14 ಮೊಬೈಲ್‌ಗಳನ್ನು ಬೆಂಗಳೂರಿನ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಕೊನೆಯ ಬಾರಿಗೆ ಯಾರಿಗೆ ಕರೆ ಮಾಡಿದ್ದರು? ಏನೆಲ್ಲ ದತ್ತಾಂಶ ಇತ್ತು ಎಂಬುದು ಎಫ್‌ಎಸ್‌ಎಲ್‌ನಿಂದ ತಿಳಿದುಬರಲಿದೆ. ಅದರಲ್ಲಿನ ದತ್ತಾಂಶದಿಂದ ಮುಂದಿನ ತನಿಖೆಗೆ ನೆರವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಸಿಐಡಿ ವಶದಲ್ಲಿದ್ದು ವಿಚಾರಣೆ ಎದುರಿಸಿದ್ದ ಮೂವರ ಪೈಕಿ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಒಬ್ಬರನ್ನು ಉಳಿಸಿಕೊಳ್ಳಲಾಗಿದೆ. ಭದ್ರತೆಯ ದೃಷ್ಟಿಯಿಂದ ನಿತ್ಯ ಒಬ್ಬೊಬ್ಬರನ್ನು ಕರೆಸಿಕೊಂಡು ವಿಚಾರಣೆ ಮಾಡಲಾಗುತ್ತಿದೆ. ಅವರ ನೀಡುವ ಹೇಳಿಕೆಯನ್ನು ಪರಾಮರ್ಶೆ ಮಾಡಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ಸಂಬಂಧ ವಶಕ್ಕೆ ಪಡೆಯಲಾದ ಮೊಬೈಲ್‌ಗಳನ್ನು ಭಾನುವಾರವೇ ಎಫ್‌ಎಸ್‌ಎಲ್ ಕಳುಹಿಸಲಾಗಿದೆ. ಇನ್ನಷ್ಟು ಮೊಬೈಲ್ ಜಪ್ತಿ ಮಾಡಿ, ಅವುಗಳನ್ನೂ ಕಳುಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಮಂಗಳವಾರ, ನವೆಂಬರ್ 21, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕುತೂಹಲ
ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆದ ಕೃಷಿಮೇಳದಲ್ಲಿ ಮಗುವೊಂದು ನಾಟಿ ಕೋಳಿಯನ್ನು ಕುತೂಹಲದಿಂದ ವೀಕ್ಷಿಸಿದ ಕ್ಷಣ

ಇಂಧನ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಗೃಹ ಜ್ಯೋತಿ

ಯೋಜನೆ
ಅನುಷ್ಠಾನದ
ಮೈಲಿಗಲ್ಲು

ಗೃಹಜ್ಯೋತಿ

ಗೃಹ ಬಳಕೆದಾರರಿಗೆ ಉಚಿತ ವಿದ್ಯುತ್

ಗೃಹಜ್ಯೋತಿ ಯೋಜನೆಯಡಿ ನವೆಂಬರ್ ತಿಂಗಳವರೆಗೆ ಸಹಾಯಧನ ಪಡೆದ ಒಟ್ಟು ಫಲಾನುಭವಿಗಳ ವಿವರ

- ಒಟ್ಟು ನೋಂದಣಿ
  1.62 ಕೋಟಿ
- ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ
  1.50 ಕೋಟಿ
- ಒಟ್ಟು ಸಹಾಯಧನ ಮೊತ್ತ
  2900 ಕೋಟಿ ರೂ.

ಸಮರ್ಪಕ ವಿದ್ಯುತ್ ಸರಬರಾಜು

ವಿದ್ಯುತ್ ಬೇಡಿಕೆ ಎಪ್ರಿಲ್ - ಅಕ್ಟೋಬರ್ ವರೆಗೆ(ಮೆ.ವ್ಯಾ)

	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್
ಕಳೆದ ವರ್ಷ 2022	14725	12260	11781	10855	11268	11818	10292
ಪ್ರಸಕ್ತ ವರ್ಷ 2023	16110	15111	14198	12359	16950	14698	15979
ಸರಾಸರಿ ಹೆಚ್ಚಳ	+9.41	+23.25	+20.52	+13.86	+50.43	+24.37	+55.25

ವಿದ್ಯುತ್ ಪೂರೈಕೆ ಎಪ್ರಿಲ್ - ಅಕ್ಟೋಬರ್ ವರೆಗೆ(ಮಿ.ಯೂ)

	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್
ಕಳೆದ ವರ್ಷ 2022	278.62	241.9	221.53	202.98	208.17	216.43	166.7
ಪ್ರಸಕ್ತ ವರ್ಷ 2023	309.04	286.47	277.03	222.86	293.74	262.8	260.4
ಸರಾಸರಿ ಹೆಚ್ಚಳ	+10.92	+18.42	+25.05	+9.39	+41.11	+21.42	+56.21

ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಇಂಧನ ಸಚಿವರಾದ
ಶ್ರೀ ಕೆ.ಜೆ. ಜಾರ್ಜ್ ರವರು ಇಲಾಖೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು

- ಮೇಲಿನ ಮಾಹಿತಿಯಂತೆ, ಕಳೆದ ವರ್ಷಕ್ಕಿಂತ ವಿದ್ಯುತ್ ಬೇಡಿಕೆ ಶೇಕಡಾ 55 ವರೆಗೆ ಹೆಚ್ಚಾಗಿರುತ್ತದೆ.
- ರಾಜ್ಯ ಸರ್ಕಾರವು ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ತೃಪ್ತಿಕರವಾಗಿ ಪೂರೈಸಲು ವಿದ್ಯುತ್ ಉತ್ಪಾದನೆಗೆ ಕ್ರಮಗಳನ್ನು ಕೈಗೊಂಡಿದೆ.
- ದ್ವಿಪಕ್ಷೀಯ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಪಂಜಾಬ್ ಮತ್ತು ಉತ್ತರ ಪ್ರದೇಶ ರಾಜ್ಯಗಳಿಂದ 1000 ಮೆಗಾ ವ್ಯಾಟ್ ವಿದ್ಯುತ್ ಖರೀದಿಸಲಾಗಿದೆ.
- ಭಾರತೀಯ ವಿದ್ಯುತ್ ಕಾಯಿದೆಯ ಸೆಕ್ಷನ್ 11 ರ ಅಡಿಯಲ್ಲಿ, ರಾಜ್ಯದ ಗ್ರಿಡ್‌ಗೆ ವಿದ್ಯುತ್ ಸರಬರಾಜು ಮಾಡಲು ರಾಜ್ಯ ಉತ್ಪಾದನಾ ಕಂಪನಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ.
- ಈ ಉಪಕ್ರಮಗಳಿಂದಾಗಿ, ರಾಜ್ಯದ ಗ್ರಿಡ್‌ನಲ್ಲಿ ಹೆಚ್ಚುವರಿ 20 ಮಿಲಿಯನ್ ಯೂನಿಟ್‌ಗಳ ವಿದ್ಯುತ್ ಲಭ್ಯವಿದೆ.
- ಅಗತ್ಯವಿದ್ದರೆ ದೈನಂದಿನ ಆಧಾರದ ಮೇಲೆ ಖರೀದಿಸಲು ಭಾರತೀಯ ಇಂಧನ ವಿನಿಮಯದಿಂದ (IEX) ESCOM ಗಳಿಗೆ ಸೂಚನೆಯನ್ನು ನೀಡಲಾಗಿದೆ.

ನುಡಿದಂತೆ ನಡೆದಿದ್ದೇವೆ...

ನೋಂದಣಿಗಾಗಿ ಸ್ಕ್ಯಾನ್ ಮಾಡಿ

ಹೆಚ್ಚಿನ ಮಾಹಿತಿಗಾಗಿ
https://energy.karnataka.gov.in
ಭೇಟಿ ನೀಡಿ

ಪ್ರಕಟಣೆ : ಇಂಧನ ಇಲಾಖೆ, ಬೆಂಗಳೂರು

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಒಡಕಿನ ಮಾತಿಗೆ ಮರುಳಾಗದ ಮತದಾರ

ಚುನಾವಣಾ ಪಯಣ
ರಾಜಸ್ಥಾನ

ಜಯಸಿಂಹ ಆರ್.

ಜೈಪುರ: ‘ರಾಜಸ್ಥಾನದಲ್ಲಿ ಯಾವತ್ತಾದರೂ ಹಿಂದೂ– ಮುಸ್ಲಿಂ ಗಲಾಟೆ ಆಗಿದ್ದು ಕೇಳಿದ್ದೀರಾ’– ಈ ಪ್ರಶ್ನೆಯನ್ನು ಕೇಳಿದ್ದು ಜೈಪುರ ವಿಮಾನ ನಿಲ್ದಾಣದ ಗ್ರಾಹಕ ಸೇವಾ ಕೇಂದ್ರದಲ್ಲಿ ಇಂಟರ್ನಿ ಆಗಿರುವ 23 ವರ್ಷದ ಕಿರಣ್. ಜೈಪುರ ಸಿಟಿ ರೈಲು ನಿಲ್ದಾಣದಲ್ಲಿ ಇದ್ದ ಏಕೈಕ ಆಟೊ ರಿಕ್ಷಾವನ್ನು ನಾನು ಬುಕ್ ಮಾಡಿದ್ದೆ. ಹಾಗಾಗಿ, ಕಿರಣ್ ನನ್ನಲ್ಲಿ ಡ್ರಾಪ್ ಕೇಳಿದರು. ನಾನು ಹತ್ತಿಕೊಳ್ಳಿ ಅಂದೆ.

ಕಿರಣ್ ಉದಯಪುರದವರು. ಹಾಗಾಗಿ, ಟೈಲರ್ ಕನ್ಹಯ್ಯಾಲಾಲ್ ತೇಲಿ ಕೊಲೆಯ ಕುರಿತು ಕೇಳಿದೆ. ‘ಜನರೇ ಅದನ್ನು ಮರೆತಿದ್ದಾರೆ. ನನಗೂ ಅದು ಈಗ ಏನಾಗಿದೆ ಅಂತ ಜಾಸ್ತಿ ಮಾಹಿತಿ ಗೊತ್ತಿಲ್ಲ’ ಎಂದರು.

‘ಧರ್ಮಕ್ಕೆ ಅಪಾಯ ಎದುರಾಗಿದೆ. ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದಲೇ ಕನ್ಹಯ್ಯಾಲಾಲ್ ಕೊಲೆ ಆಯಿತು’ ಎಂದು ಅಮಿತ್ ಶಾ ವಾರದ ಹಿಂದೆ ಹೇಳಿದ್ದನ್ನು ಪ್ರಸ್ತಾಪಿಸಿದೆ. ‘ಅವರು ಹಾಗೆ ಹೇಳೋದು ರಾಜಕೀಯ ಅಂತ ಎಲ್ಲರಿಗೂ ಗೊತ್ತಾಗುತ್ತೆ ಅಲ್ವಾ’ ಎಂದು ಪ್ರಶ್ನೆ ಹಾಕಿದರು ಕಿರಣ್. ‘ರಾಜಸ್ಥಾನದಲ್ಲಿ ಯಾವತ್ತಾದರೂ ಹಿಂದೂ–ಮುಸ್ಲಿಂ ಗಲಾಟೆ ಆಗಿದ್ದು ಕೇಳಿದ್ದೀರಾ’ ಎಂದು ಅವರು ಪ್ರಶ್ನಿಸಿದ್ದು ಆಗಲೇ.

ಜೈಪುರ, ಅಜ್ಮೀರ್, ಟೋಂಕ್, ಜಾಲಾವಾಡ್, ಉದಯಪುರ... ಪೂರ್ವ ಮತ್ತು ಆಗ್ನೇಯ ರಾಜಸ್ಥಾನದ ಈ ಜಿಲ್ಲೆಗಳಿರುವ ಪ್ರದೇಶ ಬಿಜೆಪಿಯ ಭದ್ರಕೋಟೆ. 2018ರಲ್ಲಿ ಬಿಜೆಪಿ ಇಲ್ಲಿ ಹೆಚ್ಚು ಕ್ಷೇತ್ರಗಳನ್ನು ಗೆದ್ದಿತ್ತು. ಈ ಬಾರಿಯೂ ಅವುಗಳನ್ನು ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನ ನಡೆಸುತ್ತಿದೆ. ಹಿಂದುತ್ವವನ್ನು ಬಲವಾಗಿ ಹಿಡಿದುಕೊಂಡರೆ ಗೆಲ್ಲಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಹಾಗಾಗಿಯೇ, ಸಂಸದ ರಮೇಶ್ ಬಿಧೂಡಿ ಅವರನ್ನು ರಾಜಸ್ಥಾನಕ್ಕೆ ಚುನಾವಣಾ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಅವರ ವಿರುದ್ಧ ‘ಅವಹೇಳನಕಾರಿ ಮಾತು’ಗಳನ್ನು ಸಂಸತ್ತಿನಲ್ಲಿಯೇ ಆಡಿದ್ದವರು ಈ ಬಿಧೂಡಿ.

ನಾನು ಜೈಪುರ ಬಿಟ್ಟು ಟೋಂಕ್ ದಾಟುವ ಹೊತ್ತಿಗೆ ಬಿಧೂಡಿ ಅಲ್ಲಿಯೇ ಭಾಷಣ ಮಾಡುತ್ತಿದ್ದರು. ‘ಇಲ್ಲಿ ಕಾಂಗ್ರೆಸ್ ಗೆದ್ದರೆ ಲಾಹೋರ್‌ನಲ್ಲಿ ಲಡ್ಡು ಹಂಚುತ್ತಾರೆ’ ಎಂದು ಅವರು ಅಂದು ಹೇಳಿದ್ದು ಸುದ್ದಿ ವಾಹಿನಿಗಳಲ್ಲಿ ಸದ್ದು ಮಾಡಿತ್ತು. ಆದರೆ, ಟೋಂಕ್‌ನ ಗಲ್ಲಿಗಲ್ಲಿಗಳಲ್ಲಿ ಅದರ ಪ್ರತಿಧ್ವನಿ ಇರಲಿಲ್ಲ.

ಈ ಬಗ್ಗೆ ಪ್ರಸ್ತಾಪಿಸಿದರೆ, ‘ಇದನ್ನೆಲ್ಲಾ ಕೇಳ್ತಾ ಕೂತರೆ ನಾವು ಬದುಕಕ್ಕೆ ಆಗುತ್ತಾ’ ಎಂದು ಕೇಳಿದವರು ಕಚೋರಿ ಅಂಗಡಿ ಇಟ್ಟುಕೊಂಡಿರುವ ಸುನಿಲ್ ಶ್ಯಾಮಲಾಲ್.

ಸಂಜೆಯ ಹೊತ್ತಿಗೆ ಕೋಟ ಜಿಲ್ಲೆಯ ಗಡಿಯ ಹತ್ತಿರ ತಲುಪಿದ್ದೆ. ಹೆದ್ದಾರಿ ಬದಿಯಲ್ಲಿ ‘ಅಸ್ಗರ್ ಎಗ್ ಸೆಂಟರ್’ ಇತ್ತು. ಅಲ್ಲಿದ್ದ ಕಲ್ಲು ಬೆಂಚಿನಲ್ಲಿ ಕೂತಿದ್ದ ವ್ಯಕ್ತಿಯನ್ನು ಮಾತಿಗೆಳೆದೆ. ‘ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಆದರೆ, ಐದು ವರ್ಷಕ್ಕೊಮ್ಮೆ ಸರ್ಕಾರ ಬದಲಾಗದೇ ಇದ್ದರೆ ಕೆಲಸ ಮುಂದುವರಿಯುವುದಿಲ್ಲ’ ಎಂದು ಅವರು ರಾಜಕೀಯ ಪ್ರಜ್ಞೆ ಪ್ರದರ್ಶಿಸಿದರು.

ನಾನು ಎದ್ದು ಹೊರಡಲು ಅನುವಾದಾಗ, ‘ಇದು ನನ್ನ ಗೆಳೆಯಂದೇ ಅಂಗಡಿ, ಯಾವಾಗ ಬೇಕಿದ್ದರೂ ಬನ್ನಿ, ಮೊಟ್ಟೆ ಚೆನ್ನಾಗಿ ಮಾಡ್ತಾನೆ’ ಎದು ಮುಕ್ತ ಆಹ್ವಾನವಿತ್ತರು. ‘ನನ್ನ ಅಪ್ಪನ ಕಾಲದಿಂದಲೂ ನಮ್ಮಿಬ್ಬರ ಮನೆಯವರು ತುಂಬಾ ಆಪ್ತರು. ನಾನು ಕೆಲಸ ಮುಗಿಸುತ್ತಲೇ ಇಲ್ಲಿ ಬರುತ್ತೇನೆ’ ಎಂದರು. ಅವರ ಹೆಸರು ಅಜಯ್.

ಎರಡು ದಿನ ಸುಮಾರು 750 ಕಿ.ಮೀ. ಪ್ರಯಾಣಿಸಿ ಉದಯಪುರ ತಲುಪಿದೆ. ‘ಧರ್ಮದ ಕಾರಣ’ಕ್ಕೆ ಕನ್ಹಯ್ಯಾಲಾಲ್ ಕೊಲೆಯಾಗಿದ್ದ ಜಾಗವನ್ನು ನೋಡುವ ಕುತೂಹಲವಿತ್ತು. ಅದು ಮಾಲ್ದಾಸ್ ಸ್ಟ್ರೀಟ್. ದಾರಿಹೋಕರೊಬ್ಬರ ಹತ್ತಿರ ದಾರಿ ಕೇಳಿದೆ. ‘ಇಲ್ಲಿನ ಜನ ಎಲ್ಲ ಮರೆತು ಬಿಟ್ಟಿದ್ದಾರೆ, ಆದರೆ ಹೊರಗಿನವರು ಇನ್ನೂ ಹುಡುಕಿಕೊಂಡು ಬರ್ತಾರಪ್ಪ’ ಎಂದು ಗೊಣಗುತ್ತಲೇ ದಾರಿ ತೋರಿದರು.

ಮಾಲ್ದಾಸ್ ಸ್ಟ್ರೀಟ್‌ನಲ್ಲಿ ಟೈಲರ್ ಅಂಗಡಿಗಳೇ ತುಂಬಿಕೊಂಡಿವೆ. ಕನ್ಹಯ್ಯಾಲಾಲ್ ಅಂಗಡಿ ಮುಚ್ಚಿದೆ. ಆದರೆ, ಎಡಬದಿಯಲ್ಲಿ ರಜಾಕ್ ಟೈಲರ್ಸ್, ಬಲಬದಿಯಲ್ಲಿ ಕೃಷ್ಣ ಟೈಲರ್ಸ್ ಇವೆ. ಫೋಟೊ ತೆಗೆಯೋಣ ಅಂದುಕೊಂಡರೆ, ಕೃಷ್ಣ ಟೈಲರ್ಸ್‌ನಲ್ಲಿದ್ದ ಹುಡುಗನೊಬ್ಬ ಓಡೋಡಿ ಬಂದು ‘ಬೇಡ’ ಎಂದ. ‘ಫೋಟೊ ತೆಗೀಬೇಡಿ, ಅದನ್ನು ನೋಡಿ ಬಹಳ ಜನ ಬಂದುಬಿಡ್ತಾರೆ’ ಎಂದ. ಆ ಕಹಿ ಘಟನೆಯ ಕುರಿತು ಮಾತನಾಡಲು ಯಾರಿಗೂ ಮನಸ್ಸಿಲ್ಲ.

ಚಿತ್ತೋರಗಢದಲ್ಲಿ ಮಾತಿಗೆ ಸಿಕ್ಕವರು ಪ್ರವಾಸಿ ಗೈಡ್ ಕರಣ್ ಮಾಲಿ. ಅವರು ಕರ್ಣಿ ಸೇನಾದ ಕಾರ್ಯಕರ್ತ.

‘ಖಿಲ್ಜಿ, ಅಕ್ಬರ್ ಎಲ್ಲರೂ ನಮ್ಮ ಮೇಲೆ ದಾಳಿ ಮಾಡಿದವರೇ. ಅದಕ್ಕಾಗಿ ನಾನು ಮುಸ್ಲಿಮರೊಂದಿಗೆ ವ್ಯಾಪಾರ, ವಹಿವಾಟು ನಡೆಸುವುದಿಲ್ಲ. ಆದರೆ ಹೊಡೆದಾಡಿ, ಕೊಲೆ ಮಾಡಿ ಅಂತಾರಲ್ಲ. ಅದನ್ನೂ ಒಪ್ಪುವುದಿಲ್ಲ. ಅಶೋಕ್ ಗೆಹಲೋತ್ ಮತ್ತೆ ಅಧಿಕಾರಕ್ಕೆ ಬಂದರೆ ನನಗೇನೂ ತೊಂದರೆ ಇಲ್ಲ. ಮೋದಿಜಿನೂ ಹಿಂದೂ, ಅಶೋಕ್‌ಜಿನೂ ಹಿಂದೂ. ಅಶೋಕ್‌ಜಿ ಮತ್ತೆ ಮುಖ್ಯಮಂತ್ರಿಯಾದರೆ ನಾವು ನಮಾಜ್ ಮಾಡಬೇಕು ಅನ್ನಲ್ಲ. ಧರ್ಮವನ್ನು ರಕ್ಷಿಸಿ ಎಂದು ಮುಸ್ಲಿಮರ ಜೊತೆ ಗಲಾಟೆ ಮಾಡಿದರೆ ಧರ್ಮ ಉಳಿಯುತ್ತದೆಯೇ...’ ಕರಣ್ ಅವರ ವಾದ ಸರಣಿ ಹೀಗೆ ಸಾಗಿತ್ತು.

ಜೋಧಪುರದಲ್ಲಿ ಆಟೊದಲ್ಲಿ ಸಾಗುತ್ತಿದ್ದಾಗ ಆಟೊ ಚಾಲಕ ಮತ್ತದೇ ಮಾತು ಅಂದ: ‘ಇಲ್ಲಿ ಎಂದೂ ಹಿಂದೂ– ಮುಸ್ಲಿಂ ಗಲಾಟೆ ಆಗಿಲ್ಲ’ ಅಂತ.

‘ಸರ್ದಾರ್ ಮಾರ್ಕೆಟ್‌ನಲ್ಲಿ ನಮ್ಮ ಮನೆ ಎದುರೇ ಮಸೀದಿ ಇದೆ. ಅದರ ಪಕ್ಕ ಮಂದಿರವೂ ಇದೆ. ಹಿಂದೂ–ಮುಸ್ಲಿಂ ದ್ವೇಷ ಎಂಬುದು ರಾಜಕಾರಣಿಗಳ ಸೃಷ್ಟಿ. ವೋಟ್‌ಗಾಗಿ ನಮ್ಮನ್ನು ಬೇರೆ ಮಾಡಲಾಗದು’ ಎಂದು ಆತ ನನ್ನ ಇಳಿಸಿ ಹೊರಟ. ಬಿಕಾನೆರ್, ಜೈಸಲ್ಮೇರ್, ಪೋಕರಣ್‌ನಲ್ಲಿಯೂ ಸುತ್ತಾಡಿದೆ. ‘ಧಾರ್ಮಿಕ ಧ್ರುವೀಕರಣ ಎಂಬುದು ರಾಜಕಾರಣಿಗಳ ಸೃಷ್ಟಿ’ ಎಂಬುದು ಇಲ್ಲಿನ ಜನರ ಮಾತಿನಲ್ಲಿಯೂ ಧ್ವನಿಸಿತು.

ಉದ್ಯಮಿಗಳಿಗಷ್ಟೇ ತುಷ್ಟೀಕರಣದ ಚಿಂತೆ

‘ಈ ಸರ್ಕಾರದ ಎಲ್ಲ ವಿಚಾರವೂ ಸರಿ. ಆದರೆ, ಅಲ್ಪಸಂಖ್ಯಾತರ ತುಷ್ಟೀಕರಣ ಸರಿ ಇಲ್ಲ’ ಎಂದವರು ರೆಂಟಲ್ ವೀಲ್ ಮಾಲೀಕ ರವಿಕಾಂತ್ ಶರ್ಮಾ. ಜೈಪುರದಿಂದ ಹೊರಟು ರಾಜಸ್ಥಾನದ ಹತ್ತಾರು ಕಡೆ ಸುತ್ತಾಡಿ, ಮತ್ತೆ ಜೈಪುರಕ್ಕೆ ಬರುವವರೆಗೆ ಇಂತಹ ಮಾತು ಕೇಳಿದ್ದು ಕೆಲವು ಉದ್ಯಮಿಗಳಿಂದ ಮಾತ್ರ. ಜನರು ಇಂತಹ ಮಾತು ಆಡಿಲ್ಲ. ಬಾಲಕನಾಥ ಬಿಟ್ಟರೆ ಬಿಜೆಪಿಯ ಇತರ ಅಭ್ಯರ್ಥಿಗಳೂ ಧ್ರುವೀಕರಣದ ಮಾತು ಆಡುತ್ತಿಲ್ಲ. ಬಿಜೆಪಿಯ ಪ್ರಮುಖ ನಾಯಕಿ ವಸುಂಧರಾ ರಾಜೇ ಅವರೂ ಇಂತಹ ಮಾತು ಆಡಿದ್ದು ವರದಿಯಾಗಿಲ್ಲ.

‘ರಾಜಸ್ಥಾನದ ಯೋಗಿ’ ಬಾಲಕನಾಥ

ಅಲ್ವರ್‌ನ ಸಂಸದ, ತಿಜೋರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಬಾ ಬಾಲಕನಾಥ ಅವರನ್ನು ರಾಜಸ್ಥಾನದ ಯೋಗಿ ಆದಿತ್ಯನಾಥ ಎನ್ನುತ್ತಾರೆ. ‘ನನಗೆ ಮತ ನೀಡಿ, ಧರ್ಮವನ್ನು ರಕ್ಷಿಸಿ’ ಎಂದೇ ಇವರು ಪ್ರಚಾರ ಮಾಡುತ್ತಿದ್ದಾರೆ. ಬೇರೆಡೆಗೆ ಹೋಲಿಸಿದರೆ ಅಲ್ವರ್‌ನಲ್ಲಿ ಪರಿಸ್ಥಿತಿ ಸ್ವಲ್ಪ ಭಿನ್ನ. ಬಾಲಕನಾಥ ಅವರ ಮಾತು ಕೇಳಲು ಜನ ಸೇರುತ್ತಾರೆ.

‘ಧರ್ಮವನ್ನು ರಕ್ಷಿಸಬೇಕಿದ್ದರೆ ಬಾಲಕನಾಥ ಅವರಿಗೆ ಮತ ಹಾಕಬೇಕು. ಅವರು ಮುಖ್ಯಮಂತ್ರಿಯಾಗುತ್ತಾರೆ. ಧರ್ಮವನ್ನು ರಕ್ಷಿಸುತ್ತಾರೆ’ ಎಂದದ್ದು ಅವರ ಮಾತು ಕೇಳುತ್ತಾ ಕುಳಿತಿದ್ದ ಮಾಣಿಕ್ ಲಾಲ್.

ಚುನಾವಣಾ ಕಣದಲ್ಲಿ

- **ಮರುಮತದಾನ:** ಮಧ್ಯಪ್ರದೇಶದ ಭಿಂಡ್ ಜಿಲ್ಲೆಯ ಕಿಷುಪುರದ ಮತಗಟ್ಟೆಯೊಂದರಲ್ಲಿ ಇದೇ 21ರಂದು ಮರುಮತದಾನ ನಡೆಸಲು ಚುನಾವಣಾ ಆಯೋಗ ಆದೇಶಿಸಿದೆ. ಇದೇ 17ರಂದು ವಿಧಾನಸಭೆಗೆ ನಡೆದ ಮತದಾನದ ವೇಳೆ ಮತ ಹಾಕುತ್ತಿರುವುದನ್ನು ಕೆಲವರು ವಿಡಿಯೊದಲ್ಲಿ ಸೆರೆ ಹಿಡಿದಿದ್ದಾರೆ. ಮತಗಟ್ಟೆಯಲ್ಲಿ ಕರ್ತವ್ಯದಲ್ಲಿದ್ದ ನಾಲ್ವರನ್ನು ಅಮಾನತುಗೊಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಜೀವ್ ಶ್ರೀವಾಸ್ತವ ಹೇಳಿದ್ದಾರೆ.
- **ಕೊಲೆ ಪ್ರಕರಣ ದಾಖಲು:** ಮಧ್ಯಪ್ರದೇಶ ವಿಧಾನಸಭೆ ಚುನಾವಣೆ ವೇಳೆ ಪಕ್ಷದ ಕಾರ್ಯಕರ್ತರೊಬ್ಬರ ಸಾವಿಗೆ ಸಂಬಂಧಿಸಿದಂತೆ ಛತರ್‌ಪುರದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಛತರ್‌ಪುರದ ರಾಜ್‌ನಗರ ಕ್ಷೇತ್ರದಲ್ಲಿ ಶುಕ್ರವಾರ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವಣ ಘರ್ಷಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಸಲ್ಮಾನ್ ಖಾನ್ ಎಂಬುವರು ಮೃತಪಟ್ಟಿದ್ದರು. ಪೊಲೀಸರ ಪ್ರಕಾರ ಖಾನ್ ಅವರ ಮೇಲೆ ವಾಹನ ಹರಿದು ಹೋಗಿತ್ತು. ಖಾನ್ ಅವರು ಅಪಘಾತದಲ್ಲಿ ಸತ್ತಿಲ್ಲ. ಅದು ಕೊಲೆ ಎಂದು ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್ ಆರೋಪಿಸಿದ್ದರು.
- **ಕಾಂಗ್ರೆಸ್ ಪತ್ರ:** ಮತದಾನ ಸಂದರ್ಭದಲ್ಲಿ ಆಡಳಿತಾರೂಢ ಬಿಜೆಪಿಗೆ ಅನುಕೂಲವಾಗುವಂತೆ ಕಾರ್ಯ ನಿರ್ವಹಿಸಿದರೆನ್ನಲಾದ ಅಧಿಕಾರಿಗಳ ವಿವರ ನೀಡುವಂತೆ ಮಧ್ಯಪ್ರದೇಶ ಕಾಂಗ್ರೆಸ್ ಘಟಕವು ತನ್ನ ಎಲ್ಲಾ 230 ಅಭ್ಯರ್ಥಿಗಳಿಗೆ ಪತ್ರ ಬರೆದಿದೆ. ಬಿಜೆಪಿ ಅನುಕೂಲಕ್ಕಾಗಿ ಅಧಿಕಾರಿಗಳು ಮತ್ತು ನೌಕರರು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆಂದು ಮತದಾನದ ದಿನ ನಿಯಂತ್ರಣ ಕೊಠಡಿಗೆ ಅನೇಕ ದೂರುಗಳು ಬಂದಿವೆ ಎಂದು ಕಾಂಗ್ರೆಸ್ ಪತ್ರದಲ್ಲಿ ಹೇಳಿದೆ. ಚುನಾವಣೆಯಲ್ಲಿ ಸೋಲು ಖಚಿತ ಎಂಬುದನ್ನು ಮನಗಂಡ ಕಾಂಗ್ರೆಸ್ ಹೊಸ ನೆಪ ಹುಡುಕಲು ಯತ್ನಿಸುತ್ತಿದೆ ಎಂದು ಬಿಜೆಪಿ ಟೀಕಿಸಿದೆ.
- ತೆಲಂಗಾಣದಲ್ಲಿ ಭತ್ತವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಬಿಆರ್‌ಎಸ್ ಅಧಿಕಾರಕ್ಕೆ ಬಂದರೆ, ಎಲ್ಲೆಡೆ ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಸ್ಥಾಪಿಸಲಾಗುವುದು. ಇದು ಸ್ಥಳೀಯ ಯುವಜನತೆಗೆ ಉದ್ಯೋಗವನ್ನೂ ನೀಡಲಿದೆ ಎಂದು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಹೇಳಿದರು. ಮಾನಕೊಂಡೂರಿನಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಆಟೊ ಚಾಲಕರು ಪ್ರತಿ ವರ್ಷ ನೀಡಬೇಕಿರುವ ‘ಫಿಟ್‌ನೆಸ್ ಪ್ರಮಾಣಪತ್ರವನ್ನು’ ರದ್ದು ಮಾಡುವುದಾಗಿಯೂ ಭರವಸೆ ನೀಡಿದರು.
- ‘ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರರಾವ್ ಅವರು ಭ್ರಷ್ಟಾಚಾರದಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದಾರೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಅವರ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಲಾಗುವುದು ಎಂದು ಅವರು ಜನಗಾಮದಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ನುಡಿ-ಕಿಡಿ

ಬಂದರಿನಿಂದ ಹಿಡಿದು ವಿಮಾನನಿಲ್ದಾಣದವರೆಗೆ ಎಲ್ಲವನ್ನೂ ಪ್ರಧಾನಿ ನರೇಂದ್ರ ಮೋದಿ ನಿಯಂತ್ರಿಸುತ್ತಾರೆ. ಜನರನ್ನು ಗುಲಾಮರಾಗಿ ಮಾಡುವತ್ತ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ನಾವು ಹೆದರುವುದಿಲ್ಲ. ಅವರು ನಮ್ಮನ್ನು ಹೆದರಿಸಲು ಎಷ್ಟಾದರೂ ಯತ್ನಿಸಲಿ, ಹೋರಾಟ ನಡೆಸಿ ಬಡವರ ಸಮಸ್ಯೆಗಳನ್ನು ಪರಿಹರಿಸುತ್ತೇವೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ತೆಲಂಗಾಣದ ಹಲವಾರು ಕ್ಷೇತ್ರಗಳಲ್ಲಿ ಬಿಜೆಪಿ ಮುಂಚೂಣಿಯಲ್ಲಿದೆ. ಬಿಜೆಪಿ ಪ್ರಚಾರಕ್ಕೆ ಜನರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಬಿಆರ್‌ಎಸ್ ವಾಹನಗಳು ತಮ್ಮ ಗ್ರಾಮಗಳನ್ನು ಪ್ರವೇಶಿಸುವುದನ್ನು ಗ್ರಾಮಸ್ಥರೇ ಸ್ವಯಂಪ್ರೇರಿತರಾಗಿ ತಡೆಯುತ್ತಿದ್ದಾರೆ. ಬಿಆರ್‌ಎಸ್ ವಿರುದ್ಧ ಜನರು ಸದ್ದಿಲ್ಲದೇ ಬಂಡಾಯವೆದ್ದಿದ್ದಾರೆ.

ಕಿಶನ್‌ರೆಡ್ಡಿ, ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ

ಕಾಂಗ್ರೆಸ್‌ಗೆ ವಂಶಾಡಳಿತ ಮತ್ತು ಭ್ರಷ್ಟಾಚಾರವೇ ಮುಖ್ಯ

ಮಹಿಳಾ ವಿರೋಧಿ ಮನಸ್ಥಿತಿಯ ‘ಇಂಡಿಯಾ’: ಪ್ರಧಾನಿ ಟೀಕೆ

ಜೈಪುರ (ಪಿಟಿಐ): ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಮಹಿಳಾ ವಿರೋಧಿ ಮನಸ್ಥಿತಿ ಹೊಂದಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದರು.

ಪಾಲಿ ಜಿಲ್ಲೆಯಲ್ಲಿ ಸೋಮವಾರ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಅಂಗೀಕಾರವಾದಾಗಿನಿಂದ, ಅವರು ಮಹಿಳೆಯರ ವಿರುದ್ಧ ಅಭಿಯಾನ ಪ್ರಾರಂಭಿಸಿದ್ದಾರೆ. ದುರಹಂಕಾರಿ ಮೈತ್ರಿಕೂಟದ ನಾಯಕರು ನಮ್ಮ ತಾಯಂದಿರು ಮತ್ತು ಸಹೋದರಿಯರ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಟೀಕಿಸಿದರು.

ಬಿಹಾರ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಮಹಿಳೆಯರ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿದ್ದಾರೆ. ಆದರೆ ಯಾವುದೇ ಕಾಂಗ್ರೆಸ್ ನಾಯಕರು ಈ ಬಗ್ಗೆ ಏನನ್ನೂ ಹೇಳಲಿಲ್ಲ. ಇದು ಕಾಂಗ್ರೆಸ್‌ನ ನಿಜವಾದ ಮುಖ, ಇದನ್ನು ರಾಜಸ್ಥಾನದ ಜನರು ಗುರುತಿಸಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ವಂಶಾಡಳಿತ ಮತ್ತು ಭ್ರಷ್ಟಾಚಾರಕ್ಕಿಂತ ಬೇರೆ ಯಾವ ವಿಷಯವೂ ಮುಖ್ಯವಲ್ಲ ಎಂದು ಆರೋಪಿಸಿದರು.

ಹನುಮಾನ್‌ಗಢದಲ್ಲಿ ಕೂಡ ಮೋದಿ ರ‍್ಯಾಲಿ ನಡೆಸಿದರು. ಬಿಕಾನೇರ್‌ನಲ್ಲಿ ರೋಡ್‌ಶೋನಲ್ಲಿ ಭಾಗವಹಿಸಿದ್ದರು. ಮಂಗಳವಾರ ಅವರು ಮೂರು ಕಡೆ ರ‍್ಯಾಲಿಗಳಲ್ಲಿ ಪಾಲ್ಗೊಳ್ಳುವರು. ಜೈಪುರದಲ್ಲಿ ರೋಡ್‌ಶೋ ನಡೆಸುವರು.

ರಾಜಸ್ಥಾನ ವಿಧಾನಸಭೆಗೆ ಇದೇ 25ರಂದು ಚುನಾವಣೆ ನಡೆಯಲಿದೆ.

ರಾಜಸ್ಥಾನದ ಪಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿದ್ದ ಹೆಲಿಕಾಪ್ಟರ್‌ಗೆ ಕೈ ಬೀಸಿದ ಬೆಂಬಲಿಗರು ಪಿಟಿಐ ಚಿತ್ರ

ಬಿಜೆಪಿ ವಿರುದ್ಧ ಪ್ರಿಯಾಂಕಾ ವಾಗ್ದಾಳಿ

ಜೈಪುರ (ಪಿಟಿಐ): ‘ಚುನಾವಣಾ ಸಮಯದಲ್ಲಿ ಯಾರು ಧರ್ಮ ಮತ್ತು ಜಾತಿಯ ಮೊರೆ ಹೋಗುತ್ತಾರೋ ಅಂಥವರು ತಮ್ಮ ಸಾಧನೆಗಳ ಆಧಾರದಲ್ಲಿ ಮತ ಯಾಚಿಸುವ ಯೋಗ್ಯತೆ ಕಳೆದುಕೊಂಡಿರುತ್ತಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಬಿಜೆಪಿ ವಿರುದ್ಧ ಸೋಮವಾರ ದಾಳಿ ನಡೆಸಿದರು.

ರಾಜಸ್ಥಾನದ ಅಜ್ಮೇರ್‌ನ ಕೇಕ್ಡಿಯಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ರಾಜಕೀಯ ಪಕ್ಷಗಳು ಕೈಗೊಂಡಿರುವ ಅಭಿವೃದ್ಧಿ ಕೆಲಸಗಳ ಆಧಾರದಲ್ಲಿ ಮತ ನೀಡುವಂತೆ ಮತದಾರರಿಗೆ ಮನವಿ ಮಾಡಿದರು.

ರಾಜಸ್ಥಾನದಲ್ಲಿ ಕಾಂಗ್ರೆಸ್ ಒಗ್ಗಟ್ಟಿನಿಂದ ಇದೆ. ಕಾಂಗ್ರೆಸ್‌ನ ಎಲ್ಲಾ ನಾಯಕರೂ ಒಗ್ಗೂಡಿ ಚುನಾವಣಾ ಕಣಕ್ಕೆ ಧುಮುಕಿದ್ದಾರೆ. ಆದರೆ ಬಿಜೆಪಿ ಒಡೆದು ಚೂರಾಗಿದೆ ಎಂದರು.

ಎಐಎಡಿಎಂಕೆ ಮುಖಂಡರ ವಿಚಾರಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಎಐಎಡಿಎಂಕೆ ಸರ್ಕಾರದಲ್ಲಿ ಪ್ರಮುಖ ಖಾತೆಗಳನ್ನು ಹೊಂದಿದ್ದ, ಆ ಪಕ್ಷದ ಹಿರಿಯ ನಾಯಕರಾದ ಸಿ.ವಿ. ಜಯಭಾಸ್ಕರ್ ಮತ್ತು ಬಿ.ವಿ.ರಮಣ ಅವರನ್ನು ವಿಚಾರಣೆಗೆ ಒಳಪಡಿಸಲು ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅನುಮೋದನೆ ನೀಡಿದ್ದಾರೆ.

ಇವರು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಮತ್ತು ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದರು. ಈ ಇಬ್ಬರು ಆರೋಪಿಗಳಾಗಿರುವ ಗುಟ್ಕಾ ಹಗರಣದ ತನಿಖೆಯನ್ನು ಸಿಬಿಐ ನಡೆಸುತ್ತಿದೆ.

ರಾಜ್ಯಪಾಲರು ಸಂಬಂಧಿತ ಕಡತವನ್ನು ಈಗ ವಿಲೇವಾರಿ ಮಾಡಿದ್ದು, ಶಿಕ್ಷೆಗೆ ಗುರಿಪಡಿಸಲು ಅನುಮೋದನೆ ನೀಡಿದ್ದಾರೆ ಎಂದು ಎಂದು ರಾಜಭವನವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ಎಐಎಡಿಎಂಕೆಯ ಈ ಇಬ್ಬರು ಮಾಜಿ ಸಚಿವರಿಗೆ ಸಂಬಂಧಿಸಿದ ಕಡತವನ್ನು ವಿಲೇವಾರಿ ಮಾಡದೆ ಬಾಕಿ ಉಳಿಸಿಕೊಂಡಿದ್ದಾರೆ ಎಂದು ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರ ರಾಜ್ಯಪಾಲರ ವಿರುದ್ಧ ಆರೋಪ ಮಾಡಿತ್ತು.

₹1,760 ಕೋಟಿ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಚ ರಾಜ್ಯಗಳ ಚುನಾವಣಾ ಸಂದರ್ಭದಲ್ಲಿ ₹1,760 ಕೋಟಿ ಮೊತ್ತದ ನಗದು, ಮದ್ಯ, ಬೆಲೆಬಾಳುವ ಲೋಹ, ಮಾದಕ ದ್ರವ್ಯ ಹಾಗೂ ಉಚಿತ ಉಡುಗೊರೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ಚುನಾವಣಾ ಆಯೋಗ ಸೋಮವಾರ ತಿಳಿಸಿದೆ.

2018ರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ವೇಳೆ ₹239 ಕೋಟಿ ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಸಲ ಚುನಾವಣಾ ಅಕ್ರಮ ತಡೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಹೀಗಾಗಿ, ಕಳೆದ ಸಾಲಿಗೆ ಹೋಲಿಸಿದರೆ ವಶಪಡಿಸಿಕೊಂಡ ಸ್ವತ್ತುಗಳ ಮೊತ್ತ ಏಳು ಪಟ್ಟು ಹೆಚ್ಚಾಗಿದೆ. ನೀತಿ ಸಂಹಿತೆ ಜಾರಿಯಾದಾಗಿನಿಂದ ಕಾನೂನು ಜಾರಿ ಸಂಸ್ಥೆಗಳು ಈ ವಸ್ತುಗಳನ್ನು ವಶಪಡಿಸಿಕೊಂಡಿವೆ ಎಂದು ಆಯೋಗ ಹೇಳಿದೆ.

‘ಗುಜರಾತ್, ಹಿಮಾಚಲ ಪ್ರದೇಶ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ ಹಾಗೂ ಕರ್ನಾಟಕ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ₹1,400 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಇದು ಹಿಂದಿನ ಚುನಾವಣೆಗೆ ಹೋಲಿಸಿದರೆ ಶೇ 11 ಪಟ್ಟು ಅಧಿಕ. ಕರ್ನಾಟಕದಲ್ಲಿ ₹384.60 ಕೋಟಿ ಮೌಲ್ಯದ ನಗದು, ಮದ್ಯ ಹಾಗೂ ಉಚಿತ ಉಡುಗೊರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು’ ಎಂದು ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಬಾರಿ, ಆಯೋಗವು ಚುನಾವಣಾ ವೆಚ್ಚ ಮೇಲ್ವಿಚಾರಣಾ ವ್ಯವಸ್ಥೆ (ಇಎಸ್‌ಎಂಎಸ್) ಮೂಲಕ ಮೇಲ್ವಿಚಾರಣಾ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಅಳವಡಿಸಿದೆ. ಇದರಿಂದಾಗಿ, ಕೇಂದ್ರ ಮತ್ತು ರಾಜ್ಯ ಜಾರಿ ಸಂಸ್ಥೆಗಳು ಉತ್ತಮ ಸಮನ್ವಯದಿಂದ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಎಂದೂ ಆಯೋಗ ಹೇಳಿದೆ.

ಮಿಜೋರಾಂನಲ್ಲಿ ₹ 29.82 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಎಲ್ಲಿ ಎಷ್ಟು ವಶ

ರಾಜ್ಯ	ಮೊತ್ತ (₹ಕೋಟಿಗಳಲ್ಲಿ)
ಛತ್ತೀಸಗಢ	76.9
ಮಧ್ಯಪ್ರದೇಶ	323.7
ಮಿಜೋರಾಂ	49.6
ರಾಜಸ್ಥಾನ	650.7
ತೆಲಂಗಾಣ	659.2
ಒಟ್ಟು	1,760

ಯಾವುದು ಎಷ್ಟು ವಶ

(₹ಕೋಟಿಗಳಲ್ಲಿ)

ನಗದು	372.9
ಮದ್ಯ	214.8
ಮಾದಕ ದ್ರವ್ಯ	245.3
ಅಮೂಲ್ಯ ಲೋಹಗಳು	371.2
ಉಚಿತ ಉಡುಗೊರೆ ಹಾಗೂ ಇತರ ವಸ್ತು	556.02

ಛತ್ತೀಸಗಢ: ಮತ ಚಲಾವಣೆಯಲ್ಲಿ ಮಹಿಳೆಯರೇ ಮುಂದೆ

ನವದೆಹಲಿ: ಛತ್ತೀಸಗಢ ವಿಧಾನಸಭೆ ಚುನಾವಣೆಯಲ್ಲಿ ಪುರುಷ ಮತದಾರರಿಗಿಂತ ಸುಮಾರು 64,000ದಷ್ಟು ಹೆಚ್ಚು ಮಹಿಳಾ ಮತದಾರರು ಮತ ಚಲಾಯಿಸಿದ್ದಾರೆ ಎಂದು ಚುನಾವಣಾ ಆಯೋಗದ ಅಂಕಿಅಂಶದಿಂದ ತಿಳಿದುಬಂದಿದೆ.

ಒಟ್ಟು 90 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 50 ಕ್ಷೇತ್ರಗಳಲ್ಲಿ ಮಹಿಳಾ ಮತದಾರರೇ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ.

ರಾಜ್ಯದಲ್ಲಿ ಒಟ್ಟು 1.55 ಕೋಟಿ ಮತದಾರರು ಮತ ಚಲಾಯಿಸಿದ್ದಾರೆ. ಅವರಲ್ಲಿ 78.12 ಲಕ್ಷ ಮಂದಿ ಮಹಿಳೆಯರಿದ್ದರೆ, 77.48 ಲಕ್ಷ ಮಂದಿ ಪುರುಷರಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡುತ್ತಿದ್ದರೂ ಚುನಾವಣೆಯಲ್ಲಿ ಮಹಿಳೆಯರನ್ನು ಕಣಕ್ಕಿಳಿಸಲು ಪ್ರಮುಖ ರಾಜಕೀಯ ಪಕ್ಷಗಳು ಹೆಚ್ಚು ಆಸಕ್ತಿ ತೋರಲಿಲ್ಲ. 18 ಮಹಿಳಾ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು, ಬಿಜೆಪಿ 15 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು.

ಆದರೆ, ಮಧ್ಯಪ್ರದೇಶ ಚುನಾವಣೆಯ ಸನ್ನಿವೇಶ ಇದಕ್ಕಿಂತ ಭಿನ್ನವಾಗಿದೆ. ರಾಜ್ಯದಲ್ಲಿ ಶೇ 78.21 ಪುರುಷ ಮತದಾರರು ಮತ್ತು ಶೇ 76.03 ಮಹಿಳಾ ಮತದಾರರು ಮತ ಚಲಾಯಿಸಿದ್ದಾರೆ.

ಕಾರ್ಮಿಕರೊಂದಿಗೆ ರೇಡಿಯೊ ಮೂಲಕ ಸಂವಹನ, ರಕ್ಷಣಾ ಕಾರ್ಯಾಚರಣೆ ಚುರುಕು

ಆಹಾರ ಪೂರೈಕೆಗೆ 6 ಇಂಚು ಪೈಪ್

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ/ಎಎಫ್‌ಪಿ): ಇಲ್ಲಿನ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ 41 ಮಂದಿ ಕಾರ್ಮಿಕರ ರಕ್ಷಣೆಗಾಗಿ ಕಾರ್ಯಾಚರಣೆ ಮುಂದುವರಿದಿದ್ದು, ರಕ್ಷಣಾ ಸಿಬ್ಬಂದಿ ಸೋಮವಾರ ಅವಶೇಷದಡಿ ರಂಧ್ರ ಕೊರೆದು ಆರು ಇಂಚು ವ್ಯಾಸದ ಪೈಪ್ ಅನ್ನು ಯಶಸ್ವಿಯಾಗಿ ಅಳವಡಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆಯಲ್ಲಿ ಪ್ರಗತಿ ಸಾಧಿಸಲಾಗಿದ್ದು, ಒಳಸಿಲುಕಿರುವ ಕಾರ್ಮಿಕರಿಗೆ ಹೆಚ್ಚಿನ ಪ್ರಮಾಣದ ಆಹಾರ ಮತ್ತು ಇತರೆ ಅಗತ್ಯ ವಸ್ತುಗಳನ್ನು ಪೂರೈಸಲು ಇದು ಅನುವು ಮಾಡಿಕೊಡಲಿದೆ.

ಈ ಮೊದಲು ಡ್ರೈ ಫ್ರೂಟ್, ಔಷಧ ಮತ್ತು ಆಮ್ಲಜನಕ, ಆಹಾರವನ್ನು ಪೂರೈಸಲು ನಾಲ್ಕು ಇಂಚಿನ ಟ್ಯೂಬ್ ಅನ್ನು ಬಳಸಲಾಗುತ್ತಿತ್ತು. ಹೊಸಪೈಪ್‌ಲೈನ್‌ನಲ್ಲಿಕಾರ್ಮಿಕರಿಗೆರೊಟ್ಟಿ ಮತ್ತು ಪಲ್ಯದಂತಹ ಆಹಾರ ಪದಾರ್ಥ ಕಳುಹಿಸಬಹುದಾಗಿದೆ.

ಸುರಂಗ ಕುಸಿದು ಒಂಬತ್ತು ದಿನವಾಗಿದೆ. ರಕ್ಷಣಾ ಸಿಬ್ಬಂದಿ ಕಾರ್ಮಿಕರೊಂದಿಗೆ ರೇಡಿಯೊ ಮೂಲಕ ಸಂವಹನ ನಡೆಸುತ್ತಿದ್ದು, ಆಹಾರ, ನೀರು, ಆಮ್ಲಜನಕ ಮತ್ತು ಔಷಧಿಗಳನ್ನು ಕಿರಿದಾದ ಪೈಪ್ ಮೂಲಕ ರವಾನಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಎನ್‌ಎಚ್‌ಐಡಿಸಿಎಲ್) ನಿರ್ದೇಶಕ ಅಂಶು ಮನೀಶ್ ಕಲ್ಖೋ, ‘ರಕ್ಷಣಾ ಕಾರ್ಯಾಚರಣೆಯಲ್ಲಿ ಪ್ರಗತಿ ಸಾಧಿಸಿದ್ದು, ಪೈಪ್ ಅನ್ನು ಅವಶೇಷಗಳ ಇನ್ನೊಂದು ಬದಿಗೆ 53 ಮೀಟರ್‌ವರೆಗೆ ಅಳವಡಿಸಲಾಗಿದೆ. ಕಾರ್ಮಿಕರು ನಮ್ಮ ಧ್ವನಿ ಕೇಳಬಹುದು. ನಾವು ಈಗ ಆ ಪೈಪ್ ಮೂಲಕ ಕಾರ್ಮಿಕರಿಗೆ ಆಹಾರ ಮತ್ತು ವೈದ್ಯಕೀಯ ಸಾಮಗ್ರಿ ಒದಗಿಸುತ್ತೇವೆ’ ಎಂದು ಹೇಳಿದ್ದಾರೆ.

ವೈದ್ಯಕೀಯ ತಂಡಗಳನ್ನು ಸಹ ಸ್ಥಳದಲ್ಲಿ ನಿಯೋಜಿಸಲಾಗಿದೆ. ಪ್ರಧಾನಿ ಕಚೇರಿಯ (ಪಿಎಂಒ) ತಂಡವು ಕಾರ್ಯಾಚರಣೆಯ ನಿಗಾವಹಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಚಾರ್‌ಧಾಮ್ ಸರ್ವಋತು ರಸ್ತೆ ಯೋಜನೆಯಡಿ ಸುರಂಗ ನಿರ್ಮಿಸುತ್ತಿದ್ದ ವೇಳೆ ಭೂಕುಸಿತ ಸಂಭವಿಸಿ ಕಾರ್ಮಿಕರು ಅದರೊಳಗೆ ಸಿಲುಕಿಕೊಂಡಿದ್ದಾರೆ.

ಮೋದಿ–ಧಾಮಿ ಮಾತುಕತೆ: ಸುರಂಗದೊಳಗೆ ಸಿಲುಕಿರುವ ಕಾರ್ಮಿಕರ ರಕ್ಷಣೆಗಾಗಿ ನಡೆಯುತ್ತಿರುವ ಕಾರ್ಯಾಚರಣೆ ಬಗ್ಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ ನಡೆಸಿದರು. ಕಾರ್ಮಿಕರ ನೈತಿಕ ಸ್ಥೈರ್ಯ ಹೆಚ್ಚಿಸುವ ಅಗತ್ಯದ ಬಗ್ಗೆ ಪ್ರಧಾನಿ ಹೇಳಿದರು.

ಅಗತ್ಯ ರಕ್ಷಣಾ ಉಪಕರಣಗಳು ಮತ್ತು ಸಂಪನ್ಮೂಲಗಳನ್ನು ಕೇಂದ್ರ ಒದಗಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಪರಸ್ಪರ ಸಮನ್ವಯದ ಮೂಲಕ, ಕಾರ್ಮಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗುವುದು ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸುರಂಗದಲ್ಲಿ ನಡೆಯುತ್ತಿರುವ ರಕ್ಷಣಾ ಕಾರ್ಯಾಚರಣೆಗಳ ಬಗ್ಗೆ ಮೋದಿ ಅವರು ಧಾಮಿ ಅವರೊಂದಿಗೆ ಮೂರನೇ ಬಾರಿಗೆ ಮಾತನಾಡಿದರು.

‘ಎಲ್ಲಾ ಕಾರ್ಮಿಕರು ಸುರಕ್ಷಿತರಾಗಿದ್ದಾರೆ. ಆಮ್ಲಜನಕ, ಪೌಷ್ಟಿಕ ಆಹಾರ ಮತ್ತು ನೀರನ್ನು ನಿರಂತರವಾಗಿ ಪೂರೈಸಲಾಗುತ್ತಿದೆ. ರಕ್ಷಣಾ ಕಾರ್ಯಾಚರಣೆ ಬಗ್ಗೆ ತಜ್ಞರೊಂದಿಗೆ ಸಮಾಲೋಚಿಸಲಾಗಿದೆ. ಎಲ್ಲಾ ಏಜೆನ್ಸಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿವೆ. ನಾನು ಸ್ಥಳ ಪರಿಶೀಲನೆ ನಡೆಸಿದ್ದು, ಕಾರ್ಯಾಚರಣೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ’ ಎಂದು ಧಾಮಿ ಅವರು ಮೋದಿಗೆ ತಿಳಿಸಿದರು.

ಸುರಂಗಗಳ ವಿಷಯದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ತಜ್ಞ ಅರ್ನಾಲ್ಡ್ ಡಿಕ್ಸ್ ಅವರು ನಿರ್ಮಾಣ ಹಂತದ ಸುರಂಗ ಕುಸಿದ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆ ಪರಿಶೀಲಿಸಿದರು ಪಿಟಿಐ ಚಿತ್ರ

ಸುರಂಗ ಸ್ಥಳಕ್ಕೆ ತಜ್ಞ ಅರ್ನಾಲ್ಡ್ ಡಿಕ್ಸ್

ಕಾರ್ಮಿಕರ ರಕ್ಷಣೆಗಾಗಿ ಸುರಂಗಗಳ ವಿಷಯದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ತಜ್ಞ ಅರ್ನಾಲ್ಡ್ ಡಿಕ್ಸ್ ಘಟನಾ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಕಾರ್ಮಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಈವರೆಗೂ ಮಾಡಿರುವ ರಕ್ಷಣಾ ಪ್ರಯತ್ನಗಳ ಬಗ್ಗೆಯೂ ಅವರು ತೃಪ್ತಿ ವ್ಯಕ್ತಪಡಿಸಿದರು.

‘ನಾನು ಈಗಷ್ಟೇ ಸುರಂಗದಲ್ಲಿ ಇಳಿದಿದ್ದೇನೆ. ಇತರ ಆಯ್ಕೆಗಳನ್ನು ಪರಿಗಣಿಸಲು ನಾವು ಪರ್ವತದ ತುದಿಗೆ ಬರುತ್ತಿದ್ದೇವೆ. ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರುವ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ. ಎಲ್ಲಾ ಕಾರ್ಮಿಕರು ಸುರಕ್ಷಿತವಾಗಿದ್ದಾರೆ ಮತ್ತು ಜೀವಂತವಾಗಿ ಹೊರ ಬರುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ’ ಎಂದು ಡಿಕ್ಸ್ ಹೇಳಿದರು.

ರಕ್ಷಣಾ ಕಾರ್ಯಾಚರಣೆ ಎಷ್ಟು ಕಾಲ ನಡೆಯಲಿದೆ ಎಂಬುದರ ಬಗ್ಗೆ ಅವರು ತಿಳಿಸಲಿಲ್ಲ. ಅವರು ಇಂಟರ್‌ನ್ಯಾಷನಲ್ ಟನಲಿಂಗ್ ಮತ್ತು ಅಂಡರ್‌ಗ್ರೌಂಡ್ ಸ್ಪೇಸ್ ಅಸೋಸಿಯೇಷನ್‌ನ ಮುಖ್ಯಸ್ಥರಾಗಿದ್ದಾರೆ.

ಸಂಬಂಧಿಕರ ಪ್ರಯಾಣ ವೆಚ್ಚ ಭರಿಸಿದ ಸರ್ಕಾರ

ಡೆಹ್ರಾಡೂನ್ (ಪಿಟಿಐ): ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರ ಸಂಬಂಧಿಕರ ಪ್ರಯಾಣ, ಆಹಾರ ಮತ್ತು ವಸತಿ ವೆಚ್ಚವನ್ನು ಉತ್ತರಾಖಂಡ ಸರ್ಕಾರ ಭರಿಸಲಿದೆ.

ಕಾರ್ಮಿಕರನ್ನು ಶೀಘ್ರದಲ್ಲೇ ರಕ್ಷಿಸಲಾಗುವುದು ಎಂದು ಅವರ ಕುಟುಂಬದವರಿಗೆ ಭರವಸೆ ನೀಡಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಕಾರ್ಮಿಕರ ಸಂಬಂಧಿಕರೊಂದಿಗೆ ಸಂಪರ್ಕದಲ್ಲಿರಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಿಲ್ಕ್ಯಾರಾಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಲು ಬಯಸುವ ಜನರ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದು ಹೇಳಿದರು. ಕಾರ್ಮಿಕರ ನೈತಿಕ ಸ್ಥೈರ್ಯ ಕಾಪಾಡಲು ಮನೋವೈದ್ಯರನ್ನು ಸಹ ನೇಮಿಸಲಾಗಿದೆ ಎಂದರು.

ಗೋವಾ: ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಚಾಲನೆ

● ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಐವತ್ತನಾಲ್ಕನೆಯ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಸೋಮವಾರ ಸಂಜೆ ವಿಧ್ಯುಕ್ತ ಚಾಲನೆ ಸಿಕ್ಕಿತು. ಗೋವಾ ವಿಶ್ವ ವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕೇಂದ್ರ ವಾರ್ತಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಸಾಂಪ್ರದಾಯಕ ದೀಪ ಬೆಳಗಿಸಿ ಚಿತ್ರೋತ್ಸವವನ್ನು ಉದ್ಘಾಟಿಸಿದರು.

ನಟಿ ಮಾಧುರಿ ದೀಕ್ಷಿತ್, ಖುಷ್ಬೂ ಸುಂದರ್, ಕೇಂದ್ರ ವಾರ್ತಾ ಖಾತೆ ರಾಜ್ಯ ಸಚಿವ ಎಲ್. ಮುರುಗನ್, ಪ್ರವಾಸೋದ್ಯಮ ಸಚಿವ ಶ್ರೀಪಾದ ನಾಯಕ್, ಗೋವಾ ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ಗೋವಾ ಎಂಟರ್‌ಟೇನ್ಮೆಂಟ್ ಸೊಸೈಟಿ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಚಿವ ಅನುರಾಗ್ ಠಾಕೂರ್ ಅವರು, ಭಾರತೀಯ ಸಿನಿಮಾದ ಹಲವು ಆಯಾಮಗಳನ್ನು ಸುದೀರ್ಘವಾಗಿ ಪ್ರಸ್ತಾಪಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ನಾಯಕತ್ವ, ಚಂದ್ರಯಾನ, ಜಿ–20 ಶೃಂಗ ಸಭೆ ಮತ್ತು ಸಿನಿಮಾದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಗಳನ್ನು ಪ್ರಸ್ತಾಪಿಸಿದರು.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡಿ, ಗೋವಾದಲ್ಲಿ ಕೊಂಕಣಿ ಸಿನಿಮಾಕ್ಕೆ ಉತ್ತೇಜನ ನೀಡಲು ಫಿಲಂ ಸಿಟಿ ನಿರ್ಮಿಸಲಾಗುತ್ತದೆ ಎಂದು ಪುನರ್ ಉಚ್ಚರಿಸಿದರು.

ಭಾರತೀಯ ಸಿನಿಮಾ ರಂಗಕ್ಕೆ ನೀಡಿದ ವಿಶೇಷ ಕೊಡುಗೆ ಗಮನಿಸಿ ಈ ವರ್ಷದಿಂದ ನೀಡುವ ವಿಶೇಷ ಪ್ರಶಸ್ತಿಯನ್ನು ಬಾಲಿವುಡ್ ನಟಿ ಮಾಧುರಿ ದೀಕ್ಷಿತ್ ಅವರಿಗೆ ನೀಡಲಾಯಿತು. ಸಚಿವ ಠಾಕೂರ್ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಸಿನಿಮಾ ಕಲಾವಿದರಾದ ವಿಜಯ್ ಸೇತುಪತಿ, ಸನ್ನಿ ಡಿಯೋಲ್, ಶ್ರೇಯಾ ಘೋಶಾಲ್, ಶ್ರೇಯಾ ಶರಣ್, ಶಾಹಿದ್ ಕಪೂರ್, ಕರಣ್ ಜೋಹರ್ ಸೇರಿದಂತೆ ಭಾರತೀಯ ಮತ್ತು ಹಲವು ದೇಶಗಳ ಸಿನಿಮಾ ರಂಗದ ಕಲಾವಿದರು, ತಂತ್ರಜ್ಞರು ಮತ್ತು ಅಂತರರಾಷ್ಟ್ರೀಯ ಮತ್ತು ಪನೋರಮಾ ವಿಭಾಗದ ಜ್ಯೂರಿ ಸದಸ್ಯರು ಮತ್ತು ಸಮಾರಂಭದಲ್ಲಿ ಹಾಜರಿದ್ದರು.

‘ವಿದೇಶಿ ಸಿನಿಮಾ ನಿರ್ಮಾಪಕರಿಗೆ ಪ್ರೋತ್ಸಾಹ ಧನ’

ಭಾರತೀಯ ಕಥಾ ವಸ್ತು ಆಧರಿಸಿದ ಮತ್ತು ಭಾರತದಲ್ಲೇ ಸಂಪೂರ್ಣವಾಗಿ ಚಿತ್ರೀಕರಣ ಮಾಡುವ ವಿದೇಶಿ ಸಿನಿಮಾ ನಿರ್ಮಾಪಕರಿಗೆ ನೀಡುವ ಪ್ರೋತ್ಸಾಹ ಧನವನ್ನು ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಪ್ರಕಟಿಸಿದರು.

ಇಂಥ ವಿದೇಶಿ ಸಿನಿಮಾಗಳಿಗೆ ಶೇ 30ರಷ್ಟು ಪ್ರೋತ್ಸಾಹ ಧನ ನೀಡುವ ನಿರ್ಧಾರವನ್ನು ಈಗಾಗಲೇ ಪ್ರಕಟಿಸಲಾಗಿದೆ. ಸಹಾಯಧನದ ಮೊತ್ತವನ್ನು ಶೇ 30 ರಿಂದ ಶೇ 40ರಷ್ಟು ಹೆಚ್ಚಿಸುವ (ಒಟ್ಟು ₹30 ಕೋಟಿ ಮೀರದಂತೆ) ನಿರ್ಧರಿಸಲಾಗಿದೆ. ಈ ಮೂಲಕ ಭಾರತೀಯ ಕಥಾ ವಸ್ತುವನ್ನು ಜಗತ್ತಿಗೆ ಪರಿಚಯಿಸುವ ಮತ್ತು ಭಾರತದಲ್ಲಿ ಚಿತ್ರೀಕರಣಕ್ಕೆ ಅವಕಾಶ ಮಾಡಿಕೊಟ್ಟು ದೇಶದ ಸುಂದರ ತಾಣಗಳನ್ನು ಜಗತ್ತಿಗೆ ಪರಿಚಯಿಸುವುದು ಸರ್ಕಾರದ ಉದ್ದೇಶ ಎಂದು ಹೇಳಿದರು.

ಸಿನಿಮಾಗಳ ಪೈರಸಿ ತಡೆಯಲು ವಿಶೇಷ ಕಾನೂನು ರಚಿಸುವ ಪ್ರಕ್ರಿಯೆಗೆ ಸಂಸತ್ತಿನ ಉಭಯ ಸದನಗಳ ಒಪ್ಪಿಗೆ ಸಿಕ್ಕಿದೆ. ಸದ್ಯದಲ್ಲೇ ಕಾನೂನು ಹೊರಬೀಳಲಿದೆ ಎಂದ ಅವರು, ಪೈರಸಿ ಮಾಡಿದವರಿಗೆ 3 ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಕಾನೂನು ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಮಂಗಳವಾರ, ನವೆಂಬರ್ 21, 2023 | ₹ 7.00

ಪ್ರಜಾ ವಾ

ಮಹಾರಾಣಿ ವಿ.ವಿ: ಕೇಂದ್ರದ ₹29 ಕೋಟಿ ಅನುದಾನದಲ್ಲಿ ನಿರ್ಮಿಸಿದ್ದ ಕಟ್ಟಡ

ಅನ್ಯ ಇಲಾಖೆಗೆ ಹಾಸ್ಟೆಲ್!

• ಚಂದ್ರಹಾಸ ಹಿರೇಮಳಲಿ

ಮಹಾರಾಣಿ ಕ್ಲಸ್ಟರ್ ವಿ.ವಿಯ ನೂತನ ಹಾಸ್ಟೆಲ್ (ಎಡ) ಕೆಡವಿದ ಹಾಸ್ಟೆಲ್ ಕಟ್ಟಡ —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೆಂಗಳೂರು: ಕೇಂದ್ರದ ಅನುದಾನದಲ್ಲಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆವರಣದಲ್ಲಿ ₹29 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದ ಮಹಿಳಾ ಹಾಸ್ಟೆಲ್ ಕಟ್ಟಡವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತಾರದೇ ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದೆ.

ಸರ್ಕಾರದ ಈ ನಿರ್ಧಾರದಿಂದ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಗುಜರಾತ್, ಅಸ್ಸಾಂ ಸೇರಿದಂತೆ ಉತ್ತರ ಭಾರತದ ಹಾಗೂ ಕರ್ನಾಟಕ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಅಡಚಣೆಯಾಗಿದೆ.

ವಿಶ್ವವಿದ್ಯಾಲಯದ ಶೈಕ್ಷಣಿಕ ಸೌಲಭ್ಯಗಳ ಅಭಿವೃದ್ಧಿಗೆ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ (ರೂಸಾ) ಯೋಜನೆ ಅಡಿ ₹50 ಕೋಟಿ ದೊರೆತಿತ್ತು. ಅದರಲ್ಲಿ ₹29 ಕೋಟಿ ಬಳಸಿಕೊಂಡು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರಿಗೆ 152 ಕೊಠಡಿ ಇರುವ ಸುಸಜ್ಜಿತ ಹಾಸ್ಟೆಲ್ ನಿರ್ಮಿಸಲಾಗಿದೆ. ಹಾಸ್ಟೆಲ್ ಕಟ್ಟಡ ಪೂರ್ಣಗೊಂಡಿತ್ತು. ವಿದ್ಯಾರ್ಥಿನಿಯರಿಗೆ ಹಂಚಿಕೆಯಾಗುವ ಮೊದಲೇ ಸರ್ಕಾರ ಹೊರಡಿಸಿದ ಆದೇಶಕ್ಕೆ ವಿಶ್ವವಿದ್ಯಾಲಯದ ಬೋಧಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ 6,500 ವಿದ್ಯಾರ್ಥಿನಿಯರು ಇದ್ದಾರೆ. ಬೇಡಿಕೆ ಸಲ್ಲಿಸುತ್ತಿರುವ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸುವುದು ವಿಶ್ವವಿದ್ಯಾಲಯಕ್ಕೆ ಸವಾಲಾಗಿದೆ. ದಶಕಗಳ ಹಿಂದೆ ಕಟ್ಟಿದ್ದ ಬಹಳಷ್ಟು ಕಟ್ಟಡಗಳು ಶಿಥಿಲಾವಸ್ಥೆ ತಲುಪಿವೆ. ಬೀಳುವ ಸ್ಥಿತಿಯಲ್ಲಿದ್ದ ಹಳೆಯ ಹಾಸ್ಟೆಲ್ ಕಟ್ಟಡವನ್ನು ಕೆಡವಿದ್ದರಿಂದ ಸುಮಾರು 400 ವಿದ್ಯಾರ್ಥಿನಿಯರಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ಕಟ್ಟಡದಲ್ಲಿ ತಾತ್ಕಾಲಿಕ ಆಶ್ರಯ ಕಲ್ಪಿಸಲಾಗಿದೆ. ವಿಶ್ವವಿದ್ಯಾಲಯದ ಆವರಣದ ಇನ್ನೊಂದು ಹಳೆಯ ಕಟ್ಟಡದಲ್ಲಿ 220 ವಿದ್ಯಾರ್ಥಿಗಳಿಗೆ ವ್ಯವಸ್ಥೆ ಮಾಡಲಾಗಿದೆ.

‘ತಾಂತ್ರಿಕ ಶಿಕ್ಷಣ ಇಲಾಖೆಯ ಕಟ್ಟಡ, ಹಳೆಯ ಕಟ್ಟಡ ಸೇರಿ 600ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಹಾಸ್ಟೆಲ್‌ನಲ್ಲಿದ್ದಾರೆ. ಉತ್ತರ ಭಾರತದ ವಿದ್ಯಾರ್ಥಿನಿಯರು, ಗ್ರಾಮೀಣರು ಸೇರಿ ಇನ್ನೂ 500ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಂದ ಬೇಡಿಕೆ ಇದೆ. ಹಾಗಾಗಿಯೇ, ಬೋಧನಾ ಕೊಠಡಿಗಳು ಅಗತ್ಯ ಇದ್ದರೂ ₹29 ಕೋಟಿ ವೆಚ್ಚ ಮಾಡಿ ಹಾಸ್ಟೆಲ್ ನಿರ್ಮಿಸಲಾಗಿದೆ. ಹೀಗಿರುವಾಗ, ವಿದ್ಯಾರ್ಥಿನಿಯರನ್ನು ತೆರವುಗೊಳಿಸುವಂತೆ ವಿ.ವಿ ಗೆ ತಾಂತ್ರಿಕ ಶಿಕ್ಷಣ ಇಲಾಖೆ ಸೂಚನೆ ನೀಡಿದೆ. ಇಂತಹ ಸಮಯದಲ್ಲಿ ಸರ್ಕಾರ ತೆಗೆದುಕೊಂಡ ನಿರ್ಧಾರ ಸಮಸ್ಯೆ ಸೃಷ್ಟಿಸಿದೆ. ಹಾಸ್ಟೆಲ್ ವಿಶ್ವವಿದ್ಯಾಲಯದ ಮಧ್ಯೆ ಇದೆ. ಹೊರಗಿನ ವಿದ್ಯಾರ್ಥಿಗಳ ಪ್ರವೇಶ ಮತ್ತಷ್ಟು ಸಮಸ್ಯೆಗೆ ದಾರಿಯಾ ಗುತ್ತದೆ’ ಎನ್ನುತ್ತಾರೆ ವಿ.ವಿ ಕುಲಪತಿ ಗೋಮತಿ ದೇವಿ.

ಸಮಾಜ ಕಲ್ಯಾಣ, ಬಿಸಿಎಂಗೆ 224 ಹಾಸ್ಟೆಲ್

ಉನ್ನತ ಶಿಕ್ಷಣ ಇಲಾಖೆ ರಾಜ್ಯದ ವಿವಿಧೆಡೆ ನಿರ್ಮಿಸಿದ್ದ 224 ಹಾಸ್ಟೆಲ್‌ಗಳು ಅನುಪಯುಕ್ತವಾಗಿವೆ. ಅವುಗಳನ್ನು ಬಳಕೆ ಮಾಡಲು ಇತರೆ ಇಲಾಖೆಗಳಿಗೆ ನೀಡಬಹುದು. ಇದರಿಂದ 13,169 ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಕಳೆದ ವರ್ಷ ಶಿಫಾರಸು ಮಾಡಿದ್ದರು. ಈ ಶಿಫಾರಸು ಆಧರಿಸಿ ಸರ್ಕಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗೆ ಹಾಸ್ಟೆಲ್ ಕಟ್ಟಡಗಳನ್ನು ಹಸ್ತಾಂತರಿಸಲು ಆದೇಶ ಹೊರಡಿಸಿತ್ತು.

ರಾಜ್ಯದ 224 ಹಾಸ್ಟೆಲ್ ಕಟ್ಟಡಗಳಲ್ಲಿ 77 ಹಾಸ್ಟೆಲ್‌ಗಳಷ್ಟೇ ಅನುಪಯುಕ್ತವಾಗಿದ್ದವು. ಎಲ್ಲವನ್ನೂ ನೀಡಿರುವುದು ಸರಿಯಲ್ಲ. ಉನ್ನತ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್ ಕಟ್ಟಡಗಳನ್ನು ಅನ್ಯ ಇಲಾಖೆಗೆ ನೀಡುವ ಮೊದಲು ವಿಶ್ವವಿದ್ಯಾಲಯಗಳ ಸಮ್ಮತಿ ಪಡೆಯಬೇಕಿತ್ತು. ಆದರೆ, ಹಾಗೆ ಮಾಡದೆ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗಿದೆ ಎನ್ನುವುದು ಹಲವು ವಿಶ್ವವಿದ್ಯಾಲಯಗಳ ಆರೋಪ.

ಹಳೆಯ ಕಟ್ಟಡ ಸೋರುತ್ತಿದೆ. ಒಂದು ಕೊಠಡಿಯಲ್ಲಿ ನಾಲ್ಕೈದು ವಿದ್ಯಾರ್ಥಿನಿಯರು ಇದ್ದೇವೆ. ಹೊಸ ಕಟ್ಟಡ ವಿಳಂಬವಾದರೆ ಓದು ಮುಂದುವರಿಸಲು ಸಾಧ್ಯವಾಗದು

ಬಿಂದು, ಹಾಸ್ಟೆಲ್ ವಿದ್ಯಾರ್ಥಿನಿ

ಪ್ರಥಮ ವರ್ಷದ ಬಿ.ಕಾಂಗೆ ಸೇರಿದಾಗ ಹೊಸ ಕಟ್ಟಡದಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡುವ ಭರವಸೆ ನೀಡಿದ್ದರು. ಈಗ ಅಂತಿಮ ವರ್ಷಕ್ಕೆ ಬಂದರೂ ಅವಕಾಶ ಸಿಕ್ಕಿಲ್ಲ

ವೈಷ್ಣವಿ, ಅಂತಿಮ ವರ್ಷದ ವಿದ್ಯಾರ್ಥಿನಿ

ಹಾಸ್ಟೆಲ್ ಕಟ್ಟಡ ಹಸ್ತಾಂತರ ಆದೇಶ ಹಿಂಪಡೆಯಲು ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಉನ್ನತ ಶಿಕ್ಷಣ ಸಚಿವರು ಭರವಸೆ ನೀಡಿದ್ದಾರೆ

ಎಲ್.ಗೋಮತಿ ದೇವಿ, ಕುಲಪತಿ

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಫ್ಲೈಓವರ್ ಕಂ ಮೆಟ್ರೊ ಮಾರ್ಗ ನಿರ್ಮಾಣ

ಡಬಲ್ ಡೆಕ್ಕರ್ ಫ್ಲೈಓವರ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ‘ನಮ್ಮ ಮೆಟ್ರೊ’ ರೈಲು ಮತ್ತು ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ಡಬಲ್ ಡೆಕ್ಕರ್ ಫ್ಲೈಓವರ್‌ಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಈ ವಿವರ ಹಂಚಿಕೊಂಡ ಅವರು, ‘ಹೊಸದಾಗಿ ನಿರ್ಮಾಣವಾಗಲಿರುವ ಮೆಟ್ರೊ ಮಾರ್ಗ ಮತ್ತು ಇನ್ನೂ ಕಾಮಗಾರಿ ಆರಂಭವಾಗದ ಕಡೆಗಳಲ್ಲಿ ಫ್ಲೈಓವರ್-ಕಂ-ಮೆಟ್ರೊ ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಪ್ರಾಯೋಗಿಕವಾಗಿ ಈ ಕಾಮಗಾರಿ ಆರಂಭಿಸಲಾಗಿದೆ’ ಎಂದರು.

ರಾಗಿಗುಡ್ಡ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವಿನ ರಸ್ತೆ- ಕಂ-ಮೆಟ್ರೊ ಮೇಲ್ಸೇತುವೆಯನ್ನು ಉಲ್ಲೇಖಿಸಿದ ಅವರು, ‘ನಗರದಲ್ಲಿ ಒಂದು ಫ್ಲೈಓವರ್ (ವಾಹನಗಳಿಗಾಗಿ) ಮತ್ತು ಮೆಟ್ರೊ ಮಾರ್ಗ ಇರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ಕಾರಣಕ್ಕೆ ಸುರಂಗ ಮಾರ್ಗ ಯೋಜನೆ ವಿಳಂಬ ಆಗಬಹುದು’ ಎಂದರು.

‘ಈ ಡಬಲ್ ಡೆಕ್ಕರ್‌ಗಳ ನಿರ್ಮಾಣ ವೆಚ್ಚವನ್ನು ಬಿಬಿಎಂಪಿ, ಬಿಡಿಎ ಮತ್ತು ಬಿಎಂಆರ್‌ಸಿಎಲ್ ಹಂಚಿಕೊಳ್ಳಲಿವೆ’ ಎಂದರು.

ರಾಜಕಾಲುವೆ ಇಕ್ಕೆಲಗಳಲ್ಲಿ ಬಫರ್: ಒತ್ತುವರಿಗೆ ಟಿಡಿಆರ್

‘ರಾಜಕಾಲುವೆಗಳ ಇಕ್ಕೆಲಗಳಲ್ಲಿ 50 ಅಡಿಯಷ್ಟು ಬಫರ್ ವಲಯಕ್ಕೆ ಬಿಡಬೇಕೆಂದು ನಿರ್ದೇಶನ ನೀಡಲಾಗುವುದು. ಈ ಬಫರ್ ವಲಯಗಳಲ್ಲಿ ರಸ್ತೆಗಳನ್ನು ನಿರ್ಮಿಸಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.

‘ಬಫರ್ ವಲಯದಲ್ಲಿ ಜನರು ಕಟ್ಟಡಗಳನ್ನು ನಿರ್ಮಿಸಿದ್ದರೆ ಅವರಿಗೆ ನಾವು ‘ಅಭಿವೃದ್ಧಿ ಹಕ್ಕು ವರ್ಗಾವಣೆ’ (ಟಿಡಿಆರ್) ನೀಡುತ್ತೇವೆ. ಮಹದೇವಪುರ ಭಾಗದಿಂದ ಈ ಕೆಲಸ ಆರಂಭಿಸುವ ಉದ್ದೇಶವಿದೆ’ ಎಂದರು. ‘ನಗರವು ಸುಮಾರು 800 ಕಿ.ಮೀ ಉದ್ದದ ರಾಜಕಾಲುವೆ ಹೊಂದಿದೆ. ರಾಜಕಾಲುವೆಗಳ ಇಕ್ಕೆಲಗಳಲ್ಲಿ ಕನಿಷ್ಠ 150 ಕಿ.ಮೀ. ಉದ್ದದ ಅವಕಾಶ ಸಿಕ್ಕಿದರೂ ಹೊಸ ರಸ್ತೆಗಳನ್ನು ನಿರ್ಮಿಸುವ ಮೂಲಕ ಮಳೆಗಾಲದಲ್ಲಿ ಪ್ರವಾಹ ಉಂಟಾಗದಂತೆ ತಡೆಯಬಹುದು. ಅಲ್ಲದೆ, ಬಫರ್ ವಲಯದಲ್ಲಿ ನಿರ್ಮಿಸುವ ರಸ್ತೆಗಳಲ್ಲಿ ದೊಡ್ಡ ವಾಹನಗಳು ಹೋಗಲು ಸಾಧ್ಯವಾಗದಿದ್ದರೂ ದ್ವಿಚಕ್ರ ವಾಹನಗಳು, ಶಾಲಾ ಮಕ್ಕಳು ಸಂಚರಿಸಬಹುದು’ ಎಂದರು.

ಬಿಬಿಎಂಪಿಯಿಂದ ರಸ್ತೆಗಳಲ್ಲಿ ಡಕ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ವ್ಯಾಪ್ತಿಯಲ್ಲಿ ಡಕ್ಟ್ ಮಾದರಿಯಲ್ಲಿ ದೊಡ್ಡ ಅಳತೆಯ ಪೈಪ್‌ಗಳನ್ನು ರಸ್ತೆಗಳಲ್ಲಿ ಅಳವಡಿಸಿ, ಅದನ್ನು ದೂರಸಂಪರ್ಕ ಅಥವಾ ಕೇಬಲ್ ಸಂಸ್ಥೆಗಳಿಗೆ ಬಾಡಿಗೆ ಆಧಾರದಲ್ಲಿ ನೀಡಲು ಬಿಬಿಎಂಪಿ ಯೋಜಿಸಿದೆ’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ವೈಟ್‌ಟಾಪಿಂಗ್ ಹಾಗೂ ಕೆಲವು ಪ್ರಮುಖ ರಸ್ತೆಗಳಲ್ಲಿ ಡಕ್ಟ್ ವ್ಯವಸ್ಥೆ ಇದೆ. ಇತರೆ ರಸ್ತೆಗಳಲ್ಲಿ ಈ ವ್ಯವಸ್ಥೆಯಿಲ್ಲ. ಹೀಗಾಗಿ ಹಲವು ಸಂಸ್ಥೆಗಳು ಕೇಬಲ್ ಅಥವಾ ಒಎಫ್‌ಸಿ ಅಳವಡಿಸಲು ರಸ್ತೆ ಅಗೆಯುತ್ತಿರುತ್ತವೆ. ಇದನ್ನು ತಪ್ಪಿಸಲು ಯೋಜಿಸಲಾಗಿದೆ’ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

‘ರಸ್ತೆಯಲ್ಲಿ ದೊಡ್ಡ ಅಳತೆಯ ಪೈಪ್ ಅಳವಡಿಸುವುದರಿಂದ ಮತ್ತೆ ಮತ್ತೆ ರಸ್ತೆ ಅಗೆಯುವುದು ತಪ್ಪುತ್ತದೆ. ಆದ್ದರಿಂದ ಬಿಬಿಎಂಪಿ ವತಿಯಿಂದಲೇ ಪೈಪ್ ಅಳವಡಿಸಲು ಯೋಜಿಸಲಾಗಿದೆ. ಈ ಯೋಜನೆಗೆ ಸದ್ಯದಲ್ಲಿಯೇ ಟೆಂಡರ್ ಕರೆಯಲಾಗುತ್ತದೆ’ ಎಂದರು.

‘ಬಿಬಿಎಂಪಿಗೆ ಹೋಲಿಸಿದರೆ ಬೆಸ್ಕಾಂ, ನಗರದಲ್ಲಿ ಡಕ್ಟ್ ಮೂಲಕ ಹೆಚ್ಚು ಕೇಬಲ್ ಅಳವಡಿಸಿದೆ. ಸುಮಾರು 400 ಕಿ.ಮೀ ಡಕ್ಟ್ ಇದೆ. ಬಿಬಿಎಂಪಿಯ ಕೆಲವು ರಸ್ತೆಗಳಲ್ಲಿ ಡಕ್ಟ್ ಇವೆ. ಇದರಲ್ಲೇ ಒಎಫ್‌ಸಿ ಹಾಗೂ ಕೇಬಲ್ ಸಂಸ್ಥೆಗಳು ತಮ್ಮ ಕೇಬಲ್‌ಗಳನ್ನು ಅಳವಡಿಸಿಕೊಳ್ಳಬೇಕು. ಇದಲ್ಲದೆ ಬೇರೆಡೆ ಕೇಬಲ್ ಅಳವಡಿಸಲು ಅವಕಾಶವಿಲ್ಲ’ ಎಂದು ತುಷಾರ್ ಗಿರಿನಾಥ್ ಹೇಳಿದರು.

‘ಪಾದಚಾರಿ ಮಾರ್ಗ ಹಾಗೂ ಕಂಬಗಳಲ್ಲಿ ಅನಧಿಕೃತವಾಗಿ ಅಳವಡಿಸಲಾಗಿರುವ ಕೇಬಲ್‌ಗಳನ್ನು ಮಹದೇವಪುರ ವಲಯ ಸೇರಿದಂತೆ ನಗರದ ಹಲವೆಡೆ ತೆರವುಗೊಳಿಸಲಾಗುತ್ತಿದೆ. ಈ ಬಗ್ಗೆ ಕೇಬಲ್ ಸಂಸ್ಥೆಗಳಿಗೆ ಮಾಹಿತಿ ನೀಡಲಾಗಿದೆ. ಅನಧಿಕೃತ ಕೇಬಲ್ ಅವರೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ತೆರವು ಮಾಡುತ್ತೇವೆ’ ಎಂದು ತಿಳಿಸಿದರು.

ಆನ್‌ಲೈನ್ ಹೂಡಿಕೆ ಆಮಿಷ: ದೂರು ದಾಖಲು

₹ 94.95 ಲಕ್ಷ ಕಳೆದುಕೊಂಡ ಟೆಕಿಗಳು

• ಪ್ರಜ್ವಲ್ ಡಿಸೋಜಾ

ಬೆಂಗಳೂರು: ಆನ್‌ಲೈನ್ ಹೂಡಿಕೆ ಹೆಸರಿನಲ್ಲಿ ನಗರದ ಇಬ್ಬರು ಸಾಫ್ಟ್‌ವೇರ್ ಎಂಜಿನಿಯರ್‌ಗಳಿಂದ ₹94.95 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಮಹದೇವಪುರದ ಸಾಫ್ಟ್‌ವೇರ್ ಎಂಜಿನಿಯರ್ ರಾಮ್ ತೇಜ್ (33) ಹಾಗೂ ವೈಟ್‌ಫೀಲ್ಡ್‌ನ ಸಾಫ್ಟ್‌ವೇರ್ ಎಂಜಿನಿಯರ್ ಸೌರಭ್ ಕುಮಾರ ಶರ್ಮಾ (40) ಅವರು ಹಣ ಕಳೆದುಕೊಂಡಿದ್ದಾರೆ. ತಮಗಾದ ವಂಚನೆ ಬಗ್ಗೆ ಪ್ರತ್ಯೇಕವಾಗಿ ಠಾಣೆಗಳಿಗೆ ದೂರು ನೀಡಿದ್ದಾರೆ.

‘ರಾಮ್ ತೇಜ್ ಅವರ ವಾಟ್ಸ್‌ಆ್ಯಪ್‌ಗೆ ಸೆ. 9ರಂದು ಸಂದೇಶ ಬಂದಿತ್ತು. ‘ಹೋಟೆಲ್ ಬಗ್ಗೆ ಅನಿಸಿಕೆ ತಿಳಿಸಿ, ಹಣ ಗಳಿಸಿ. ಪ್ರತಿ ಅನಿಸಿಕೆಗೆ ₹ 250 ಸಿಗುತ್ತದೆ’ ಎಂದು ಅದರಲ್ಲಿ ಬರೆಯಲಾಗಿತ್ತು. ಸಂದೇಶ ನಂಬಿದ್ದ ರಾಮ್‌ತೇಜ್, ಲಿಂಕ್ ಕ್ಲಿಕ್ ಮಾಡಿ ಮೊದಲ ಅನಿಸಿಕೆ ಬರೆದಿದ್ದರು’ ಎಂದು ಪೊಲೀಸರು ಹೇಳಿದರು.

‘ಆರಂಭದಲ್ಲಿ ಒಂದು ಅನಿಸಿಕೆಗೆ ಆರೋಪಿಗಳು ₹ 250 ನೀಡಿದ್ದರು. ಮತ್ತಷ್ಟು ಹೋಟೆಲ್ ಅನಿಸಿಕೆ ಬರೆಯುವ ಅವಕಾಶಕ್ಕಾಗಿ ಹಣ ಹೂಡಿಕೆ ಮಾಡಿ ನೋಂದಣಿ ಮಾಡಿಕೊಳ್ಳುವಂತೆ ಆರೋಪಿಗಳು ಹೇಳಿದ್ದರು. ಅದನ್ನೂ ನಂಬಿದ್ದ ರಾಮ್‌ತೇಜ್, ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಂಡಿದ್ದರು. ಇದಾದ ನಂತರ ಆರೋಪಿಗಳು, ಹಂತ ಹಂತವಾಗಿ ₹49 ಲಕ್ಷವನ್ನು ಹೂಡಿಕೆ ಮಾಡಿಸಿಕೊಂಡಿದ್ದರು. ಇದಾದ ಬಳಿಕ, ಆರೋಪಿಗಳು ನಾಪತ್ತೆಯಾಗಿದ್ದಾರೆ’ ಎಂದು ತಿಳಿಸಿದರು.

₹ 45.95 ಲಕ್ಷ ಕಳೆದುಕೊಂಡ ಮತ್ತೊಬ್ಬ: ‘ದೂರುದಾರ ಸೌರಭ್‌ಕುಮಾರ್ ಶರ್ಮಾ ಅವರು ವಂಚನೆ ಜಾಲಕ್ಕೆ ಸಿಲುಕಿ ₹ 45.95 ಲಕ್ಷ ಕಳೆದುಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ವಾಟ್ಸ್‌ಆ್ಯಪ್‌ಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, ‘ಮನೆಯಿಂದಲೇ ಅರೆಕಾಲಿಕ ಕೆಲಸ ಮಾಡಿ, ಹಣ ಗಳಿಸಿ’ ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಸಂದೇಶಕ್ಕೆ ಪ್ರತಿಕ್ರಿಯಿಸಿದ್ದರು. ‘₹1,000 ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ₹ 1,300 ನೀಡುತ್ತೇವೆ’ ಎಂಬುದಾಗಿ ಆರೋಪಿಗಳು ತಿಳಿಸಿದ್ದರು.’

‘ದೂರುದಾರ ಆರಂಭದಲ್ಲಿ ₹1,000 ಹೂಡಿಕೆ ಮಾಡಿದ್ದರು. ಕೆಲ ದಿನ ಬಿಟ್ಟು ₹ 1,300 ಬಂದಿತ್ತು. ಹೆಚ್ಚು ಹಣ ಬರಬಹುದೆಂದು ತಿಳಿದ ದೂರುದಾರ, ಆರೋಪಿಗಳು ಹೇಳಿದ್ದ 14 ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ಒಟ್ಟು ₹45.95 ಲಕ್ಷ ವರ್ಗಾಯಿಸಿದ್ದರು. ಇದಾದ ನಂತರ ಆರೋಪಿಗಳು, ಯಾವುದೇ ಹಣ ನೀಡದೇ ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ವಿದೇಶಿ ಕಂಪನಿ ನಿರ್ದೇಶಕರ ಅಪಹರಿಸಿ ₹1.70 ಕೋಟಿ ಸುಲಿಗೆ

ಪಿಎಸ್‌ಐ, ಕಾನ್‌ಸ್ಟೆಬಲ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಕಂಪನಿಯೊಂದರ ನಿರ್ದೇಶಕರನ್ನು ಅಪಹರಿಸಿ ₹1.70 ಕೋಟಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಪ್ರೊಬೇಷನರಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹಾಗೂ ಕಾನ್‌ಸ್ಟೆಬಲ್ ಸೇರಿ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಡಿವಾಳ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರೊಬೇಷನರಿ ಪಿಎಸ್‌ಐ ಸಿದ್ಧಾರೂಢ ಬಿಜ್ಜಣ್ಣನವರ, ಕಾನ್‌ಸ್ಟೆಬಲ್ ಅಲ್ಲಾಭಕ್ಷ್ ಕರ್ಜಗಿ, ಗೃಹರಕ್ಷಕ ದಳದ ಮಾಜಿ ಸಿಬ್ಬಂದಿ ರಾಜ್ ಕಿಶೋರ್ ಹಾಗೂ ಬೂತಪಲ್ಲಿ ನಿವಾಸಿ ದಿನೇಶ್ ಬಂಧಿತರು.

‘ಡಿಜಿಟಲ್ ಮಾರ್ಕೆಟಿಂಗ್ ಕಂಪನಿಯೊಂದರ ನಿರ್ದೇಶಕ ವಿ.ಎಸ್. ಕಾರ್ತಿಕ್ ಅವರನ್ನು ಜುಲೈ 25ರಂದು ಅಪಹರಣ ಮಾಡಲಾಗಿತ್ತು. ಅವರನ್ನು ಬೆದರಿಸಿ, ₹1.80 ಲಕ್ಷ ಯುಎಸ್‌ಡಿಟಿ ಕ್ರಿಪ್ಟೊ ಕರೆನ್ಸಿ (ಭಾರತದಲ್ಲಿ ₹ 1.50 ಕೋಟಿ) ಹಾಗೂ ₹ 20 ಲಕ್ಷವನ್ನು ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಕೃತ್ಯದ ಸಂಬಂಧ ಕಾರ್ತಿಕ್ ಅವರು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆಗೆ ದೂರು ನೀಡಿದ್ದರು’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಕ್ರಿಪ್ಟೊ ಕರೆನ್ಸಿ ವಿನಿಮಯ ಮಾಡಿಕೊಡುತ್ತಿದ್ದ ಸ್ನೇಹಿತನಿಂದ ಸಂಚು
- ನಿರೀಕ್ಷಣಾ ಜಾಮೀನು ಪಡೆದಿದ್ದ ಪ್ರಮುಖ ಆರೋಪಿಗಳು
- ಸಿಸಿಬಿ ಪೊಲೀಸರ ಕಾರ್ಯಾಚರಣೆ

ಅಪರಾಧ ಸುದ್ದಿ

‘ಪ್ರಕರಣದ ಪ್ರಮುಖ ಆರೋಪಿಗಳಾದ ವಂಶಿಕೃಷ್ಣ, ವಿನೋದ್ ನಾಯ್ಕ್ ಹಾಗೂ ಕಿರಣ್ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು. ಪ್ರಕರಣದ ತನಿಖೆ ಮುಂದುವರಿಸಿದ್ದ ಪೊಲೀಸರು, ಪ್ರಮುಖ ಆರೋಪಿಗಳಿಗೆ ಪಿಎಸ್‌ಐ ಹಾಗೂ ಇತರರು ಸಹಕಾರ ನೀಡಿದ್ದನ್ನು ಪತ್ತೆ ಮಾಡಿದ್ದರು. ನಂತರ, ಪ್ರಕರಣದ ತನಿಖೆಯನ್ನು ಕಮಿಷನರ್ ಅವರು ಸಿಸಿಬಿಗೆ ವರ್ಗಾಯಿಸಿದ್ದರು. ಕಾರ್ಯಾಚರಣೆ ನಡೆಸಿ ಪಿಎಸ್‌ಐ, ಕಾನ್‌ಸ್ಟೆಬಲ್ ಹಾಗೂ ಇತರರನ್ನು ಇದೀಗ ಬಂಧಿಸಲಾಗಿದೆ’ ಎಂದು ತಿಳಿಸಿದರು.

ಕರೆನ್ಸಿ ವಿನಿಮಯಕ್ಕೆ ಸಹಾಯ ಮಾಡುತ್ತಿದ್ದ: ‘ದೂರುದಾರ ಕಾರ್ತಿಕ್ ಅವರಿಗೆ ಪ್ರತಿ ತಿಂಗಳು ಯುಎಸ್‌ಡಿಟಿ ಕರೆನ್ಸಿಯಲ್ಲಿ ವೇತನ ಬರುತ್ತಿತ್ತು. ಅದನ್ನು ರೂಪಾಯಿಗೆ ವಿನಿಮಯ ಮಾಡಿಸಿಕೊಳ್ಳಲು ಕಾರ್ತಿಕ್ ಅವರು ಸ್ನೇಹಿತ ವಂಶಿಕೃಷ್ಣ ಅವರ ಸಹಾಯ ಪಡೆಯುತ್ತಿದ್ದರು. ಆತ, ಕಮಿಷನ್ ಆಧಾರದಲ್ಲಿ ಕರೆನ್ಸಿ ವಿನಿಮಯ ಮಾಡಿಕೊಡುತ್ತಿದ್ದ’ ಎಂದು ಸಿಸಿಬಿ ಪೊಲಿಸರು ಹೇಳಿದರು.

‘ಕಾರ್ತಿಕ್ ಬಳಿ ಹಣವಿರುವುದು ಗೊತ್ತಿದ್ದರಿಂದ ಅಪಹರಣ ಮಾಡಿ ಸುಲಿಗೆ ಮಾಡಲು ವಂಶಿಕೃಷ್ಣ ಸಂಚು ರೂಪಿಸಿದ್ದ. ಅದಕ್ಕಾಗಿ ವಿನೋದ್ ನಾಯ್ಕ್ ಹಾಗೂ ಕಿರಣ್ ಸಹಕಾರ ಪಡೆದಿದ್ದ. ಮೂವರು ಸೇರಿಕೊಂಡು ಕಾರ್ತಿಕ್ ಅವರನ್ನು ಅಪಹರಣ ಮಾಡಿ ಬೆದರಿಸಿ ಸುಲಿಗೆ ಮಾಡಿದ್ದರು’ ಎಂದು ತಿಳಿಸಿದರು.

‘ಹಣದ ಆಸೆಗಾಗಿ ಪಿಎಸ್‌ಐ ಸಹಕಾರ’

‘ಪಿಎಸ್‌ಐ ಸಿದ್ಧಾರೂಢ ಅವರ ಬೈಕ್ ಕೆಟ್ಟು ನಿಂತಿತ್ತು. ಸಹಾಯ ಮಾಡುವ ನೆಪದಲ್ಲಿ ಅವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿಗಳು, ‘ನಮ್ಮ ಸ್ನೇಹಿತ ಕಾರ್ತಿಕ್ ಸಾಲದ ಹಣ ವಾಪಸು ಕೊಡುತ್ತಿಲ್ಲ. ಆತನಿಂದ ಹಣ ಕೊಡಿಸಿ. ನಿಮಗೂ ಕಮಿಷನ್ ನೀಡುತ್ತೇವೆ’ ಎಂದಿದ್ದರು. ಹಣದ ಆಸೆಗಾಗಿ ಸಿದ್ಧಾರೂಢ ಒಪ್ಪಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಅಪಹರಣ ಸಂದರ್ಭದಲ್ಲಿ ಕಾರ್ತಿಕ್‌ಗೆ ಕರೆ ಮಾಡಿದ್ದ ಪಿಎಸ್‌ಐ ಸಿದ್ಧಾರೂಢ ಹಾಗೂ ಇತರರು, ‘ನಿನ್ನ ಬಳಿ ಇರುವ ಹಣವನ್ನು ಕೊಡಬೇಕು. ಇಲ್ಲದಿದ್ದರೆ, ನಿನ್ನ ಮೇಲೆ ಡ್ರಗ್ಸ್ ಮಾರಾಟ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುತ್ತೇವೆ’ ಎಂದು ಬೆದರಿಸಿದ್ದರು. ಅವಾಗಲೇ ಕಾರ್ತಿಕ್, ತಮ್ಮ ಖಾತೆಯಲ್ಲಿದ್ದ ಹಣ ವರ್ಗಾಯಿಸಿದ್ದರು. ಇದಾದ ನಂತರ ಆರೋಪಿಗಳು, ಪುನಃ ₹ 60 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಹಣ ನೀಡಲು ಸಾಧ್ಯವಿಲ್ಲವೆಂದಿದ್ದ ಕಾರ್ತಿಕ್ ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

ಮುಂಬೈ ಪೊಲೀಸ್ ಹೆಸರಿನಲ್ಲಿ ವಂಚನೆ

ಡ್ರಗ್ಸ್ ಸಾಗಣೆ ಪ್ರಕರಣ ದಾಖಲಿಸುವ ಬೆದರಿಕೆ: ₹1.52 ಕೋಟಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿ ‘ಕೊರಿಯರ್‌ನಲ್ಲಿ ಡ್ರಗ್ಸ್ ಸಾಗಣೆ’ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಬೆದರಿಸಿ ನಗರದ ವ್ಯಕ್ತಿಯೊಬ್ಬರಿಂದ ₹1.52 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೈಕೊ ಲೇಔಟ್ ನಿವಾಸಿಯೊಬ್ಬರು ವಂಚನೆ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಫೆಡೆಕ್ಸ್ ಕೊರಿಯರ್ ಪ್ರತಿನಿಧಿ ಸೋಗಿನಲ್ಲಿ ನ.10ರಂದು ದೂರುದಾರರಿಗೆ ಕಾರ್ತಿಕೇಯನ್ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಹೆಸರಿನಲ್ಲಿ ಡ್ರಗ್ಸ್ ಹಾಗೂ ನಿಷೇಧಿತ ವಸ್ತುಗಳ ಕೊರಿಯರ್ ಬಂದಿದೆ. ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕೊರಿಯರ್ ಜಪ್ತಿ ಮಾಡಿದ್ದಾರೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಹೇಳುತ್ತಿದ್ದಾರೆ’ ಎಂದಿದ್ದ. ಕೊರಿಯರ್ ತಮ್ಮದಲ್ಲವೆಂದರೆ ಪೊಲೀಸರನ್ನು ಸಂಪರ್ಕಿಸುವಂತೆ ತಿಳಿಸಿದ್ದ.’

‘ಕೆಲ ನಿಮಿಷಗಳ ನಂತರ ಮುಂಬೈ ಸೈಬರ್ ಕ್ರೈಂ ಪೊಲೀಸರ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿ, ‘ಕೊರಿಯರ್ ನಿಮ್ಮದಲ್ಲವೆಂದರೆ ವೈಯಕ್ತಿಕ ವಿವರ ಹಾಗೂ ಖಾತೆ ವಿವರ ನೀಡಿ. ಪ್ರಕರಣ ದಾಖಲಿಸುವುದಿಲ್ಲ. ಇಲ್ಲದಿದ್ದರೆ, ಡ್ರಗ್ಸ್ ಸಾಗಣೆ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಲಾಗುವುದು’ ಎಂಬುದಾಗಿ ಬೆದರಿಸಿದ್ದರು’ ಎಂದು ಮೂಲಗಳು ತಿಳಿಸಿವೆ. ‘ಬಂಧನದ ಭೀತಿಯಲ್ಲಿದ್ದ ದೂರುದಾರ, ಆರೋಪಿಗಳು ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹1.52 ಕೋಟಿ ವರ್ಗಾಯಿಸಿದ್ದರು. ಇದಾದ ನಂತರ, ಆರೋಪಿಗಳು ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದರು. ಅನುಮಾನಗೊಂಡ ದೂರುದಾರ ಠಾಣೆಗೆ ದೂರು ನೀಡಿದ್ದಾರೆ’ ಎಂದು ಹೇಳಿವೆ.

ರಾಜಭವನ ಚಲೋ 26ರಿಂದ

ಬೆಂಗಳೂರು: ‘ರೈತ ಮತ್ತು ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಎಡ ಮತ್ತು ಜಾತ್ಯತೀತ ಪಕ್ಷಗಳು ಸೇರಿದಂತೆ ಸಂಯುಕ್ತ ಹೋರಾಟ– ಕರ್ನಾಟಕ ನೇತೃತ್ವದಲ್ಲಿ ಇದೇ 26ರಿಂದ 28ರವರೆಗೆ 72 ಗಂಟೆಗಳ ರಾಜಭವನ ಚಲೋ ಧರಣಿ ಹಮ್ಮಿಕೊಳ್ಳಲಾಗಿದೆ’ ಎಂದು ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಸಹ ಕಾರ್ಯದರ್ಶಿ ಬಿ. ಅಮ್ಜದ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೈತರಿಗೆ ನೀಡುವ ಬೀಜ, ರಸಗೊಬ್ಬರ, ವಿದ್ಯುತ್ ಮೇಲಿನ ಸಬ್ಸಿಡಿ ಮೊತ್ತ ಹೆಚ್ಚಿಸಬೇಕು. ಎಂ.ಎಸ್.ಸ್ವಾಮಿನಾಥನ್ ಶಿಫಾರಸಿನಂತೆ ಕನಿಷ್ಠ ಬೆಂಬಲ ನೀಡಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

‘ಸಿಪಿಎಂ, ಸಿಪಿಐ, ಸಿಪಿಎಂ–ಎಲ್, ಎಎಪಿ, ಲೋಕತಾಂತ್ರಿಕ ಜನತಾದಳ, ಎನ್‌ಸಿಪಿ, ಜೆಡಿಯು ಪಕ್ಷ ಪ್ರತಿಭಟನೆಗೆ ಬೆಂಬಲ ನೀಡಲಿವೆ’ ಎಂದರು.

ಸಿಪಿಎಂನ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಪ್ರಕಾಶ್, ಸಿಪಿಐ–ಎಂಎಲ್‌ನ ಕಾರ್ಯದರ್ಶಿ ಕ್ಲಿಫ್ಟನ್ ರೊಜಾರಿಯೋ, ಎಲ್‌ಜೆಡಿಯ ಎಂ.ಪಿ. ನಾಡಗೌಡ ಇದ್ದರು.

ಎಂ.ಬಿ.ಜಯರಾಂಗೆ ಜೀವಮಾನದ ಶ್ರೇಷ್ಠ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ ಮಾಜಿ ನಿರ್ದೇಶಕ, ಅಖಿಲ ಭಾರತ ಸಾರ್ವಜನಿಕ ಸಂಪರ್ಕ ಮಂಡಳಿಯ ಸ್ಥಾಪಕ ಅಧ್ಯಕ್ಷ ಎಂ.ಬಿ. ಜಯರಾಂ ಅವರನ್ನು ಭುವನೇಶ್ವರದ ಉತ್ಕಳ ವಿಶ್ವವಿದ್ಯಾಲಯವು ಜೀವಮಾನದ ಶ್ರೇಷ್ಠ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಸಾರ್ವಜನಿಕ ಸಂಪರ್ಕ ಹಾಗೂ ಸಂವಹನದಲ್ಲಿ 45 ವರ್ಷಗಳಲ್ಲಿ ಅವರು ಮಾಡಿದ ಕೆಲಸವನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡುತ್ತಿದೆ.

ಮ್ಯಾರಥಾನ್ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಕೆನರಾ ಬ್ಯಾಂಕ್ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳು –ಪ್ರಜಾವಾಣಿ ಚಿತ್ರ

ಕೊಲೆ: ಆಟೊ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಭರತ್ (26) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ಪ್ರಭುನನ್ನು ಪೊಲೀಸರು ಬಂಧಿಸಿದ್ದಾರೆ.

‘ಪಂತರಪಾಳ್ಯದ ನಿವಾಸಿ ಭರತ್, ಬಿಬಿಎಂಪಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಆರೋಪಿ ಪ್ರಭು, ಆಟೊ ಚಾಲಕ. ಇವರಿಬ್ಬರು ಪರಿಚಿತರಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ಪಂತರಪಾಳ್ಯದಲ್ಲಿ ವ್ಯಕ್ತಿಯೊಬ್ಬರು ನಿಧನ ಹೊಂದಿದ್ದರು. ಮನೆ ಎದುರು ಪಾರ್ಥಿವ ಶರೀರವನ್ನು ದರ್ಶನಕ್ಕೆ ಇರಿಸಲಾಗಿತ್ತು. ಅದೇ ಸ್ಥಳದಲ್ಲಿ ಭರತ್ ಹಾಗೂ ಪ್ರಭು ಒಟ್ಟಿಗೆ ಸೇರಿದ್ದರು. ಕ್ಷುಲ್ಲಕ ಕಾರಣಕ್ಕಾಗಿ ಅವರಿಬ್ಬರ ನಡುವೆ ಗಲಾಟೆ ಶುರುವಾಗಿತ್ತು.’ ‘ಮಾತಿನ ಚಕಮಕಿ ನಡೆದು, ಇಬ್ಬರೂ ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಆರೋಪಿ ಪ್ರಭು, ಚಾಕುವಿನಿಂದ ಭರತ್ ಅವರ ಕತ್ತು ಹಾಗೂ ದೇಹದ ಇತರೆ ಭಾಗಗಳಿಗೆ ಇರಿದಿದ್ದ. ತೀವ್ರ ಗಾಯಗೊಂಡಿದ್ದ ಭರತ್ ಅವರನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟರು’ ಎಂದು ಪೊಲೀಸರು ಹೇಳಿದರು.

‘ಕೊಲೆ ಬಗ್ಗೆ ಸ್ಥಳೀಯರು ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಬಳಿಕ, ಪ್ರಭುನನ್ನು ಬಂಧಿಸಲಾಯಿತು’ ಎಂದರು.

ಆತ್ಮಹತ್ಯೆ ಬೆದರಿಕೆ: ಯುವತಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರೀತಿಸುತ್ತಿದ್ದ ಯುವಕ ನನ್ನನ್ನು ದೂರ ಮಾಡಿದ್ದಾರೆ’ ಎಂದು ಆರೋಪಿಸಿ ಚಾಕು ಹಿಡಿದು ಮನೆಯೊಂದರ ಚಾವಣಿ ಏರಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸುತ್ತಿದ್ದ ಯುವತಿಯನ್ನು ರಾಜಗೋಪಾಲನಗರ ಠಾಣೆ ಪೊಲೀಸರು ರಕ್ಷಿಸಿದ್ದಾರೆ.

‘ಸ್ಥಳೀಯ ನಿವಾಸಿಯಾದ 23 ವರ್ಷದ ಯುವತಿ, ಮನೆ ಸಮೀಪದಲ್ಲೇ ವಾಸವಿದ್ದ ಯುವಕರೊಬ್ಬರನ್ನು ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆದರೆ, ಯುವಕ ಇತ್ತೀಚಿನ ದಿನಗಳಲ್ಲಿ ಯುವತಿಯನ್ನು ಮಾತನಾಡಿಸುತ್ತಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಯುವಕನ ವರ್ತನೆಯಿಂದ ಬೇಸತ್ತಿದ್ದ ಯುವತಿ, ಸೋಮವಾರ ಬೆಳಿಗ್ಗೆ ಚಾಕು ಹಿಡಿದು ಯುವಕನ ಮನೆಗೆ ಬಂದಿದ್ದರು. ಮನೆ ಎದುರು ಕೂಗಾಡುತ್ತ ಚಾವಣಿ ಏರಿದ್ದರು. ಚಾಕುವಿನಿಂದ ಇರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದರು. ಸ್ಥಳೀಯರು ಎಷ್ಟೇ ಬುದ್ಧಿವಾದ ಹೇಳಿದರೂ ಚಾವಣಿಯಿಂದ ಇಳಿದಿರಲಿಲ್ಲ. ಸ್ಥಳಕ್ಕೆ ಹೋಗಿ ಯುವತಿಯ ಮನವೊಲಿಸಿ ಸುರಕ್ಷಿತವಾಗಿ ಇಳಿಸಲಾಯಿತು. ಈ ಸಂಬಂದ ಸದ್ಯಕ್ಕೆ ಯಾವುದೇ ಪ್ರಕರಣ ದಾಖಲಾಗಿಲ್ಲ’ ಎಂದು ತಿಳಿಸಿದರು.

ಚಾಲಕನಿಗೆ ಕೊಲೆ ಬೆದರಿಕೆ ಪ್ರಕರಣ

ಮಾಜಿ ಕಾರ್ಪೊರೇಟರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊವನ್ನು ಅಡ್ಡಗಟ್ಟಿ ಚಾಲಕರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಆರೋಪದಡಿ ಮಾಜಿ ಕಾರ್ಪೊರೇಟರ್ ಸಂಗಾತಿ ವೆಂಕಟೇಶ್ ಹಾಗೂ ಬೆಂಬಲಿಗರ ವಿರುದ್ಧ ಹನುಮಂತನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನ.17ರಂದು ನಡೆದಿದ್ದ ಘಟನೆ ಸಂಬಂಧ ಆಟೊ ಚಾಲಕ ಮನೋಜ್‌ಕುಮಾರ್ ಅವರು ದೂರು ನೀಡಿದ್ದರು. ಆರಂಭದಲ್ಲಿ ಎನ್‌ಸಿಆರ್ (ಗಂಭೀರವಲ್ಲ ಪ್ರಕರಣ) ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶ ಹೊರಡಿಸಿದೆ’ ಎಂದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮುಖ್ಯಾಂಶಗಳು

- ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆಗೆ ಕೋರ್ಟ್ ಸೂಚನೆ
- ಸಾರ್ವಜನಿಕ ಆಸ್ತಿಗೆ ನಷ್ಟ ಉಂಟು ಮಾಡಿದ ಆರೋಪ
- ಪೋಸ್ಟರ್ ಹರಿದು ಬೆದರಿಕೆ

‘ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟು ಮಾಡಿದ (ಐಪಿಸಿ 427), ಉದ್ದೇಶಪೂರ್ವಕವಾಗಿ ಶಾಂತಿ ಕದಡುವುದು (ಐಪಿಸಿ 504), ಜೀವ ಬೆದರಿಕೆ (ಐಪಿಸಿ 506) ಹಾಗೂ ಅಪರಾಧ ಸಂಚು (ಐಪಿಸಿ 34) ಆರೋಪದಡಿ ಸಂಗಾತಿ ವೆಂಕಟೇಶ್ ಹಾಗೂ ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಘಟನೆಗೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಅಧಿಕಾರಿ ತಿಳಿಸಿದರು.

ಪೋಸ್ಟರ್ ಹರಿದು ಹಾಕಿ ಬೆದರಿಕೆ: ‘ಬೆಂಗಳೂರಿನಲ್ಲಿ ಕಾರ್ ಪೂಲಿಂಗ್ ವ್ಯವಸ್ಥೆ ಜಾರಿಗಾಗಿ ಸಂಸದ ತೇಜಸ್ವಿ ಸೂರ್ಯ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು. ಚಾಲಕರು ಇದನ್ನು ವಿರೋಧಿಸಿ, ಸಂಸದರ ವಿರುದ್ಧದ ಹೇಳಿಕೆಯಿರುವ ಪೋಸ್ಟರ್‌ಗಳನ್ನು ತಮ್ಮ ವಾಹನಗಳಿಗೆ ಅಂಟಿಸಿಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಚಾಲಕ ಮನೋಜ್‌ಕುಮಾರ್, ತಮ್ಮ ಆಟೊದಲ್ಲಿ (ಕೆಎ 02 ಎಫ್ 5512) ಪ್ರಯಾಣಿಕರನ್ನು ಹತ್ತಿಸಿಕೊಂಡು ಶಂಕರನಾಗ್ ವೃತ್ತದಿಂದ ಜಯನಗರಕ್ಕೆ ಹೊರಟಿದ್ದರು. ಮಾರ್ಗಮಧ್ಯೆ ಆಟೊ ಅಡ್ಡಗಟ್ಟಿದ್ದ ಆರೋಪಿಗಳು, ಪೋಸ್ಟರ್ ಹರಿದು ಹಾಕಿದ್ದರು. ಸ್ಥಳದಲ್ಲಿದ್ದ ಮತ್ತಿಬ್ಬರು ಚಾಲಕರನ್ನೂ ಆರೋಪಿಗಳು ಬೆದರಿಸಿದ್ದರು.’

‘ಸ್ಥಳಕ್ಕೆ ಬಂದಿದ್ದ ಆರೋಪಿ ಸಂಗಾತಿ ವೆಂಕಟೇಶ್, ‘ನಮ್ಮ ಪ್ರದೇಶದಲ್ಲಿ ಇನ್ನೊಮ್ಮೆ ಕಾಣಿಸಿಕೊಂಡರೆ, ನಿಮ್ಮನ್ನು ಕತ್ತರಿಸಿ ಬಿಡುತ್ತೇವೆ’ ಎಂದು ಚಾಲಕರನ್ನು ಬೆದರಿಸಿದ್ದರು. ಈ ಸಂಗತಿ ದೂರಿನಲ್ಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಂಗಳವಾರ, ನವೆಂಬರ್ 21, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 321 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ತೆರೆದ ಮನಸ್ಸಿನಿಂದ
ಬದುಕನ್ನು ಸ್ವೀಕರಿಸಿದರೆ
ಪ್ರತಿ ಕ್ಷಣವನ್ನು
ಹೊಸತೆಂಬಂತೆ
ಆಸ್ವಾದಿಸಬಹುದು

ಆಳ-ಅಗಲ
ಉಚಿತ ಕೊಡುಗೆಗಳ ಮೇಲಾಟ

‘ಮಕ್ಕಳ ಆತ್ಮಹತ್ಯೆಗೆ ಪಾಲಕರ ಒತ್ತಡ ಕಾರಣ’ 8

ಡಿಸಿಸಿ ಬ್ಯಾಂಕ್‌ಗೆ ಸಾಲ: ಪ್ರಧಾನಿಗೆ ಪತ್ರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,655 ▼	19,694 ▼	₹62,850 (ಬೆಂಗಳೂರು) ▼	₹75,200 (ಬೆಂಗಳೂರು)	83.38 ▼

ಪರಿಶ್ರಮ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್
ಪರಿಶ್ರಮ
ಪಿಯು ಕಾಲೇಜು
ಇಂಟಿಗ್ರೇಟೆಡ್ NEET, JEE MAIN & KCET ತರಬೇತಿ

- ಕಳೆದ 5 ವರ್ಷದಲ್ಲಿ ಸರ್ಕಾರಿ ಕೋಟಾದಲ್ಲಿ 3000 ಕ್ಕೂ ಹೆಚ್ಚು ನಮ್ಮ ವಿದ್ಯಾರ್ಥಿಗಳು ವೈದ್ಯಕೀಯ ಸೀಟು ಪಡೆದಿರುತ್ತಾರೆ.
- AIIMS, JIPMER ಮತ್ತು BMC ಯಲ್ಲಿ ನಮ್ಮದು ಸಿಂಹಪಾಲು.
- ಮೊದಲ ಪ್ರಯತ್ನದಲ್ಲಿ ನಿಮ್ಮನ್ನು ಆಲ್ ಇಂಡಿಯಾ ಟಾಪರ್ಸ್ ಮಾಡುವುದು ನಮ್ಮ ಜವಾಬ್ದಾರಿ.

UNDER THE GUIDANCE OF PRADEEP ESHWAR

2024-25ನೇ ಸಾಲಿನ ಪ್ರವೇಶಾತಿಗಳಿಗಾಗಿ ಸಂಪರ್ಕಿಸಿ: 080 24413444, 82963 19392
For more details log on to: www.parishramapucollege.com

ತಮಿಳುನಾಡು ರಾಜ್ಯಪಾಲರು 3 ವರ್ಷಗಳಿಂದ ಏನು ಮಾಡುತ್ತಿದ್ದರು: ಪೀಠದ ಪ್ರಶ್ನೆ

ವಿಳಂಬ ಧೋರಣೆ ಪ್ರಶ್ನಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಅಂಕಿತ ಕೋರಿ ಸಲ್ಲಿಕೆಯಾಗಿದ್ದ ಮಸೂದೆಗಳ ವಿಚಾರವಾಗಿ ತಮಿಳುನಾಡು ರಾಜ್ಯಪಾಲರು ತೋರಿದ ವಿಳಂಬ ಧೋರಣೆಯನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ‘ಮೂರು ವರ್ಷಗಳಿಂದ ಅವರು ಏನು ಮಾಡುತ್ತಿದ್ದರು’ ಎಂದು ಸೋಮವಾರ ಕೇಳಿದೆ.

‘ಸಂಬಂಧಪಟ್ಟವರು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗುವವರೆಗೆ ರಾಜ್ಯಪಾಲರು ಕಾಯುವುದು ಏಕೆ? ರಾಜ್ಯಪಾಲರು 3 ವರ್ಷ ಏನು ಮಾಡುತ್ತಿದ್ದರು’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಪ್ರಶ್ನೆ ಮಾಡಿದೆ.

ಅರ್ಜಿಯ ವಿಚಾರವಾಗಿ ನೋಟಿಸ್ ಜಾರಿಗೆ ಆದೇಶಿಸಿದ ನಂತರದಲ್ಲಿ ಕೆಲವು ಮಸೂದೆಗಳಿಗೆ ‘ಅಂಕಿತ ಹಾಕುವುದನ್ನು ತಡೆಹಿಡಿಯಲಾಗಿದೆ’ ಎಂದು ರಾಜ್ಯಪಾಲರು ತಿಳಿಸಿದ್ದಾರೆ ಎನ್ನುವ ವಿಚಾರವನ್ನು ನ್ಯಾಯಪೀಠದ ಗಮನಕ್ಕೆ ತರಲಾಯಿತು. ಇದಾದ ನಂತರದಲ್ಲಿ ತಮಿಳುನಾಡು ವಿಧಾನಸಭೆಯ ವಿಶೇಷ ಅಧಿವೇಶನ ನಡೆದಿದೆ, ಇದೇ 18ರಂದು ಅವೇ ಮಸೂದೆಗಳಿಗೆ ಮರು ಅನುಮೋದನೆ ನೀಡಲಾಗಿದೆ ಎಂಬ ಮಾಹಿತಿಯನ್ನೂ ಪೀಠಕ್ಕೆ ನೀಡಲಾಯಿತು. ನೋಟಿಸ್ ಜಾರಿಗೆ ಕೋರ್ಟ್ ಆದೇಶಿಸಿದ್ದು ನವೆಂಬರ್ 10ರಂದು. ಆದರೆ ಮಸೂದೆಗಳು 2020ರ ಜನವರಿಯಿಂದಲೂ ಬಾಕಿ ಇವೆ ಎಂದು ಕೋರ್ಟ್ ಹೇಳಿತು. ‘ಅಂದರೆ, ಕೋರ್ಟ್ ನೋಟಿಸ್ ಜಾರಿಮಾಡಿದ ನಂತರದಲ್ಲಿ ರಾಜ್ಯಪಾಲರು ಈ ವಿಷಯ ತಿಳಿಸಿದ್ದಾರೆ’ ಎಂದು ಪೀಠ ಹೇಳಿತು.

ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ ರಾಜ್ಯಪಾಲರ ಅಧಿಕಾರವನ್ನು ಕಸಿಯುವ ಮಸೂದೆಗಳ ವಿಚಾರದಲ್ಲಿ ಮಾತ್ರ ಸಮಸ್ಯೆ ಇದೆ. ಇದು ಗಂಭೀರ ವಿಚಾರವಾಗಿರುವ ಕಾರಣ ಒಂದಿಷ್ಟು ಮರುಪರಿಶೀಲನೆಯ ಅಗತ್ಯ ಇದೆ ಎಂದು ಅಟಾರ್ನಿ ಜನರಲ್ ಅವರು ವಿವರಿಸಿದರು.

ಈಗ ತಮಿಳುನಾಡಿನ ರಾಜ್ಯಪಾಲರಾಗಿರುವ ಆರ್.ಎನ್. ರವಿ ಅವರು 2021ರ ನವೆಂಬರ್‌ನಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಅಟಾರ್ನಿ ಜನರಲ್ ತಿಳಿಸಿದರು. ಇದಕ್ಕೆ ಉತ್ತರವಾಗಿ ಪೀಠವು, ‘ಯಾವುದೇ ಒಬ್ಬ ರಾಜ್ಯಪಾಲರಿಂದ ಮಸೂದೆಗಳಿಗೆ ಅಂಕಿತ ದೊರೆಯುವುದು ವಿಳಂಬವಾಗಿದೆಯೇ ಎಂಬುದು ಇಲ್ಲಿನ ವಿಷಯ ಅಲ್ಲ. ಬದಲಿಗೆ, ಸಾಂವಿಧಾನಿಕ ಕೆಲಸ ನಿರ್ವಹಿಸುವಲ್ಲಿ ಒಟ್ಟಾರೆಯಾಗಿ ವಿಳಂಬ ಆಗಿದೆಯೇ ಎಂಬುದು ಇಲ್ಲಿನ ಪ್ರಶ್ನೆ’ ಎಂದು ಸ್ಪಷ್ಟಪಡಿಸಿತು.

5ನೇ ಪುಟ ನೋಡಿ

> **ವಿಧಾನಸಭೆಯ ಮರು ಅನುಮೋದನೆ ಪಡೆದ ಮಸೂದೆಗಳನ್ನು ರಾಜ್ಯಪಾಲರು, ರಾಷ್ಟ್ರಪತಿ ಅನುಮೋದನೆಗೆ ರವಾನಿಸಬಹುದೇ?**
>
> **ಸುಪ್ರೀಂ ಕೋರ್ಟ್ ನ್ಯಾಯಪೀಠ ಕೇಳಿದ ಪ್ರಶ್ನೆ**
>
> **ವಿಧಾನಸಭೆಯ ಮರು ಅನುಮೋದನೆ ಪಡೆದ ಮಸೂದೆಗಳ ವಿಚಾರವಾಗಿ ಇಂತಹ ಕ್ರಮ ಕೈಗೊಳ್ಳಲು ರಾಜ್ಯಪಾಲರಿಗೆ ಅವಕಾಶ ಇಲ್ಲ**
>
> **ತಮಿಳುನಾಡು ಸರ್ಕಾರದ ಪರ ವಕೀಲರ ಉತ್ತರ**

‘ಅಂಕಿತ ತಡೆಹಿಡಿಯುವುದು ಸಲ್ಲದು’

ತಮಿಳುನಾಡು ಸರ್ಕಾರದ ಪರವಾಗಿ ವಾದಿಸಿದ ಹಿರಿಯ ವಕೀಲರಾದ ಎ.ಎಂ. ಸಿಂಘ್ವಿ, ಪಿ. ವಿಲ್ಸನ್ ಮತ್ತು ಮುಕುಲ್ ರೋಹಟಗಿ ಅವರು, ‘ರಾಜ್ಯಪಾಲರು ಮಸೂದೆಗಳನ್ನು ತಡೆಹಿಡಿಯಬೇಕು ಎಂದು ಸಂವಿಧಾನದ 200ನೆಯ ವಿಧಿಯು ಹೇಳುವುದಿಲ್ಲ’ ಎಂದು ವಾದಿಸಿದರು. ‘ನಾನು ಮಸೂದೆಗೆ ಅಂಕಿತ ಹಾಕುವುದನ್ನು ತಡೆಹಿಡಿಯುತ್ತಿದ್ದೇನೆ ಎಂದು ರಾಜ್ಯಪಾಲರು ಹೇಳಲು ಅವಕಾಶ ಇಲ್ಲ’ ಎಂದು ವಿವರಿಸಿದರು.

200ನೆಯ ವಿಧಿಯ ಅಡಿಯಲ್ಲಿ ರಾಜ್ಯಪಾಲರಿಗೆ ಮೂರು ಆಯ್ಕೆಗಳು ಇರುತ್ತವೆ. ಅವರು ಮಸೂದೆಗೆ ಅಂಕಿತ ಹಾಕಬಹುದು, ಮಸೂದೆಯನ್ನು ತಡೆಹಿಡಿಯಬಹುದು, ಮಸೂದೆಯನ್ನು ರಾಷ್ಟ್ರಪತಿಯ ಅನುಮೋದನೆಗೆ ರವಾನಿಸಬಹುದು ಎಂದು ಪೀಠವು ಹೇಳಿತು. ‘ರಾಜ್ಯಪಾಲರು ಮಸೂದೆಯನ್ನು ತಡೆಹಿಡಿದ ಸಂದರ್ಭದಲ್ಲಿ ಅದನ್ನು ಅವರು ಮರುಪರಿಶೀಲನೆಗೆ ರವಾನಿಸಲೇಬೇಕೇ? ಕಾನೂನು ಈ ವಿಚಾರವಾಗಿ, ಮರುಪರಿಶೀಲನೆಗೆ ಕಳಿಸಲೂಬಹುದು ಎನ್ನುತ್ತದೆ’ ಎಂದು ಪೀಠವು ವಿವರಣೆ ನೀಡಿತು.

ಅಂಕಿತ ಹಾಕುವುದನ್ನು ತಡೆಹಿಡಿದಾಗ, ರಾಜ್ಯಪಾಲರು ಮಸೂದೆಯನ್ನು ಆದಷ್ಟು ಬೇಗ ಸದನಕ್ಕೆ ಮರಳಿಸಬೇಕಾಗುತ್ತದೆ. ಅಥವಾ ಮಸೂದೆಯನ್ನು ರಾಷ್ಟ್ರಪತಿ ಒಪ್ಪಿಗೆಗೆ ಕಳುಹಿಸಬೇಕಾಗುತ್ತದೆ ಎಂದು ಸಿಂಘ್ವಿ ವಿವರಿಸಿದರು.

ಕೇರಳ ಸರ್ಕಾರದಿಂದ ಅರ್ಜಿ

ಕೇರಳ ವಿಧಾನಸಭೆಯ ಅನುಮೋದನೆ ಪಡೆದಿರುವ ಮಸೂದೆಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ದೂರಿ ಕೇರಳ ಸರ್ಕಾರ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ವಿಚಾರಣೆಯನ್ನು ಶುಕ್ರವಾರಕ್ಕೆ ನಿಗದಿ ಮಾಡಲಾಗಿದೆ. ಎಂಟು ಮಸೂದೆಗಳ ಪೈಕಿ ಕೆಲವು ಏಳು ತಿಂಗಳುಗಳಿಂದ ಬಾಕಿ ಉಳಿದಿವೆ, ಇನ್ನು ಕೆಲವರು ಮೂರು ವರ್ಷಗಳಿಂದ ಬಾಕಿ ಇವೆ ಎಂದು ಕೇರಳ ಸರ್ಕಾರದ ಪರ ವಾದಿಸಿದ ಹಿರಿಯ ವಕೀಲ ಕೆ.ಕೆ. ವೇಣುಗೋಪಾಲ್ ಹೇಳಿದ್ದಾರೆ.

ಮಸೂದೆಗಳಿಗೆ ಅಂಕಿತ ಹಾಕದೆ, ಅನಿರ್ದಿಷ್ಟ ಅವಧಿಗೆ ಇಟ್ಟುಕೊಳ್ಳುವುದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ವಿರುದ್ಧ ಎಂದು ಕೇರಳ ಸರ್ಕಾರವು ಅರ್ಜಿಯಲ್ಲಿ ಹೇಳಿದೆ. ಮಸೂದೆಗೆ ಅಂಕಿತ ಹಾಕುವುದು ಅಥವಾ ಹಾಕದೆ ಇರುವುದು ತಮಗಿರುವ ಪ್ರಶ್ನಾತೀತ ವಿವೇಚನಾ ಅಧಿಕಾರ ಎಂದು ರಾಜ್ಯಪಾಲರು ಭಾವಿಸಿರುವಂತಿದೆ. ಇದು ಸಂವಿಧಾನವನ್ನು ಬುಡ ಮೇಲು ಮಾಡುವಂತಿದೆ ಎಂದು ಕೂಡ ಅದು ಹೇಳಿದೆ.



ಅಗ್ನಿ ಅವಘಡ ವಿಶಾಖಪಟ್ಟಣದ ಜೆಟ್ಟಿ ಪ್ರದೇಶದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ 35 ಮೀನುಗಾರಿಕಾ ದೋಣಿಗಳು ಬೆಂಕಿಗೆ ಆಹುತಿಯಾದವು –ಪಿಟಿಐ ಚಿತ್ರ

ವಿವರ 08

ಚಂದ್ರಬಾಬುಗೆ ಜಾಮೀನು

ಅಮರಾವತಿ (ಪಿಟಿಐ): ತೆಲುಗುದೇಶಂ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರಿಗೆ ಆಂಧ್ರ ಪ್ರದೇಶ ಹೈಕೋರ್ಟ್ ಕೌಶಲ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಸೋಮವಾರ ಜಾಮೀನು ಮಂಜೂರು ಮಾಡಿದೆ.

ಕಣ್ಣು ಶಸ್ತ್ರಚಿಕಿತ್ಸೆಗಾಗಿ ಕೋರ್ಟ್ ಅವರಿಗೆ ಈ ಹಿಂದೆ ನಾಲ್ಕು ವಾರಗಳ ಮಧ್ಯಂತರ ಜಾಮೀನು ನೀಡಿತ್ತು. ಇದನ್ನು ಪರಿವರ್ತಿಸಿ ಈಗ ಪೂರ್ಣ ಪ್ರಮಾಣದ ಜಾಮೀನು ಮಂಜೂರು ಮಾಡಿದೆ. ಮಾಜಿ ಮುಖ್ಯಮಂತ್ರಿ ಅವರ ವಯಸ್ಸು, ವಯೋಸಂಬಂಧ ಅನಾರೋಗ್ಯಗಳ ಕಾರಣ ಅವರನ್ನು ಬಿಡುಗಡೆ ಮಾಡಬೇಕು ಎಂದು ಆದೇಶಿಸಿದೆ.

ಆದರೆ, ಕೌಶಲ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿ ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಬಾರದು, ಸಾರ್ವಜನಿಕ ರ‍್ಯಾಲಿ ಆಯೋಜಿಸಬಾರದು ಎಂದು ಮಧ್ಯಂತರ ಜಾಮೀನಿನಲ್ಲಿ ವಿಧಿಸಿದ್ದ ಷರತ್ತು ನ. 28ರವರೆಗೆ ಚಾಲ್ತಿಯಲ್ಲಿರುತ್ತದೆ. ನ. 29ರಿಂದ ಅನ್ವಯವಾಗುವಂತೆ ಸಡಿಲಗೊಳಿಸಲಾಗುತ್ತದೆ ಎಂದು ಕೋರ್ಟ್ ಆದೇಶಿಸಿದೆ.

ಅಲ್ಲದೆ, ವೈದ್ಯಕೀಯ ತಪಾಸಣಾ ವರದಿಗಳನ್ನು, ರಾಜಮಹೇಂದ್ರವರಂ ಕಾರಾಗೃಹದ ಸೂಪರಿಂಟೆಂಡೆಂಟ್ ಅವರಿಗೆ ಬದಲಾಗಿ, ವಿಜಯವಾಡದಲ್ಲಿ ವಿಶೇಷ ಕೋರ್ಟ್‌ಗೆ ಹಾಜರುಪಡಿಸಬಹುದು ಎಂದು ನಿರ್ದೇಶಿಸಿದೆ.

ಎಸ್ಸಿಎಸ್ಟಿ: ಎಲ್ಲರಿಗೂ ‘ಸಹಕಾರಿ’ ಸದಸ್ಯತ್ವ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿಗೂ ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಣಿ ಮಾಡಿಸಲಾಗುವುದು. ಇದಕ್ಕೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಹೇಳಿದ್ದಾರೆ.

ವಿವರ 11

ಭೂಮಾಪನ ಕಚೇರಿಗಳಲ್ಲಿ ಶೋಧ

ಭ್ರಷ್ಟಾಚಾರ, ಅಕ್ರಮಗಳ ಕುರಿತು ದೂರು– 11 ಕಡೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಮತ್ತು ಅಕ್ರಮಗಳ ಕುರಿತು ವ್ಯಾಪಕ ದೂರುಗಳ ಆಧಾರದಲ್ಲಿ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ 11 ಕಚೇರಿಗಳ ಮೇಲೆ ದಾಳಿ ಮಾಡಿರುವ ಲೋಕಾಯುಕ್ತದ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ.

ಸಾರ್ವಜನಿಕರ ದೂರುಗಳ ಆಧಾರದಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಈ ಕಚೇರಿಗಳ ಶೋಧಕ್ಕೆ ಆದೇಶಿಸಿದ್ದರು. ಲೋಕಾಯುಕ್ತದ ನ್ಯಾಯಾಂಗ ಮತ್ತು ಪೊಲೀಸ್ ವಿಭಾಗದ ಅಧಿಕಾರಿಗಳು ಸೋಮವಾರ ಸಂಜೆ ಏಕಕಾಲಕ್ಕೆ ದಾಳಿ ಮಾಡಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರ ಕಚೇರಿಗಳಲ್ಲಿ ಶೋಧ ನಡೆಯುತ್ತಿದೆ. ಕಂದಾಯ ಭವನದಲ್ಲಿರುವ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳ ಮೇಲೂ ದಾಳಿ ನಡೆದಿದೆ. ಈ ಎರಡೂ ಕಚೇರಿಗಳಿಗೆ ಭೇಟಿ ನೀಡಿದ ಲೋಕಾಯುಕ್ತರು, ಕಾರ್ಯಾಚರಣೆಯನ್ನು ಪರಿಶೀಲಿಸಿದರು.

ಬೆಂಗಳೂರು ಪೂರ್ವ (ಕೆ.ಆರ್. ಪುರ), ಯಲಹಂಕ, ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳ ಮೇಲೂ ದಾಳಿ ನಡೆದಿದ್ದು, ಶೋಧ ಮುಂದುವರಿದಿದೆ.

ಲೋಕಾಯುಕ್ತದ ನ್ಯಾಯಾಂಗ ಮತ್ತು ಪೊಲೀಸ್ ವಿಭಾಗದ ಅಧಿಕಾರಿಗಳು, ಸಿಬ್ಬಂದಿಯನ್ನು ಒಳಗೊಂಡ 11 ತಂಡಗಳನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿದೆ.

ಸಮಗ್ರ ತನಿಖೆ: ‘ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯ ಕಚೇರಿಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿರುವ ದೂರುಗಳು ಬಂದಿವೆ. ಈ ಕಾರಣದಿಂದ ವಿಚಾರಣೆ ಆರಂಭಿಸಿದ್ದೇವೆ. ಅರ್ಜಿಗಳ ವಿಲೇವಾರಿ, ತಿರಸ್ಕಾರ, ಬಾಕಿ ಇರಿಸಿಕೊಂಡಿರುವ ಕುರಿತು ಮಾಹಿತಿ ಒದಗಿಸಲು ಸೂಚಿಸಲಾಗಿದೆ’ ಎಂದರು.

ಎಲ್ಲ 11 ಕಚೇರಿಗಳ ಶೋಧನಾ ವರದಿ ಸಲ್ಲಿಕೆಯಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಭ್ರಷ್ಟಾಚಾರದ ಕುರಿತು ಪ್ರಬಲ ಸಾಕ್ಷ್ಯವಿರುವ ಪ್ರಕರಣಗಳಲ್ಲಿ ಎಫ್ಐಆರ್ ದಾಖಲಿಸಲು ಆದೇಶಿಸಲಾಗುವುದು ಎಂದು ತಿಳಿಸಿದರು.

ಪರಿಶೀಲನೆಗೆ ಬಂದಾಗ ಅಧಿಕಾರಿ ನಾಪತ್ತೆ

ಬೆಂಗಳೂರು ಉತ್ತರ ತಾಲ್ಲೂಕಿನ ಭೂ ದಾಖಲೆಗಳ ಇಲಾಖೆ ಸಹಾಯಕ ನಿರ್ದೇಶಕ ನರಸಿಂಹಮೂರ್ತಿ ಕಚೇರಿಯಲ್ಲಿರಲಿಲ್ಲ. ಲೋಕಾಯುಕ್ತರು ಖುದ್ದಾಗಿ ಕಚೇರಿಗೆ ಭೇಟಿನೀಡಿದ ಬಳಿಕ ಕರೆ ಮಾಡಿದರೆ ಮೊಬೈಲ್ ಸ್ವಿಚ್ಡ್ ಆಫ್ ಇತ್ತು. ‘ಮಧ್ಯಾಹ್ನ 2.30ರಿಂದ ನರಸಿಂಹಮೂರ್ತಿ ಕಚೇರಿಯಲ್ಲಿಲ್ಲ ಎಂಬ ಮಾಹಿತಿ ದೊರಕಿದೆ. ಚಲನ–ವಲನ ವಹಿಯಲ್ಲಿ ಯಾವುದೇ ಉಲ್ಲೇಖವಿಲ್ಲ. ಈ ಕುರಿತು ವಿಚಾರಣೆ ನಡೆಸಲಾಗುವುದು’ ಎಂದು ಲೋಕಾಯುಕ್ತ ಬಿ.ಎಸ್. ಪಾಟೀಲ ತಿಳಿಸಿದರು.

ಝೆರಾಕ್ಸ್ ಯಂತ್ರ ಪತ್ತೆ

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳ ಆವರಣದಲ್ಲಿ ಝೆರಾಕ್ಸ್ ಯಂತ್ರಗಳು ಪತ್ತೆಯಾಗಿವೆ. ಅವುಗಳನ್ನು ಇರಿಸಿದವರು ಯಾರು? ಬಳಸಿದವರು ಯಾರು ಎಂಬುದರ ಕುರಿತೂ ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಸಿಬ್ಬಂದಿಯೊಬ್ಬರ ಬಳಿ ₹40,000 ನಗದು ಪತ್ತೆಯಾಗಿದೆ. ಈ ಕುರಿತು ನಗದು ವಹಿಯಲ್ಲಿ ದಾಖಲಿಸಿಲ್ಲ. ಈ ಬಗ್ಗೆಯೂ ತನಿಖೆ ನಡೆಸಲಾಗುವುದು ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಕ್ಷಿಪ್ರ ಬೆಳವಣಿಗೆ, ಡಿ.2ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದ ಕೋರ್ಟ್

ಮುರುಘಾ ಶರಣರ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ದಾವಣಗೆರೆ: ಪೋಕ್ಸೊ ಕಾಯ್ದೆಯಡಿ ದಾಖಲಾಗಿದ್ದ ಎರಡನೇ ಪ್ರಕರಣದಲ್ಲಿ ಸೋಮವಾರ ಮತ್ತೆ ಬಂಧಿತರಾಗಿದ್ದ ಮುರುಘಾ ಮಠದ ಶಿವಮೂರ್ತಿ ಶರಣರು ಹೈಕೋರ್ಟ್ ಆದೇಶದ ಮೇರೆಗೆ ರಾತ್ರಿ ಬಿಡುಗಡೆಯಾದರು. ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದ ಮೂರು ಗಂಟೆಗಳಲ್ಲಿ ಶರಣರು ಕಾರಾಗೃಹದಿಂದ ಹೊರಬಂದರು.

ದಾವಣಗೆರೆಯ ವಿರಕ್ತ ಮಠದಲ್ಲಿ ಶಿವಮೂರ್ತಿ ಶರಣರನ್ನು ಬಂಧಿಸಿದ್ದ ಚಿತ್ರದುರ್ಗ ಗ್ರಾಮಾಂತರ ಠಾಣೆಯ ಪೊಲೀಸರು ನ್ಯಾಯಾಲಯದ ಎದುರು ಹಾಜರುಪಡಿಸಿದ್ದರು. ಆರೋಪಿಯನ್ನು ಡಿ.2ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದ್ದರು. ಈ ನಡುವೆ ಶರಣರ ವಿರುದ್ಧ ಹೊರಡಿಸಿದ್ದ ಜಾಮೀನು ರಹಿತ ಬಂಧನದ ವಾರಂಟ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಆದೇಶ ಪ್ರತಿ ಪಡೆದ ಕಾರಾಗೃಹದ ಅಧಿಕಾರಿಗಳು ಕಾನೂನು ಸಲಹೆ ಪಡೆದು ರಾತ್ರಿ 8.40ಕ್ಕೆ ಶರಣರನ್ನು ಬಿಡುಗಡೆಗೊಳಿಸಿದರು.

ಪೋಕ್ಸೊ ಕಾಯ್ದೆಯಡಿ ದಾಖಲಾಗಿದ್ದ ಮೊದಲ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ್ದ ಷರತ್ತುಬದ್ಧ ಜಾಮೀನಿನಲ್ಲಿ ನ.16ರಂದು ಬಿಡುಗಡೆಯಾಗಿದ್ದ ಶಿವಮೂರ್ತಿ ಶರಣರು ನಾಲ್ಕೇ ದಿನಗಳಲ್ಲಿ ಮತ್ತೊಂದು ಪ್ರಕರಣದಲ್ಲಿ ಜೈಲು ಸೇರಿದ್ದರು. ಶರಣರ ಬಂಧನಕ್ಕೆ ಸೆಷನ್ಸ್ ನ್ಯಾಯಾಲಯ ಹೊರಡಿಸಿದ ವಾರಂಟ್, ಬಂಧನ ಹಾಗೂ ಬಿಡುಗಡೆಯ ಬೆಳವಣಿಗೆಗಳು ಇಡೀ ದಿನ ಸಿನೀಮಿಯ ರೀತಿಯಲ್ಲಿ ನಡೆದವು. ಪ್ರಕರಣ ಕ್ಷಣಕ್ಕೊಂದು ತಿರುವು ಪಡೆದು ಕುತೂಹಲ ಕೆರಳಿಸಿತು.

ಬಂಧನದ ವಾರಂಟ್: ಪೋಕ್ಸೊದ 2ನೇ ಪ್ರಕರಣದಲ್ಲಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರಂಟ್ ಅರ್ಜಿಯ ವಿಚಾರಣೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಲು ಅವಕಾಶ ಕಲ್ಪಿಸುವಂತೆ ಆರೋಪಿ ಪರ ವಕೀಲರು ಇದೇ 18ರಂದು ಅರ್ಜಿ ಸಲ್ಲಿಸಿದ್ದರು. ಇದಕ್ಕೆ ತಕರಾರು ಸಲ್ಲಿಸಿದ್ದ ಸರ್ಕಾರದ ಪರ ವಕೀಲ ಎಚ್.ಆರ್. ಜಗದೀಶ್, ‘ಹೈಕೋರ್ಟ್ ಮೊದಲ ಪ್ರಕರಣದಲ್ಲಿ ನೀಡಿದ ಜಾಮೀನಿನಲ್ಲಿ ಇದಕ್ಕೆ ಅವಕಾಶ ಕಲ್ಪಿಸಿಲ್ಲ. ವಿಚಾರಣೆಗೆ ಹಾಜರಾಗದ ಆರೋಪಿ ವಿರುದ್ಧ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಿ’ ಎಂದು ಮನವಿ ಮಾಡಿದ್ದರು. ಪ್ರಾಸಿಕ್ಯೂಷನ್ ಪರ ವಕೀಲರ ವಾದ ಪುರಸ್ಕರಿಸಿದ್ದ ನ್ಯಾಯಾಧೀಶೆ ಬಿ.ಕೆ.ಕೋಮಲಾ, ಶರಣರ ಬಂಧನಕ್ಕೆ ಸೋಮವಾರ ಬೆಳಿಗ್ಗೆ 11.45ಕ್ಕೆ ಆದೇಶಿಸಿದ್ದರು.

5ನೇ ಪುಟ ನೋಡಿ

ಚಿತ್ರದುರ್ಗದಿಂದ ಬಂದಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ಮುರುಘಾಮಠದ ಶಿವಮೂರ್ತಿ ಶರಣರನ್ನು ದಾವಣಗೆರೆಯ ವಿರಕ್ತಮಠದಲ್ಲಿ ಬಂಧಿಸಿ ಕರೆದೊಯ್ದರು
– ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ್

> **ಸದ್ಯ ಏನೂ ಮಾತನಾಡುವುದಿಲ್ಲ. ಸೂಕ್ತ ಸಂದರ್ಭದಲ್ಲಿ ವಿಚಾರ ಹಂಚಿಕೊಳ್ಳುತ್ತೇವೆ. ಈಗ ಮತ್ತೆ ಮೌನಕ್ಕೆ ಸರಿಯುತ್ತಿದ್ದೇವೆ**
>
> **ಶಿವಮೂರ್ತಿ ಶರಣರು,** ಮುರುಘಾ ಮಠ

ಚಿನ್ನದ ಆಮದು ಶೇ 60ರಷ್ಟು ಏರಿಕೆ 09

ಅಲ್ ಶಿಫಾ ಸುತ್ತಮುತ್ತ ಕದನ ಬಿರುಸು 08

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಸ್ಟ್ರೇಲಿಯಾಕ್ಕೆ ವಿಶ್ವಕಪ್
INDIA
ಆದ್ರೆ 'ವಿಶ್ವಗುರು' ನಾವೇ! ಹತ್ತರಲ್ಲಿ ಹತ್ತು ಮ್ಯಾಚ್ ಗೆದ್ದು ಭಾರತ ಸಾಮರ್ಥ್ಯ ತೋರಿಸಿಲ್ವೆ?

ಎರವಲು ಸೇವೆಯಲ್ಲೇ ಅಧಿಕಾರಿಗಳಿಗೆ ಸಂತೃಪ್ತಿ

ಕಾಡು ಕಾಯಲು ಐಎಫ್‌ಎಸ್ ನಿರಾಸಕ್ತಿ

● ಆರ್. ಮಂಜುನಾಥ್

ಬೆಂಗಳೂರು: ಅರಣ್ಯ ಕಾಪಾಡಲು ಮನಸ್ಸಿಲ್ಲದ ಐಎಫ್‌ಎಸ್ ಅಧಿಕಾರಿಗಳು ರಾಜಧಾನಿ ಬೆಂಗಳೂರು ಬಿಟ್ಟು ಇತರೆ ಪ್ರದೇಶಗಳಿಗೆ ಹೋಗುತ್ತಿಲ್ಲ. ಇಲಾಖೆ ಬಿಟ್ಟು ನಿಗಮ, ಮಂಡಳಿಗಳ ಆಡಳಿತಾತ್ಮಕ ಹುದ್ದೆಗಳಿಗೇ ಮುಗಿಬಿದ್ದಿದ್ದಾರೆ.

ತಂತ್ರಜ್ಞಾನ ಇಲಾಖೆ, ನಿಗಮ, ಮಂಡಳಿಗಳ ವ್ಯವಸ್ಥಾಪಕ ನಿರ್ದೇಶಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗಳಲ್ಲಿ ಕುಳಿತಿರುವ ಐಎಫ್‌ಎಸ್ ಅಧಿಕಾರಿಗಳು ಹಲವರಿದ್ದಾರೆ. ಕೆಲವು ಐಎಫ್‌ಎಸ್ ಅಧಿಕಾರಿಗಳು ಎರಡು– ಮೂರು ಹುದ್ದೆಗಳನ್ನೂ ಹೊಂದಿದ್ದಾರೆ. ಅಖಿಲ ಭಾರತ ಸೇವೆಗಳ (ಎಐಎಸ್) ನಿಯಮಗಳ ಪ್ರಕಾರ ಇದು ನಿಯಮಬಾಹಿರ. ಇದರ ಜತೆಗೆ, ತಂತ್ರಜ್ಞಾನ ಹಾಗೂ ನಿಗಮ–ಮಂಡಳಿಗಳಲ್ಲಿರುವ ಅರ್ಹರಿಗೆ ಬಡ್ತಿಯೂ ಸಿಗುತ್ತಿಲ್ಲ ಎನ್ನುವ ಕೂಗೂ ಕೇಳಿಬರುತ್ತಿದೆ.

ಎಐಎಸ್ ನಿಯಮಗಳ ಪ್ರಕಾರ, ರಾಜ್ಯಕ್ಕೆ ಒಟ್ಟು 100 ಐಎಫ್‌ಎಸ್ ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ, ಕೇಂದ್ರಕ್ಕೆ ಶೇ 20ರಷ್ಟು ಹಾಗೂ ರಾಜ್ಯ ಸರ್ಕಾರದ ಅರಣ್ಯೇತರ ಹುದ್ದೆಗಳಿಗೆ ಶೇ 25ರಷ್ಟು ಐಎಫ್‌ಎಸ್ ಅಧಿಕಾರಿಗಳನ್ನು ಎರವಲು ಸೇವೆಯಲ್ಲಿ ನಿಯೋಜಿಸಬಹುದು.

ರಾಜ್ಯದ ತಂತ್ರಜ್ಞಾನ, ಐಟಿ, ಇ–ಆಡಳಿತ, ಆಹಾರ ನಿಗಮ, ಪಶು ಸಂಗೋಪನೆ ವಿ.ವಿ ಸೇರಿದಂತೆ ನಿಗಮ–ಮಂಡಳಿಗಳ ವಿವಿಧ ಹುದ್ದೆಗಳಲ್ಲಿ 39 ಐಎಫ್‌ಎಸ್ ಅಧಿಕಾರಿಗಳಿದ್ದಾರೆ. ಆನೆ, ಹುಲಿ ಯೋಜನೆಗಳ ಕೇಂದ್ರ ಕಚೇರಿಗಳು ಆಯಾ ಯೋಜನೆಗೆ ಅನುಗುಣವಾದ ಸ್ಥಳದಲ್ಲಿರಬೇಕು. ಆದರೆ, ಅಂತಹ ಕಚೇರಿಗಳನ್ನು ಬೆಂಗಳೂರಿನಲ್ಲೇ ಸ್ಥಾಪಿಸಿಕೊಂಡು, ಐಎಫ್‌ಎಸ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

‘ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ಐಎಫ್‌ಎಸ್ ಅಧಿಕಾರಿಗಳು ಅರಣ್ಯ ಇಲಾಖೆ ಬಿಟ್ಟು ಬೇರೆ ಇಲಾಖೆಗಳಲ್ಲೇ ಆಸಕ್ತಿ ವಹಿಸಿ ಹುದ್ದೆ ಪಡೆದುಕೊಳ್ಳುತ್ತಿದ್ದಾರೆ. ನಮ್ಮ ಇಲಾಖೆಯಲ್ಲೇ ಇದ್ದು, ಎಲ್ಲ ವರ್ಗದ ಸಿಬ್ಬಂದಿಗೆ ಉತ್ತೇಜನ ನೀಡಬೇಕಾದದ್ದು ಹಿರಿಯ ಅಧಿಕಾರಿಗಳ ಕರ್ತವ್ಯ. ಆದರೆ, ಅವರು ಬೆಂಗಳೂರಿನಲ್ಲೇ ಉಳಿದುಕೊಳ್ಳಬೇಕೆಂದು ಲಾಬಿ ನಡೆಸಿ, ನಿಗಮ–ಮಂಡಳಿಗಳಲ್ಲಿ ಹುದ್ದೆ ಪಡೆದುಕೊಂಡಿದ್ದಾರೆ’

5ನೇ ಪುಟ ನೋಡಿ

ಮುಖ್ಯ ಕಾರ್ಯದರ್ಶಿಗೆ ಮನವಿ

‘ಕೆಲವು ಐಎಫ್‌ಎಸ್ ಅಧಿಕಾರಿಗಳು ನಿಗಮ– ಮಂಡಳಿಗಳಿಗೆ ನಿಯೋಜನೆಯಾಗಿ ಹತ್ತಾರು ವರ್ಷ ಕಳೆದರೂ ಮಾತ್ರ ಇಲಾಖೆಗೆ ವಾಪಸ್ ಬಂದಿಲ್ಲ. ಇಂತಹ ಅಧಿಕಾರಿಗಳು ಸೇರಿದಂತೆ ಎಐಎಸ್ ನಿಯಮ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಎರವಲು ಸೇವೆಯಲ್ಲಿರುವ ಐಎಫ್‌ಎಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅರಣ್ಯ ಇಲಾಖೆಯಲ್ಲೇ ಕೆಲಸ ನಿರ್ವಹಿಸುವಂತೆ ಸೂಚಿಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪತ್ರ ಬರೆದು ಮನವಿ ಮಾಡಿಕೊಳ್ಳಲಾಗಿದೆ. ಆದರೂ ಕ್ರಮವಾಗಿಲ್ಲ’ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಶರವಣಗೆ ಟಿಕೆಟ್ ನೀಡಲು ಎಚ್‌ಡಿಕೆ ಹಣ ಪಡೆದಿಲ್ಲವೇ: ಸಿ.ಎಂ. ಇಬ್ರಾಹಿಂ

ಪ್ರಜಾವಾಣಿ ವಾರ್ತೆ

ಸಿ.ಎಂ.ಇಬ್ರಾಹಿಂ

ಬೆಂಗಳೂರು: ‘ಟಿ.ಎ. ಶರವಣ ಅವರಿಗೆ ವಿಧಾನ ಪರಿಷತ್ ಟಿಕೆಟ್ ನೀಡಲು ಹಣ ಪಡೆದಿಲ್ಲ ಎಂದು ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಮಗನ ಮೇಲೆ ಪ್ರಮಾಣ ಮಾಡಲು ಸಿದ್ಧವೇ’ ಎಂದು ಜೆಡಿಎಸ್‌ನಿಂದ ಅಮಾನತುಗೊಂಡಿರುವ ಮುಖಂಡ ಸಿ.ಎಂ. ಇಬ್ರಾಹಿಂ ಸವಾಲು ಹಾಕಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಆ ಶೆಟ್ಟರಿಗೆ (ಶರವಣ) ಟಿಕೆಟ್ ಕೊಟ್ಟರಲ್ಲಾ ಆವಾಗ ಏನು ಮಾಡಿದರು ಎಂಬುದನ್ನು ಹೇಳುವ ಧೈರ್ಯ ಇದೆಯಾ? ಇದೆಲ್ಲ ನೀವೂ ಮಾಡಿ ಮಾತನಾಡುವುದಾ’ ಎಂದರು.

‘ನಿಮಗೆ ಒಬ್ಬ ಮಗ ಇದ್ದಾನೆ. ಸಿದ್ದರಾಮಯ್ಯನಿಗೂ ಒಬ್ಬನೇ ಮಗ ಇರೋದು. ಒಬ್ಬ ಮಗ ತೀರಿಕೊಂಡು ಹೋದ ಪಾಪ. ಅಪ್ಪನ ಕ್ಷೇತ್ರವನ್ನು ಯತೀಂದ್ರ ನೋಡಿಕೊಳ್ಳುತ್ತಿದ್ದಾನೆ. ಏನೋ ಈ ಹುಡುಗ ಬೆಳೀತಾ ಇದ್ದಾನೆ. ಅವನು ಬೆಳೆದಂತೆ ನೀನೂ ಬೆಳಿಯಪ್ಪ ಅಂತಾ ನಿಮ್ಮ ಮಗನನ್ನು ಬೆನ್ನು ತಟ್ಟುವುದು ಬಿಟ್ಟು, ಸೂಪರ್ ಸಿಎಂ, ಡಿಸಿಎಂ ಎಂದು ಹೇಳುವುದು ಸಣ್ಣತನದ ಪರಮಾವಧಿ’ ಎಂದು ಟೀಕಿಸಿದರು.

ಅಧ್ಯಕ್ಷರ ಬದಲಾವಣೆಗೆ ಸಜ್ಜು: ‘ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರಿಗೆ ಬಿಜೆಪಿ ಸಖ್ಯ ತೊರೆದು ಬರುವಂತೆ ಈಗಲೂ ಮನವಿ ಮಾಡುತ್ತೇವೆ. ಮೈತ್ರಿಯಿಂದ ಹಿಂದೆ ಸರಿಯದಿದ್ದರೆ ಡಿಸೆಂಬರ್ 9ರ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನೇ ಬದಲಾವಣೆ ಮಾಡುವ ನಿರ್ಣಯ ಕೈಗೊಳ್ಳುತ್ತೇವೆ’ ಎಂದರು.

‘ಯಡಿಯೂರಪ್ಪ ಅವರ ಮಗನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನನ್ನಾಗಿ ಮಾಡಿದ್ದಾರೆ. ಆರ್. ಅಶೋಕ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಇನ್ನು ಬಿಜೆಪಿಯವರು ದೇವೇಗೌಡರನ್ನು ಏನಾದರೂ ಕೇಳುತ್ತಾರಾ? ಜೆಡಿಎಸ್‌ನವರಿಗೆ ಏನು ಉಳಿದಿದೆ? 19 ಜನ ಶಾಸಕರಲ್ಲಿ 17 ಮಂದಿ ಗೌಡರ ಕುಟುಂಬದ ಜೊತೆ ಇಲ್ಲ’ ಎಂದರು.

‘ಜೆಡಿಎಸ್‌ನಿಂದ ನನ್ನನ್ನು ಅಮಾನತು ಮಾಡಿರುವ ತೀರ್ಮಾನಕ್ಕೆ ಬೆಲೆ ಇಲ್ಲ. ನಾನು ಪಕ್ಷದ ರಾಜ್ಯ ಘಟಕದ ಚುನಾಯಿತ ಅಧ್ಯಕ್ಷ. ನನ್ನ ವಿರುದ್ಧ ಕ್ರಮ ಕೈಗೊಳ್ಳಬೇಕಾದರೆ ರಾಷ್ಟ್ರೀಯ ಕಾರ್ಯಕಾರಿಣಿಯ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಬೇಕು. ಯಾರು ಬೆಂಬಲ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 21ರಿಂದ 25ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

21ಕ್ಕೆ: ಬಿಡಬ್ಲ್ಯುಎಸ್ಎಸ್‌ಬಿ, ಎಚ್‌ಎಸ್‌ಆರ್ ಲೇಔಟ್ 5ನೇ ಸೆಕ್ಟರ್, ಜಕ್ಕಸಂದ್ರ, ಸಿಪಿಡಬ್ಲ್ಯುಡಿ ಕ್ವಾಟರ್ಸ್, ಟೀಚರ್ಸ್ ಕಾಲೊನಿ, ವೆಂಕಟಾಪುರ, ಗ್ರೀನೇಜ್ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

22ಕ್ಕೆ: ಎಚ್‌ಎಸ್‌ಆರ್ ಲೇಔಟ್ 1ರಿಂದ 7ನೇ ಸೆಕ್ಟರ್, ಜಕ್ಕಸಂದ್ರ, ಟೀಚರ್ಸ್ ಕಾಲೊನಿ, ಕೆಎಸ್‌ಆರ್‌ಪಿ ಕ್ವಾಟರ್ಸ್, ಎಂಎಲ್ಎ ಲೇಔಟ್, ಸೋಮಸುಂದರಪಾಳ್ಯ, ಹರಳೂರು ರಸ್ತೆ, ಲೇಕ್ ವ್ಯೂ ರೆಸಿಡೆನ್ಸಿ, ವಿಶ್ವಾಸಾರ್ಹ ಬಡಾವಣೆ, ರಾಯಲ್ ಪ್ಲ್ಯಾಸಿಡ್, ಎಂ.ಎಸ್. ಪಾಳ್ಯ, ಅಂಬೇಡ್ಕರ್ ನಗರ, ಐಟಿಐ ಲೇಔಟ್, ಬೇಗೂರು ರಸ್ತೆ, ಬೊಮ್ಮನಹಳ್ಳಿ ಭಾಗ, ರಿಲಯಬಲ್ ವುಡ್ಸ್, ಮಾರುತಿ ಲೇಔಟ್ 1ನೇ ಬ್ಲಾಕ್, ಕೋರಮಂಗಲ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

23ಕ್ಕೆ: ಬೆಳ್ಳಂದೂರು, ಆರ್.ಎಂ. ಝಡ್, ದೇವರಬೀಸನಹಳ್ಳಿ, ಕರಿಯಮ್ಮನಪಾಳ್ಯ, ಅನುಪಮಾ, ಟೋಟಲ್ ಮಾಲ್, ಶೋಭಾ ಐರೀಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

24ಕ್ಕೆ: ಸರ್ಜಾಪುರ, ಸೆಸ್ನಾನಾ ಗಾರ್ಡನ್, ಹೊರ ವರ್ತುಲ ರಸ್ತೆ, ಸೆಂಟ್ರಲ್ ಮಾಲ್, ಎಕ್ಸೋರಾ ಬ್ಯುಸಿನೆಸ್ ಪಾರ್ಕ್, ಶೋಭಾ ಅಪಾರ್ಟ್‌ಮೆಂಟ್, ಸಲಾರಪುರಿಯಾ ಸಾಫ್ಟ್‌ಝೋನ್, ತಕ್ಷಶೀಲ ಹೆಲ್ತ್‌ಕೇರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕಾವ್ಯಾನಂದ ಪುರಸ್ಕಾರಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಜ.ನಾ.ತೇಜಶ್ರೀ

ಬೆಂಗಳೂರು: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್‌ನ 2021-22ನೇ ಸಾಲಿನ ಕಾವ್ಯಾನಂದ ಪುರಸ್ಕಾರಕ್ಕೆ ಜ.ನಾ. ತೇಜಶ್ರೀ ಅವರ ‘ಯಕ್ಷಿಣಿ ಕನ್ನಡಿ’ ಕೃತಿ ಆಯ್ಕೆಯಾಗಿದೆ.

ಡಾ. ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮ ಕಾವ್ಯಾನಂದ ಹೆಸರಿನಲ್ಲಿ ನೀಡಲಾಗುವ ಈ ಪುರಸ್ಕಾರವು ₹ 50 ಸಾವಿರ ನಗದು ಹಾಗು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಡಿಸೆಂಬರ್ 31ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪುರಸ್ಕಾರವನ್ನು ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷೆ ವಿಜಯಾ ನಂದೀಶ್ವರ ಅವರು ತಿಳಿಸಿದ್ದಾರೆ.

ಬಿಬಿಎಂಪಿ: ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಪರಾಮರ್ಶೆ

ಆಸ್ತಿ ದಾಖಲೆ ಡಿಜಿಟಲೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಆಸ್ತಿಗಳ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುವ ಹಾಗೂ ಸ್ವಯಂ ಘೋಷಿತ ತೆರಿಗೆ ಪದ್ಧತಿಯಡಿ ಪಾವತಿಸುತ್ತಿರುವ ಆಸ್ತಿ ತೆರಿಗೆಯನ್ನು ಪರಾಮರ್ಶಿಸುವ ಕಾರ್ಯವನ್ನು ಬಿಬಿಎಂಪಿ ಆರಂಭಿಸಿದೆ.

ಆಸ್ತಿಯ ಖಾತೆ, ಖಾತೆ ವರ್ಗಾವಣೆ ಸೇರಿದಂತೆ ಎಲ್ಲ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ಒದಗಿಸುವ ಹಿನ್ನೆಲೆಯಲ್ಲಿ ಡಿಜಿಟಲೀಕರಣ ಆರಂಭಿಸಲಾಗಿದೆ. ಆಸ್ತಿ ಮಾಲೀಕರ ಮೊಬೈಲ್‌ಗೆ ಈ ಸಂದೇಶ ರವಾನೆಯಾಗುತ್ತಿದ್ದು, ಅದರಂತೆ ಮಾಹಿತಿ ಒದಗಿಸಲು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಮಾಲೀಕರು ತೆರಿಗೆ ಪಾವತಿಸುತ್ತಿದ್ದಾರೆ. ಆದರೆ, ಇದರಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಆದ್ದರಿಂದ ಬಿಬಿಎಂಪಿಯ ಕಂದಾಯ ಅಧಿಕಾರಿಗಳು ಪ್ರತಿ ಕಟ್ಟಡವನ್ನು ಭೌತಿಕವಾಗಿ ಪರಿಶೀಲಿಸಿ, ಅದಕ್ಕೆ ಸರಿಯಾದ ತೆರಿಗೆಯನ್ನು ಪಾವತಿಸುವಂತೆ ‘ಡಿಮ್ಯಾಂಡ್ ನೋಟಿಸ್’ ನೀಡುವ ಕಾರ್ಯ ನ.1ರಿಂದ ಬಿಬಿಎಂಪಿ ಆರಂಭಿಸಿದೆ.

ಇದರ ಜೊತೆಗೇ ಡಿಜಿಟಲೀಕರಣ ಪ್ರಕ್ರಿಯೆಯನ್ನೂ ನಡೆಸುವಂತೆ ಕಂದಾಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

40 ಆಸ್ತಿಗಳ ಗುರಿ: ‘ಆಸ್ತಿ ತೆರಿಗೆ ಪರಿಶೀಲನೆ ಹಾಗೂ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆಯನ್ನು ಒಂದೇ ಬಾರಿಗೆ ನಡೆಸಲಾಗುತ್ತಿದ್ದು, ಕಂದಾಯ ನಿರೀಕ್ಷಕ ಹಾಗೂ ತೆರಿಗೆ ನಿರೀಕ್ಷಕರು ಪ್ರತಿ ದಿನ ತಲಾ 40 ಆಸ್ತಿಗಳ ಪ್ರಕ್ರಿಯೆಯನ್ನು ಮುಗಿಸಬೇಕೆಂಬ ಗುರಿ ನೀಡಲಾಗಿದೆ’ ಎಂದು ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತ ಅಜಯ್ ತಿಳಿಸಿದರು.

‘ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ 2016ರಿಂದ ಎಷ್ಟು ಆಸ್ತಿ ತೆರಿಗೆ ಪಾವತಿಸಲಾಗುತ್ತಿದೆ. ವಾಸ್ತವದಲ್ಲಿರುವ ಕಟ್ಟಡದ ವಿಸ್ತೀರ್ಣವೆಷ್ಟು? ನಕ್ಷೆ ಉಲ್ಲಂಘನೆಯಾಗಿದೆಯೇ ಎಂಬ ಮಾಹಿತಿಯನ್ನು ಪರಿಶೀಲಿಸಲಾಗುತ್ತದೆ. 2016ರಿಂದ ಪಾವತಿಸಬೇಕಾದ ವ್ಯತ್ಯಾಸ ಮೊತ್ತ ಹಾಗೂ ಬಡ್ಡಿಯನ್ನು ಪಾವತಿಸುವಂತೆ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗುತ್ತದೆ’ ಎಂದರು.

‘ಈ ಹಿಂದೆಯೂ ಆಸ್ತಿ ತೆರಿಗೆ ಪಾವತಿಯ ಬಗ್ಗೆ ಯಾದೃಚ್ಛಿಕ (ರ್‍ಯಾಂಡಮ್)ವಾಗಿ ಆಸ್ತಿಗಳನ್ನು ಪರಿಶೀಲಿಸಿ, ವ್ಯತ್ಯಾಸವಿದ್ದರೆ ನೋಟಿಸ್ ನೀಡಲಾಗುತ್ತಿತ್ತು. ಈಗ ಎಲ್ಲ ಆಸ್ತಿಗಳನ್ನೂ ಪರಿಶೀಲಿಸಲಾಗುತ್ತಿದೆ. ಜತೆಗೆ, ಆಸ್ತಿಗಳ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲೇ ಲಭ್ಯವಾಗುವಂತೆ ಡಿಜಿಟಲೀಕರಣ ಪ್ರಕ್ರಿಯೆಯನ್ನೂ ನಡೆಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಆಸ್ತಿಗಳ ದಾಖಲೆ ಡಿಜಿಟಲೀಕರಣ ಹಾಗೂ ಆಸ್ತಿ ತೆರಿಗೆ ವಿಮರ್ಶೆಗಾಗಿ ಆಸ್ತಿ ತೆರಿಗೆ ಪಾವತಿ ರಸೀದಿ ಮತ್ತು ಬೆಸ್ಕಾಂನ ವಿದ್ಯುತ್ ಬಿಲ್ ನೀಡಬೇಕು. ವಿದ್ಯುತ್ ಬಿಲ್ ನಿಂದ ಎಷ್ಟು ವರ್ಷಗಳಿಂದ ಮನೆಯಲ್ಲಿ ವಾಸವಿದ್ದಾರೆ, ಅಂದಿನಿಂದ ತೆರಿಗೆ ಕಟ್ಟುತ್ತಿದ್ದಾರಾ ಎಂಬುದು ತಿಳಿಯುತ್ತದೆ' ಎಂದರು.

ಬ್ಯಾಂಕ್ ಬಡ್ಡಿ ಮಾತ್ರ!

‘ಬಿಬಿಎಂಪಿ ವ್ಯಾಪ್ತಿಯಲ್ಲಿ 2016-17ರಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಯಲ್ಲಿದೆ. ಆಗ ವಲಯವನ್ನು ತಪ್ಪಾಗಿ ನಮೂದಿಸಿಕೊಂಡವರನ್ನು 2017-18ರಲ್ಲೇ ಗುರುತಿಸಿ, ಅವರಿಗೆ ನೋಟಿಸ್ ನೀಡಬೇಕಾಗಿತ್ತು. ಆದರೆ, 2021ರ ಆಗಸ್ಟ್‌ನಲ್ಲಿ ನೋಟಿಸ್ ಜಾರಿ ಮಾಡಲಾಗಿದೆ. ಹೀಗಾಗಿ, ದುಪ್ಪಟ್ಟು ತೆರಿಗೆಯನ್ನು ದಂಡವಾಗಿ ಸಂಗ್ರಹಿಸಲು ಸಾಧ್ಯವಿಲ್ಲ. ಅಲ್ಲದೆ, ಕಂದಾಯ ಅಧಿಕಾರಿಗಳು ತೆರಿಗೆ ಮೌಲ್ಯೀಕರಣ ಪರಿಶೀಲನೆಯನ್ನು ಉತ್ತಮಗೊಳಿಸಿಕೊಳ್ಳಬೇಕು’ ಎಂದು ಸರ್ಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ವ್ಯತ್ಯಾಸದ ಮೊತ್ತಕ್ಕೆ ಬ್ಯಾಂಕ್ ಬಡ್ಡಿ ದರವನ್ನು ವಿಧಿಸಬಹುದು ಎಂದು ಬಿಬಿಎಂಪಿಗೆ ಸೂಚಿಸಿದೆ. ಈ ಆದೇಶದಿಂದ ಬಿಬಿಎಂಪಿಗೆ ನಷ್ಟ ಉಂಟಾಗಿದ್ದಲ್ಲಿ, ಅದನ್ನು ಸರ್ಕಾರ ಭರಿಸುವುದಿಲ್ಲ ಎಂದು 2022ರ ಜ.5ರಂದು ನಡೆದ ಸಚಿವ ಸಂಪುಟ ಸಭೆ ನಿರ್ಣಯ ಕೈಗೊಂಡಿದೆ. ಅದರಂತೆ, 2023ರ ಸೆ.13ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ದಾಖಲೆ ಒದಗಿಸಲು ಸಂದೇಶ

‘ಆಸ್ತಿಗಳ ದಾಖಲೆ ಡಿಜಿಲೀಕರಣ ನಡೆಯುತ್ತಿದೆ. ಬಿಬಿಎಂಪಿಯಿಂದ ಆಸ್ತಿ ಮಾಲೀಕರಿಗೆ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಸಂದೇಶ (ಎಸ್‌ಎಂಎಸ್) ಕಳುಹಿಸಲಾಗುತ್ತಿದೆ. ಆಸ್ತಿಯನ್ನು ಭೌತಿಕವಾಗಿ ಪರಿಶೀಲಿಸುವ ಸಂದರ್ಭದಲ್ಲಿ ಅಗತ್ಯ ದಾಖಲೆಗಳನ್ನು ನಮ್ಮ ಕಂದಾಯ ವಿಭಾಗದ ಅಧಿಕಾರಿಗಳಿಗೆ ಆಸ್ತಿಗಳ ಮಾಲೀಕರು ಒದಗಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸುದ್ದಿ 2 ನಿಮಿಷ

ಎನ್‌ಇಪಿ ಅಳವಡಿಸಿಕೊಳ್ಳದಿದ್ದರೆ ರಾಜ್ಯಕ್ಕೇ ನಷ್ಟ: ಯುಜಿಸಿ ಅಧ್ಯಕ್ಷ

ಮೈಸೂರು: ‘ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬೇರೆ ರಾಜ್ಯಗಳು ಅಳವಡಿಸಿಕೊಳ್ಳುತ್ತಿವೆ. ಕರ್ನಾಟಕ ಅಳವಡಿಸಿಕೊಳ್ಳದಿದ್ದರೆ ಇಲ್ಲಿನ ವಿದ್ಯಾರ್ಥಿಗಳಿಗೇ ನಷ್ಟ. ಜಾಗತಿಕ ಅವಕಾಶಗಳು ಅವರ ಕೈತಪ್ಪುತ್ತವೆ’ ಎಂದು ವಿಶ್ವವಿದ್ಯಾಲಯಗಳ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಪ್ರೊ. ಎಂ. ಜಗದೀಶ ಕುಮಾರ್ ಪ್ರತಿಪಾದಿಸಿದರು.

‘ದೇಶದಾದ್ಯಂತ ಈಗಾಗಲೇ ಎನ್‌ಇಪಿ-2020 ಜಾರಿಯಾಗಿದ್ದು, ಏಕಕಾಲಕ್ಕೆ ಎರಡು ಪದವಿ ಅಧ್ಯಯನ, ಕೌಶಲತೆಗೆ ಒತ್ತು ನೀಡಲಾಗಿದೆ. 4 ವರ್ಷದ ಪದವಿಯಿಂದ ವಿದ್ಯಾರ್ಥಿಗಳಿಗೆ ಅವಕಾಶಗಳು ಹೆಚ್ಚಲಿವೆ. ಈ ಸಂಬಂಧ ದೇಶದ ಐದು ವಲಯಗಳ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆ ಚರ್ಚಿಸಿದ್ದು ಉತ್ತಮ ಪ್ರತಿಕ್ರಿಯೆ ದೊರೆತಿದೆ’ ಎಂದು ಅವರು ಸೋಮವಾರ ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

6 ತಿಂಗಳಲ್ಲಿ ಡಿಜಿಟಲ್ ವಿ.ವಿ: ‘ದೇಶದಲ್ಲಿ ಇನ್ನು 6 ತಿಂಗಳಲ್ಲಿ ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪನೆ ಆಗಲಿದೆ. ಡಿಜಿಟಲ್ ಮಾಧ್ಯಮದ ವೃತ್ತಿಪರ ಕಲಿಕೆಗೆ ಅವಕಾಶ ದೊರಕಲಿದೆ. ಸಾಂಪ್ರದಾಯಿಕ ಕೋರ್ಸ್‌ಗಳಿಗಿಂತ ಇದು ಭಿನ್ನ, ಎಲ್ಲ ಭಾರತೀಯ ಭಾಷೆಗಳಲ್ಲಿ ಬೋಧನಾ ಕ್ರಮವಿರುತ್ತದೆ’ ಎಂದರು.

ಎಸಿಇಟಿ ಕಾಲೇಜಿನಲ್ಲಿ ಅಕಾಡೆಮಿಕ್ ಬ್ಲಾಕ್ ಉದ್ಘಾಟನೆ

ಬೆಂಗಳೂರು: ವಿದ್ಯಾರ್ಥಿ ಜೀವನದ ಚಿನ್ನದಂಥ ದಿನಗಳನ್ನು ಸದುಪಯೋಗಪಡಿಸಿಕೊಂಡು ಸಾಧನೆ ಮಾಡಬೇಕು ಎಂದು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಕಿವಿಮಾತು ಹೇಳಿದರು.

ಯಲಹಂಕದ ಕಾಮಾಕ್ಷಿಪುರದಲ್ಲಿರುವ ಆದಿತ್ಯ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜಿನಲ್ಲಿ (ಎಸಿಇಟಿ) ಅಕಾಡೆಮಿ ಬ್ಲಾಕ್ ಉದ್ಘಾಟಿಸಿ ಮಾತನಾಡಿದರು.

ಬಾಹ್ಯ ಗೊಂದಲಗಳಿಗೆ ಒಳಗಾಗದೇ ವಿದ್ಯಾಭ್ಯಾಸ ಮಾಡಬೇಕು. ಅಮೂಲ್ಯ ಸಮಯವನ್ನು ವ್ಯರ್ಥ ಮಾಡಬಾರದು ಎಂದು ಸಲಹೆ ನೀಡಿದರು.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿದ್ಯಾಶಂಕರ್ ಮಾತನಾಡಿ, ‘ವೃತ್ತಿಪರ ಬೆಳವಣಿಗೆಗಾಗಿ ಓದಿನ ಜತೆಗೆ ಕ್ರೀಡೆ, ಯೋಗ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಬೇಕು’ ಎಂದರು.

ಎಜಿಐ ಸ್ಥಾಪಕ ಅಧ್ಯಕ್ಷ ಬಿ.ಎ. ವಿಶ್ವನಾಥ್, ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಹ ಕುಲಾಧಿಪತಿ ಬಿ ಸುರೇಶ್, ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಪ್ರಹ್ಲಾದ್, ಮ್ಯಾನೇಜ್‌ಮೆಂಟ್ ಟ್ರಸ್ಟಿ ಪ್ರಿಯಾ ವಿಶ್ವನಾಥ್, ಸೂರ್ಯಕುಮಾರಿ ಅಮ್ಮ, ಶಿಕ್ಷಣ ತಜ್ಞರು, ಪೋಷಕರು ಇದ್ದರು.

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No.: ಕಹಾಮ/ಅಭಿ/ಮದರ್ ಡೇರಿ–100ಏಐ ಮಿಲ್ಕ್ ಸೈಲೊ/1797/2023–24 ದಿನಾಂಕ: 20–11–2023

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳವು ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಯಲಹಂಕದ ಮದರ್ ಡೇರಿ ಘಟಕದಲ್ಲಿ ಬೈ–ಬ್ಯಾಕ್ ಆಧಾರದ ಮೇಲೆ 100 ಕೆ.ಎಲ್ ಮಿಲ್ಕ್ ಸೈಲೊನ ವಿನ್ಯಾಸ, ತಯಾರಿಕೆ, ಸರಬರಾಜು ಹಾಗೂ ಚಾಲನೆಗೊಳಿಸುವ ಕೆಲಸಗಳು	1 ಜಾಬ್	1,20,000/–	04 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 21–11–2023 ರಿಂದ 06–12–2023 ರ ಸಾಯಂಕಾಲ 4:00 ಗಂಟೆಯವರೆಗೆ. 2. ಟೆಂಡರುಗಳನ್ನು ಸಲ್ಲಿಸಲುಕೊನೆಯ ದಿನಾಂಕ: 06–12–2023 ಸಾಯಂಕಾಲ 4:00 ಗಂಟೆಯವರೆಗೆ. 3. ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 07–12–2023 ರಂದು ಸಾಯಂಕಾಲ 4.30ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ಕಾಂಡಕೋಶ ವಿಜ್ಞಾನ ಮತ್ತು ಪುನರುಜ್ಜೀವಿಕ ಔಷಧ ಸಂಸ್ಥೆ (ಡಿಬಿಟಿ–ಇನ್‌ಸ್ಟೆಮ್)
(ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ, ಎಂಓಎಸ್‌ಟಿ ರವರ ಸ್ವಾಯತ್ತ ಸಂಸ್ಥೆ)
ಜಿಕೆವಿಕೆ ಅಂಚೆ, ಬಳ್ಳಾರಿ ರಸ್ತೆ, ಬೆಂಗಳೂರು – 560 065.
ದೂರವಾಣಿ: 080–61948217 (www.instem.res.in)

ಜಾಹೀರಾತು ಸಂ. ಇನ್‌ಸ್ಟೆಮ್/09/2023

ಕಾಂಡಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧ ಸಂಸ್ಥೆ (ಡಿಬಿಟಿ–ಇನ್‌ಸ್ಟೆಮ್) ಇವರು ಕೆಳಕಂಡ ಸೈಂಟಿಫಿಕ್ ಕೇಡರ್ ಹುದ್ದೆಗಾಗಿ, ನೇರ ನೇಮಕಾತಿ ವಿಧಾನದ ಮೂಲಕ, ಇಲ್ಲವಾದಲ್ಲಿ ಡೆಪ್ಯುಟೇಶನ್/ಅಬ್ಸಾರ್ಪ್ಶನ್ ಆಧಾರದಲ್ಲಿ, ಬೆಂಗಳೂರಿನಲ್ಲಿ ನೇಮಕಗೊಳ್ಳುವ ಕೇಂದ್ರ ಸರ್ಕಾರಿ ನೌಕರರಿಗೆ ಅನ್ವಯಿಸುವ ಭತ್ಯೆಗಳಿಗೆ ಅನುಗುಣವಾಗಿ ಸೂಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಹುದ್ದೆ ಸಂಕೇತ	ಹುದ್ದೆಯ ಹೆಸರು	ವೇತನ ಶ್ರೇಣಿ ಹಂತ (7ನೇ ಸಿಪಿಸಿ ಪ್ರಕಾರ)	ಮೀಸಲಾತಿ ಪ್ರವರ್ಗ	ಖಾಲಿಹುದ್ದೆಗಳ ಸಂಖ್ಯೆ
17/23	ಪ್ರೊಫೆಸರ್/ಇನ್ವೆಸ್ಟಿಗೇಟರ್ (ಸೈಟಿಂಸ್ಟ್–‘ಜಿ’)	ಪಿಎಲ್–14	ಯುಆರ್	03 (ಮೂರು)
18/23			ಒಬಿಸಿ (ಎನ್‌ಸಿಎಲ್)	01 (ಒಂದು)
		ಒಟ್ಟು	04 (ನಾಲ್ಕು)	

ಸಂಪೂರ್ಣ ಜಾಹೀರಾತು, ಅರ್ಜಿ ಸಲ್ಲಿಸುವ ವಿಧಾನ, ಇತರೆ ನಿಬಂಧನೆಗಳು ಹಾಗೂ ಕ್ರಮಾನುಗತ ಪರಿಷ್ಕರಣೆಗಳು/ತಿದ್ದುಪಡಿಗಳಿಗಾಗಿ, ದಯವಿಟ್ಟು https://www.instem.res.in/facultypositions/ ಭೇಟಿ ಕೊಡಿ. **ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 25.12.2023.**

cbc 36304/12/0010/2324 ನಿರ್ದೇಶಕರು, ಡಿಬಿಟಿ–ಇನ್‌ಸ್ಟೆಮ್

Azadi Ka Amrit Mahotsav | ಸತ್ಯಮೇವ ಜಯತೇ Government of India | G20

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ

ವೈಬ್ರಂಟ್ ಇಂಡಿಯಾಕ್ಕಾಗಿ ಪಿಎಂ ಯಂಗ್ ಅಚೀವರ್ಸ್ ಸ್ಕಾಲರ್‌ಶಿಪ್ ಅವಾರ್ಡ್ ಸ್ಕೀಮ್ (ಪಿಎಂ ವೈಎಎಸ್ಎಎಸ್‌ವಿಐ)

ಒಬಿಸಿ, ಇಬಿಸಿ ಮತ್ತು ಡಿಎನ್‌ಟಿ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನಗಳ ಘೋಷಣೆ
2023–24ನೇ ಸಾಲಿನ ಟಾಪ್ ಕ್ಲಾಸ್ ಕಾಲೇಜುಗಳಲ್ಲಿ

- **ಅರ್ಹತೆ:**
  - ಒಬಿಸಿ. ಇಬಿಸಿ ಮತ್ತು ಡಿಎನ್‌ಟಿ.
  - ಪಾಲಕರ ಅಥವಾ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಮೀರಿರಬಾರದು.
  - ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಅಧಿಸೂಚಿತ ಐಐಎಂ/ಐಐಟಿ/ಎಐಐಎಂಎಸ್/ಎನ್‌ಐಟಿ, ಎನ್‌ಐಆರ್‌ಎಫ್, ಎನ್‌ಎಸಿ ಮುಂತಾದ ಉನ್ನತ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರಬೇಕು. (ಸಚಿವಾಲಯದ https://socialjustice.gov.in ವೆಬ್‌ಸೈಟ್‌ನಲ್ಲಿ ಸಂಸ್ಥೆಗಳ ಪಟ್ಟಿ ಲಭ್ಯ)
- **ನೆರವಿನ ಪ್ರಮಾಣ:**
  - ಸಂಪೂರ್ಣ ಟ್ಯೂಷನ್ ಶುಲ್ಕ ಮತ್ತು ಹಿಂದಿರುಗಿಸಲಾದ ಶುಲ್ಕಗಳು (ಖಾಸಗಿ ಕ್ಷೇತ್ರ ಸಂಸ್ಥೆಗಳಿಗೆ ತಲಾ ವಿದ್ಯಾರ್ಥಿಗೆ ವಾರ್ಷಿಕ ಗರಿಷ್ಠ **ರೂ. 2.00 ಲಕ್ಷ** ಮತ್ತು ಖಾಸಗಿ ಕ್ಷೇತ್ರದಲ್ಲಿ ಕಮರ್ಷಿಯಲ್ ಪೈಲಟ್ ತರಬೇತಿ ನೀಡುವ ಫ್ಲೈಯಿಂಗ್ ಕ್ಲಬ್ಸ್ ಮತ್ತು ಟೈಪ್ ರೇಟಿಂಗ್ ಕೋರ್ಸ್‌ಗಳಿಗೆ ತಲಾ ವಿದ್ಯಾರ್ಥಿಗೆ ವಾರ್ಷಿಕ ಗರಿಷ್ಠ **ರೂ. 3.72 ಲಕ್ಷ**.)
  - ಫಲಾನುಭವಿ ತಲಾ ವಿದ್ಯಾರ್ಥಿಗೆ ಮಾಸಿಕ ರೂ. 3000/– ಜೀವನೋಪಾಯ ವೆಚ್ಚಗಳು;
  - ತಲಾ ವಿದ್ಯಾರ್ಥಿಗೆ ಪುಸ್ತಕಗಳು ಮತ್ತು ಸ್ಟೇಷನರಿಗಾಗಿ ವಾರ್ಷಿಕ ರೂ. 5000/–.
  - ಕೋರ್ಸ್‌ನ ಅವಧಿಯಲ್ಲಿ ಏಕಮಾತ್ರ ನೆರವಿನ ಆಧಾರದಲ್ಲಿ ತಲಾ ವಿದ್ಯಾರ್ಥಿಗೆ, ಪ್ರತಿಷ್ಠಿತ ಬ್ರಾಂಡ್‌ನ ಆಕ್ಸೆಸರಿಗಳೂ ಸೇರಿದಂತೆಗಿನ ಕಂಪ್ಯೂಟರ್/ಲ್ಯಾಪ್‌ಟಾಪ್‌ಗಾಗಿ ಗರಿಷ್ಠ ನೆರವು ರೂ. 45000/–.
- **ಆಯ್ಕೆ ಪ್ರಕ್ರಿಯೆ:**
  - ಸಂಬಂಧಿತ ಪ್ರವೇಶ ಪರೀಕ್ಷೆಯಲ್ಲಿನ ಮೆರಿಟ್ ಆಧಾರದ ಮೇರೆಗೆ ಆಯ್ಕೆ ಮಾಡಲಾಗುತ್ತದೆ, ನಿಗದಿತ ಕಾಲಾವಧಿಯಲ್ಲಿ ನ್ಯಾಷನಲ್ ಸ್ಕಾಲರ್‌ಶಿಪ್‌ನ (https://scholarships.gov.in) ಪೋರ್ಟಲ್‌ನಲ್ಲಿ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸತಕ್ಕದ್ದು.
  - ಪೋರ್ಟಲ್‌ನ ಆರಂಭಿಕ **ದಿನಾಂಕ: 19.10.2023 ರಿಂದ 31.12.2023.**
  - ಈ ಶಿಷ್ಯವೇತನವನ್ನು, ಕೇಂದ್ರ ಸರ್ಕಾರದಿಂದ ಸಂಬಂಧಿತ ಫಲಾನುಭವಿಗೆ ಡಿಬಿಟಿ ಮುಖಾಂತರ ನೇರವಾಗಿ ವಿತರಿಸಲಾಗುತ್ತದೆ.

(ಸೂಚನೆ: ಯೋಜನೆಯ ಮಾರ್ಗಸೂಚಿಗಳು, ವಿವರವಾದ ಅರ್ಹತಾ ಮಾನದಂಡ ಮತ್ತು ಇನ್ನಿತರೆ ವಿವರಗಳು https://scholarships.gov.in ಮತ್ತು http://socialjustice.gov.in/schemes ಇವುಗಳಲ್ಲಿ ಲಭ್ಯ)

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂದರ್ಶಿಸಿ
https://scholarships.gov.in & http://socialjustice.gov.in/schemes/

CBC 38101/11/0049/2324

PUBLIC NOTICE

NOTICE is hereby given that **Srinath .R,** S/o late A Ramayya has agreed to sell the property mentioned in the schedules A and B below, to my client. All persons claiming any interest/right in the Schedule A and B Property or any part thereof or having any objection to the intended sale are hereby required to report the same in writing along with documentary proof thereof to the undersigned at his office **within 7 days** from this date, failing which, the said sale will be completed, without any reference to such claim/objection and the same, if any, shall be considered as waived.

SCHEDULE A

All that piece and parcel of land bearing Sy.No.92 measuring 7 Acres 05 Guntas including C.I.P. No.7341, situated at Poshettihalli Village, Nandi Hobli, Chickkaballapur Taluk, Chickkaballapur District and Bounded on: **East by:** Water Channel & Sanjeevamma, Reddappa's Land, **West by:** (P.B.Gangavaraiah) Lakshminarasappa, Nagamma, Sanjeevamma, Marakka, Lakshmamma & Sy.No. 107/2, **South by:** Sy.No.102, Road,Nagappa & Gejjappa's Land, **North by:** Bandammanahalli Border.

SCHEDULE B

All that piece and parcel of the properties that are bearing Sy.No.102 measuring 0-34 Guntas situated at Poshettihalli Village, Nandi Hobli, Chickkaballapur Taluk, Chickkaballapur District and Bounded on: **East by:** Water Channel, **West by:** Road, Sy.No.105, Gejjappa, Nagappa's Land, **South by:** Water Channel, **North by:** Sy.No.92

Advocate Mento Isac,
M/s MENTO ASSOCIATES, Advocates
No.1384, 2nd Floor, Above HDFC Bank,
East End Junction, 9th Block,
Jayanagar, Bengaluru-69.
Telephone: +91 080 41269324,
Mob: +91 9845426225,
www.mentoassociates.com
Date: 20-11-2023

ಸಚಿವ ಜಮೀರ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ


ಜಮೀರ್ ಅಹ್ಮದ್ ಖಾನ್

ಬೆಂಗಳೂರು: ಆದಾಯಕ್ಕೂ ಮೀರಿ ಆಕ್ರಮ ಆಸ್ತಿಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಬಿ. ಝಡ್ ಜಮೀರ್ ಅಹ್ಮದ್ ಖಾನ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು ದಾಖಲಿಸಿರುವ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಪ್ರಕರಣ ಹಾಗೂ ಈ ಸಂಬಂಧ ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ವಿಚಾರಣೆ ರದ್ದುಗೊಳಿಸಬೇಕು‘ ಎಂದು ಕೋರಿ ಜಮೀರ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಐಎಂಎ ಪ್ರವರ್ತಕರ ವಿರುದ್ಧದ ಅಪರಾಧ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದಂತೆ ಜಮೀರ್ ಅಹ್ಮದ್ ಅವರ ಕಚೇರಿ, ನಿವಾಸಗಳಲ್ಲಿ ಶೋಧ ನಡೆಸಲಾಗಿದೆ. ಅದರ ತನಿಖೆ ಇನ್ನೂ ಬಾಕಿ ಇದೆ. ಈ ಹಂತದಲ್ಲಿ ಜಾರಿ ನಿರ್ದೇಶನಾಲಯದ ವರದಿಯಲ್ಲಿ ಏನೂ ಇಲ್ಲ ಎಂದು ತಳ್ಳಿಹಾಕಲಾಗದು. ಅಪರಾಧಕ್ಕೆ ಅದೇ ಮೂಲವಾಗುತ್ತದೆ’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ. ತೀರ್ಪನ್ನು 30 ದಿನ ಅಮಾನತ್ತಿನಲ್ಲಿ ಇರಿಸಿ ಆದೇಶಿಸಿದೆ.

ಭಾರತೀಯ ಅಂತರ್‌ದೇಶೀಯ ಜಲಮಾರ್ಗ ಪ್ರಾಧಿಕಾರ
INLAND WATERWAYS AUTHORITY OF INDIA
(Ministry of Ports, Shipping and Waterways, Government of India)
A-13, Sector -1, Noida – 201301 (U.P.)
Phone 0120-2527667, Fax 0120-2522969

SAGARMALA

ಕರ್ನಾಟಕ ರಾಜ್ಯದಾದ್ಯಂತ ಪಿಪಿಪಿ ಮಾದರಿಯಲ್ಲಿ ರಾಷ್ಟ್ರೀಯ ಜಲಮಾರ್ಗಗಳ ಕ್ರಿಯಾಶೀಲಕರಣಕ್ಕಾಗಿ ಆಸಕ್ತಿ ವ್ಯಕ್ತಪಡಿಸುವಿಕೆ

ಆಸಕ್ತಿಯುಳ್ಳ ಅರ್ಜಿದಾರರಿಂದ “ಕರ್ನಾಟಕ ರಾಜ್ಯದಾದ್ಯಂತ ಪಿಪಿಪಿ ಮಾದರಿಯಲ್ಲಿ ರಾಷ್ಟ್ರೀಯ ಜಲಮಾರ್ಗಗಳ ಕ್ರಿಯಾಶೀಲಕರಣಕ್ಕಾಗಿ ಆಸಕ್ತಿ ವ್ಯಕ್ತಪಡಿಸುವಿಕೆಗೆ (ಇಓಐ)” ಕೆಳಕಂಡ ನಿರ್ದಿಷ್ಟ ದಿನಾಂಕಗಳೊಂದು ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಇಓಐ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 16.11.2023 ರಿಂದ 12.12.2023. ಆನ್‌ಲೈನ್ ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.12.2023 ರಂದು 1530 ಗಂಟೆ. ಟೆಂಡರ್ ತೆರೆಯುವ ದಿನಾಂಕ: 13.12.2023 ರಂದು 1530 ಗಂಟೆ.

ವಿವರವಾದ ಅರ್ಹತಾ ಮಾನದಂಡ ಮತ್ತು ಇಓಐ ವಿವರಗಳು ಭಾಅಂಜಪ್ರಾ ರವರ **www.iwai.nic.in** ಮತ್ತು **https://eprocure.gov.in/eprocure/app**

ನಿರ್ದೇಶಕರು (ಎಂಎಂ)

ಕೆನರಾ ಬ್ಯಾಂಕ್ ವಿವಿಧ ಸೇವೆ ಆರಂಭ

ಸತ್ಯನಾರಾಯಣ ರಾಜು

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ 118ನೇ ಸಂಸ್ಥಾಪಕರ ದಿನಾಚರಣೆಯ ಪ್ರಯುಕ್ತ ಹಲವು ಹೊಸ ಸೇವೆಗಳನ್ನು ಆರಂಭಿಸಿದೆ.

‘ಕಾರ್ಪೊರೇಟ್ ಎಐ1’ ಯೋಜನೆಯು ಕಾರ್ಪೊರೇಟ್ ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಮತ್ತು ‘ಕೆನರಾ ಎಐ1 ಕಾರ್ಪೊರೇಟ್’ ಅಪ್ಲಿಕೇಶನ್‌ನಲ್ಲಿ ಪರಸ್ಪರ ಬದಲಿ ಬ್ಯಾಂಕಿಂಗ್ ವಹಿವಾಟುಗಳನ್ನು ನಿರ್ವಹಿಸುತ್ತದೆ. ಇದು ಗ್ರಾಹಕರ ವಿವಿಧ ಅಗತ್ಯಗಳನ್ನು ಪೂರೈಸಲಿದೆ. ವಾಟ್ಸ್‌ಆ್ಯಪ್ ಬ್ಯಾಂಕಿಂಗ್ ಚಾನೆಲ್‌ನಲ್ಲಿ (9076030001) ಹಾಯ್, ಹಲೋ ಸಂದೇಶಗಳನ್ನು ಕಳುಹಿಸುವ ಮೂಲಕ ಬ್ಯಾಲೆನ್ಸ್ ವಿಚಾರಣೆ, ಮಿನಿ ಸ್ಟೇಟ್‌ಮೆಂಟ್ ಸಹಿತ 18 ಸೇವೆಗಳನ್ನು ನೀಡಲಿದೆ.

‘ಕೆನರಾ ಯುಪಿಐ 123 ಪೇ’ ಫೋನ್ ಬಳಕೆದಾರರಿಗೆ ಐವಿಆರ್ ಆಧಾರಿತ ಯುಪಿಐ ಬ್ಯಾಂಕಿಂಗ್ ಸೌಲಭ್ಯವು ಇಂಗ್ಲಿಷ್ ಸೇರಿದಂತೆ 10 ಭಾಷೆಗಳಲ್ಲಿ ಸಿಗಲಿದೆ ಎಂದು ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಕೆ. ಸತ್ಯನಾರಾಯಣ ರಾಜು ತಿಳಿಸಿದ್ದಾರೆ.

ನಿಧನ ವಾರ್ತೆ

ಎಸ್. ಕೃಷ್ಣ ಕುಮಾರ್



ಬೆಂಗಳೂರು: ಜ್ಯೋತಿಷ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ್ದ ಚಿಂತಕ, ಇಸ್ರೊ ಬಡಾವಣೆಯ ನಿವಾಸಿ ಎಸ್. ಕೃಷ್ಣ ಕುಮಾರ್ (73) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಕೃಷ್ಣ ಕುಮಾರ್ ಅವರು ಭಾರತೀಯ ವಿದ್ಯಾ ಭವನದಲ್ಲಿ ಜ್ಯೋತಿಷ ಕೋರ್ಸ್ ಪ್ರಾರಂಭಿಸಿದ್ದರು. ಬಿ.ವಿ. ರಾಮನ್ ಅವರು ಆರಂಭಿಸಿದ ಇಂಡಿಯನ್ ಕೌನ್ಸಿಲ್ ಆಫ್ ಅಸ್ಟ್ರೋಲಾಜಿಕಲ್ ಸೈನ್ಸ್‌ನ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಚಾಮರಾಜಪೇಟೆ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಹೆಸರಾಯಿತು ಕರ್ನಾಟಕ ಸುವರ್ಣ ಸಂಭ್ರಮ: ಅತಿಥಿಗಳು: ಎ.ಕೆ. ಗೌತಮ್, ರುದ್ರೇಶ್ ಅದರಂಗಿ, ಮಾವಳ್ಳಿ ಶಂಕರ್, ‘ಹೆಸರಾಯಿತು ಕರ್ನಾಟಕ–ಸುವರ್ಣ ಸಂಭ್ರಮ ಮತ್ತು ಕರ್ನಾಟಕ ರಾಜ್ಯೋತ್ಸವ’ ಉಪನ್ಯಾಸ: ಕೆ. ರಾಜಕುಮಾರ್, ‘ಕನ್ನಡ ನಾಡು–ನುಡಿಗೆ ಅನಕೃ ಕೊಡುಗೆ’ ಉಪನ್ಯಾಸ: ಜಿ. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಅ.ನ. ಕೃಷ್ಣರಾಯರ ಪ್ರತಿಮೆ ಆವರಣ, ಸಜ್ಜನರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 8

ಸಂಸ್ಥಾಪಕರ ದಿನ: ಅತಿಥಿಗಳು: ನಾರಾಯಣ್ ರಾವ್ ಮಾನೆ, ಅಶೋಕ್ ಆರ್. ಮಾನೆ, ವೈಶಾಲಿ ಎನ್. ಮಾನೆ, ಈಶ್ವರ್ ಎನ್. ಮಾನೆ, ದೀವೇಶ್ ಎ. ಮಾನೆ, ದೀಜೇಶ್ ಎ. ಮಾನೆ, ಆಯೋಜನೆ ಮತ್ತು ಸ್ಥಳ: ಬಿಎನ್‌ಎಂ ಎಜುಕೇಷನ್ ಇನ್‌ಸ್ಟಿಟ್ಯೂಷನ್ಸ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 8.45

‘ಬೊಮ್ಮನಹಳ್ಳಿಯ ಕಿಂದರಿಜೋಗಿ’ ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಸಿ.ಲಕ್ಷ್ಮಣ, ಆಯೋಜನೆ: ರಂಗಕಹಳೆ, ಸ್ಥಳ: ಸಂಭ್ರಮ ಸಭಾಂಗಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿ, ಡೇರಿ ವೃತ್ತ, ಮಧ್ಯಾಹ್ನ 1

‘ಶಂಕರನಾಗ್’ ನಾಟಕೋತ್ಸವ: ಅನಿಲ್ ಕುಮಾರ್ ಕುಪ್ಪೂರು ಅವರ ‘ನನ್ನೊಳಗಿನ ಕಡಲು’ ಪುಸ್ತಕ ಬಿಡುಗಡೆ: ಮಂಜುನಾಥ್, ಪುಸ್ತಕದ ಕುರಿತು: ಕೋಟಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ: ರಾಜಶೇಖರ್ ಮೂರ್ತಿ, ಉಪಸ್ಥಿತಿ: ಸಿದ್ಧಾರ್ಥ ಆನಂದ್ ಮಾಲೂರು, ‘ಗುಲಾಬಿ ಗ್ಯಾಂಗು 100ರ’ ಸಂಭ್ರಮ–ಸಂವಾದ: ವಿಜಯಮ್ಮ, ರಘುನಂದನ್ ಬಿ.ಆರ್., ಚಾಂದ್ ಪಾಷ, ‘ಬದುಕು ಜಟಕಾ ಬಂಡಿ’ ನಾಟಕ ಪ್ರದರ್ಶನ: ಪ್ರಸ್ತುತಿ: ಸಾತ್ವಿಕ ತಂಡ, ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, ರಚನೆ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

‘ಹೆಸರಾಯಿತು ಕರ್ನಾಟಕ-50’: ಅತಿಥಿ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30


ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME

I, **ARYAN KUTTAPPA KOOPADIRA,** R/at # 542, 2nd Floor, 8th Main Road, Koramangala 4th Block, Bangalore- 560034 have changed my name to **K ARYAN KUTTAPPA** vide affidavit dated 30-10-2023, before Notary Leelavathi S, Mysore. Henceforth I shall be called **K ARYAN KUTTAPPA** only.

CHANGE OF NAME

I, **KUTTAPPA KOOPADIRA,** R/at # 80, 1st Floor, Nakshatra, 2nd B Cross, 2nd Main, Vijayanagar 1st Stage, Near Treebo Jasmine Suites Hotel, Mysore- 570017, have changed my name to **KUTTAPPA K M** vide affidavit dated 30-10-2023, before Notary Leelavathi S, Mysore. Henceforth I shall be called **KUTTAPPA K M** only.

CHANGE OF NAME

I, **ROOPA KOOPADIRA KUTTAPPA** R/at # 80, 1st Floor, Nakshatra, 2nd B Cross, 2nd Main, Vijayanagar 1st Stage, Near Treebo Jasmine Suites Hotel, Mysore- 570017, have changed my name to **ROOPA KUTTAPPA** vide affidavit dated 30-10-2023, before Notary Leelavathi S, Mysore. Henceforth I shall be called **ROOPA KUTTAPPA** only.

CHANGE OF NAME

I, **BABU G,** R/at # K611, Sri Tirumala Sarovar Apartments, Singasandra, Hosur Main Road, Bangalore- 68, have changed our minor son's name from **PRANEETH B** to **B.R.TRIYAMBAK** vide affidavit dt. 11-11-2023, before Notary K.V.Mani, Bengaluru. Henceforth he shall be called **B.R.TRIYAMBAK** only.

I, SATISH_BHIMAJI GRAM PUROHIT S/o.Bhimashayan R Grampurohit R/a#85 2nd_C_Main RHCS`Layout Annapoorneshwari Nagar Nagarabhavi 2nd`Stage Bangalore-560091 have`changed my`Name_to SATISH BHIMASHAYAN GRAM_PUROHIT vide`affidavit dated:18.11.2023 before`Notary HR.Karunakara Bengaluru

I, UTHKALA SHEDTHY, W/o Karunakar Shetty, residing at No.1 E-Spring Seasons Flat No.001 RMV 2nd Stage Boopasandra Bangalore Karnataka-560094 have changed my name to UTHKALA SHETTY, vide affidavit dated:03-11-2023 Before Notary Jalandhara, Bangalore.

I, RASHMI SIDDHALING KONIN R/at T2304, Sri Ram Sameeksha Apartment, Kuvempu Nagar, Jalahalli East, Bangalore- 560013, have changed my daughter's name from SPOORTHI KONIN to SPOORTHI SIDDHALING KONIN vide affidavit dated: 20/11/2023 Before Notary Kundan Babu.M Bangalore.

I, SOMASHEKARA R.E residing at Ronur Village, Srinivaspura Taluk, Kolar District, Karnataka- 563135, have changed my name to R.E SOMASHEKAR, vide affidavit dated 17.11.2023 before Notary Mamatha N.K, Bangalore.

I, RASHMI N. residing at No. 44, 6th main 46th cross, 5th block Jayanagar, Bangalore-560041, have changed my name to RASHMI NARESH, vide affidavit dated 30.09.2023 before Notary Meera .H, Bangalore.

I, SANGEETHA Hiranaiah D/O, M Hirannaiah R/o F3g04, Godrej Eternity, Holiday Village Road, Mallasandra, Bengaluru - 560062 have changed my name to Sangeetha Hirannaiah for all purposes.

Lost

DOCUMENT LOST

I, Smt N. GANGAMMA, R/at # 209/Y 13th Cross 3rd Block, Rajajinagar, Bangalore -10 have lost my original Absoulte Sale Deed & Katha Certificate belongs to **1) Site No. L125, (PID NO.L-125), 6th Sector HSR Layout Bangalore 102. 2) No. 209/Y, (Old PID No.22-108-74), 3rd Block Rajajinagar, Bangalore 10. and 3) 218/Y, (Old PID No.22-108-15) 3rd Block Rajajinagar, Bangalore 10.** In this regard I have lodged an online missing police complaint vaide report No. BLRC2023111713. dated 17.11.2023. This documents lost during performing my husband's death ceremony karyas, finders may please be return to my above address.

ಕ್ರಯಪತ್ರ ಕಳೆದಿದೆ

ಬೆಂಗಳೂರು–562162 ಬೆಂಗಳೂರು ಉತ್ತರ ತಾ॥ ದಾಸನಪುರ ಹೋ॥, ಆಲೂರು ಅಂಚೆ ಹೆಗ್ಗಡದೇವನಪುರ ನಂ.24ರಲ್ಲಿ ವಾಸವಾಗಿರುವ ರಾಮಯ್ಯನವರ ಮಗನಾದ ಹೆಚ್.ಆರ್. ಶಿವಕುಮಾರ್ ಆದ ನಾನು ಈ ಮೂಲಕ ತಿಳಿಸುವುದೇನೆಂದರೇ ದಿ॥28/9/2023ರಂದು ದಾಸನಪುರ ಹೋ॥ ಮಾಕಳಿ ಗ್ರಾಮದ ಸರ್ವೆ ನಂ. 5/13ರಲ್ಲಿ ವಿಂಗಡಿಸಿರುವ ಸೈಟ್ ನಂ. 7ರ ಅಸಲಿ ಕ್ರಯಪತ್ರ ದಿ॥19/5/1971ರಂದು ಪಿ. ಗಂಗಯ್ಯರವರಿಂದ ಚನ್ನಪ್ಪನವರಿಗೆ ಹಾಗೂ ದಿ॥ 14/6/1973ರಂದು ಚನ್ನಪ್ಪನವರಿಂದ ಜಿ.ಪಿ.ಸಿದ್ದಪ್ಪರವರಿಗೆ ಮತ್ತು ದಿ॥22/05/1974ರಂದು ಜಿ.ಪಿ. ಸಿದ್ದಪ್ಪರವರಿಂದ ಟಿ.ವಿ.ರಾಮಾಚಾರ್‌ರವರಿಗೆ ಈ 3 ಅಸಲಿ ಕ್ರಯಪತ್ರಗಳು ದಿ॥ 28/9/2023 ರಂದು ಕಳೆದುಹೋಗಿರುತ್ತವೆ. ಈ ಮೂರು ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ದೂರವಾಣಿಗೆ ತಿಳಿಸುವುದು.
ಮೊ.ನಂ. 9108043358

DH DECCAN HERALD Classifieds More value, more impact
JOB HUNT ಪ್ರಜಾವಾಣಿ
Get your HIRING NEEDS answered
Get the right people for your company...
Book your Ad with us now !
JOB
www.dhclassifieds.com
BOOK NOW
For more details contact:
+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಸಾಧಕ ಕೃಷಿಕರಾದ ವಿ.ರೂಪ (ಕೋಲಾರ ಜಿಲ್ಲೆ), ಆರ್‌. ಸ್ವಾತಿ (ಚಿಕ್ಕಬಳ್ಳಾಪುರ ಜಿಲ್ಲೆ), ಟಿ.ಎನ್‌. ರವಿ (ಕೋಲಾರ ಜಿಲ್ಲೆ), ಡಿ.ಕೆ. ಚಂದ್ರಪ್ಪ (ಚಿಕ್ಕಬಳ್ಳಾಪುರ ಜಿಲ್ಲೆ) ಅವರನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಸೋಮವಾರ ನಡೆದ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಎಂ. ಚಂದ್ರೇಗೌಡ, ಟಿ.ಕೆ. ಪ್ರಭಾಕರ್‌ ಶೆಟ್ಟಿ, ಎನ್‌. ದಿನೇಶ್‌, ಆಧ್ಯಾತ್ಮಿಕ ಚಿಂತಕ ಮಹರ್ಷಿ ಆನಂದ್‌ ಗುರೂಜಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ ಸುರೇಶ್‌, ವ್ಯವಸ್ಥಾಪನಾ ಮಂಡಳಿ ಸದಸ್ಯ ಬಿ.ಎಸ್‌. ಉಲ್ಲಾಸ್‌, ಎಚ್‌.ಎಲ್‌. ಹರೀಶ್‌, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಡಾ.ಬಿ.ವೈ. ಶ್ರೀನಿವಾಸ್‌ ಮತ್ತು ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ವೆಂಕಟೇಶ್‌ ಇದ್ದರು —ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ

ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಮಟ್ಟದ 'ಪ್ರಗತಿಪರ ರೈತ', 'ರೈತ ಮಹಿಳೆ', ಈ ಜಿಲ್ಲೆಗಳ ತಾಲ್ಲೂಕು ಮಟ್ಟದಲ್ಲಿ ಅತ್ಯುತ್ತಮ 'ಯುವರೈತ' ಹಾಗೂ 'ರೈತ ಮಹಿಳೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವಸ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೆ ಪ್ರಶಸ್ತಿ ನೀಡಲಾಯಿತು.

ಮಹರ್ಷಿ ಆನಂದ್‌ ಗುರೂಜಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ್‌ ಇದ್ದರು. ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಂದ 15 ತಂಡಗಳಲ್ಲಿ 900 'ದೇಸಿ' ಕೋರ್ಸ್‌ ಕಲಿಯುತ್ತಿರುವ ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪಕ್ಕೆ ಮೆರುಗು ನೀಡಿದರು.

ಕೃಷಿ ಮೇಳದಲ್ಲಿ ಸೋಮವಾರ ವಿದ್ಯಾರ್ಥಿಗಳು ಕೃಷಿ ಪರಿಕರ ಯಂತ್ರದಿಂದ ಬಂದ ಸ್ಪ್ರೇ ನೀರಿನಲ್ಲಿ ಸಂಭ್ರಮಿಸಿದರು

ವಿದ್ಯಾರ್ಥಿಗಳು ಕೃಷಿ ಪರಿಕರಗಳನ್ನು ಕುತೂಹಲದಿಂದ ವೀಕ್ಷಿಸಿದರು ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಸರ್ವಋತು ಗಿಡಗಳು

ಮನೆ ತಾರಸಿಯಲ್ಲೇ ಬೆಳೆಯಬಲ್ಲ ವಿಯೆಟ್ನಾಂ ಸೂಪರ್‌ ಅರ್ಲಿ ಹಲಸಿನ ಗಿಡಗಳನ್ನು ಜನರು ಭಾರಿ ಸಂಖ್ಯೆಯಲ್ಲಿ ಖರೀದಿ ಮಾಡುತ್ತಿರುವುದು ಕಂಡು ಬಂತು. ಹಿತಕಾರಿ ನರ್ಸರಿಯಲ್ಲಿದ್ದ ಈ ಗಿಡಗಳು ಒಂದೇ ವರ್ಷಕ್ಕೆ ಹಣ್ಣು ನೀಡುತ್ತವೆ. 40–50 ವರ್ಷ ಫಲ ನೀಡುವ ಈ ಗಿಡಗಳು ಹೆಚ್ಚು ಎತ್ತರ ಬೆಳೆಯುವುದಿಲ್ಲ ಎಂದು ನರ್ಸರಿಯ ಆಡಳಿತ ನಿರ್ದೇಶಕ ಬೈರರೆಡ್ಡಿ ಎಂ.ಎಸ್‌. ಮಾಹಿತಿ ನೀಡಿದರು.

ಇದೇ ರೀತಿ ವರ್ಷ ಪೂರ್ತಿ ಕಾಯಿ ಬಿಡುವ ನಿಂಬೆ, ಮಾವು ಸಹಿತ ವಿವಿಧ ನರ್ಸರಿಗಳಲ್ಲಿ ಇದ್ದ ತರಹೇವಾರಿ ಗಿಡಗಳು ಗಮನ ಸೆಳೆದವು. ₹50 ಸಾವಿರ ಮೌಲ್ಯದ 'ಬ್ರೆಜಿಲಿಯನ್‌ ಟ್ರೀ ಗ್ರೇಪ್‌' ಗಿಡವನ್ನು ಜನರು ವೀಕ್ಷಿಸಿ ಅದರ ದರ ಕಂಡು ಹೌಹಾರಿ ಮುಂದಕ್ಕೆ ಸಾಗುತ್ತಿದ್ದರು.

JACK FRUIT - VIETNAM EARLY
(Artocarpus heterophyllus)
ಹಲಸು-ವಿಯೆಟ್ನಾಂ ಅರ್ಲಿ

ತಾರಸಿಯಲ್ಲೇ ಬೆಳೆಸಬಹುದಾದ 'ವಿಯೆಟ್ನಾಂ ಸೂಪರ್‌ ಅರ್ಲಿ' ಹಲಸು

ನಾಲ್ಕು ದಿನಗಳಲ್ಲಿ 15 ಲಕ್ಷ ಜನರ ಭೇಟಿ ● ₹5.28 ಕೋಟಿ ವಹಿವಾಟು

ಕೃಷಿ ಮೇಳಕ್ಕೆ ತೆರೆ

● ಬಾಲಕೃಷ್ಣ ಪಿ.ಎಚ್‌.

ಬೆಂಗಳೂರು: ನೂರಾರು ಮಳಿಗೆಗಳು, ಸಾವಿರಾರು ಬಗೆಯ ಪ್ರದರ್ಶನಗಳು, ಲಕ್ಷಾಂತರ ಮಂದಿ ನೋಡುಗರಿಂದ ತುಂಬಿ ಹೋಗಿದ್ದ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಸೋಮವಾರ ತೆರೆ ಬಿತ್ತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ಈ ಕೃಷಿ ಮೇಳದಲ್ಲಿ ನಾಲ್ಕು ದಿನಗಳಲ್ಲಿ ಒಟ್ಟು 15.67 ಲಕ್ಷ ರೈತರು, ವಿದ್ಯಾರ್ಥಿಗಳು, ಕೃಷಿ ಆಸಕ್ತರು ಭೇಟಿ ನೀಡಿದ್ದರು. ವಿವಿಧ ಮಳಿಗೆಗಳಲ್ಲಿ ₹ 5.28 ಕೋಟಿ ವಹಿವಾಟು ನಡೆಯಿತು.

ಬೆಲ್ಲದ ಪರಿಷೆ: ಆರೋಗ್ಯಕ್ಕೆ ಸಕ್ಕರೆಗಿಂತ ಒಳ್ಳೆಯದಾಗಿರುವ ಬೆಲ್ಲದ ಬಗ್ಗೆ ಜಾಗೃತಿ ಮೂಡಿಸಲು ಮಂಡ್ಯ ಕೃಷಿ ಇಲಾಖೆಯೂ ನಡೆಸಿದ ಬೆಲ್ಲದ ಪರಿಷೆ ಜನರ ಗಮನ ಸೆಳೆಯಿತು. ಮಳಿಗೆಯಲ್ಲಿ ರೋಲ್‌ ಬೆಲ್ಲ, ಗುಂಡು ಬೆಲ್ಲ, ಬಕೆಟ್‌ ಬೆಲ್ಲ, ಅಚ್ಚು ಬೆಲ್ಲ ಹೀಗೆ ತರಹೇವಾರಿ ಬೆಲ್ಲದುಂಡೆಗಳನ್ನು ಒಪ್ಪವಾಗಿ ಜೋಡಿಸಿದ್ದರು. ಜತೆಗೆ ಬೆಲ್ಲದಲ್ಲೇ ಮಾಡಿರುವ ಗೋಲಾಕಾರ, ಗೋಪುರ, ಗಾಣದ ಮನೆ, ಗಣಪತಿ ವಿಗ್ರಹ, ಗೌರಿ ವಿಗ್ರಹ, ದೀಪ ಇನ್ನಿತರ ಆಕೃತಿಗಳು ಗಮನ ಸೆಳೆದವು.

ಸೌದೆ ಒಲೆ: ಮನೆ ಮುಂದೆ ಎರಡು ತೆಂಗಿನ ಮರಗಳಿದ್ದರೆ ಸಾಕು, ಅವುಗಳಿಂದ ದೊರೆಯುವ ತೆಂಗಿನ ಕಾಯಿ ಸಿಪ್ಪೆಯಂತಹ ವಸ್ತುಗಳಿಂದಲೇ ಸುಲಭದಲ್ಲಿ ಬಿಸಿ ನೀರು ತಯಾರಿಸುವ ಬಾಯ್ಲರ್‌ಗಳು, ಕಡಿಮೆ ಸೌದೆಯಲ್ಲಿ ಒಲೆ ಉರಿಸಿ ಅಡುಗೆ ಮಾಡಬಹುದಾದ ಒಲೆಗಳ ಬಗ್ಗೆ ಜನರು ವಿವರ ಪಡೆದರು. ಫೀನಿಕ್ಸ್‌ ಪ್ರಾಡಕ್ಟ್‌ ಮಳಿಗೆಯಲ್ಲಿದ್ದ ಇಂಥ ಒಲೆಗಳ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿದರು. 'ಸಾಮಾನ್ಯವಾಗಿ ಅಡುಗೆ ತಯಾರಿಗಾಗಿ ಒಲೆ ಉರಿಸಲು ಬಳಸುವ ಸೌದೆಯ ಶೇ10ರಷ್ಟರಲ್ಲಿ ಈ ಹೊಸ ತಂತ್ರಜ್ಞಾನದ ಒಲೆಯಲ್ಲಿ ಅಡುಗೆ ಮಾಡಬಹುದು' ಎಂದು ಮಳಿಗೆಯ ಬಸವರಾಜ್‌ ಬೆಳಗಾವಿ ವಿವರಿಸಿದರು.

ವಿದೇಶಿ ಸೊಪ್ಪು ತರಕಾರಿ: ಪಾಲಿಹೌಸ್‌ನಲ್ಲಿ ಬೆಳೆಸಿದ್ದ ಕೇಲ್‌, ಲೀಕ್‌, ಸೆಲೆರಿ, ಪಾಕ್‌ ಚಾಯ್‌, ಐಸ್‌ಬರ್ಗ್‌ ಲೆಟ್ಯೂಸ್‌, ಕೆಂಪು ಲೆಟ್ಯೂಸ್‌, ಹಸಿರು ಲೆಟ್ಯೂಸ್‌, ರಾಕೆಟ್‌ ಲೆಟ್ಯೂಸ್‌, ರೊಮ್ಯಾನಿ ಲೆಟ್ಯೂಸ್‌, ಚೈನೀಸ್‌ ಎಲೆಕೋಸು, ಕೆಂಪು ಎಲೆಕೋಸು, ಬ್ರೊಕೋಲಿ ಯಂತಹ ತರಕಾರಿಗಳನ್ನು ಜನರು ಕುತೂಹಲದಿಂದ ವೀಕ್ಷಿಸಿ, ಮಾಹಿತಿ ಪಡೆದರು. ವಿವಿಧ ರೋಗಗಳಿಗೆ ಈ ಸೊಪ್ಪು-ತರಕಾರಿಗಳು ಉತ್ತಮ ಔಷಧವಾಗುತ್ತವೆ ಎಂದು ಕೃಷಿ ವಿಜ್ಞಾನಿಗಳು ಮಾಹಿತಿ ನೀಡಿದರು.

ಹಸುಗಳಿಗೂ ಹಾಸಿಗೆ!

ಕೊಟ್ಟಿಗೆಯಲ್ಲಿ ಸೊಪ್ಪು, ಹುಲ್ಲು ಹರಡಿ ಹಸು, ಎಮ್ಮೆಗಳನ್ನು ಸಾಕಲಾಗುತ್ತಿತ್ತು. ಮುಂದೆ ಕಲ್ಲು ಹಾಸಿನ ನೆಲ, ಸಿಮೆಂಟ್‌ ನೆಲಗಳಲ್ಲಿ ಸಾಕುವ ಪದ್ಧತಿ ರೂಢಿಯಾಗಿತ್ತು. ಇದೀಗ ಹಸುಗಳಿಗೂ ಹಾಸಿಗೆ ಬಂದಿದೆ!

ಕೃಷಿ ಮೇಳದಲ್ಲಿದ್ದ ಶಿಡ್ಲಘಟ್ಟ ಪಬ್ಲಿಕ್ಸ್‌ ಆಗ್ರೊ ಮಳಿಗೆಯಲ್ಲಿ ಈ ರಬ್ಬರ್‌ ಹಾಸಿಗೆಗಳ ಬಗ್ಗೆಯೇ ಮಾಹಿತಿ ಪಡೆಯಲು ರೈತರು ಮುಗಿಬಿದ್ದಿದ್ದರು. ಈ ಹಾಸಿಗೆಗಳಿಗೆ ಹಾಲು ಉತ್ಪಾದಕರ ಸೊಸೈಟಿಯಲ್ಲಿ ಸಬ್ಸಿಡಿಯೂ ಸಿಗುತ್ತದೆ. ಜಾನುವಾರುಗಳ ಗೊರಸಿಗೆ ಗಾಯವಾಗದ, ಜಾರಿ ಬೀಳದ ಈ ಹಾಸಿಗೆಯಲ್ಲಿ ಸಗಣಿ, ಗಂಜಲವನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದು ಎಂದು ಮಳಿಗೆಯ ಎಂ.ಎಸ್‌. ಮನು ಮಾಹಿತಿ ನೀಡಿದರು.

'ಬೆಸ್ಕಾಂ' ವಿರುದ್ಧ ನಾಗರಿಕರ ಆಕ್ರೋಶ

ವಿದ್ಯುತ್‌ ತಂತಿ ತುಳಿದು ತಾಯಿ–ಮಗು ಸಾವು: ಕರೆ ಮಾಡಿದರೂ ಸ್ಥಳಕ್ಕೆ ಬಾರದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್‌ ತಂತಿ ತುಳಿದು ತಾಯಿ – ಮಗು ಮೃತಪಟ್ಟ ಪ್ರಕರಣದಲ್ಲಿ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದ್ದು, ಘಟನೆ ಬಳಿಕ ಕರೆ ಮಾಡಿದರೂ ಬೆಸ್ಕಾಂ ಸ್ಪಂದಿಸಲಿಲ್ಲ ಎಂದು ಸ್ಥಳೀಯರು ದೂರುತ್ತಿದ್ದಾರೆ.

ಈ ಘಟನೆಯಿಂದ ಆತಂಕಗೊಂಡಿರುವ ಸ್ಥಳೀಯರು, ತುಂಡರಿಸಿ ಬೀಳುವ ಹಂತದಲ್ಲಿರುವ ವಿದ್ಯುತ್‌ ತಂತಿಗಳು ಹಾಗೂ ಬಾಗಿರುವ ವಿದ್ಯುತ್‌ ಕಂಬಗಳ ಬದಲಾವಣೆಗಾಗಿ ಒತ್ತಾಯಿಸುತ್ತಿದ್ದಾರೆ.

'ಸೌಂದರ್ಯ ಹಾಗೂ ಅವರ 9 ತಿಂಗಳ ಮಗು ಮೃತಪಟ್ಟ ಜಾಗ, ಬೆಸ್ಕಾಂ ಕಚೇರಿಯಿಂದ ಕೇವಲ 100 ಮೀಟರ್‌ ದೂರದಲ್ಲಿದೆ. ಘಟನೆ ಗಮನಕ್ಕೆ ಬರುತ್ತಿದ್ದಂತೆ ಸ್ಥಳೀಯರು ಬೆಸ್ಕಾಂ ಕಚೇರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಆದರೆ, ತುರ್ತಾಗಿ ಯಾರೊಬ್ಬರೂ ಸ್ಥಳಕ್ಕೆ ಬರಲಿಲ್ಲ' ಎಂದು ಸ್ಥಳೀಯರು ಆರೋಪಿಸಿದರು.

ನಸುಕಿನಲ್ಲಿ ಸಾವು: 'ಸೌಂದರ್ಯ, ತಮ್ಮ ಪತಿ ಸಂತೋಷ್‌ಕುಮಾರ್‌ ಹಾಗೂ ಮಗು ಸುವಿಕ್ಷಾ ಲಿಯಾ ಜೊತೆಯಲ್ಲಿ ನಸುಕಿನ 3.50ರ ಸುಮಾರಿಗೆ ಹೋಪ್‌ ಫಾರ್ಮ್‌ ಜಂಕ್ಷನ್‌ನ ತಂಗುದಾಣಕ್ಕೆ ಬಸ್‌ನಲ್ಲಿ ಬಂದಿಳಿದಿದ್ದರು. ತಂಗುದಾಣದಿಂದ ಒಂದೂವರೆ ಕಿ.ಮೀ ದೂರದಲ್ಲಿರುವ ಎ.ಕೆ.ಗೋಪಾಲ್‌ ಕಾಲೊನಿಯಲ್ಲಿ ಪೋಷಕರ ಮನೆ ಇದ್ದು, ಅಲ್ಲಿಗೆ ನಡೆದುಕೊಂಡು ಹೊರಟಿದ್ದರು ಎಂದು ಸ್ಥಳೀಯರು ಹೇಳಿದರು.

'ಪಾದಚಾರಿ ಮಾರ್ಗದಲ್ಲಿ ದೀಪ ವಿರಲಿಲ್ಲ. ಪತಿ ಸಂತೋಷ್‌ಕುಮಾರ್‌ ಕತ್ತಲಲ್ಲೇ ಮುಂದೆ ಹೋಗುತ್ತಿದ್ದರು, ಸೌಂದರ್ಯ ಮಗು ಎತ್ತಿಕೊಂಡು ಅವರ ಹಿಂದೆ ಸಾಗುತ್ತಿದ್ದರು. ಕತ್ತಲಾಗಿದ್ದರಿಂದ ವಿದ್ಯುತ್‌ ತಂತಿ ಗಮನಿಸದ ಸೌಂದರ್ಯ, ಅದರ ಮೇಲೆ ಕಾಲಿಟ್ಟದ್ದರು. ಕ್ಷಣಮಾತ್ರದಲ್ಲಿ ವಿದ್ಯುತ್‌ ತಗುಲಿ ಬಟ್ಟೆಗೆ ಬೆಂಕಿ ಹೊತ್ತಿಕೊಂಡು ಉರಿಯಲಾರಂಭಿಸಿತ್ತು. ಪತಿ, ರಕ್ಷಣೆಗೆ ಹೋಗುವಷ್ಟರಲ್ಲಿ ಬೆಂಕಿಯ ಕೆನ್ನಾಲಗೆ ಹೆಚ್ಚಾಗಿತ್ತು. ರಕ್ಷಣೆಗಾಗಿ ಪತಿ ಚೀರಾಡಿದ್ದರು. ದಾರಿಹೋಕರು ಸ್ಥಳಕ್ಕೆ ಬಂದರೂ ತಾಯಿ–ಮಗುವನ್ನು ರಕ್ಷಿಸಲು ಆಗಲಿಲ್ಲ. ತಾಯಿ–ಮಗು ಸ್ಥಳದಲ್ಲೇ ಮೃತಪಟ್ಟರು' ಎಂದು ಸ್ಥಳೀಯರು ಮಾಹಿತಿ ನೀಡಿದರು.

7 ಗಂಟೆಗೆ ಬಂದ ಬೆಸ್ಕಾಂ ಸಿಬ್ಬಂದಿ: 'ಘಟನೆ ಸಂಭವಿಸಿದ ಕೆಲ ನಿಮಿಷಗಳಲ್ಲೇ ಬೆಸ್ಕಾಂ ಕಚೇರಿಗೆ ಮಾಹಿತಿ ನೀಡಲಾಗಿತ್ತು. ಸಹಾಯವಾಣಿಗೂ ತಿಳಿಸಲಾಗಿತ್ತು. ಆದರೆ, ಬೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಬರಲಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ಬೆಳಗಾಗುವವರೆಗೂ ತಾಯಿ–ಮಗುವಿನ ಮೃತದೇಹಗಳು ಪಾದಚಾರಿ ಮಾರ್ಗದಲ್ಲಿದ್ದವು. ಬೆಳಿಗ್ಗೆ 6.30ಕ್ಕೆ ಕಾಡುಗೋಡಿ ಠಾಣೆ ಪೊಲೀಸರು ಸ್ಥಳಕ್ಕೆ ಬಂದರು. ಬೆಳಿಗ್ಗೆ 7 ಗಂಟೆಗೆ ಬೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಬಂದರು. ಅಧಿಕಾರಿಗಳ ವರ್ತನೆಯನ್ನು ಖಂಡಿಸಿದ್ದ ಸ್ಥಳೀಯರು, ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು' ಎಂದು ಹೇಳಿದರು.

ಮುಗಿಲು ಮುಟ್ಟಿದ ಆಕ್ರಂದನ: ತಾಯಿ ಹಾಗೂ ಮಗುವಿನ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ನಂತರ, ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು. ಆಸ್ಪತ್ರೆ ಬಳಿ ಸಂಬಂಧಿಕರ ಆಕ್ರಂದನ ಮುಗಿಲುಮುಟ್ಟಿತ್ತು.

'ಬೆಂಗಳೂರು ಸಾಫ್ಟ್‌ವೇರ್‌ ಕಂಪನಿಗಳ ನಗರ ಎನ್ನುತ್ತಾರೆ. ಆದರೆ, ಇಲ್ಲಿ ಪಾದಚಾರಿ ಮಾರ್ಗದಲ್ಲಿ ವಿದ್ಯುತ್‌ ತಂತಿಗಳು ತುಂಡರಿಸಿ ಬಿದ್ದರೂ ತೆಗೆಯುವವರು ಇಲ್ಲ. ನನ್ನ ಪತ್ನಿ ಹಾಗೂ ಮಗುವಿಗೆ ಬಂದ ಸ್ಥಿತಿ ಯಾರಿಗೂ ಬರಬಾರದು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು' ಎಂದು ಸೌಂದರ್ಯ ಪತಿ ಸಂತೋಷ್‌ ಕುಮಾರ್‌ ಒತ್ತಾಯಿಸಿದರು.

ಬೆಸ್ಕಾಂ ನಿರ್ಲಕ್ಷ್ಯ; 6 ವರ್ಷದಲ್ಲಿ 70 ಸಾವು

ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಳೆದ 6 ವರ್ಷಗಳಲ್ಲಿ ಸಂಭವಿಸಿದ್ದ ವಿದ್ಯುತ್‌ ಅವಘಡಗಳಲ್ಲಿ 70 ಮಂದಿ ಮೃತಪಟ್ಟಿದ್ದು, 11 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

'ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ತುಮಕೂರು, ಚಿತ್ರದುರ್ಗ ಹಾಗೂ ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ವಿದ್ಯುತ್‌ ಅವಘಡಗಳು ಮೇಲಿಂದ ಮೇಲೆ ಸಂಭವಿಸುತ್ತಿವೆ. ಎಲ್ಲ ಕಡೆಯಲ್ಲೂ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ' ಎಂದು ಸಾರ್ವಜನಿಕರು ದೂರಿದರು.

'ತುಂಡರಿಸಿ ಬೀಳುವ ತಂತಿಗಳು, ಮನೆ ಮೇಲೆ ಹಾದು ಹೋಗಿರುವ ತಂತಿಗಳು, ಕಂಬಗಳಲ್ಲಿ ಪ್ರವಹಿಸುವ ವಿದ್ಯುತ್‌ ಹಾಗೂ ಇತರೆ ಪ್ರಕಾರಗಳಲ್ಲಿ ಅವಘಡಗಳು ಸಂಭವಿಸುತ್ತಿವೆ. ಇಂಥ ಅವಘಡ ತಡೆಗೆ ಬೆಸ್ಕಾಂ ಸಮರ್ಪಕ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ' ಎಂದು ಆರೋಪಿಸಿದರು.

ಬೆಸ್ಕಾಂ ನೌಕರರ ಬಂಧನ, ಬಿಡುಗಡೆ

ಬೆಂಗಳೂರು: ತಾಯಿ–ಮಗು ಮೃತಪಟ್ಟ ಪ್ರಕರಣದಲ್ಲಿ ಬೆಸ್ಕಾಂನ ಐವರು ನೌಕರರನ್ನು ಬಂಧಿಸಿದ್ದ ಕಾಡುಗೋಡಿ ಠಾಣೆ ಪೊಲೀಸರು, ಠಾಣೆ ಜಾಮೀನು ಮೇಲೆ ಎಲ್ಲರನ್ನೂ ಬಿಟ್ಟು ಕಳುಹಿಸಿದ್ದಾರೆ.

ನಿರ್ಲಕ್ಷ್ಯ ಆರೋಪದಡಿ ಕಾರ್ಯ ನಿರ್ವಾಹಕ ಎಂಜಿನಿಯರ್‌ ಶ್ರೀರಾಮ್‌, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ ಸುಬ್ರಹ್ಮಣ್ಯ, ಸಹಾಯಕ ಎಂಜಿನಿಯರ್‌ ಚೇತನ್‌, ಕಿರಿಯ ಎಂಜಿನಿಯರ್‌ ರಾಜಣ್ಣ ಹಾಗೂ ಸ್ಟೇಷನ್‌ ಆಪರೇಟರ್‌ ಮಂಜುನಾಥ್‌ ಅವರ ವಿರುದ್ಧ ಎಫ್‌ಐಆರ್‌ ದಾಖಲಾಗಿತ್ತು.

'ಆರೋಪಿಗಳ ವಿರುದ್ಧ ನಿರ್ಲಕ್ಷ್ಯ (304ಎ) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇದೊಂದು ಠಾಣೆ ಜಾಮೀನು ಇರುವ ಪ್ರಕರಣ. ಹೀಗಾಗಿ, ಆರೋಪಿಗಳ ಹೇಳಿಕೆ ಪಡೆದು ಬಿಟ್ಟು ಕಳುಹಿಸಲಾಗಿದೆ. ಜೊತೆಗೆ, ಪುನಃ ವಿಚಾರಣೆಗೆ ಬರುವಂತೆ ನೋಟಿಸ್‌ ಸಹ ನೀಡಲಾಗಿದೆ' ಎಂದು ಪೊಲೀಸ್‌ ಮೂಲಗಳು ಹೇಳಿವೆ.

ಬೆಸ್ಕಾಂ ನಿರ್ಲಕ್ಷ್ಯ
ಯಾವ ವರ್ಷ, ಎಷ್ಟು ಸಾವು

ವರ್ಷ	ಸಾವು	ಗಾಯಾಳು
2018-19	11	1
2019-20	10	3
2020-21	9	3
2021-22	13	2
2022-23	19	2
2023-24 (ಅಕ್ಟೋಬರ್‌ ವರೆಗೆ)	8	0



ತಾಯಿ–ಮಗು ಮೃತಪಟ್ಟ ಹೋಪ್‌ ಫಾರ್ಮ್‌ ಜಂಕ್ಷನ್‌ ಬಳಿಯ ಪಾದಚಾರಿ ಮಾರ್ಗ —ಪ್ರಜಾವಾಣಿ ಚಿತ್ರ

ತಾಯಿ ಮನೆಗೆ ಶಾಸಕಿ ಭೇಟಿ

ಕೆ.ಆರ್‌.ಪುರ: ಮೃತ ಸೌಂದರ್ಯ ಅವರ ತಾಯಿ ರಾಜೇಶ್ವರಿ ಅವರ ಮನೆಗೆ ಮಹದೇವಪುರ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರು ಸೋಮವಾರ ಭೇಟಿ ನೀಡಿ, ಸಾಂತ್ವನ ಹೇಳಿದರು.

'ಮಗಳ ಸಾವಿಗೆ ನ್ಯಾಯ ಬೇಕು' ಎಂದು ಒತ್ತಾಯಿಸಿದ ತಾಯಿ ರಾಜೇಶ್ವರಿ, 'ಬಡವರ ಜೀವದ ಜೊತೆ ಚೆಲ್ಲಾಟ ಆಡುತ್ತಿರುವ ಹಿರಿಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸದೇ, ಕಿರಿಯ ಸಿಬ್ಬಂದಿ ಮೇಲೆ ಕ್ರಮ ಕೈಗೊಂಡಿರುವುದು ನ್ಯಾಯ ಸಮ್ಮತವಲ್ಲ. ಹಿರಿಯ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು' ಎಂದು ಆಗ್ರಹಿಸಿದರು.

ಶಾಸಕಿ ಮಂಜುಳಾ ಮಾತನಾಡಿ, 'ಮುಂದಿನ ದಿನಗಳಲ್ಲಿ ಈ ರೀತಿಯ ಅವಘಡಗಳು ಜರುಗದಂತೆ ಎಚ್ಚರಿಕೆ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪ್ರಕರಣವನ್ನು ನ್ಯಾಯಬದ್ಧವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ತಾಯಿ–ಮಗು ಸಾವಿಗೆ ನ್ಯಾಯ ಒದಗಿಸಲಾಗುವುದು' ಎಂದರು.



ಬಸವನಗುಡಿಯ ವಾಣಿ ವಿಲಾಸ ರಸ್ತೆ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್‌ ಕಂಬ ಹಾಗೂ ಬೀದಿದೀಪ ಕಂಬಕ್ಕೆ ಅಪಾಯಕಾರಿಯಾಗಿ ಸುತ್ತಲಾಗಿರುವ ಕೇಬಲ್‌ಗಳು ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್‌

ಕೇಬಲ್‌ ಸಂಕಷ್ಟ..

ಚಿತ್ರ ಕಳುಹಿಸಿ

ನಗರದ ಹಲವೆಡೆ ವಿದ್ಯುತ್‌ ಕಂಬಗಳಿಗೆ ಕೇಬಲ್‌ಗಳನ್ನು ಸುತ್ತಲಾಗಿದೆ. ಪಾದಚಾರಿ ಮಾರ್ಗದಲ್ಲಿ ನಾಗರಿಕರಿಗೆ ಇವು ಸಂಕಷ್ಟ ಉಂಟುಮಾಡಿವೆ. ಅಂತಹ ಅಪಾಯಕಾರಿ ಸ್ಥಳಗಳ ಚಿತ್ರಗಳನ್ನು ವಿಳಾಸದೊಂದಿಗೆ ವಾಟ್ಸ್‌ಆ್ಯಪ್‌ ಮಾಡಿ...

96060 38256

VISIT
IMTEX FORMING 2024
International Forming Technology Exhibition
19 - 23 January, 2024 @ BIEC, Bengaluru
Asia's Largest Exhibition on Metal Forming and Manufacturing Technologies
Key Highlights
Exhibition Space 45000 Sqm
Participating Countries: 18
Interntional Seminar on Forming Technology
Industry Trade Delegation Visits
Exhibitors 500+
i2 Academia Pavilion
Jagruti - IMTMA Youth Program
Witness latest technolgies and 'LIVE' Demo of Machines
Concurrent Shows
Co-located Shows
To Register
www.imtex.in
International Seminar on Forming Technology on 18th January 2024, BIEC, Bengaluru.


MDPH
Zed Black
ಪ್ರೀಮಿಯಮ್ ಅಗರಬತ್ತಿಗಳು ಮತ್ತು ಧೂಪ
Premium Incense Sticks
3-IN-1
ಪ್ರಾರ್ಥನೆಯು ಸ್ವೀಕೃತವಾಗಲಿದೆ
MS Dhoni
Brand Ambassador, Zed Black
SCAN TO WATCH ZED BLACK'S NEW TVC
Follow us on: @zedblackin

ಕ್ಷೇಮ ಕುಶಲ



ಅಂಗಕಸಿಯ ನಂತರದ ಜೀವನ

ಡಾ. ಶ್ರೀನಿವಾಸ ಹರಪನಹಳ್ಳಿ

ಇತ್ತೀಚಿನ ದಿನಗಳಲ್ಲಿ ಆರೋಗ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ಬೆಳವಣಿಗೆಗಳನ್ನು ನಾವು ಕಾಣುತ್ತಿದ್ದೇವೆ. ಒಂದೆಡೆ ಭಯಂಕರ ರೋಗಗಳಿಗೆ ಹೊಸ ಹೊಸ ಚಿಕಿತ್ಸಾವಿಧಾನಗಳ ಅವಿಷ್ಕಾರಗಳಾಗುತ್ತಿವೆ. ಇನ್ನೊಂದೆಡೆ ಹೊಸ ರೋಗಗಳೇ ಜನರನ್ನು ಕಾಡುತ್ತಿವೆ. ಸುಧಾರಿತ ಜೀವನಶೈಲಿ ಮತ್ತು ಶಕ್ತಿಶಾಲಿ ಔಷಧಗಳಿಂದ ಸಾಂಕ್ರಾಮಿಕ ರೋಗಗಳು ಹತೋಟಿಗೆ ಬಂದಿವೆಯಾದರೂ ಅಂಗಾಂಗವೈಫಲ್ಯದಂತಹ ತೊಂದರೆಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಆರೋಗ್ಯವಂತರು ಹೇಗೆ ತಮ್ಮ ಜೀವಿತಾವಧಿಯನ್ನು ಆರೋಗ್ಯವಾಗಿ ಕಳೆಯಲು ಮುನ್ನೆಚ್ಚರಿಕೆ ವಹಿಸಿ ಬಾಳಬೇಕೋ ಹಾಗೆಯೇ ಆರೋಗ್ಯಸಮಸ್ಯೆಯಿರುವವರು ಕೂಡ ಜಾಗರೂಕತೆಯಿಂದ ತಮ್ಮ ದೈಹಿಕ ಆರೋಗ್ಯವನ್ನು ಕಾಯ್ದಿಟ್ಟುಕೊಳ್ಳಬೇಕಾಗುತ್ತದೆ.

ಈ ರೀತಿ ಜಾಗರೂಕತೆ ವಹಿಸಬೇಕಾದ ಒಂದು ವರ್ಗವೆಂದರೆ ಅಂಗಾಂಗಗಳ ಕಸಿ ಮಾಡಿಸಿಕೊಂಡವರು. ಅದು ಯಕೃತ್ತಿನ ಕಸಿಯಾಗಿರಬಹುದು, ಮೂತ್ರಜನಕಾಂಗ (ಕಿಡ್ನಿ) ಕಸಿಯಾಗಿರಬಹುದು, ಹೃದಯ, ಶ್ವಾಸಕೋಶ ಅಥವಾ ಇನ್ನಾವುದೇ ಅಂಗಗಳ ಮರುಜೋಡಣೆಯಾಗಿರಬಹುದು. ಅಂಗಾಂಗವೈಫಲ್ಯದಂತಹ ತೊಂದರೆಗಳು ದಿನೇದಿನೇ ಹೆಚ್ಚಾಗುತ್ತಾ ಇರುವುದರಿಂದ ಮುಂದಿನ ವರ್ಷಗಳಲ್ಲಿ ಅಂಗಕಸಿ ಮಾಡಿಸಿಕೊಂಡ ರೋಗಿಗಳ ಸಂಖ್ಯೆ ಗಣನೀಯವಾಗಿ ಏರುವ ಸಾಧ್ಯತೆ ಇದೆ. ಭಾರತದಂತಹ ದೇಶದಲ್ಲಿ ಇಂತಹ ರೋಗಿಗಳ ಕಾಳಜಿ ಒಂದು ಸವಾಲೇ ಸರಿ. ಅಲ್ಲದೇ ಈ ವರ್ಗದ ರೋಗಿಗಳು ಉಳಿದ ರೋಗಿಗಳಿಗಿಂತ ಕೊಂಚ ಭಿನ್ನವಾಗಿರುತ್ತಾರೆ. ಇವರು ತಮ್ಮ ಆರೋಗ್ಯದ ಸಲುವಾಗಿ ಕೆಲವು ವಿಶೇಷ ಸಲಹೆ-ಸೂಚನೆಗಳನ್ನು ಪಾಲಿಸಬೇಕಾಗುತ್ತದೆ.

ಮೊದಲನೆಯದಾಗಿ ಅಂಗಾಂಗವೈಫಲ್ಯವನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡುವುದೇ ಬಲುದೊಡ್ಡ ಕೆಲಸ. ಬಹುತೇಕ ರೋಗಿಗಳಲ್ಲಿ ರೋಗವು ನಿಧಾನವಾಗಿ ಮುಂದುವರೆಯುವುದರಿಂದ ಆರಂಭಿಕ ಹಂತಗಳಲ್ಲಿ ಪತ್ತೆ ಹಚ್ಚುವುದು ಕಷ್ಟ. ಪತ್ತೆಯಾದಾಗ ಅನೇಕ ಬಾರಿ ರೋಗ ಉಲ್ಬಣಾವಸ್ಥೆಗೆ ತಲುಪಿರುವ ಸಾಧ್ಯತೆಗಳೇ ಜಾಸ್ತಿ. ಹುಟ್ಟಿನಿಂದಲೇ ಬರುವ ಕೆಲವು ಕಾಯಿಲೆಗಳು ಯುವಜನರಲ್ಲಿ ಅಂಗಾಂಗವೈಫಲ್ಯವನ್ನು ಉಂಟುಮಾಡಿದರೆ, ಬಿಪಿ, ಡಯಾಬಿಟೀಸ್, ಸೋಂಕು ಮತ್ತು ಕೆಲ ರಾಸಾಯನಿಕಗಳು ವಯಸ್ಕರಲ್ಲಿ ಅಂಗಾಂಗವೈಫಲ್ಯಕ್ಕೆ ಮುಖ್ಯ ಕಾರಣಗಳಾಗಿವೆ. ಕೆಲವೇ ವಿಶೇಷ ಸಂದರ್ಭಗಳಲ್ಲಿ ನಿಖರ ಚಿಕಿತ್ಸೆಯ ಮೂಲಕ ಕಿಡ್ನಿ, ಯಕೃತ್ತು ಮುಂತಾದ ಅಂಗಗಳ ವೈಫಲ್ಯವನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಉಳಿದಂತೆ ಈ ರೋಗಿಗಳು ಕಿಡ್ನಿಕಸಿ, ಯಕೃತ್ತಿನಕಸಿಯಂತಹ ಬೃಹತ್ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ಅಲ್ಲಿಯವರೆಗೂ ದೇಹದಲ್ಲಿನ ಕಲ್ಮಶವನ್ನು ಹೊರಹಾಕಲು ‘ಡಯಾಲಿಸಿಸ್’, ಹೊಟ್ಟೆಯಲ್ಲಿ ನೀರು ತುಂಬಿದಾಗ ‘ಪೆರಿಟೋನಿಯಲ್ ಟ್ಯಾಪ್’ ಮುಖಾಂತರ ನೀರು ತೆಗೆಯುವುದು ಮುಂತಾದ ಚಿಕಿತ್ಸೆಗಳನ್ನು ನಿಯಮಿತವಾಗಿ ನೀಡಬೇಕಾಗುತ್ತದೆ. ಪದೇಪದೇ ಆಸ್ಪತ್ರೆಗೆ ಅಡ್ಮಿಟ್ ಆಗುವುದರಿಂದ ರೋಗಿಗಳು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ.

ಅಂಗಕಸಿ ಮಾಡಿಸಿಕೊಂಡ ನಂತರ ರೋಗಿಗಳು ತಮ್ಮ ದೈನಂದಿನ ಜೀವನದಲ್ಲಿ ಕೆಲವು ಮಾರ್ಪಾಡುಗಳಿಗೆ ಸಜ್ಜಾಗಬೇಕಾಗುತ್ತದೆ. ಏಕೆಂದರೆ ಅಂಗಕಸಿಯು ರೋಗಿಗಳಿಗೆ ಒಂದು ವಿಧದಲ್ಲಿ ಮರುಜನ್ಮವನ್ನೇ ನೀಡುತ್ತದೆ. ಆದ್ದರಿಂದ ಕಸಿಮಾಡಿಸಿಕೊಂಡ ಅಂಗ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ತುಂಬ ಮುಖ್ಯ.



ಆಹಾರಪದ್ಧತಿ: ಯಾವಾಗಲೂ ಶುದ್ಧ ಹಾಗೂ ಬೇಯಿಸಿದ ಆಹಾರವನ್ನೇ ಸೇವಿಸಬೇಕು. ಪ್ರೊಟೀನ್‌ಯುಕ್ತ ಆಹಾರಕ್ಕೆ ಹೆಚ್ಚು ಒತ್ತು ಕೊಡಬೇಕು. ಹಸಿ ತರಕಾರಿಗಳಲ್ಲಿ ಬ್ಯಾಕ್ಟೀರಿಯಾಗಳಿರುವ ಸಾಧ್ಯತೆ ಹೆಚ್ಚು. ಸಂಸ್ಕರಿತ ಆಹಾರದಲ್ಲಿ ಪೋಷಕಾಂಶಗಳು ವಿರಳವಾಗಿರುತ್ತವೆ. ಆದ್ದರಿಂದ ಇಂತಹ ಆಹಾರದ ಬಗ್ಗೆ ಜಾಗ್ರತೆಯಾಗಿರಬೇಕು. ಕುಗ್ಗಿರುವ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಉತ್ತಮ ಆಹಾರಕ್ಕಿಂತ ಒಳ್ಳೆಯ ವಿಧಾನ ಮತ್ತೊಂದಿಲ್ಲ.

ರೋಗನಿರೋಧಕ ಶಕ್ತಿ: ಅಂಗಕಸಿಯ ನಂತರ ನೀಡುವ ಕೆಲವು ಔಷಧಗಳು ರೋಗಿಯ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತವೆ. ಆದರೆ ದೇಹವು ಕಸಿಯನ್ನು ತಿರಸ್ಕರಿಸದಿರಲು ಈ ಔಷಧಗಳು ಬೇಕೇ ಬೇಕು. ಹಾಗಾಗಿ ರೋಗಿಯು ಜನಸಂದಣಿಯಲ್ಲಿ, ಇನ್ನಿತರೇ ರೋಗಿಗಳ ನಡುವೆ ಬೆರೆಯಬಾರದು. ಸದಾ ಮಾಸ್ಕ್ ಅಥವಾ ಸ್ಯಾನಿಟೈಸರ್ ಬಳಕೆಯ ಮುಖಾಂತರ ರೋಗಾಣುಗಳು ದೇಹ ಪ್ರವೇಶಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು.

ಗರ್ಭ ಧರಿಸುವಿಕೆ: ಮಹಿಳಾರೋಗಿಗಳು ಅಂಗಕಸಿಯ ನಂತರ ಸುಮಾರು ಎರಡು ವರ್ಷದವರೆಗೆ ಗರ್ಭಧರಿಸುವುದನ್ನು ಮುಂದೂಡಬೇಕು. ಈ ಸಮಯದಲ್ಲಿ ದೇಹವು ಕಸಿಯನ್ನು ತಿರಸ್ಕರಿಸುವ ಸಾಧ್ಯತೆ ಇರುವುದರಿಂದ ಗರ್ಭಾವಸ್ಥೆಯಲ್ಲಿ ಆರೋಗ್ಯ ಏರುಪೇರಾಗುವ ಸಂಭವ ಹೆಚ್ಚು.

ವರ್ಜನೆ: ಧೂಮಪಾನ, ಮದ್ಯಪಾನಗಳನ್ನು ಸಂಪೂರ್ಣವಾಗಿ ವರ್ಜಿಸುವುದು ಬರಿ ಆರೋಗ್ಯಕರವಷ್ಟೇ ಅಲ್ಲ, ಇವು ಕ್ಯಾನ್ಸರ್ ನಂತಹ ಮಹಾಮಾರಿಯನ್ನು ದೂರವಿರಿಸಲು ಅತ್ಯವಶ್ಯಕ. ಇದರ ಜೊತೆಗೆ ರೋಗಿಗಳು ಕೃತಕ ರಾಸಾಯನಿಕಗಳು ಹೇರಳವಾಗಿರುವ ಬಣ್ಣಗಳು, ಕೀಟನಾಶಕಗಳು ತಂಪುಪಾನೀಯಗಳಿಂದ ದೂರವಿರಬೇಕು.

ದೈಹಿಕ ಚಟುವಟಿಕೆ: ಶಸ್ತ್ರಚಿಕಿತ್ಸೆಯ ಗಾಯ ಮಾಸಿದನಂತರ ನಿಧಾನವಾಗಿ ಓಡಾಟ, ವ್ಯಾಯಾಮದಂತಹ ಚಟುವಟಿಕೆಗಳನ್ನು ಪ್ರಾರಂಭಿಸಬಹುದು. ದೇಹವು ಸುಸ್ಥಿತಿಯಲ್ಲಿರಲು ಇದು ಅವಶ್ಯಕ. ಹೀಗೆಂದು ದೇಹವನ್ನು ಅತಿಯಾಗಿ ದಂಡಿಸಲೂಬಾರದು. ಚಾರಣ, ಸೈಕ್ಲಿಂಗ್‌ನಂತಹ ಭಾರಿ ದೈಹಿಕ ಚಟುವಟಿಕೆಗಳನ್ನು ವೈದ್ಯರ ಅನುಮತಿ ನಂತರವೇ ಕೈಗೆತ್ತಿಕೊಳ್ಳಬೇಕು.

ನಿಯಮಿತ ಆರೋಗ್ಯ ತಪಾಸಣೆ: ಇದಂತೂ ಬಹುಮುಖ್ಯ. ಕಸಿಮಾಡಿದ ಅಂಗ ತಕ್ಷಣದಿಂದಲೇ ಕೆಲಸ ಮಾಡುವುದರಿಂದ ರೋಗಿಯ ದೇಹಸ್ಥಿತಿ ಕೂಡ ಸುಧಾರಿಸತೊಡಗುತ್ತದೆ. ಡಯಾಲಿಸಿಸ್, ಇನ್ಸುಲಿನ್ ಚುಚ್ಚುಮದ್ದಿನ ಅವಶ್ಯಕತೆ ಕಡಿಮೆಯಾಗುತ್ತದೆ. ಆದಾಗ್ಯೂ ಅಂಗ ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ನಿಯಮಿತವಾಗಿ ಕ್ರಿಯಾಟಿನಿನ್, ಬಿಲಿರುಬಿನ್, ಸಕ್ಕರೆಪ್ರಮಾಣದಂತಹ ಕೆಲವು ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಆಯಾ ಅಂಗಕ್ಕೆ ಸಂಬಂಧಪಟ್ಟ ಪರೀಕ್ಷೆಗಳನ್ನು ತಜ್ಞವೈದ್ಯರೇ ಸೂಚಿಸುತ್ತಾರೆ.

❖

ನಗಬೇಕು ಅಳಬೇಕು

ಸಂತೋಷವಾಗಿರುವುದು ಎಂದರೆ ಸಮಸ್ಯೆಗಳಿಲ್ಲದೆ, ಉತ್ಸಾಹದಿಂದ, ನಕ್ಕು ನಲಿಯುತ್ತಲೇ ಇರುವುದು ಎಂದು ಅರ್ಥಮಾಡಿಕೊಂಡರೆ, ಆಗ ಸಂತೋಷವಾಗಿರುವ ಅವಕಾಶಗಳು ಸೀಮಿತವಾಗಿರುತ್ತವೆ.

ರಮ್ಯಾ ಶ್ರೀಹರಿ

ಸರಿಯಾಗಿ ಯೋಚಿಸಿ ನೋಡಿದರೆ ಹಲವು ಬಾರಿ ನಮ್ಮ ನೆಮ್ಮದಿ, ಸಮಾಧಾನಕ್ಕೆ ದೊಡ್ಡ ಅಡಚಣೆ ಒಡ್ಡುವವರು ನಾವಲ್ಲದೇ ಬೇರೆ ಯಾರೂ ಆಗಿರುವುದಿಲ್ಲ ಎನ್ನುವುದು ತಿಳಿಯುತ್ತದೆ. ‘ನಿಶ್ಚಿಂತೆಯಿಂದ ಸಂತೋಷವಾಗಿರುವುದೇ ತಪ್ಪೇನೋ’ ಎಂಬಂತೆ ಸದಾ ಚಿಂತೆ ಮಾಡುವುದಕ್ಕೆ ನಾವೇ ಕಾರಣಗಳನ್ನು ಹುಡುಕಿಕೊಳ್ಳುತ್ತೇವೆ, ಯಾಕೆ? ನಮಗೆ ಸಂತೋಷವಾಗಿರುವುದಕ್ಕೆ ಕಾರಣಗಳು ಬೇಕಾಗುತ್ತವೆಯಾ? ಎಲ್ಲವೂ ನಮಗೆ ಬೇಕಾದಂತೆ ಇದ್ದಾಗ ಮಾತ್ರ ನಾವು ಸಂತಸಪಡಬೇಕೆಂದು ನಮಗೆ ಹೇಳಿಕೊಟ್ಟವರಾರು? ವಾಸ್ತವಕ್ಕೆ ಸಂಬಂಧವೇ ಇಲ್ಲದಂತಹ ಚಿಂತೆಯಲ್ಲಿ ಕಳೆದುಹೋಗಿ, ಬೇಡದನ್ನೆಲ್ಲಾ ನೆನಪಿಸಿಕೊಂಡು, ಕಲ್ಪಿಸಿಕೊಂಡು, ಬದುಕು ಕೊಡುವ ಸಣ್ಣ ಸಣ್ಣ ಖುಷಿಗಳನ್ನೆಲ್ಲ ತಿರಸ್ಕರಿಸಿ, ಯಾವುದೋ ಹಿಂಜರಿಕೆಯಲ್ಲಿ ಬದುಕನ್ನು ಸಂಪೂರ್ಣವಾಗಿ ಆಸ್ವಾದಿಸದೇ, ನಮ್ಮನ್ನು ನಾವೇ ಬಂಧನದಲ್ಲಿರಿಸಿಕೊಂಡವರಂತೆ, ಸಂಭ್ರಮವಿಲ್ಲದೇ ಜೀವನವನ್ನು ಕಳೆಯುವ ಶಿಕ್ಷೆಯನ್ನು ಯಾಕೆ ನಮಗೆ ನಾವೇ ಕೊಟ್ಟುಕೊಳ್ಳಬೇಕು?

ಇದಕ್ಕೆ ಕಾರಣ ಬದುಕಿನ ಬಗೆಗೆ ನಮಗಿರುವ ನಿರೀಕ್ಷೆಗಳು. ಏರಿಳಿತಗಳಿಲ್ಲದ, ಅಡ್ಡಿ–ಆತಂಕಗಳಿಲ್ಲದ ಸುಗಮವಾದ ಹಾದಿಯಲ್ಲಿ ಜೀವನ ಸಾಗಬೇಕು. ಹಾಗೆಯೇ ನಮ್ಮ ಮನಸ್ಸು ಕೂಡ ಯಾವಾಗಲೂ ಒಂದೇ ಹದದಲ್ಲಿರಬೇಕು ಎನ್ನುವ ನಿರೀಕ್ಷೆ ಆಳದಲ್ಲೆಲ್ಲೋ ಇದ್ದೇ ಇರುತ್ತದೆ. ಹಾಗಾಗಿಯೇ ನಮ್ಮ ಎಣಿಕೆಯನ್ನು ಮೀರಿ ಏನಾದರೂ ನಡೆದಾಗ, ನಡೆದ ಘಟನೆ ಮತ್ತು ಅದರ ಪರಿಣಾಮ ಎಷ್ಟು ಮುಖ್ಯವೋ ಅಮುಖ್ಯವೋ ಎನ್ನುವುದನ್ನೆಲ್ಲಾ ಯೋಚಿಸದೆ, ಕೇವಲ ‘ನಮ್ಮ ಹಿಡಿತ ತಪ್ಪಿಹೋಯಿತಲ್ಲ’ ಎನ್ನುವುದನ್ನೇ ದೊಡ್ಡ ಅನಾಹುತ ನಡೆದುಹೋಯಿತೆಂಬಂತೆ ಕ್ಷೋಭೆಗೊಳಗಾಗುವುದನ್ನು ಎಲ್ಲರೂ ಒಂದಲ್ಲ ಒಂದು ಬಾರಿ ಅನುಭವಿಸಿಯೇ ಇರುತ್ತೇವೆ. ಸಂತೋಷವಾಗಿರುವುದೆಂದರೆ ಸಮಸ್ಯೆಗಳಿಲ್ಲದೆ ತುಂಬಾ ಉತ್ಸಾಹದಿಂದ, ನಕ್ಕು ನಲಿಯುತ್ತಾ ಇರುವುದೆಂದು ಅರ್ಥಮಾಡಿಕೊಂಡರೆ ಸಂತೋಷವಾಗಿರುವ ಅವಕಾಶಗಳು ಸೀಮಿತವಾಗಿರುತ್ತವೆ. ಬದಲಾಗಿ ಸಂತೋಷವಾಗಿರುವುದೆಂದರೆ ಬಂದದ್ದನ್ನು ಎದೆಗುಂದದೆ ಸ್ವೀಕರಿಸಿ, ಕಷ್ಟಗಳನ್ನು ನೀಗಿಸಿಕೊಳ್ಳುವ ಹಾದಿಯಲ್ಲಿ ಪರಿಪಕ್ವಗೊಳ್ಳುತ್ತಹೋಗುವುದು ಎಂಬಂತೆ ಅರ್ಥೈಸಿಕೊಂಡರೆ ಅನೇಕ ರೀತಿಗಳಲ್ಲಿ ಸಂತೋಷವನ್ನು ಕಂಡುಕೊಳ್ಳುವುದು ಸಾಧ್ಯ.

ಕಷ್ಟಗಳೇ ಇಲ್ಲದಿರುವುದು ಸಂತೋಷವಲ್ಲ; ಕಷ್ಟಗಳೇನೇ ಇದ್ದರೂ ಅವುಗಳನ್ನೆಲ್ಲಾ ಎದುರಿಸುವ ಸ್ಥೈರ್ಯ; ಅದರಿಂದ ಹೊರಗೆ ಬರುವ ಬಗೆಗೆ ಭರವಸೆ; ಮತ್ತು ಕಷ್ಟಗಳು ನೀಡುವ ತಿಳಿವಳಿಕೆ ಬದುಕು ನಮಗೆ ಕೊಡುವ ಅಮೂಲ್ಯ ಉಡುಗೊರೆ ಎನ್ನುವ ಸಕಾರಾತ್ಮಕ ಚಿಂತನೆ ಮನಸ್ಸಿನ ಉಲ್ಲಾಸಕ್ಕೆ ಕಾರಣವಾದೀತು. ಆಗಸದಲ್ಲಿ ಮೋಡಗಳು ಸೇರುತ್ತವೆ, ಚದುರುತ್ತವೆ. ಅದರಿಂದ ಆಗಸಕ್ಕೇನೂ ಗಾಸಿಯಾಗುವುದಿಲ್ಲ. ನಮ್ಮ ಮನಸ್ಸನ್ನು, ನೆಮ್ಮದಿಯನ್ನು ಹಾಗೆ ಆಕಾಶದಂತೆ ಇಟ್ಟುಕೊಳ್ಳುವ ಕಡೆಗೆ ನಮ್ಮ ಪ್ರಯತ್ನವಿರಬೇಕು.

ಬಂದುಹೋಗುವ ಎಲ್ಲ ಏರಿಳಿತಗಳೂ ಆ ಕ್ಷಣಕ್ಕೆ ಮಾತ್ರ, ಅದೇ ನಮ್ಮನ್ನು ಡಿಫೈನ್ ಮಾಡಬೇಕಾಗಿಲ್ಲ. ಖುಷಿಯಾಗಿರುವಾಗ ನಕ್ಕು ಆನಂದವನ್ನು ಪಡಬಹುದು, ದುಃಖವಾದಾಗ ಅತ್ತು ಸಮಾಧಾನ ಹೊಂದಬಹುದು, ಚಿಂತೆ ಆವರಿಸಿದಾಗ ಕೆಲಕಾಲ ಚಿಂತಿಸುತ್ತಾ ಕುಳಿತಿರಬಹುದು. ಸಿಟ್ಟು, ಕೋಪ, ಒಂಟಿತನ, ಆಲಸ್ಯ, ಬೇಸರ, ಭಯ, ಮೋಹ – ಎಲ್ಲವನ್ನೂ ಅದು ಒದಗಿದಾಗ ಅನುಭವಿಸಿಯೇ ತೀರಬೇಕು. ನಾವೇನನ್ನು ಅನುಭವಿಸುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೋ ಅದು ನಮ್ಮನ್ನು ಇನ್ನೂ ಬಿಗಿಯಾಗಿ ಹಿಡಿದುಕೊಳ್ಳತೊಡಗುತ್ತದೆ. ಅದೇ ನಮಗೆ ಎಲ್ಲೆಡೆಯೂ ಅನೇಕ ರೂಪಗಳಲ್ಲಿ ಎದುರಾಗುತ್ತದೆ. ಹಾಗೆ ಯಾವುದರಿಂದಲೂ ತಪ್ಪಿಸಿಕೊಂಡು ಓಡಿಹೋಗುವುದು ಸಾಧ್ಯವಿಲ್ಲ; ಅನುಭವಿಸುತ್ತಲೇ ಅದರ ನಿಜವನ್ನು ಅರಿಯಬೇಕು.

ಆದರೆ ‘ನಾನು ಕೋಪಿಷ್ಠ’, ‘ನಾನು ಭಯಗ್ರಸ್ತೆ’, ‘ನಾನು ಪರತಂತ್ರ’ – ಹೀಗೆ ನಮ್ಮ ಬಗ್ಗೆ ನಾವೇ ತೀರ್ಪುಗಳನ್ನು ಕೊಟ್ಟುಕೊಳ್ಳುತ್ತಾ, ನಾವೇನನ್ನು ಅನುಭವಿಸುತ್ತಿರುತ್ತೇವೋ ಆ ಭಾವವೇ ನನ್ನ ನಿಜ ಸ್ವರೂಪ ಎಂದುಕೊಳ್ಳುತ್ತಾ ಅದಕ್ಕೇ ಅಂಟಿಕೊಂಡು ಅದರಾಚೆಗೆ ಬರುವ ಪ್ರಯತ್ನವನ್ನೇ ಮಾಡದಿರುವುದು, ತೆರೆದ ಮನಸ್ಸಿನಿಂದ ಬದುಕನ್ನು ಸ್ವೀಕರಿಸದಿರುವುದು ನಮ್ಮನ್ನು ಎಲ್ಲ ರೀತಿಯಲ್ಲೂ ಕುಗ್ಗಿಸುತ್ತದೆ. ಯಾವ ಸ್ವಭಾವಕ್ಕೂ ಅಂಟಿಕೊಂಡಿರುವುದು ಅನಿವಾರ್ಯವೇನಲ್ಲ. ಕೋಪಿಷ್ಠರೂ ಶಾಂತವಾಗಿರಬಹುದು, ಭಯಗ್ರಸ್ತರೂ ಧೈರ್ಯವನ್ನು ತಾಳಬಹುದು. ಒಂಟಿತನದಿಂದ ನರಳುವವರೂ ಸದಾ ‘ನನ್ನನ್ನು ಅರ್ಥಮಾಡಿಕೊಳ್ಳುವವರಿಲ್ಲ’ ಎನ್ನುವ ಕೊರಗಿನಲ್ಲೇ ಇರಬೇಕಾಗಿಲ್ಲ; ತಾತ್ಕಾಲಿಕವಾಗಿಯಾದರೂ ಅದರಿಂದ ಹೊರಬಂದು ಮುಕ್ತವಾಗಿ ಮಾತಾಡಿ ಹಗುರಾಗಬಹುದು. ಇಷ್ಟೆಲ್ಲಾ ಪರಿಶ್ರಮ ಪಟ್ಟು ಬಹಳ ಕಾಲ ಏನನ್ನಾದರೂ ಅನುಭವಿಸಿ ಅದರಿಂದ ಹೊರಬಂದಿದ್ದೇವೆ ಎಂದುಕೊಳ್ಳುತ್ತಿರುವಾಗಲೇ ನಮ್ಮ ನಂಬಿಕೆಯನ್ನು ಸುಳ್ಳು ಮಾಡುವ ಅನುಭವಗಳಾಗಬಹುದು. ಉದಾಹರಣೆಗೆ, ಆತಂಕವನ್ನು ನಿರ್ವಹಿಸುವ ಉಪಾಯಗಳನ್ನು ಕಂಡುಕೊಂಡು ಯಶಸ್ವಿಯಾಗಿದ್ದೇನೆ ಎಂದುಕೊಳ್ಳುತ್ತಿರುವಾಗಲೇ ಸಣ್ಣ ವಿಷಯಕ್ಕೆ ಅತಿಯಾಗಿ ಆತಂಕಪಟ್ಟುಕೊಂಡು ಅತಿರೇಕವಾಗಿ ವರ್ತಿಸಿರಬಹುದು. ಆಗ, ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತಲ್ಲಾ ಎನ್ನುವ ದುಃಖದಿಂದ ಕುಸಿದುಹೋಗಿ ನಮ್ಮ ಮೇಲಿನ ವಿಶ್ವಾಸವನ್ನೇ ಕಳೆದುಕೊಳ್ಳುವ ಬದಲು ‘ಮನಸ್ಸು, ದೇಹ, ಭಾವನೆ, ಸಂಬಂಧಗಳು ಎಲ್ಲವೂ ಏರಿಳಿತಕ್ಕೊಳಗಾಗುವುದು ಸಹಜ. ಅವು ಒಮ್ಮೆ ಪರ್ವತಾರೋಹಣ ಮಾಡಿ ಶಿಖರವನ್ನು ತಲುಪಿ ಅಲ್ಲಿಗೆ ನಮ್ಮ ಸಾಧನೆ ಮುಗಿಯಿತು ಎಂದುಕೊಳ್ಳುವಂಥದ್ದಲ್ಲ; ಬದಲಾಗಿ ಪರ್ವತದ ತುತ್ತತುದಿ ತಲುಪಿದ್ದರೂ ಕ್ಷಣಾರ್ಧದಲ್ಲಿ ಎಲ್ಲಿಂದ ಶುರುಮಾಡಿದ್ದೆವೋ ಅಲ್ಲಿಗೇ ಬಂದುಬೀಳಬಹುದು. ‘ಇದು ಸೋಲಲ್ಲ, ಇದು ಸಹಜ, ಇದು ಎಲ್ಲೆಲ್ಲೂ ಎಲ್ಲರಿಗೂ ಆಗುವಂಥದ್ದು’ ಎಂದು ತಿಳಿಯುವುದು ವಿವೇಕ.

‘ಕೆಳಗೆ ಬಿದ್ದ ಅನುಭವವು ನೀಡಿದ ತಿಳಿವಳಿಕೆಯಿಂದ ಮತ್ತೆ ಮೇಲೇರುತ್ತಿರುವೆ. ಇದು ಪುನರಾವರ್ತನೆಯಲ್ಲ ಹೊಸ ಅನುಭವ’ ಎನ್ನುವುದನ್ನು ಬಿದ್ದಮೇಲೆ ಎದ್ದು ಮತ್ತೆ ಪರ್ವತವನ್ನು ಏರಲು ಹೊರಟಾಗ ನೆನಪಿಟ್ಟುಕೊಳ್ಳಬೇಕು. ಒಟ್ಟಿನಲ್ಲಿ ಯಾವುದರಿಂದಲೂ ನಂಬಿಕೆ, ಆತ್ಮವಿಶ್ವಾಸ, ಭರವಸೆ, ಕಷ್ಟವನ್ನು ಸಹಿಸುವ ತಾಳ್ಮೆಯನ್ನು ಕಳೆದುಕೊಳ್ಳಬೇಕಾಗಿಲ್ಲ, ಏನೇ ಬಂದರೂ ಏನನ್ನು ಅನುಭವಿಸುತ್ತಿದ್ದರೂ ಅದ್ಯಾವುದೂ ನಮ್ಮ ನಿತ್ಯನಿರಂತರ ನೆಮ್ಮದಿಗೆ ಭಂಗ ತರಬೇಕಾಗಿಲ್ಲ ಎನ್ನುವ ನಂಬಿಕೆಯುಂಟಾದಾಗ ನಾವು ಏಳುಬೀಳುಗಳಿಗೆ ಭಯಪಡುವುದಿಲ್ಲ. ಸಮಚಿತ್ತವನ್ನು ಕಂಡುಕೊಂಡಾಗ ಬೀಳುವ ಭಯವಿಲ್ಲದೆ ಹಾರಾಡುವ ಹಕ್ಕಿಯಾಗಬಹುದು, ಪ್ರತಿಕ್ಷಣವನ್ನೂ ಹೊಸತೆಂಬಂತೆ ಆಸ್ವಾದಿಸಬಹುದು, ಸುಖ-ದುಃಖ, ಅಳು-ನಗು ಎಲ್ಲವನ್ನೂ ಅನುಭವಿಸುತ್ತಾ ಜೀವನವನ್ನು ಸಮೃದ್ಧಿಯಾಗಿಸಿಕೊಳ್ಳುತ್ತ ಸಂಭ್ರಮ ಪಡಬಹುದು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ: ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

3) ಭಾರತವು ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಶೇಕಡ ಎಷ್ಟು ಭಾಗವನ್ನು ಹೊಂದಿದೆ?

ಉತ್ತರ:– ಶೇ. 2.4

4) ಭಾರತದಲ್ಲಿ ಎಷ್ಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶವಿದೆ?

ಉತ್ತರ:– ಭಾರತದಲ್ಲಿ 29 ರಾಜ್ಯಗಳಿವೆ ಹಾಗೂ 6 ಕೇಂದ್ರಾಡಳಿತ ಪ್ರದೇಶಗಳಿವೆ ಹಾಗೂ ದೆಹಲಿಯನ್ನು ರಾಷ್ಟ್ರೀಯ ರಾಜಧಾನಿ ಪ್ರದೇಶವನ್ನು ಹೊಂದಿದೆ.

5) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?

ಉತ್ತರ:– ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

7) ಭಾರತವು ಯಾವ ಯಾವ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಹರಡಿಕೊಂಡಿದೆ?

ಉತ್ತರ:– ಭಾರತದ ಪ್ರಧಾನ ಭೂಭಾಗವು 8^0. 4’ ದಿಂದ $37^{0.}$ 6’ ಉತ್ತರ ಅಕ್ಷಾಂಶ ಹಾಗೂ 68^0. 7’ ರಿಂದ 97^0 ‘25’ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

8) ಭಾರತದ ದಕ್ಷಿಣದ ತುತ್ತತುದಿ ಯಾವುದು?

ಉತ್ತರ:– ನಿಕೋಬಾರ್ ದ್ವೀಪದಲ್ಲಿರುವ ‘ಇಂದಿರಾ ಪಾಯಿಂಟ್’

9) ಭಾರತದ ಉತ್ತರದ ತುತ್ತತುದಿ ಯಾವುದು?

ಉತ್ತರ:– ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

10) ಭಾರತದ ಆದರ್ಶ ಕಾಲಮಾನವನ್ನು ಎಲ್ಲಿಂದ ತೆಗೆದುಕೊಳ್ಳಲಾಗುತ್ತದೆ?

ಉತ್ತರ:– 82.5^0 ಪೂರ್ವ ರೇಖಾಂಶ (ಪ್ರಯಾಗ/ ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತೀಯ ಆದರ್ಶ ಕಾಲಮಾನವನ್ನು (IST) ತಿಳಿಸುವ ರೇಖಾಂಶವಾಗಿದೆ.

11) ಭಾರತದ ಸ್ಥಾನದ ಕುರಿತು ಬರೆಯಿರಿ

ಉತ್ತರ:– ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವ ಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಇದು ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ. ಭಾರತದ ಪ್ರಧಾನ ಭೂಭಾಗವು 8^0. 4’ ದಿಂದ $37^0$6’ ಉತ್ತರ ಅಕ್ಷಾಂಶ ಹಾಗೂ 68^0. 7’ ರಿಂದ $97^{0.}$ 25’ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇನ್ನೂ ದಕ್ಷಿಣಕ್ಕೆ ವಿಸ್ತರಿಸಿವೆ. ನಿಕೋಬಾರ್ ದ್ವೀಪದ 6^0. 45’ ದಕ್ಷಿಣ ಅಕ್ಷಾಂಶದಲ್ಲಿರುವ ‘ಇಂದಿರಾ ಪಾಯಿಂಟ್’ ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ. ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ (23.5^0 ಉ)ವು ಹಾಯ್ದು ಹೋಗಿದೆ ಮತ್ತು 82.5^0 ಪೂರ್ವ ರೇಖಾಂಶ (ಪ್ರಯಾಗ / ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತದ ಮಧ್ಯ ರೇಖಾಂಶವಾಗಿದ್ದು ಭಾರತೀಯ ಆದರ್ಶಕಾಲಮಾನವು (IST) ಈ ರೇಖಾಂಶವನ್ನಾಧರಿಸಿದೆ.

12) ಭಾರತದ ಭೂಗಡಿ ಹಾಗೂ ಜಲಗಡಿ(ಕರಾವಳಿ) ಎಷ್ಟಿದೆ?

ಉತ್ತರ:– ಭಾರತವು 15200 ಕಿ.ಮೀ ಉದ್ದದ ಭೂಗಡಿಯನ್ನು, 6100 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದೆ.

13) ಭಾರತದ ಸುತ್ತಮುತ್ತ ಇರುವ ನೆರೆ ರಾಷ್ಟ್ರಗಳನ್ನು ಹೆಸರಿಸಿ.

ಉತ್ತರ:– ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾದೇಶ, ಮ್ಯಾನ್ಮಾರ್, ಶ್ರೀಲಂಕ, ಮಾಲ್ದೀವ್ಸ್

14) ಭಾರತ ಮತ್ತು ಪಾಕಿಸ್ತಾನದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– ರ್‍ಯಾಡ್‌ಕ್ಲಿಫ್ ಲೈನ್

15) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– ‘ಮ್ಯಾಕ್‌ಮೋಹನ್’ (McMohan line) ರೇಖೆ

16) ಭಾರತ ಮತ್ತು ಅಫ್ಘಾನಸ್ಥಾನದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– ‘ಡ್ಯೂರ್‍ಯಾಂಡ್’ (Durand line) ರೇಖೆ

17) ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪ ವಿಭಾಗಗಳ ಹೆಸರನ್ನು ತಿಳಿಸಿ

ಉತ್ತರ:– ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪಗಳು

. 1) ಉತ್ತರದ ಪರ್ವತಗಳು
2) ಉತ್ತರದ ಮಹಾ ಮೈದಾನ
3) ಪರ್ಯಾಯ ಪ್ರಸ್ಥಭೂಮಿ
4) ಕರಾವಳಿ ಮೈದಾನಗಳು

18) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ (ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು), (ಬ) ಹಿಮಾಚಲ (ಮಧ್ಯ ಹಿಮಾಲಯ),(ಕ) ಮಹಾಹಿಮಾಲಯ (ಹಿಮಾದ್ರಿ)

19) ಹಿಮಾಲಯದ ಮಹತ್ವವೇನು?

ಉತ್ತರ: ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ.

ಇದರ ಮಹತ್ವ ಹೀಗಿವೆ

1) ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2) ಉತ್ತರ ಏಷಿಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಹಿಡಿಯುತ್ತವೆ.
3) ನದಿಗಳ ಉಗಮ ಪ್ರದೇಶವಾಗಿವೆ. ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
4) ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
5) ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
6) ಪ್ರವಾಸೋದ್ಯಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ.........ಇತ್ಯಾದಿ

20) ಹಿಮಾಲಯದಲ್ಲಿರುವ ಶಿವಾಲಿಕ್ಸ್ ಶ್ರೇಣಿಯ ಬಗ್ಗೆ ಬರೆಯಿರಿ

ಉತ್ತರ:– ಶಿವಾಲಿಕ್ ಶ್ರೇಣಿಯು ಹಿಮಾಲಯದಲ್ಲಿ ಅತ್ಯಂತ ದಕ್ಷಿಣದಲ್ಲಿರುವ ಸರಣಿ ಹಾಗೂ ಅತಿಕಡಿಮೆ ಎತ್ತರವನ್ನು ಹೊಂದಿದೆ. ಇದನ್ನು ಹಿಮಾಲಯದ ಪಾದ ಬೆಟ್ಟಗಳು ಎಂದು ಕರೆಯುತ್ತಾರೆ.

ಇಲ್ಲಿ ಸಮತಟ್ಟಾದ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು. ಇವು ಸಮುದ್ರದಿಂದ 600–1500 ಮಿ.ಗಳಷ್ಟು ಎತ್ತರದಲ್ಲಿವೆ.

21) ಹಿಮಾಚಲ/ ಮಧ್ಯ ಹಿಮಾಲಯದ ಬಗ್ಗೆ ಬರೆಯಿರಿ

ಉತ್ತರ:– ಹಿಮಾಚಲ (ಮಧ್ಯ ಹಿಮಾಲಯ)ವು ಮಹಾ ಹಿಮಾಲಯ ಮತ್ತು ಶಿವಾಲಿಕ್ ಬೆಟ್ಟಗಳ ನಡುವೆ ಸುಮಾರು 3600 ಮೀಟರ್‌ಗಳಿಂದ 4500 ಮೀಟರ್‌ಗಳಷ್ಟು ಸರಾಸರಿ ಎತ್ತರವನ್ನು ಹೊಂದಿವೆ. ಇವು 60 ರಿಂದ 80 ಕಿ.ಮೀ ಅಗಲವಾಗಿವೆ. ಇಲ್ಲಿ ಅನೇಕ ಸಮಾನಾಂತರ ಪರ್ವತ ಶ್ರೇಣಿಗಳಿವೆ. ಉದಾಹರಣೆಗೆ ಪೀರ್‌ಪಂಜಾಲ, ಮಹಾಭಾರತ ಶ್ರೇಣಿ, ನಾಗತಿಬ್ಬ, ಮಸ್ಸೋರಿ ಇತ್ಯಾದಿ. ಕಂಗ್ರಾ, ಕುಲು ಇವು ಪ್ರಸಿದ್ಧ ಕಣಿವೆಗಳಾಗಿವೆ. ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

ELECTROCHEMISTRY

55. Articles of iron are generally coated with zinc. Explain.

Ans:- Iron gets easily rusted in the presence of moist air. Formation of rust ($Fe_2O_3 . xH_2O$) is a redox reaction in which Fe is oxidized to Fe^{3+} ions. Since zinc is more reactive than iron (placed below iron in the activity series), it is oxidized to Zn^{2+} ions instead of iron when coated over the surface of iron. Thus, zinc takes part in the redox reaction while surface of iron remains intact.

56. Why is anode negatively charged in an electrochemical cell?

Ans:- Because electrons are released at this electrode.

57. Why is standard hydrogen electrode called reversible electrode?

Ans:- Because it can act both as anode as well as cathode in an electrochemical cell.

58. Corrosion of copper, silver and rusting of iron are very common. Both cause enormous damage. Rusting of iron in particular results in the loss of crores of rupees every year. Major accidents occur because of this.

(a) What is the chemical formula of rust?
(b) Why do silver articles become black when exposed to air for a long time?
(c) How is copper affected by corrosion?
(d) Suggest three ways to check rusting of iron so as to check national wastage of money?

Ans:- (a) The chemical formula of rust is –

$$Fe_2O_3.xH_2O$$

(b) Air contains in it traces of H_2S gas. It reacts with silver to form silver sulphide (Ag_2S). It is black and its coating gets deposited on silver articles.

(c) Corrosion of copper leads to the formation of basic copper carbonate which is green in colour.

$$2Cu+\underbrace{H_2O+CO_2+O_2}_{\text{(Present in air)}} \rightarrow \underset{\text{Basic copper carbonate}}{Cu(OH)_2\,CuCO_3}$$

(d) The rusting of iron can be checked of prevented by –
(i) coating the surface of the metal with some rust proof paints.
(ii) electroplating articles of iron with metals like nickel, chromium etc. which resist corrosion.
(iii) galvanizing or tinning the surface of iron with zinc or tin respectively.

59. Manu and his father went a shop to purchase a battery for their inverter. Shopkeeper showed them two types of batteries, one with lead plates and the other with cadmium plates. The battery with cadmium plates was more expensive than the lead battery. Manu’s father wanted to purchase lead battery as it was cheaper.

After reading the above passage, answer the following questions:

(a) What would a student of chemistry, suggest to Manu’s father?

(b) What are the values associated with the above decision?

Ans:- (a) A student of chemistry would suggest Manu’s father to buy more expensive cadmium plate battery as compared to lead storage battery which is commonly used in inverters due to following reasons -

i) Lead is a highly poisonous substance. The vapours of lead as well as of sulphuric acid which acts as the electrolyte are very harmful to the human body. They can lead to serious health problems.
ii) The vapors released from chemical reactions pollute the atmosphere.

(c) Less dependence of lead storage batteries and lead free petrol cause less pollution and keeps the environment healthy.

60. In the dry cell

(a) Which substance acts as anode and which as cathode?
(b) Which electrolyte is used in the cell?
(c) What is the cell potential of the cell?
(d) Why does the cell voltage not change during operation?

Ans:- (a) Zinc container acts as anode while carbon rod behaves as cathode.
(b) A paste of HgO and KOH acts as the electrolyte.
(c) The cell potential is 1.35 V
(d) The cell voltage does not change because the overall redox reaction taking place in the cell does not involve any ions and there is no change in concentration.

$$Zn(s) + HgO(s) \rightarrow ZnO(s) + Hg(l)$$

61. Two platinum electrodes are dipped in an aqueous solution of copper sulphate blue in colour. A current is passed through it –

(a) What will happen on the two electrodes?
(b) What will happen to the colour of the solution?
(c) What is the nature of the solution left in the electrolytic cell.

Ans:- (a) Copper will be deposited on the cathode i.e., the electrode connected to the negative terminal. Oxygen gas (O_2) will evolve at the anode.

(b) The blue of the solution will slowly disappear and it will become colourless.

(c) The solution left in the electrolytic cell will be acidic (aqueous solution of H_2SO_4).

62. Can you store copper sulphate solution in a zinc pot?

Ans:- No, it is not possible. The E° values of the copper and zinc electrodes are as follows:

$$Zn^{2+}(aq) + 2e^- \rightarrow Zn(s)\ ;\ E^o = -0.76\ V$$
$$Cu^{2+}(aq) + 2e^- \rightarrow Cu(s)\ ;\ E^0 = +0.34\ V$$

This shows that zinc is a stronger reducing agent than copper. It will lose electrons to Cu^{2+} ions and redox reaction will immediately set in.

$$Zn(s) + Cu^{2+}(aq) \rightarrow Zn^{2}(aq) + Cu(s)$$

Thus, copper sulphate solution cannot be stored in zinc pot.

63. Calculate the potential of hydrogen electrode in contact with a solution with *p*H equal to 10.

Ans:- For hydrogen electrode, $H^+ + e^- \rightarrow 1/2H_2$

Applying Nernst equation,

$$E_{(H^+/1/2H_2)} = E^0_{(H^+/1/2H_2)} - \frac{0.0591}{n}\log\frac{1}{[H^+]}$$

$$= 0 - \frac{0.0591}{1}\log\frac{1}{(10^{-10})}$$

$$[pH = 10;\ [H^+] = 10^{-10}M]$$

$$= 0 - \frac{0.0591}{1} x (10 \log 10)$$

$$= -0.591V$$

64. The cell in which the following reaction occurs
$2Fe^{3+}(aq) + 2I^-(aq) \rightarrow 2Fe^{2+}(aq) + I_2(S)$ has $E^o_{cell} = 0.236$ V at 298 K

Calculate standard Gibbs energy and equilibrium constant for the reaction.

(Contd……)

ಸಹಕಾರಿ ಕ್ಷೇತ್ರದ ಸಾಧಕರಿಗೆ 'ಸಹಕಾರಿ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿದ್ದರಾಮಯ್ಯ

ಡಿಸಿಸಿ ಬ್ಯಾಂಕ್‌ಗೆ ಸಾಲ: ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಡಿಸಿಸಿ ಬ್ಯಾಂಕ್‌ಗಳಿಗೆ ಕಡಿಮೆ ಬಡ್ಡಿದರದಲ್ಲಿ ಕೇಂದ್ರ ಸರ್ಕಾರವು ನಬಾರ್ಡ್ ಮೂಲಕ ಒದಗಿಸುತ್ತಿದ್ದ ಸಾಲಸೌಲಭ್ಯವನ್ನು ಸಕಾಲಕ್ಕೆ ನೀಡದೇ ವಿಳಂಬ ತೋರುತ್ತಿರುವ ಕಾರಣ ರೈತರಿಗೆ ಸಾಲ ನೀಡಲು ಡಿಸಿಸಿ ಬ್ಯಾಂಕ್‌ಗಳಿಗೆ ಆರ್ಥಿಕ ಒತ್ತಡ ಹೆಚ್ಚಾಗಿದೆ. ಇದರ ಬಗ್ಗೆ ಪ್ರಧಾನಿ ಮತ್ತು ನಬಾರ್ಡ್‌ಗೆ ಪತ್ರ ಬರೆದು, ಶೀಘ್ರ ಸಾಲ ಒದಗಿಸಲು ಕೋರುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಆವರಣದಲ್ಲಿ ಸೋಮವಾರ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪದಲ್ಲಿ ರಾಜ್ಯದ ವಿವಿಧ ಜಿಲ್ಲೆಯ 70 ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿ ವಿತರಿಸಿದ ಅವರು ಮಾತನಾಡಿದರು.

'ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇಡುವ ಠೇವಣಿ ಹಣವನ್ನು ಸಹಕಾರಿ ಬ್ಯಾಂಕ್‌ಗಳಲ್ಲಿ ತೊಡಗಿಸುವ ಬಗ್ಗೆ ಪರಿಶೀಲಿಸಲಾಗುವುದು. ಸಹಕಾರ ಕ್ಷೇತ್ರಕ್ಕೆ ಜಾತಿ, ಧರ್ಮದ ಸೋಂಕಿಲ್ಲ. ಸಹಕಾರಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳೆಯುತ್ತಿದ್ದಾರೆ' ಎಂದರು.

ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದೇಶದಲ್ಲಿ 8.5 ಲಕ್ಷ ಸೊಸೈಟಿ, ಕರ್ನಾಟಕದಲ್ಲಿ 45,600 ಸೊಸೈಟಿಗಳಿವೆ. ಒಟ್ಟು 35 ಕೋಟಿಗೂ ಹೆಚ್ಚು ಸದಸ್ಯರಿದ್ದಾರೆ' ಎಂದು ಹೇಳಿದರು.

ಸಮಿತಿ ರಚನೆ: ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, 'ರಾಜ್ಯದಲ್ಲಿ ಸಹಕಾರ ಕ್ಷೇತ್ರವನ್ನು ಗಟ್ಟಿಗೊಳಿಸುವಿಕೆಗೆ ಸಂಬಂಧಿಸಿದಂತೆ ಶಾಸಕ ಲಕ್ಷ್ಮಣ ಸವದಿ ಅವರ ಅಧ್ಯಕ್ಷತೆಯಲ್ಲಿ ಹಿರಿಯ ಸಹಕಾರಿಗಳ ಸಮಿತಿ ರಚಿಸಲಾಗಿದ್ದು, ಸಮಿತಿ ನೀಡುವ ವರದಿ ಆಧರಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು' ಎಂದರು.

ಪ್ರೋತ್ಸಾಹ ಅಗತ್ಯ: ಕೃಷಿ ಮಾರುಕಟ್ಟೆ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಮಹಾರಾಷ್ಟ್ರ, ಗುಜರಾತ್‌ನಲ್ಲಿ ಸಹಕಾರ ಚಳವಳಿಗೆ ಶಕ್ತಿ ಕೊಟ್ಟಿರುವುದರಿಂದ ಉನ್ನತ ಸ್ಥಾನಕ್ಕೆ ಏರಿಕೆಯಾಗಿದೆ. ಅದೇ ಮಾದರಿಯಲ್ಲಿ ಸಹಕಾರ ಕ್ಷೇತ್ರಕ್ಕೆ ರಾಜ್ಯ ಸರ್ಕಾರದ ನೆರವು, ಪ್ರೋತ್ಸಾಹದ ಅಗತ್ಯವಿದೆ' ಎಂದು ಹೇಳಿದರು.


ವಿಜಯಪುರದಲ್ಲಿ ಸೋಮವಾರ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೆ.ಎನ್. ರಾಜಣ್ಣ, ಶಿವಾನಂದ ಪಾಟೀಲ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಳಂಬ ಧೋರಣೆ ಪ್ರಶ್ನಿಸಿದ 'ಸುಪ್ರೀಂ'

ಒಂದನೇ ಪುಟದಿಂದ...

ಮಸೂದೆಗಳನ್ನು ಅನಿರ್ದಿಷ್ಟ ಅವಧಿಗೆ ತಡೆಹಿಡಿಯಲು ರಾಜ್ಯಪಾಲರಿಗೆ ಅವಕಾಶ ಮಾಡಿಕೊಟ್ಟರೆ, ಆಡಳಿತ ವ್ಯವಸ್ಥೆಗೆ ಪಾರ್ಶ್ವವಾಯು ಬಡಿದಂತೆ ಆಗುತ್ತದೆ, ಇಂಥದ್ದೊಂದು ಅಧಿಕಾರ ರಾಜ್ಯಪಾಲರಿಗೆ ಇರಬೇಕು ಎಂಬುದು ಸಂವಿಧಾನದ ಆಶಯ ಅಲ್ಲ ಎಂದು ಹಿರಿಯ ವಕೀಲ ಪಿ. ವಿಲ್ಸನ್ ವಾದಿಸಿದರು.

ಪ್ರಕರಣದ ವಿಚಾರಣೆಯನ್ನು ನ್ಯಾಯಪೀಠವು ಡಿಸೆಂಬರ್ 1ಕ್ಕೆ ಮುಂದೂಡಿದೆ.

ನ್ಯಾಯಸಮ್ಮತವಾಗಿ ಆಯ್ಕೆಯಾಗಿರುವ ರಾಜ್ಯ ಸರ್ಕಾರದ ಪಾಲಿಗೆ ರಾಜ್ಯಪಾಲರು 'ರಾಜಕೀಯ ವಿರೋಧಿ'ಯಂತೆ ವರ್ತಿಸುತ್ತಿದ್ದಾರೆ ಎಂದು ತಮಿಳುನಾಡು ಸರ್ಕಾರವು ತನ್ನ ಅರ್ಜಿಯಲ್ಲಿ ಹೇಳಿದೆ.

ಶಿಕ್ಷೆಗೆ ಗುರಿಯಾದವರನ್ನು ಅವಧಿಗೆ ಮುನ್ನವೇ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ 54 ಕಡತಗಳು, ಕಾನೂನು ಕ್ರಮ ಜರುಗಿಸುವುದಕ್ಕೆ ಅನುಮತಿ ಕೋರಿ ಸಲ್ಲಿಸಿರುವ ನಾಲ್ಕು ಕಡತಗಳು ಹಾಗೂ 12 ಮಸೂದೆಗಳು ರಾಜ್ಯಪಾಲರ ಎದುರು ಇವೆ ಎಂದು ಸರ್ಕಾರ ತಿಳಿಸಿದೆ.

'ಪೊಲೀಸ್ ನೇಮಕಾತಿಗೆ ಏಕರೂಪದ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಬೆಳಗಾವಿ: 'ವಿವಿಧ ವಿಭಾಗಗಳ ಪೊಲೀಸ್ ಸಿಬ್ಬಂದಿ ನೇಮಕಾತಿಗೆ ಏಕರೂಪದ ಪರೀಕ್ಷೆ ಮತ್ತು ತರಬೇತಿ ವ್ಯವಸ್ಥೆ ತಮಿಳುನಾಡಿನಲ್ಲಿದ್ದು, ಅದನ್ನು ನಮ್ಮ ರಾಜ್ಯದಲ್ಲೂ ಅಳವಡಿಸುವ ಬಗ್ಗೆ ಚಿಂತನೆ ನಡೆಸಿದ್ದೇವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

'ಈ ನಿಯಮವು ನಮ್ಮಲ್ಲಿ ಎಷ್ಟು ಸೂಕ್ತವೆಂದು ಪರಿಶೀಲಿಸಿ ಕ್ರಮ ವಹಿಸಲಾಗುವುದು. ಒಂದೇ ರೀತಿಯ ಪರೀಕ್ಷೆ ಮತ್ತು ತರಬೇತಿಯಿಂದ ಆಯಾ ಅಗತ್ಯ ಸಂದರ್ಭಗಳಲ್ಲಿ ಸಿಬ್ಬಂದಿಯನ್ನು ಬಳಸಿಕೊಳ್ಳಬಹುದು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಎಲ್ಲಾ ಜಿಲ್ಲೆಗಳಲ್ಲಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವನ್ನು ಪೊಲೀಸ್ ಠಾಣೆಯಾಗಿ ಪರಿವರ್ತಿಸಲಾಗಿದೆ. ಪ್ರಕರಣಗಳನ್ನು ದಾಖಲಿಸಿಕೊಳ್ಳಲು ಮತ್ತು ಆರೋಪಿಗಳನ್ನು ಬಂಧಿಸಲು ಅವುಗಳಿಗೆ ಅಧಿಕಾರ ನೀಡಲಾಗಿದೆ' ಎಂದು ಅವರು ತಿಳಿಸಿದರು.

'15 ವರ್ಷದ ಹಿಂದಿನ 1,700ಕ್ಕೂ ಹೆಚ್ಚು ವಾಹನಗಳನ್ನು ಸರ್ಕಾರದ ಆದೇಶದಂತೆ ಪೊಲೀಸ್ ಇಲಾಖೆ ತೆಗೆದುಹಾಕಿದೆ. ವಾಹನಗಳ ಬದಲಾವಣೆಗೆ ಸರ್ಕಾರ ₹100 ಕೋಟಿ ಬಿಡುಗಡೆ ಮಾಡಿದೆ' ಎಂದರು.

ದತ್ತಮಾಲೆ ಹಾಕುವುದಾಗಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿಯವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈಗ ಅವರ ಪಕ್ಷ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದೆ. ಹೊಂದಾಣಿಕೆ ಆಗಬೇಕಲ್ಲವೇ? ಅದಕ್ಕೆ ಅವರು ದತ್ತಮಾಲೆ ಹಾಕಿಕೊಳ್ಳುತ್ತಾರೆ' ಎಂದು ಹೇಳಿದರು.

'ಪೊಲೀಸ್ ಮಂಡಳಿಯ ಕಾರ್ಯ-ವಿಧಾನಗಳಂತೆ ಪೊಲೀಸರ ವರ್ಗಾವಣೆ ನಡೆಯುತ್ತದೆ ಹೊರತು ಸಚಿವರು ಅಥವಾ ಶಾಸಕರ ಪತ್ರಗಳನ್ನು ಆಧರಿಸಿ ಅಲ್ಲ. ಇದಕ್ಕೆಂದೇ ಒಂದು ವ್ಯವಸ್ಥೆ ಇದೆ. ಬಹುಶಃ ಇದನ್ನು ಎಚ್.ಡಿ.ಕುಮಾರಸ್ವಾಮಿ ಮರೆತಿರಬೇಕು' ಎಂದರು.

ಕೆಲಸ ನೀಡದ ಕಾರ್ಖಾನೆ: ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): 'ಕೈಗಾರಿಕೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಸ್ಥಾಪನೆಯಾದ ಕಾರ್ಖಾನೆಯಲ್ಲಿ ಉದ್ಯೋಗ ನೀಡಲಿಲ್ಲವೆಂಬ ಕಾರಣಕ್ಕೆ ಮನನೊಂದು' ತಾಲ್ಲೂಕಿನ ಅಡಕನಹಳ್ಳಿಯ ಸಿದ್ದರಾಜು (35) ಭಾನುವಾರ ರಾತ್ರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡರು.

ಸಿದ್ದರಾಜು

ಸಿದ್ದರಾಜು ಹಾಗೂ ಅವರ ಸಹೋದರರಿಗೆ ಪಿತ್ರಾರ್ಜಿತವಾಗಿ ಬಂದಿದ್ದ ಒಟ್ಟು 6 ಎಕರೆ ಕೃಷಿ ಭೂಮಿಯನ್ನು ಕೆಐಎಡಿಬಿ ವಶಪಡಿಸಿಕೊಂಡು, ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪನೆಗಾಗಿ ಪಾರ್ಲೆ ಆಗ್ರೋ ಇಂಡಸ್ಟ್ರೀಸ್ ಕಂಪನಿಗೆ ಹಂಚಿತ್ತು.

> **ಸಿದ್ದರಾಜು ಕುಟುಂಬದ ಒಬ್ಬರಿಗೆ ಈಗಾಗಲೇ ಉದ್ಯೋಗ ನೀಡಲಾಗಿದೆ. ತಮಗೂ ಉದ್ಯೋಗ ನೀಡಬೇಕೆಂಬ ಸಿದ್ದರಾಜು ಅವರ ಕೋರಿಕೆ ಬಗ್ಗೆ ಕಂಪನಿಗೆ ಪತ್ರ ಬರೆಯಲಾಗಿತ್ತು**
>
> **ದಿನೇಶ್,** ಕೆಐಎಡಿಬಿ ಜಂಟಿ ನಿರ್ದೇಶಕ

'ಮಂಡಳಿ ನಿಯಮದ ಪ್ರಕಾರ, ಭೂಮಿ ಕಳೆದುಕೊಂಡ ರೈತರ ಕುಟುಂಬದವರಿಗೆ ಉದ್ಯೋಗ ನೀಡಬೇಕು. ನಾನು ನಾಲ್ಕು ವರ್ಷದಿಂದ ಉದ್ಯೋಗಕ್ಕಾಗಿ ಮಂಡಳಿ ಕಚೇರಿ ಹಾಗೂ ಪಾರ್ಲೆ ಕಂಪನಿಯ ಮುಂದೆ ಅಲೆಯುತ್ತಿದ್ದೆ. ಕಡೆಗೂ ಉದ್ಯೋಗ ಸಿಗಲಿಲ್ಲ. ಬದಲಾಗಿ, ನ್ಯಾಯ ಕೇಳಿದ ನನ್ನ ಹಾಗೂ ನನ್ನ ಕುಟುಂಬದವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ನಮಗೆ ಬೇರೆ ಆದಾಯವಿಲ್ಲ. ಜಮೀನು ಕಳೆದುಕೊಂಡು ಸಾಲಗಾರನಾಗಿದ್ದೇನೆ. ಹೀಗಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಸಿದ್ದರಾಜು ತಮ್ಮ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಅವರಿಗೆ ಪತ್ನಿ ಹಾಗೂ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ಪತ್ನಿ ರಕ್ಷಿತಾ ನಂಜನಗೂಡು ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರತಿಭಟನೆ: 'ಸಿದ್ದರಾಜು ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಮೃತರ ಕುಟುಂಬ ವರ್ಗಕ್ಕೆ ಸೂಕ್ತ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿ ಸೋಮವಾರ ಸಂಬಂಧಿಕರು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರದ ಬಳಿ ಪ್ರತಿಭಟನೆ ನಡೆಸಿ, ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ವರುಣಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಸ್ಥಳಕ್ಕೆ ಭೇಟಿ ನೀಡಿ, ಸರ್ಕಾರದಿಂದ ₹5 ಲಕ್ಷ ಪರಿಹಾರದ ಜೊತೆಗೆ ಮಂಡಳಿ ಹಾಗೂ ಪಾರ್ಲೆ ಕಂಪನಿಯಿಂದಲೂ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ತುರ್ತು ವಿಚಾರಣೆ: ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧ ಚಿತ್ರದುರ್ಗ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಸೋಮವಾರ ಬೆಳಿಗ್ಗೆ ಹೊರಡಿಸಿದ್ದ ಜಾಮೀನು ರಹಿತ ಬಂಧನ ವಾರಂಟ್‌ಗೆ ಸೋಮವಾರ ಸಂಜೆ ತಡೆ ನೀಡಿರುವ ಹೈಕೋರ್ಟ್, ಆರೋಪಿಯ ಬಿಡುಗಡೆಗೆ ಆದೇಶಿಸಿದೆ.

ವಾರಂಟ್ ಪ್ರಶ್ನಿಸಿ ಶರಣರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತುರ್ತು ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹಿರಿಯ ವಕೀಲ ಸಂಜಯ್ ಚೌಟ, 'ಶರಣರ ವಿರುದ್ಧದ ಮೊದಲ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ, ಆರೋಪಿಯು ಚಿತ್ರದುರ್ಗ ಪ್ರವೇಶಿಸಬಾರದು. ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಬೇಕು ಎಂಬ ಷರತ್ತು ವಿಧಿಸಿದೆ. ಆದರೆ, ವಿಚಾರಣಾ ನ್ಯಾಯಾಲಯದಲ್ಲಿ ಪ್ರಾಸಿಕ್ಯೂಷನ್ ಪರ ವಕೀಲರು ಇದೇ 18ರಂದು ಮೆಮೊ ಸಲ್ಲಿಸಿದ್ದಾರೆ. ಇದನ್ನು ಸೆಷನ್ಸ್ ನ್ಯಾಯಾಲಯ ಪರಿಗಣಿಸಿದೆ' ಎಂದು ಆಕ್ಷೇಪಿಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ಮತ್ತೊಂದು ಏಕಸದಸ್ಯ ನ್ಯಾಯಪೀಠವು; ದೋಷಾರೋಪ ನಿಗದಿಯ ನಂತರದ ಪ್ರಕ್ರಿಯೆಯನ್ನು ಮುಂದೂಡುವಂತೆ ಸೆಷನ್ಸ್ ನ್ಯಾಯಾಲಯಕ್ಕೆ ನಿರ್ದೇಶಿಸಿದೆ. ಹೀಗಿದ್ದರೂ, ಸೆಷನ್ಸ್ ನ್ಯಾಯಾಧೀಶರು ಪ್ರಾಸಿಕ್ಯೂಷನ್ ಸಲ್ಲಿಸಿದ ಮೆಮೊ ಪರಿಗಣಿಸಿದ್ದಾರೆ. ಸೋಮವಾರ (ನ.20) ಮಧ್ಯಾಹ್ನ 12.30ಕ್ಕೆ ಶರಣರ ವಿರುದ್ಧ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದ್ದಾರೆ. ಇದರನ್ವಯ ಅವರನ್ನು ಬಂಧಿಸಿ ಮಧ್ಯಾಹ್ನವೇ ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ಪರಿಣಾಮ ಅವರನ್ನು ಚಿತ್ರದುರ್ಗ ಜೈಲಿಗೆ ಕಳುಹಿಸಲಾಗಿದೆ. ಇದು ಹೈಕೋರ್ಟ್ ಆದೇಶದ ಉಲ್ಲಂಘನೆ' ಎಂದರು.

ಈ ಆಕ್ಷೇಪಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಪ್ರಾಸಿಕ್ಯೂಟರ್ ವಿಜಯಕುಮಾರ ಮಜಗೆ, 'ಆರೋಪಿ ವಿರುದ್ಧ ಎರಡು ಪ್ರಕರಣಗಳಿದ್ದು ಅವುಗಳ ಕೇಸ್ ನಂಬರ್ ಬೇರೆ ಬೇರೆ' ಎಂದರು. ಆದರೆ, ಇದಕ್ಕೆ ಶರಣರ ಪರ ವಕಾಲತ್ತು ವಹಿಸಿರುವ ವಕೀಲ ಸಂದೀಪ್ ಎಸ್.ಪಾಟೀಲ್, 'ಒಂದೇ ಕ್ರೈಂ ನಂಬರ್. ಆದರೆ, ಎರಡು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಸಮರ್ಥಿಸಿಕೊಂಡರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಒಳ್ಳೆಯ ಪ್ರಕರಣವಿರಲಿ, ಕೆಟ್ಟ ಪ್ರಕರಣವೇ ಇರಲಿ. ಕಾನೂನು ಪ್ರಕ್ರಿಯೆ ಪ್ರಕಾರವೇ ನಡೆದುಕೊಳ್ಳಬೇಕು. ಯಾರೇ ಆದರೂ ಕಾನೂನು ಪಾಲಿಸಬೇಕು' ಎಂದು ವಿಜಯ ಮಜಗೆ ಅವರಿಗೆ ಹೇಳಿ, ವಾರಂಟ್‌ಗೆ ತಡೆ ನೀಡಿ ಬಿಡುಗಡೆಗೆ ಆದೇಶಿಸಿತು.

ಬಂಧನ, ಬಿಡುಗಡೆ

ಒಂದನೇ ಪುಟದಿಂದ...

ಶರಣರನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ಪೊಲೀಸರಿಗೆ ನ್ಯಾಯಾಲಯ ಮಂಗಳವಾರದವರೆಗೆ ಕಾಲಾವಕಾಶ ನೀಡಿತ್ತು. ವಾರಂಟ್ ಕೈಸೇರಿದ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಡಿವೈಎಸ್‌ಪಿ ಕೆ.ಆರ್. ಅನಿಲ್‌ಕುಮಾರ್ ನೇತೃತ್ವದಲ್ಲಿ ದಾವಣಗೆರೆಯ ವಿರಕ್ತ ಮಠಕ್ಕೆ ಮಧ್ಯಾಹ್ನ 3ಕ್ಕೆ ದೌಡಾಯಿಸಿ ಶರಣರನ್ನು ಬಂಧಿಸಿದರು.

ನ್ಯಾಯಾಂಗ ಬಂಧನ: ಆರೋಪಿಯನ್ನು ಚಿತ್ರದುರ್ಗಕ್ಕೆ ಕರೆತಂದ ಪೊಲೀಸರು, ಸೆಷನ್ಸ್ ನ್ಯಾಯಾಲಯದಲ್ಲಿ ಸಂಜೆ 4ಕ್ಕೆ ಹಾಜರುಪಡಿಸಿದರು. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ನ್ಯಾಯಾಲಯ, ಮಂಗಳವಾರ ಮತ್ತೆ ಹಾಜರುಪಡಿಸುವಂತೆ ಸೂಚಿಸಿತು. ಸಂಜೆ 5.45ಕ್ಕೆ ಆರೋಪಿಯನ್ನು ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ಈ ಹೊತ್ತಿಗಾಗಲೇ ಶರಣರ ವಿರುದ್ಧ ಹೊರಡಿಸಿದ ಜಾಮೀನು ರಹಿತ ಬಂಧನದ ವಾರಂಟ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಮಾಹಿತಿ ತಿಳಿದು ಶರಣರ ಅನುಯಾಯಿಗಳು ಕಾರಾಗೃಹದ ಎದುರು ರಾತ್ರಿಯವರೆಗೆ ಕಾದು ಕುಳಿತಿದ್ದರು. ರಾತ್ರಿ ಬಿಡುಗಡೆಯಾದ ಶಿವಮೂರ್ತಿ ಶರಣರು ಭಕ್ತರ ವಾಹನದಲ್ಲಿ ದಾವಣಗೆರೆಗೆ ತೆರಳಿದರು.

ಕಾಡು ಕಾಣದ ಐಎಫ್‌ಎಸ್ ಅಧಿಕಾರಿಗಳು

ಒಂದನೇ ಪುಟದಿಂದ...

'ಕೆಲವು ಕಡೆ ಹುದ್ದೆ ಸೃಷ್ಟಿಸಿಕೊಂಡು ಅಲ್ಲೇ ಸ್ಥಾಪನೆಯಾಗಿದ್ದಾರೆ' ಎಂದು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಮತ್ತು ಮುಖ್ಯ ಜಾಗೃತ ಅಧಿಕಾರಿಗಳ ಹುದ್ದೆಗಳು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಖಾಲಿ ಇವೆ. ಆದರೆ ಈ ಹುದ್ದೆಗಳಿಗೆ ಹೋಗಲು ಐಎಫ್‌ಎಸ್ ಅಧಿಕಾರಿಗಳು ಇಚ್ಛಿಸುವುದಿಲ್ಲ. ಅದರಲ್ಲೂ ಹಿರಿಯ ಶ್ರೇಣಿಯ ಐಎಫ್‌ಎಸ್ ಅಧಿಕಾರಿಗಳು ಆಯಕಟ್ಟಿನ ಜಾಗದಲ್ಲೇ ಇರಬೇಕೆಂದು ಬಯಸಿ, ನಿಗಮ–ಮಂಡಳಿಗಳಿಗೆ ನೇಮಕವಾಗುತ್ತಿದ್ದಾರೆ. ಇದರಿಂದ ಅರಣ್ಯ ಇಲಾಖೆಯ ಕಾರ್ಯ ನಿರ್ವಹಣೆಗೆ ಹಿನ್ನಡೆಯಾಗಿದೆ' ಎಂದು ಸಿಬ್ಬಂದಿ ದೂರಿದರು.

'ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಬೆಂಗಳೂರು ಕಚೇರಿಯಿಂದ ಹೊರಬರಬೇಕು. ತಿಂಗಳಿಗೆ 15 ದಿನ ಅರಣ್ಯಕ್ಕೆ ಹೋಗಿ ವಾಸ ಮಾಡಿ, ಅಲ್ಲಿನ ಸಿಬ್ಬಂದಿಯನ್ನು ನೈತಿಕವಾಗಿ ಉತ್ತೇಜಿಸಬೇಕು' ಎಂದು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು. ಅದರಂತೆ ಆದೇಶವನ್ನೂ ಮಾಡಿದ್ದರು. ಆ ಆದೇಶವನ್ನು ಹಿರಿಯ ಅಧಿಕಾರಿಗಳು ಬಹಿರಂಗಪಡಿಸಿಲ್ಲ, ಅದರಂತೆ ನಡೆದುಕೊಂಡೂ ಇಲ್ಲ' ಎಂದು ಅರಣ್ಯ ಇಲಾಖೆ ಸಿಬ್ಬಂದಿ ಆರೋಪಿಸಿದರು.

ವೃಂದೇತರ ಹುದ್ದೆಯಲ್ಲಿರುವ (ಎಕ್ಸ್–ಕೇಡರ್) ಐಎಫ್‌ಎಸ್ ಅಧಿಕಾರಿಗಳು

ಸುದರ್ಶನ್ ಜಿ.ಎ.	ಸಿಇಒ, ರಾಜ್ಯ ಔಷಧಿ ಗಿಡಮೂಲಿಕೆಗಳ ಪ್ರಾಧಿಕಾರ (ಕೆಎಂಪಿಎ)
ಜಗತ್ ರಾಮ್	ಸದಸ್ಯ ಕಾರ್ಯದರ್ಶಿ, ಜೀವವೈವಿಧ್ಯ ಮಂಡಳಿ
ಮನೋಜ್‌ಕುಮಾರ್ ಶುಕ್ಲ	ಕಾರ್ಯನಿರ್ವಾಹಕ ನಿರ್ದೇಶಕ, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
ರವಿ ಬಿ.ಪಿ	ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ (ಎಫ್‌ಇಇ) ಇಲಾಖೆ
ರಾಧಾದೇವಿ	ವ್ಯವಸ್ಥಾಪಕ ನಿರ್ದೇಶಕಿ, ಅರಣ್ಯ ಅಭಿವೃದ್ಧಿ ನಿಗಮ
ಪಿ.ಸಿ. ರೇ	ಸದಸ್ಯ ಕಾರ್ಯದರ್ಶಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಪರಿಹಾರಾತ್ಮಕ ನೆಡುತೋಪು ನಿಧಿ ನಿರ್ವಹಣೆ ಮತ್ತು ಯೋಜನ ಪ್ರಾಧಿಕಾರ (ಕಾಂಪಾ)
ಮಹೇಶ್ ಬಿ. ಶಿರೂರ್	ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಲಿಮಿಟೆಡ್
ಮನೋಜ್‌ಕುಮಾರ್	ವ್ಯವಸ್ಥಾಪಕ ನಿರ್ದೇಶಕ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಟ್ (ಎಂಎಸ್‌ಐಎಲ್) ಮತ್ತು ವ್ಯವಸ್ಥಾಪಕ ನಿರ್ದೇಶಕ ಜಂಗಲ್ ಲಾಡ್ಜ್ಸ್
ಶ್ರೀನಿವಾಸುಲು	ವ್ಯವಸ್ಥಾಪಕ ನಿರ್ದೇಶಕ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ
ಗೋಕುಲ್ ಆರ್	ನಿರ್ದೇಶಕ, ತಾಂತ್ರಿಕ ಕೋಶ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಶಾಶ್ವತಿ ಮಿಶ್ರಾ	ಎಪಿಸಿಸಿಎಫ್, ಆನೆ ಯೋಜನೆ
ವಿಪಿನ್ ಸಿಂಗ್	ಯೋಜನಾ ನಿರ್ದೇಶಕ, ಮಾನವ ಸಂಪನ್ಮೂಲ ನಿರ್ವಹಣೆ ಸಂಸ್ಥೆ (ಎಚ್‌ಆರ್‌ಎಂಎಸ್)
ಮನೋಜ್ ಆರ್	ಮಿಷನ್ ನಿರ್ದೇಶಕ, ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಮಿಷನ್ (ಐಟಿಬಿಐಎಫ್) ಮತ್ತು ಸಿಇಒ, ಇ–ಆಡಳಿತ ಕೇಂದ್ರ (ಸಿಇಜಿ)
ವೆಂಕಟೇಶನ್ ಎಸ್	ವರ್ಕಿಂಗ್ ಪ್ಲ್ಯಾನ್, ಬಳ್ಳಾರಿ
ರಮೇಶ್ ಕುಮಾರ್ ಪಿ	ವರ್ಕಿಂಗ್ ಪ್ಲ್ಯಾನ್, ಮೈಸೂರು
ಚಂದ್ರಶೇಖರ ನಾಯಕ್ ಕೆ.	ಚಾಮರಾಜನಗರ ವೃತ್ತ
ಕಮಲಾ ಕೆ	ವ್ಯವಸ್ಥಾಪಕ ನಿರ್ದೇಶಕಿ, ಗೇರು ಅಭಿವೃದ್ಧಿ ನಿಗಮ ನಿಯಮಿತ
ಶಿವಶಂಕರ್ ಎಸ್	ರಿಜಿಸ್ಟ್ರಾರ್, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಯಶ್‌ಪಾಲ್ ಕ್ಷೀರಸಾಗರ್	ಭದ್ರಾ ಹುಲಿ ಸಂರಕ್ಷಣೆ
ಡಿ. ಮಹೇಶ್‌ಕುಮಾರ್	ಕಾರ್ಯನಿರ್ವಾಹಕ ನಿರ್ದೇಶಕ, ಚಾಮರಾಜೇಂದ್ರ ವನ್ಯಜೀವಿ ಉದ್ಯಾನ
ಎಸ್. ಪ್ರಭಾಕರನ್	ನಿರ್ದೇಶಕ, ಬಂಡೀಪುರ ರಾಷ್ಟ್ರೀಯ ಉದ್ಯಾನ
ಎ.ವಿ. ಸೂರ್ಯಸೇನ್	ಕಾರ್ಯನಿರ್ವಾಹಕ ನಿರ್ದೇಶಕ, ಬನ್ನೇರುಘಟ್ಟ ಜೈವಿಕ ಉದ್ಯಾನ
ಪ್ರಶಾಂತ್ ಶಂಕಿನಮಠ	ಕಾರ್ಯನಿರ್ವಾಹಕ ನಿರ್ದೇಶಕ, ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಲಿಮಿಟೆಡ್ (ಕೆಎಸ್‌ಎಫ್‌ಐಸಿ)
ದಿನೇಶ್‌ಕುಮಾರ್ ವೈ.ಕೆ	ಪ್ರಾದೇಶಿಕ ನಿರ್ದೇಶಕ, ಪರಿಸರ, ಉಡುಪಿ ಮತ್ತು ಮಂಗಳೂರು
ಎಚ್.ಸಿ. ಗಿರೀಶ್	ಆಯುಕ್ತ, ಜಲಾನಯನ ಅಭಿವೃದ್ಧಿ ಇಲಾಖೆ
ಶಿಂಧೆ ನಿಲೇಶ್ ಡಿಯೊಬ	ನಿರ್ದೇಶಕ ದಾಂಡೇಲಿ ರಾಷ್ಟ್ರೀಯ ಉದ್ಯಾನ
ಪ್ರಶಾಂತ್ ಪಿ.ಕೆ.ಎಂ	ವ್ಯವಸ್ಥಾಪಕ ನಿರ್ದೇಶಕ ಸಾಬೂನು ಮತ್ತು ಮಾರ್ಜಕ ನಿಯಮಿತ
ಉದಯಕುಮಾರ್ ಜೋಗಿ	ವರ್ಕಿಂಗ್ ಪ್ಲ್ಯಾನ್, ಚಿಕ್ಕಮಗಳೂರು
ಶ್ರೀಪತಿ ಬಿ.ಎಸ್	ಡಿಸಿಎಫ್, ಸಂಶೋಧನೆ, ಧಾರವಾಡ
ನಿರ್ಮಲಾ ಎನ್.ಕೆ	ಡಿಸಿಎಫ್, ಸಂಶೋಧನೆ, ಮಡಿಕೇರಿ
ಸೌರಬ್ ಕುಮಾರ್	ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ
ಲೇಖಾರಜ್ ಮೀನಾ	ಕುದುರೆಮುಖ ವನ್ಯಜೀವಿ ಉಪವಿಭಾಗ
ಯೋಗೇಶ್ ಸಿ.ಕೆ	ಕಾರ್ಗಲ್ ವನ್ಯಜೀವಿ ಉಪವಿಭಾಗ
ಸೂರ್ಯದೇವ ಪಾಠಕ್	ಭೂಸ್ವಾಧೀನ ಮತ್ತು ಅರಣ್ಯ ಘಟಕ ಜಲಸಂಪನ್ಮೂಲ ಇಲಾಖೆ
ಹರ್ಷಕುಮಾರ ಚಿಕ್ಕನರಗುಂದ	ಫೀಲ್ಡ್ ಡೈರೆಕ್ಟರ್, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನ, ನಾಗರಹೊಳೆ

ಸಾರಿಗೆ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ

ಮಂಗಳೂರು: 'ರಾಜ್ಯದಲ್ಲಿ ಸಾರಿಗೆ ಸೆಸ್ ಮೂಲಕ ಸಂಗ್ರಹವಾಗುವ ಮೊತ್ತದಲ್ಲಿ ಶೇ 27ರಷ್ಟನ್ನು ಪಡೆದುಕೊಂಡು ಕಾರ್ಮಿಕ ಇಲಾಖೆಯು ಸಾರಿಗೆ ವಲಯದ ಕಾರ್ಮಿಕರಿಗೆ ಸವಲತ್ತುಗಳನ್ನು ಕಲ್ಪಿಸಲಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಶೇ 11ರಷ್ಟು ಸಾರಿಗೆ ಸೆಸ್ ಸಂಗ್ರಹಿಸಲಾಗುತ್ತಿದೆ. ಇದನ್ನೇ ಬಳಸಿ ಸಾರಿಗೆ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿದ್ದಾರೆ. ಗ್ಯಾರೇಜ್‌ಗಳೂ ಸೇರಿದಂತೆ ಸಾರಿಗೆ ವಲಯದಲ್ಲಿ ಕಾರ್ಯ ನಿರ್ವಹಿಸುವ ಸುಮಾರು 50 ಲಕ್ಷ ಕಾರ್ಮಿಕರಿಗೆ ಇದರಿಂದ ಪ್ರಯೋಜನ ಆಗಲಿದೆ' ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಷೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ, ಆಲಹಳ್ಳಿ ಗ್ರಾಮ, ವಕ್ಕಲೇರಿ ಹೋಬಳಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಜಮೀನುಗಳು, ಈ ಕೆಳಗೆ ಉಲ್ಲೇಖಿಸಲಾಗಿರುವ ಜಮೀನಿನ ಮಾಲೀಕರುಗಳೇ ಸಂಪೂರ್ಣ ಮಾಲೀಕರಾಗಿರುತ್ತಾರೆ ಮತ್ತು ಜಮೀನುಗಳು ಅವರ ಸ್ವಾಧೀನತೆಯಲ್ಲಿರುತ್ತವೆ.

ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಗಳ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಮಾರಾಟ, ವರ್ಗಾವಣೆ, ಅಸೈನ್‌ಮೆಂಟ್, ವಿನಿಮಯ, ಚಾರ್ಜ್, ಟೆನೆನ್ಸಿ, ಸಬ್ ಟೆನೆನ್ಸಿ, ಭೋಗ್ಯ, ಉಪ ಭೋಗ್ಯ, ಲೈಸೆನ್ಸ್, ಅಡಮಾನ, ಆನುವಂಶಿಕ, ಪಾಲು, ಉಡುಗೊರೆ, ಡಿವೈಸ್, ಲೀನ್, ನಿರ್ವಹಣೆ, ಈಸ್‌ಮೆಂಟ್, ಋಣಭಾರ, ಟ್ರಸ್ಟ್, ಕೊವೆನಂಟ್, ಸ್ವಾಧೀನತೆ, ಫಲಾನುಭವಿ ಹಿತಾಸಕ್ತಿ ಅಥವಾ ಪ್ರಿಯಾಂಪ್ಷನ್ ಅಥವಾ ಯಾವುದೇ ಒಪ್ಪಂದದ ಅಡಿಯಲ್ಲಿ ಅಥವಾ ಇತರೆ ಡಿಸ್ಪೊಸಿಶನ್ ಅಡಿಯಲ್ಲಿ ಅಥವಾ ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರ, ತೀರ್ಪು ಪ್ರಾಧಿಕಾರದಲ್ಲಿನ್ ವ್ಯಾಜ್ಯ ಅಥವಾ ನೀಡಲಾಗಿರುವ ಆದೇಶದ ಅಡಿಯಲ್ಲಿ, ಲಿಸ್ಪೆಂಡೆನ್ಸ್, ಪವರ್ ಆಫ್ ಅಟಾರ್ನಿ, ಬಿಕ್ವೆಸ್ಟ್, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕುಗಳು, ಪಾಲುದಾರಿಕೆ, ಕುಟುಂಬ ವ್ಯವಸ್ಥೆ ಅಥವಾ ಇತ್ಯರ್ಥ ಅಥವಾ ಇನ್ನಿತರ ಯಾವುದೇ ಸ್ವರೂಪದ ಋಣಭಾರಗಳು ಸೇರಿದಂತೆ, ಯಾವುದೇ ರೀತಿಯ ಕ್ಲೇಮ್, ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಈ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ದಾಖಲಾತಿ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರ ಗಮನಕ್ಕೆ ತರಬೇಕೆಂದು ಕೋರಲಾಗಿದ್ದು, ಇದಕ್ಕೆ ತಪ್ಪಿದಲ್ಲಿ, ಯಾವುದೇ ಕ್ಲೇಮ್‌ಗಳಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಒಂದು ವೇಳೆ ಕ್ಲೇಮ್‌ಗಳಿದ್ದಲ್ಲಿ, ಅಂತಹ ಕ್ಲೇಮುದಾರರರ ಕ್ಲೇಮ್‌ನ್ನು ಕೈಬಿಡಲಾಗುತ್ತದೆ ಮತ್ತು/ಅಥವಾ ಕ್ಲೇಮ್ ಮಾಡುವ ಹಕ್ಕನ್ನು ಅವರು ಕಳೆದುಕೊಳ್ಳುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ	ಚಕ್ಕುಬಂದಿ			
			ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
	ಸನ್‌ಲಾರ್ಜ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಒಡೆತನದ ಜಮೀನುಗಳು					
1.	107	ಪರಿವರ್ತಿತ ಭೂಮಿ – 5 ಎಕರೆ 9 ಗುಂಟಾಗಳು ಜೊತೆಗೆ 'ಬಿ' ಖರಾಬ್‌ನ 10 ಗುಂಟಾಗಳು	ಸರ್ವೆ ನಂ. 108	ರಸ್ತೆ ಮತ್ತು ಮಂದಹಳ್ಳಿ ಗ್ರಾಮದ ಸರ್ವೆ ನಂ. 29	ರಸ್ತೆ ಮತ್ತು ಸರ್ವೆ ನಂ. 100	ಮಂದಹಳ್ಳಿ ಗ್ರಾಮದ ಗಡಿ
2.	108	ಪರಿವರ್ತಿತ ಭೂಮಿ – 5 ಎಕರೆ 23 ಗುಂಟಾಗಳು	ಸರ್ವೆ ನಂ. 109	ಸರ್ವೆ ನಂ. 107	ರಸ್ತೆ ಮತ್ತು ಸರ್ವೆ ನಂ. 100	ಮಂದಹಳ್ಳಿ ಗ್ರಾಮದ ಗಡಿ
3.	109	ಪರಿವರ್ತಿತ ಭೂಮಿ – 5 ಎಕರೆ 23 ಗುಂಟಾಗಳು	ಸರ್ವೆ ನಂ. 110	ಸರ್ವೆ ನಂ. 108	ರಸ್ತೆ ಮತ್ತು ಸರ್ವೆ ನಂ. 100	ಸರ್ವೆ ನಂ. 128 (ಹಳೆಯ ಸರ್ವೆ ನಂ. 2) ಮತ್ತು ಮಂದಹಳ್ಳಿ ಗ್ರಾಮದ ಗಡಿ
4.	110 (ಭಾಗ)	ಪರಿವರ್ತಿತ ಭೂಮಿ – 2 ಎಕರೆ 11 ಗುಂಟಾಗಳು	ಸರ್ವೆ ನಂ. 118 ಮತ್ತು 119	ಸರ್ವೆ ನಂ. 109	ರಸ್ತೆ ಮತ್ತು ಸರ್ವೆ ನಂ. 100	ಸರ್ವೆ ನಂ. 110ರ ಉಳಿಕೆ ಭಾಗ
5.	117 /1 (ಭಾಗ)	ಪರಿವರ್ತಿತ ಭೂಮಿ – 2 ಎಕರೆ 15 ಗುಂಟಾಗಳು ಜೊತೆಗೆ 'ಬಿ' ಖರಾಬ್‌ನ 1 ಗುಂಟಾ	ರಸ್ತೆ	ಸರ್ವೆ ನಂ. 117/1 ಭೂಮಿಯ ಭಾಗ ಮತ್ತು ಸರ್ವೆ ನಂ. 133	ರಸ್ತೆ ಮತ್ತು ಸರ್ವೆ ನಂ. 2 ಮತ್ತು 133	ಸರ್ವೆ ನಂ. 117/2, 3, 4 ಮತ್ತು 5
6.	117 /2 (ಹಳೆಯ ಸರ್ವೆ ನಂ. 117)	ಕೃಷಿ ಭೂಮಿ 23 ¾ ಗುಂಟಾಗಳು	ಸರ್ವೆ ನಂ. 117/3	ಸರ್ವೆ ನಂ. 117/1	ಸರ್ವೆ ನಂ. 117/1	ಸರ್ವೆ ನಂ. 95 ಮತ್ತು 96
7.	117 /3 (ಹಳೆಯ ಸರ್ವೆ ನಂ. 117)	ಕೃಷಿ ಭೂಮಿ 23 ¾ ಗುಂಟಾಗಳು	ಸರ್ವೆ ನಂ. 117/4	ಸರ್ವೆ ನಂ. 117/2	ಸರ್ವೆ ನಂ. 117/1	ಸರ್ವೆ ನಂ. 96 ಮತ್ತು 101
8.	117 /4 (ಹಳೆಯ ಸರ್ವೆ ನಂ. 117)	ಕೃಷಿ ಭೂಮಿ 23 ¾ ಗುಂಟಾಗಳು	ಸರ್ವೆ ನಂ. 117/5	ಸರ್ವೆ ನಂ. 117/3	ಸರ್ವೆ ನಂ. 117/1	ಸರ್ವೆ ನಂ. 101
9.	(117 /5 (ಹಳೆಯ ಸರ್ವೆ ನಂ. 117)	ಕೃಷಿ ಭೂಮಿ 23 ¾ ಗುಂಟಾಸ್ 'ಬಿ' ಖರಾಬ್‌ನ 3 ಗುಂಟಾಗಳು ಸೇರಿದಂತೆ	ರಸ್ತೆ	ಸರ್ವೆ ನಂ. 117/4	ಸರ್ವೆ ನಂ. 117/1	ಸರ್ವೆ ನಂ. 101
10.	119 /1	ಕೃಷಿ ಭೂಮಿ 1 ಎಕರೆ 8½ ಗುಂಟಾಗಳು – 3½ ಗುಂಟಾಸ್ 'ಎ' ಖರಾಬ್‌ನ ಭೂಮಿ ಸೇರಿದಂತೆ	ಸರ್ವೆ ನಂ. 119/2	ಸರ್ವೆ ನಂ. 110	ಸರ್ವೆ ನಂ. 118	ಸರ್ವೆ ನಂ. 120
11.	120 /1	ಪರಿವರ್ತಿತ ಭೂಮಿ – 1 ಎಕರೆ 8½ ಗುಂಟಾಸ್	ಸರ್ವೆ ನಂ. 116/2	ಸರ್ವೆ ನಂ. 110	ಸರ್ವೆ ನಂ. 119	ಸರ್ವೆ ನಂ. 120/2
12.	120 /2	ಪರಿವರ್ತಿತ ಭೂಮಿ – 1 ಎಕರೆ 8½ ಗುಂಟಾಸ್	ಸರ್ವೆ ನಂ. 116/2	ಸರ್ವೆ ನಂ. 110	ಸರ್ವೆ ನಂ. 120/1	ಸರ್ವೆ ನಂ. 126
13.	126 /1	ಕೃಷಿ ಭೂಮಿ 2 ಎಕರೆ 9 ಗುಂಟಾಗಳು	ಸರ್ವೆ ನಂ. 126/3,4, 5 ಮತ್ತು 6	ಸರ್ವೆ ನಂ. 110 ಮತ್ತು 128	ಸರ್ವೆ ನಂ. 120	ಸರ್ವೆ ನಂ. 102
14.	126 /2	ಕೃಷಿ ಭೂಮಿ 1 ಎಕರೆ	ಸರ್ವೆ ನಂ. 117/1	ಸರ್ವೆ ನಂ. 126/5 ಮತ್ತು 126/6	ಸರ್ವೆ ನಂ. 126/5 ಮತ್ತು 127	ಸರ್ವೆ ನಂ. 102 ಮತ್ತು 95/1
15.	126/3 (ಹಳೆಯ ಸರ್ವೆ ನಂ. 126 /1)	ಕೃಷಿ ಭೂಮಿ 10 ಗುಂಟಾಗಳು	ಸರ್ವೆ ನಂ. 127	ಸರ್ವೆ ನಂ. 126/1	ಸರ್ವೆ ನಂ. 120	ಸರ್ವೆ ನಂ. 126/4
16.	126/4 (ಹಳೆಯ ಸರ್ವೆ ನಂ. 126 /1)	ಕೃಷಿ ಭೂಮಿ 10 ಗುಂಟಾಗಳು	ಸರ್ವೆ ನಂ. 127	ಸರ್ವೆ ನಂ. 126/1	ಸರ್ವೆ ನಂ. 126/3 ಮತ್ತು 127	ಸರ್ವೆ ನಂ. 126/5
17.	126/5 (ಹಳೆಯ ಸರ್ವೆ ನಂ. 126 /1)	ಕೃಷಿ ಭೂಮಿ 10 ಗುಂಟಾಗಳು	ಸರ್ವೆ ನಂ. 127 ಮತ್ತು 126/2	ಸರ್ವೆ ನಂ. 126/1	ಸರ್ವೆ ನಂ. 126/4	ಸರ್ವೆ ನಂ. 126/6 ಮತ್ತು 126/2
18.	126/6 (ಹಳೆಯ ಸರ್ವೆ ನಂ. 126 /1)	ಕೃಷಿ ಭೂಮಿ 10 ಗುಂಟಾಗಳು	ಸರ್ವೆ ನಂ. 126/2	ಸರ್ವೆ ನಂ. 126/1	ಸರ್ವೆ ನಂ. 126/5	ಸರ್ವೆ ನಂ. 102
	ಸನ್‌ಲಾರ್ಜ್ ಕನ್ಸಲ್ಟೆಂಟ್ಸ್ ಮತ್ತು ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಒಡೆತನದ ಜಮೀನುಗಳು					
19.	110 (ಭಾಗ)	ಪರಿವರ್ತಿತ ಭೂಮಿ 4 ಎಕರೆ	ಸರ್ವೆ ನಂ. 119, 120 ಮತ್ತು 126	ಸರ್ವೆ ನಂ. 109	ಸರ್ವೆ ನಂ.110ರ ಉಳಿಕೆ ಭಾಗ	ಸರ್ವೆ ನಂ. 128 ಮತ್ತು 126
20.	117 /1 (ಭಾಗ)	ಪರಿವರ್ತಿತ ಭೂಮಿ 1 ಎಕರೆ	ಸರ್ವೆ ನಂ. 117/1 ಮತ್ತು 117/2ರ ಭೂಮಿಯ ಭಾಗ	ಸರ್ವೆ ನಂ. 117/1ರ ಭೂಮಿಯ ಭಾಗ	ಸರ್ವೆ ನಂ. 127 ಮತ್ತು 133	ಸರ್ವೆ ನಂ. 95/1
21.	117 /1 (ಭಾಗ)	ಪರಿವರ್ತಿತ ಭೂಮಿ 1 ಎಕರೆ	ಸರ್ವೆ ನಂ. 117/1ರ ಭೂಮಿಯ ಭಾಗ	ಸರ್ವೆ ನಂ. 126/2	ಸರ್ವೆ ನಂ. 127 ಮತ್ತು 133	ಸರ್ವೆ ನಂ. 95/1
22.	118	ಪರಿವರ್ತಿತ ಭೂಮಿ 2 ಎಕರೆ 17 ಗುಂಟಾಗಳು	ಸರ್ವೆ ನಂ. 116/1	ಸರ್ವೆ ನಂ. 110	ಆಲಹಳ್ಳಿ ರಸ್ತೆ ಮತ್ತು ಸರ್ವೆ ನಂ. 2 ಮತ್ತು 100	ಸರ್ವೆ ನಂ. 119
23.	119 /2	ಪರಿವರ್ತಿತ ಭೂಮಿ – 1 ಎಕರೆ 8½ ಗುಂಟಾಗಳು	ಸರ್ವೆ ನಂ. 116/2 ಮತ್ತು 116/1	ಸರ್ವೆ ನಂ. 119/1	ಸರ್ವೆ ನಂ. 118	ಸರ್ವೆ ನಂ. 120

ದಿನಾಂಕ: 21–11–2023
ಸ್ಥಳ: ಬೆಂಗಳೂರು

ಪವಿತ್ರಾ. ಬಿ.ಟಿ
ಕೌನ್ಸೆಲ್
ಖೇತಾನ್ & ಕೋ ಎಲ್‌ಎಲ್‌ಪಿ
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಾಥ್ ರೋಡ್ ಬೆಂಗಳೂರು –560 025
ಫೋನ್: +91 80 4339 7000

Horlicks Women's PLUS
ಆಗಾಗ್ಗೆ ಬೆನ್ನಿನಲ್ಲಿ ಅಸಹನೀಯ ಎನಿಸುತ್ತದೆಯೇ?
ದುರ್ಬಲ ಮೂಳೆಗಳಾಗಿರಬಹುದು.
ಹಾರ್ಲಿಕ್ಸ್ ವುಮೆನ್ಸ್ ಪ್ಲಸ್ 6 ತಿಂಗಳುಗಳನ್ ಮೂಳೆಯ ದೃಢತೆಯನ್ನು ಸುಧಾರಿಸುತ್ತದೆ
ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಯ 100% RDA
NEW
caramel flavour
Horlicks Women's PLUS
NUTRITION FOR STRONG BONES
CLINICALLY PROVEN
BONE STRENGTH
100% RDA OF CALCIUM, VITAMIN D & K2
Also available at DMart
ಸೃಜನಾತ್ಮಕ ದೃಶ್ಯೀಕರಣ. *ಹಳೆಯ ಪ್ಯಾಕ್‌ಗೆ ಹೋಲಿಸಿದರೆ ಹೊಸ ಪ್ಯಾಕೇಜಿಂಗ್ ವಿನ್ಯಾಸ. #ಮಹಿಳೆಯರ ಮೇಲೆ ಐಸಿಎಂಆರ್ 2020 ಮಾರ್ಗಸೂಚಿಗೆ ಅನುಗುಣವಾಗಿ 2 ಸರ್ವ್ ಗಳಲ್ಲಿ (60 ಗ್ರಾಂ). ದೈನಂದಿನ ಆಹಾರದ ಭಾಗವಾಗಿ ಸೇವಿಸಿದಲ್ಲಿ ಹಾರ್ಲಿಕ್ಸ್ ವುಮೆನ್ಸ್ ಪ್ಲಸ್ ಪೌಷ್ಟಿಕಾಂಶಯುಕ್ತ ಪೇಯವಾಗಿದೆ. ~ಮೂಲ – [ಪೋಷಕಾಂಶಗಳು. 2021;13(2):364] *ಯಾವುದೇ ಸಕ್ಕರೆ ಸೇರಿಸಲಾಗಿಲ್ಲ. ಸಕ್ಕರೆ ಎನ್ನುವುದು ಸುಕ್ರೋಸ್ ಅನ್ನು ಸೂಚಿಸುತ್ತದೆ, ಇದು ಪ್ರಾಕೃತಿಕವಾಗಿ ದೊರೆಯುವ ಸಕ್ಕರೆ ಹೊಂದಿದೆ

ಇದು ಅಸೆಸಲ್ಫೇಮ್ ಪೊಟ್ಯಾಷಿಯಂ ಹೊಂದಿದೆ. ಮಕ್ಕಳು, ಗರ್ಭಿಣಿಯರು ಅಥವಾ ಹಾಲುಣಿಸುವ ಮಹಿಳೆಯರಿಗೆ ಶಿಫಾರಸ್ಸು ಮಾಡಲಾಗಿಲ್ಲ.

ಕ್ಯಾಲೊರಿ ರಹಿತ ಸಿಹಿಕಾರಕ ಹೊಂದಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in
ಪ್ರಜಾವಾಣಿ ಮಂಗಳವಾರ • ನವೆಂಬರ್ 21, 2023

ಅಭಿಮತ



ಸುಭಾಷಿತ

ನೀವು ಯಾರನ್ನಾದರೂ ಪ್ರೀತಿಸಿದರೆ, ಅವರು ಹೇಗಿದ್ದಾರೆಯೋ ಹಾಗೇ ಪ್ರೀತಿಸಬೇಕೇ ವಿನಾ ಅವರು ಹೇಗಿರಬೇಕೆಂದು ನೀವು ಬಯಸುತ್ತೀರೋ ಹಾಗಲ್ಲ.

-ಲಿಯೊ ಟಾಲ್‌ಸ್ಟಾಯ್

ಆಸ್ಟ್ರೇಲಿಯಾಕ್ಕೆ ವಿಶ್ವಕಪ್ ಕಿರೀಟ ಫೈನಲ್‌ನಲ್ಲಿ ಎಡವಿದ ಭಾರತ

ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಲ್ಲಿ ಚಾಂಪಿಯನ್ ಆಗುವುದನ್ನೇ ಅಚ್ಚುಮೆಚ್ಚಿನ ಹವ್ಯಾಸವಾಗಿಸಿಕೊಂಡಿರುವ ಆಸ್ಟ್ರೇಲಿಯಾ ಮತ್ತೊಮ್ಮೆ ಪಾರಮ್ಯ ಮೆರೆದಿದೆ. ಏಕದಿನ ಕ್ರಿಕೆಟ್ ಮಾದರಿಯ 13ನೇ ವಿಶ್ವಕಪ್ ಟೂರ್ನಿಯಲ್ಲಿ ಗೆದ್ದು ತನ್ನ ಸಾಮರ್ಥ್ಯವನ್ನು ಜಗಜ್ಜಾಹೀರು ಮಾಡಿದೆ. ಅಹಮದಾಬಾದಿನ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡ ಶಿಸ್ತು ಮತ್ತು ಯೋಜನಾಬದ್ಧ ಆಟದಿಂದ ರೋಹಿತ್ ಶರ್ಮಾ ಬಳಗವನ್ನು ಸೋಲಿಸಿತು. 12 ವರ್ಷಗಳ ನಂತರ ಭಾರತಕ್ಕೆ ಮತ್ತೆ ವಿಶ್ವಕಪ್ ಒಲಿಯಬಹುದೆಂಬ ನಿರೀಕ್ಷೆಯಲ್ಲಿದ್ದ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ನಿರಾಶೆಗೊಳಗಾದರು. ಅದರಲ್ಲೂ ದೇಶ, ವಿದೇಶಗಳಿಂದ ಫೈನಲ್ ಪಂದ್ಯ ವೀಕ್ಷಿಸಲು ಬಂದಿದ್ದ 90 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಕಣ್ಣೀರು ಹಾಕಿದರು. ಕ್ರಿಕೆಟ್ ಆಟವನ್ನು ಧರ್ಮದಂತೆ ಆರಾಧಿಸುವ ಭಾರತದ ಅಭಿಮಾನಿಗಳ ವಲಯಕ್ಕೆ ಈ ಸೋಲು ಜೀರ್ಣಿಸಿಕೊಳ್ಳುವುದು ಸುಲಭವಲ್ಲ. ಏಕೆಂದರೆ, ಒಂದೂವರೆ ತಿಂಗಳಿನಿಂದ ನಡೆದ ಈ ಟೂರ್ನಿಯಲ್ಲಿ ಭಾರತವು ಲೀಗ್ ಹಂತದ ಎಲ್ಲ ಒಂಬತ್ತು ಪಂದ್ಯಗಳು ಮತ್ತು ನ್ಯೂಜಿಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ ಭರ್ಜರಿ ಜಯ ಸಾಧಿಸಿತ್ತು. ತಂಡದ ಎಲ್ಲರೂ ಉತ್ತಮವಾಗಿ ಆಡಿದ್ದರು. ಒಂದಿಲ್ಲೊಂದು ರೀತಿಯಲ್ಲಿ ಗೆಲುವುಗಳಿಗೆ ಕಾಣಿಕೆ ನೀಡಿದ್ದರು. ಆದ್ದರಿಂದಾಗಿಯೇ ತಂಡವು ವಿಶ್ವಕಿರೀಟ ಧರಿಸುವ ಅಪಾರ ವಿಶ್ವಾಸ ಮೂಡಿತ್ತು. ಆದರೆ ಲೀಗ್ ಹಂತದ ಪಂದ್ಯಗಳೇ ಬೇರೆ ಮತ್ತು ನಾಕೌಟ್ ಹಣಾಹಣಿಗಳೇ ಭಿನ್ನ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಈ ಹಂತದಲ್ಲಿಯೇ ಕಳೆದೊಂದು ದಶಕದಲ್ಲಿ ಹಲವು ಬಾರಿ ಭಾರತ ಪೆಟ್ಟು ತಿಂದಿದೆ. ಏಕದಿನ ಹಾಗೂ ಟಿ20 ಮಾದರಿಗಳ ವಿಶ್ವಕಪ್ ಟೂರ್ನಿಯಲ್ಲಿ ತಲಾ ಎರಡು ಬಾರಿ ಸೆಮಿಫೈನಲ್‌ಗಳಲ್ಲಿ ಮುಗ್ಗರಿಸಿದೆ. 2017ರಲ್ಲಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಸೋತಿತ್ತು. ಅಲ್ಲದೆ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಎರಡು ಫೈನಲ್‌ಗಳಲ್ಲಿ ಪರಾಭವಗೊಂಡಿತ್ತು. ವೈಯಕ್ತಿಕವಾಗಿ ವಿಶ್ವಶ್ರೇಷ್ಠ ದಾಖಲೆಗಳನ್ನು ಹೊಂದಿರುವ ಆಟಗಾರರಿರುವ ತಂಡವು ಈ ಸವಾಲನ್ನು ಮೀರಿ ನಿಲ್ಲುವಲ್ಲಿ ವಿಫಲವಾಗುತ್ತಿರುವುದು ವಿಪರ್ಯಾಸವೇ ಸರಿ. ದ್ವಿಪಕ್ಷೀಯ ಸರಣಿಗಳನ್ನು ಜಯಿಸಿ ಅಭಿಮಾನಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ವಿಶ್ವಕಪ್‌ಗಳನ್ನು ಜಯಿಸಿದಾಗ ಮಾತ್ರವೇ ನಿಜವಾದ ಕೀರ್ತಿ ಲಭಿಸುತ್ತದೆ ಮತ್ತು ವಿಜಯೀ ಆಟಗಾರರು ದಿಗ್ಗಜರಾಗುತ್ತಾರೆ. ಈ ಮಾತಿಗೆ 1983 ಮತ್ತು 2011ರ ವಿಶ್ವಕಪ್ ಗೆದ್ದ ತಂಡಗಳೇ ಸಾಕ್ಷಿ. ಸರ್ವಶಕ್ತವಾಗಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ ತುರ್ತು ಈಗ ಇದೆ.

ಒಂದೂವರೆ ತಿಂಗಳ 'ಕ್ರಿಕೆಟ್ ಹಬ್ಬ'ಕ್ಕೆ ತೆರೆಬಿದ್ದಿದೆ. ಲೀಗ್ ಹಂತದ ಎಲ್ಲ ಪಂದ್ಯಗಳು ಮತ್ತು ಸೆಮಿಫೈನಲ್‌ನಲ್ಲಿ ಭರ್ಜರಿ ಜಯ ಸಾಧಿಸಿದ ಭಾರತ ತಂಡ, ಫೈನಲ್‌ನಲ್ಲಿ ಮುಗ್ಗರಿಸಿದ್ದು ಕ್ರೀಡಾಪ್ರೇಮಿಗಳಲ್ಲಿ ನಿರಾಶೆ ಮೂಡಿಸಿದೆ

ವೃತ್ತಿಜೀವನದ ಸಂಧ್ಯಾಕಾಲದಲ್ಲಿರುವ ರೋಹಿತ್, ಯುವ ಆಟಗಾರರಾದ ಶುಭಮನ್ ಗಿಲ್, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಗಾಯದ ಸಮಸ್ಯೆಯನ್ನು ಗೆದ್ದು ಬಂದು ಅಮೋಘ ಆಟವಾಡಿದ ಕೆ.ಎಲ್.ರಾಹುಲ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ರವೀಂದ್ರ ಜಡೇಜ ಅವರೆಲ್ಲರಿಗೂ ಈ ವಿಶ್ವಕಪ್ ವಿಜಯದ ಅವಶ್ಯಕತೆ ಇತ್ತು. ಬಲಿಷ್ಠ ತಂಡವನ್ನಾಗಿ ರೂಪಿಸಲು ತೆರೆಮರೆಯಲ್ಲಿ ಶ್ರಮಿಸಿದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಇದು ಜೀವಮಾನದ ಸಾಧನೆಯಾಗುತ್ತಿತ್ತು. ಆದರೆ ಹಿಂದಿನ ಅನುಭವ ಮತ್ತು ಭವಿಷ್ಯದ ಕನಸುಗಳು ಏನೇ ಇರಲಿ, ಪಂದ್ಯದ ದಿನ ಸಂಪೂರ್ಣ ಬದ್ಧತೆಯಿಂದ ಆಡುವ ತಂಡಕ್ಕೆ ಗೆಲುವು ಒಲಿಯುತ್ತದೆ. ಅದರಲ್ಲಿ ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ಇದಲ್ಲದೇ ಇನ್ನು ಕೆಲವು ಕಾರಣಗಳಿಗಾಗಿ ಈ ವಿಶ್ವಕಪ್ ಟೂರ್ನಿಯು ಜಗತ್ತಿನ ಗಮನ ಸೆಳೆಯಿತು. ಅಷ್ಟೇನೂ ಅನುಭವವಿಲ್ಲದ ಅಫ್ಗಾನಿಸ್ತಾನ ಮತ್ತು ನೆದರ್ಲೆಂಡ್ಸ್‌ನಂತಹ ತಂಡಗಳು ದೊಡ್ಡ ತಂಡಗಳಿಗೆ ಸೋಲಿನ ರುಚಿ ತೋರಿಸಿದವು. ಆದರೆ ಹೋದ ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡವು ಸೆಮಿಫೈನಲ್ ಪ್ರವೇಶಿಸುವಲ್ಲಿ ವಿಫಲವಾಯಿತು. ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಶ್ರೀಲಂಕಾ ತಂಡಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ನ್ಯೂಜಿಲೆಂಡ್ ತಂಡವು ನಾಲ್ಕರ ಘಟ್ಟದಲ್ಲಿ ಸೋತಿತು. ದಕ್ಷಿಣ ಆಫ್ರಿಕಾ ಈ ಬಾರಿಯೂ ತನ್ನ 'ಚೋಕರ್ಸ್' ಪಟ್ಟ ಕಿತ್ತೊಗೆಯುವಲ್ಲಿ ವಿಫಲವಾಯಿತು. ಕೆಲವು ವಿವಾದಗಳೂ ಸುದ್ದಿಯಾದವು. ಬಾಂಗ್ಲಾ ಎದುರಿನ ಪಂದ್ಯದಲ್ಲಿ ಶ್ರೀಲಂಕಾದ ಏಂಜೆಲೊ ಮ್ಯಾಥ್ಯೂಸ್ ಟೈಮ್ಡ್ ಔಟ್ ಆದರು. ಕ್ರಿಕೆಟ್ ಇತಿಹಾಸದಲ್ಲಿಯೇ ಇದು ಮೊದಲ ಘಟನೆಯಾಯಿತು. ಅಹಮದಾಬಾದಿನಲ್ಲಿ ಭಾರತ ಮತ್ತು ಪಾಕಿಸ್ತಾನ ಪಂದ್ಯ ನಡೆದಾಗ ಕೆಲವು ಅಭಿಮಾನಿಗಳು ಜೈಶ್ರೀರಾಮ್ ಎಂದು ಕೂಗಿದ್ದು, ಮತ್ತೊಂದು ಪಂದ್ಯದಲ್ಲಿ ಪಾಕ್ ಆಟಗಾರ ಮೊಹಮ್ಮದ್ ರಿಜ್ವಾನ್ ತಮ್ಮ ಶತಕವನ್ನು ಗಾಜಾದ ಸಂತ್ರಸ್ತರಿಗೆ ಅರ್ಪಿಸುವುದಾಗಿ ಹೇಳಿದ್ದು, ಮೈದಾನದಲ್ಲಿ ಪ್ರಾರ್ಥನೆ ಮಾಡಿದ್ದು ಹಾಗೂ ಫೈನಲ್ ಪಂದ್ಯದಲ್ಲಿ ಪ್ಯಾಲೆಸ್ಟೀನ್ ಬೆಂಬಲಿಗನೊಬ್ಬ ಬಿಗಿ ಭದ್ರತೆಯನ್ನೂ ದಾಟಿ ಪಿಚ್‌ಗೆ ನುಗ್ಗಿ ಬ್ಯಾಟರ್ ವಿರಾಟ್ ಕೊಹ್ಲಿ ಅವರನ್ನು ಅಪ್ಪಿಕೊಳ್ಳಲು ಪ್ರಯತ್ನಿಸಿದ್ದು ಚರ್ಚೆಗೆ ಗ್ರಾಸವಾಗಿವೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾದ ಉಪಪ್ರಧಾನಿ ರಿಚರ್ಡ್ ಮಾರ್ಲೆಸ್ ಭಾಗವಹಿಸಿದ್ದ ಈ ಪಂದ್ಯದ ಭದ್ರತಾ ವ್ಯವಸ್ಥೆ ಈಗ ಪ್ರಶ್ನಾರ್ಹವಾಗಿದೆ. ಟೂರ್ನಿ ಆರಂಭಕ್ಕೂ ಮುನ್ನ ವೇಳಾಪಟ್ಟಿಯ ಗೊಂದಲಗಳು ಮತ್ತು ಟಿಕೆಟ್ ಮಾರಾಟದ ಅವ್ಯವಸ್ಥೆಗಳೂ ಸುದ್ದಿಯಾಗಿದ್ದವು. ಇವೆಲ್ಲದರಾಚೆ ಕೊಹ್ಲಿ ದಾಖಲೆಯ ಐವತ್ತನೇ ಶತಕ, ಶಮಿ ಮೂರು ಬಾರಿ ಗಳಿಸಿದ ಐದು ವಿಕೆಟ್ ಗೊಂಚಲುಗಳು, ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಗಳಿಸಿದ ಅಮೋಘ ದ್ವಿಶತಕ ಬಹುಕಾಲ ನೆನಪಿನಲ್ಲಿ ಉಳಿಯುತ್ತವೆ. ಈ ಅಂಶಗಳೇ ಮುಂದಿನ ಪೀಳಿಗೆಗೆ ಪ್ರೇರಣೆಯಾಗುತ್ತವೆ.

ದಿನದ ಟ್ವೀಟ್

ಎಲ್ಲರ ಬಣ್ಣ ಬಯಲಾಗಲಿ

ಒತ್ತುವರಿ ಮಾಡಿಕೊಂಡ ಜಾಗದಲ್ಲಿ ಮಾಲ್ ಬಂದಿದೆ ಎಂದು ಒಬ್ಬರು, ಅನ್ಯರ ಜಾಗ ಕಬಳಿಸಿ ತೋಟ ಮಾಡಿಕೊಂಡಿದ್ದಾರೆ ಎಂದು ಮತ್ತೊಬ್ಬರು... ಈ ರೀತಿ ರಾಜಕಾರಣಿಗಳೇ ಒಬ್ಬರನ್ನೊಬ್ಬರು ಸಮಾಜದ ಮುಂದೆ ಬೆತ್ತಲಾಗಿಸುವುದು ಒಳ್ಳೆಯದೆ. ಎಲ್ಲರ ಹುಳುಕೂ ಹೊರಬರಬೇಕು. ಹೀಗೆ ಎಲ್ಲರ ಬೇನಾಮಿ, ಎಲ್ಲಾ ಅಕ್ರಮ ಜನರ ಮುಂದೆ ಬರಲಿ. ಆಗ ಎಲ್ಲರ ಅಸಲಿ ಮುಖ ಬಹಿರಂಗವಾಗುವುದು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಪ್ರಾಣಿ ಸಂತಾನಶಕ್ತಿ ಹರಣ ಯೋಜನೆಯಡಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುವುದರ ನಡುವೆಯೂ ರಸ್ತೆಗಳಲ್ಲಿ ಬೀದಿನಾಯಿಗಳ ಪಾರುಪತ್ಯ ಮುಂದುವರಿದಿದೆ. ಇದೀಗ, ಬೀದಿನಾಯಿಗಳನ್ನು ನಿಯಂತ್ರಿಸುವುದು ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳ ಹೊಣೆ ಎಂದು ಹೈಕೋರ್ಟ್‌ಗೆ ತಿಳಿಸುವ ಮೂಲಕ ಸ್ಥಳೀಯ ಸಂಸ್ಥೆಯು ಕರ್ತವ್ಯದಿಂದ ನುಣುಚಿಕೊಳ್ಳಲು ಮುಂದಾಗಿದೆ.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 21-11-1998

- **ಅರಮನೆಯಲ್ಲಿ ಆಸಕ್ತಿ ಇಲ್ಲ: ಜೇಠ್ಮಲಾನಿ**

ನವದೆಹಲಿ, ನ. 20– ಮೈಸೂರು ಅರಮನೆ ಸ್ವಾಧೀನ ಮಸೂದೆಗೆ ಒಪ್ಪಿಗೆ ದೊರೆಯುವಲ್ಲಿ ಆಗಿರುವ ವಿಳಂಬಕ್ಕೆ ತಾವು ಕಾರಣ ಎಂಬ ಪತ್ರಿಕಾ ವರದಿಗಳು ಸಂಪೂರ್ಣ ಸುಳ್ಳು ಮತ್ತು ವಿವೇಚನೆ ಇಲ್ಲದವು ಎಂದು ಕೇಂದ್ರ ನಗರ ವ್ಯವಹಾರಗಳ ಖಾತೆ ಸಚಿವ ರಾಂ ಜೇಠ್ಮಲಾನಿ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ಈ ತಿಂಗಳ 12ರಂದು ಬರೆದಿರುವ ಪತ್ರವನ್ನು ಇಂದು ಇಲ್ಲಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವ ಜೇಠ್ಮಲಾನಿ ಅವರು, 'ಸಹಜ ಕ್ರಿಯೆಯಂತೆ ಆ ಮಸೂದೆಯ ಬಗೆಗೆ ಟಿಪ್ಪಣಿ ನೀಡಲು ನನಗೆ ತಿಳಿಸಲಾಗಿತ್ತು. ಆದರೆ ಈ ಮಸೂದೆಯ ಔಚಿತ್ಯ ಮತ್ತು ಸಂವಿಧಾನಾತ್ಮಕ ಕ್ರಮಬದ್ಧತೆಯನ್ನು ಸೂಕ್ಷ್ಮವಾಗಿ ಗಮನಿಸಬೇಕೆಂದು ಮಾತ್ರ ಟಿಪ್ಪಣಿ ಕಳುಹಿಸಿರುವೆ' ಎಂದರು.

50 ವರ್ಷಗಳ ಹಿಂದೆ

ಬುಧವಾರ, 21-11-1973

- **ಪ್ರಯಾಣಿಕರ ರಕ್ಷಣೆಗೆ ಧಕ್ಕೆ ಬಂದರೆ ವಿಮಾನಯಾನವೇ ರದ್ದು**

ನವದೆಹಲಿ, ನ. 20– ಇಂಡಿಯನ್ ಏರ್‌ಲೈನ್ಸ್ ನೌಕರರ ಮುಷ್ಕರದಿಂದ ಪ್ರಯಾಣಿಕರ ಸುರಕ್ಷತೆಗೆ ಧಕ್ಕೆ ಬರುವಂತಾದರೆ ವಿಮಾನಯಾನವನ್ನೇ ನಿಲ್ಲಿಸಲು ಸರ್ಕಾರ ಹಿಂಜರಿಯುವುದಿಲ್ಲವೆಂದು ನಾಗರಿಕ ವಿಮಾನಯಾನ ಖಾತೆ ಸಚಿವ ರಾಜಬಹಾದುರ್ ಅವರು ಇಂದು ಎಚ್ಚರಿಕೆ ನೀಡಿದರು.

ನವೆಂಬರ್ 12ರಿಂದ ಇಂಡಿಯನ್ ಏರ್‌ಲೈನ್ಸ್ ಕಾರ್ಯನಿರ್ವಹಣೆಯಲ್ಲಿ ಏನೂ ಸುಧಾರಣೆಯಾಗಿಲ್ಲವೆಂದೂ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆಯೆಂದೂ ಸಚಿವರು ಹೇಳಿದರು.

ಇಂಡಿಯನ್ ಏರ್‌ಲೈನ್ಸ್ ವಿಮಾನಯಾನ ವ್ಯವಸ್ಥೆ ಹದಗೆಟ್ಟಿರುವ ಸಂಬಂಧದಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲಾದ ಗಮನ ಸೆಳೆಯುವ ಸೂಚನೆಗೆ ರಾಜಬಹಾದುರ್ ಅವರು ಉತ್ತರ ನೀಡುತ್ತಿದ್ದರು. ಸಮಗ್ರ ರಾಷ್ಟ್ರೀಯ ಹಿತಾಸಕ್ತಿಯನ್ನು ಪರಿಗಣಿಸಿ ನೌಕರರು ಚಳವಳಿ ಕೈಬಿಡಬೇಕೆಂದು ಅವರು ಮನವಿ ಮಾಡಿಕೊಂಡರು.

ರಾಜಸ್ಥಾನ: 'ಎತ್ತ ಬೇಕಾದರೂ ವಾಲಬಹುದಾದ' ಕ್ಷೇತ್ರಗಳೇ ನಿರ್ಣಾಯಕ

ಸುಳಿವು ಬಿಡದ ಗೆಲುವಿನ ತಕ್ಕಡಿ

ವಿಶ್ಲೇಷಣೆ

ಬಿ.ಎಸ್.ಅರುಣ್

ರಾಜಸ್ಥಾನದಲ್ಲಿ ಈ ಬಾರಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಚರಿತ್ರೆ ಮರುಕಳಿಸುವುದೋ ಅಥವಾ ಮತದಾರರು ಹೊಸ ಅಧ್ಯಾಯವನ್ನೇ ಬರೆಯುವರೋ? ಈ ಮರುಭೂಮಿ ರಾಜ್ಯದಲ್ಲಿ ಹಿಂದಿನ 25 ವರ್ಷಗಳಿಂದ, ಅಂದರೆ 1997ರಿಂದ, ಅಧಿಕಾರಕ್ಕೇರುವ ಯಾವುದೇ ಪಕ್ಷ ಐದು ವರ್ಷಗಳ ನಂತರ ಮತ್ತೆ ಚುನಾಯಿಸಿ ಬಂದ ನಿದರ್ಶನವಿಲ್ಲ. ಈ ನಂಬಿಕೆಯೊಂದಿಗೆ, ಪ್ರಸ್ತುತ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವನ್ನು ಮಣಿಸಲು ಬಿಜೆಪಿ ಸಜ್ಜಾಗಿದೆ. ಆದರೆ, 2021ರಲ್ಲಿ ಕೇರಳದಲ್ಲಿ ಏನಾಯಿತು ಎಂಬುದು ಈ ಎರಡು ಪಕ್ಷಗಳಿಗೂ ಗೊತ್ತಿರಬಹುದು. ಅಲ್ಲಿ ಅಧಿಕಾರದಲ್ಲಿದ್ದ ಎಡರಂಗ ನೇತೃತ್ವದ ಸರ್ಕಾರ, ಆಡಳಿತಾರೂಢ ಪಕ್ಷ ಗೆಲ್ಲಲಾರದು ಎಂಬ ನಂಬಿಕೆಯನ್ನು ಹುಸಿಗೊಳಿಸಿತು. 1977ರ ನಂತರ ನಡೆದ ಮೊದಲ ಬೆಳವಣಿಗೆಯಲ್ಲಿ, ಐದು ವರ್ಷಗಳ ತರುವಾಯ ಅಲ್ಲಿ ಮತ್ತೆ ಗೆದ್ದು ಬಂದಿತು.

ರಾಜಸ್ಥಾನದಲ್ಲಿ ನಡೆದ 2018ರ ಚುನಾವಣೆಯಲ್ಲಿ ಕೇಸರಿ ಪಕ್ಷ ಸೋತರೂ ಒಟ್ಟಾರೆ ಮತ ಗಳಿಕೆಯಲ್ಲಿ ಅದು ಹಿಂದೆ ಬೀಳಲಿಲ್ಲ– ಇಲ್ಲಿ ಕಾಂಗ್ರೆಸ್- ಬಿಜೆಪಿ ನಡುವಿನ ಮತಗಳ ಅಂತರ ಶೇ 1ಕ್ಕಿಂತ ಕಡಿಮೆಯಿತ್ತು. ಈಗಿನ ಸಮೀಕ್ಷೆಗಳ ಪ್ರಕಾರ ಬಿಜೆಪಿ ಮುಂದಿದ್ದರೂ, ಎರಡೂ ಪಕ್ಷಗಳು ಗೆಲ್ಲಲು ಭಾರಿ ಕಸರತ್ತು ನಡೆಸುತ್ತಿವೆ. ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರ ಜೊತೆಗಿನ ಬಿಜೆಪಿ ಹೈಕಮಾಂಡ್ ಸಂಬಂಧ ಅಷ್ಟೇನೂ ಚೆನ್ನಾಗಿ ಇಲ್ಲದಿದ್ದರೂ, ಈಗ ರಾಜಿ ಮಾಡಿಕೊಂಡಂತಿದೆ ಹಾಗೂ ತಮ್ಮ ಅನೇಕ ಹಿಂಬಾಲಕರಿಗೆ ಪಕ್ಷದ ಟಿಕೆಟ್ ಕೊಡಿಸುವಲ್ಲಿ ರಾಜೆ ಯಶಸ್ವಿಯಾಗಿದ್ದಾರೆ.

ಬಿಜೆಪಿಯು ಶತಾಯಗತಾಯ ಗೆಲ್ಲಲೇಬೇಕೆಂದು ನಡೆಸಿರುವ ಪ್ರಯತ್ನದ ಭಾಗವಾಗಿ 7 ಮಂದಿ ಸಂಸತ್ ಸದಸ್ಯರನ್ನು ಕಣಕ್ಕಿಳಿಸಿದೆ. ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿಯ ಹಾಗೆ ಇಲ್ಲಿ ಕೂಡ ಪಕ್ಷವು ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಯಾರಾಗಬಹುದು ಎಂಬುದನ್ನು ಬಹಿರಂಗಪಡಿಸಿಲ್ಲ- ಬಿಜೆಪಿಯ ಬಹಳಷ್ಟು ನಾಯಕರು ಆ ಕನಸನ್ನಂತೂ ಕಾಣುತ್ತಿದ್ದಾರೆ. ಅವರಲ್ಲಿ ರಾಜೆ, ಗಜೇಂದ್ರ ಶೆಖಾವತ್, ಅರ್ಜುನ್ ಮೇಘವಾಲ್, ಬಾಬಾ ಬಾಲಕನಾಥ್, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಪ್ರಮುಖರು. ಬಿಜೆಪಿಯು ಅಶೋಕ್ ಗೆಹಲೋತ್ ನೇತೃತ್ವದ ಸರ್ಕಾರದ 'ವೈಫಲ್ಯ'ಗಳನ್ನು ಎತ್ತಿಹಿಡಿಯುವುದರಲ್ಲಿ ಹಿಂದೆ ಬಿದ್ದಿಲ್ಲ. ಮಹಿಳೆಯರಿಗೆ ಸುರಕ್ಷತೆ ಕಲ್ಪಿಸುವಲ್ಲಿ ಸೋಲು, 2022ರ ಮತೀಯ ದಂಗೆ, ಪ್ರಶ್ನೆಪತ್ರಿಕೆಗಳ ಸೋರಿಕೆ, ನೇಮಕಾತಿಯಲ್ಲಿ ಭ್ರಷ್ಟಾಚಾರ, ನಿರುದ್ಯೋಗ ಇವುಗಳಲ್ಲಿ ಪ್ರಮುಖವಾದವು.

ಇನ್ನು ಕಾಂಗ್ರೆಸ್ ಪಕ್ಷದಲ್ಲಿನ ವಿದ್ಯಮಾನಗಳನ್ನು ಗಮನಿಸಿದರೆ, ಪಕ್ಷವನ್ನು ಹಿಂದಿನ ಮೂರ್ನಾಲ್ಕು ವರ್ಷಗಳಿಂದ ಕಾಡುತ್ತಿದ್ದ ಆಂತರಿಕ ಕಲಹ ಸದ್ಯಕ್ಕೆ ಶಮನಗೊಂಡಂತಿದೆ. ಗೆಹಲೋತ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ಅವರ ನಡುವಿನ ವೈಮನಸ್ಸು 2020ರಲ್ಲಿ ಬೀದಿಗೆ ಬಂದಿತ್ತು. 2018ರ ಚುನಾವಣೆ ಸಮಯದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಪೈಲಟ್ ತಾವೇ ಮುಖ್ಯಮಂತ್ರಿಯಾಗಬೇಕೆಂದು ಬಯಸಿದ್ದರು. ಆದರೆ ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ಗೆಹಲೋತ್ ಅವರಿಗಿತ್ತು. ಹೋದ ವರ್ಷದ ಬೆಳವಣಿಗೆಯಲ್ಲಿ, ಗೆಹಲೋತ್ ಅವರನ್ನು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡುವ ಯೋಚನೆ ಪಕ್ಷದ ಹೈಕಮಾಂಡ್‌ಗೆ ಇತ್ತು. ಇದರ ಹಿಂದಿನ ಉದ್ದೇಶ ಪೈಲಟ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು. ಇದನ್ನು ಅರಿತ ಗೆಹಲೋತ್ ಬೆಂಬಲಿಗರು ಶಾಸಕಾಂಗ ಪಕ್ಷದ ಸಭೆಯನ್ನು ಬಹಿಷ್ಕರಿಸಿದರು. ಹೈಕಮಾಂಡ್‌ಗೆ ಭಾರಿ ಮುಖಭಂಗವಾಯಿತು. ಗೆಹಲೋತ್ ಮುಖ್ಯಮಂತ್ರಿಯಾಗಿ ಮುಂದುವರಿದರು.

ಆದಾಗ್ಯೂ, ಈ ಇಬ್ಬರು ನಾಯಕರು ಇತ್ತೀಚಿನ ವಾರಗಳಲ್ಲಿ ತಮ್ಮ ಕಲಹ ಮರೆತು ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಚುನಾವಣಾ ಟಿಕೆಟ್ ಹಂಚಿಕೆ ಕಾರ್ಯ ಸುಸೂತ್ರವಾಗಿ ನಡೆದಿದೆ. ಅವರು ಸೂಚಿಸಿದ ಎಲ್ಲರಿಗೂ ಟಿಕೆಟ್ ದೊರಕಿದೆ. ಪಕ್ಷ ಮುಂದಿನ ಮುಖ್ಯಮಂತ್ರಿಯ ಹೆಸರನ್ನು ಸೂಚಿಸಿಲ್ಲವಾದರೂ, ಕಾಂಗ್ರೆಸ್ ಗೆದ್ದರೆ ಗೆಹಲೋತ್ ಅವರೇ ಮುಂದುವರಿಯುವುದರಲ್ಲಿ ಸಂದೇಹವಿಲ್ಲ.

ಹಿಂದಿನ 30 ವರ್ಷಗಳಲ್ಲಿ ಸಣ್ಣ ಪಕ್ಷಗಳು ಹಾಗೂ ಪಕ್ಷೇತರರು (ಬಹುತೇಕ ಎರಡೂ ಪಕ್ಷಗಳಲ್ಲಿ ಬಂಡಾಯ ಎದ್ದವರು) ಚುನಾವಣೆಗಳಲ್ಲಿ ವಹಿಸುತ್ತಾ ಬಂದಿರುವ ಪಾತ್ರ ಪ್ರಮುಖವಾದುದು. ಅವರು ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳನ್ನು ಗೆಲ್ಲದಿದ್ದರೂ, ಗಣನೀಯ ಪ್ರಮಾಣದಲ್ಲಿ ಮತ ಗಳಿಸಿ ದೊಡ್ಡ ಪಕ್ಷಗಳಿಗೆ ತಲೆನೋವಾಗಿದ್ದಾರೆ. ಇವರು ಸರಾಸರಿ ಶೇ 20ರಷ್ಟು ಮತಗಳನ್ನು ಪಡೆದು ಕಾಂಗ್ರೆಸ್ ಅಥವಾ ಬಿಜೆಪಿಯ ಸೋಲು, ಗೆಲುವಿಗೆ ಕಾರಣರಾಗುತ್ತಾ ಬಂದಿದ್ದಾರೆ. ಈ ಬಾರಿ ಕೂಡ ಈ ಬೆಳವಣಿಗೆಯಲ್ಲಿ ದೊಡ್ಡ ಮಟ್ಟದ ಬದಲಾವಣೆಯೇನೂ ಕಂಡುಬಂದಿಲ್ಲ– ಪ್ರಸಕ್ತ ಚುನಾವಣೆಯಲ್ಲಿ ಕನಿಷ್ಠ 40 ಮಂದಿ ಬಂಡಾಯಗಾರರು ಸ್ಪರ್ಧಿಸಿದ್ದಾರೆ. ಇವರಲ್ಲಿ ಬಹುತೇಕ ಮಂದಿ ಬಿಜೆಪಿಯಲ್ಲಿ ಟಿಕೆಟ್ ಸಿಗಲಿಲ್ಲವೆಂದು ಬಂಡಾಯ ಎದ್ದವರು. ಈ ಸಲ 78 ಸಣ್ಣಪುಟ್ಟ ಪಕ್ಷಗಳು ಕಣದಲ್ಲಿ ಇರುವುದು ಇನ್ನೊಂದು ಕುತೂಹಲಕರ ಅಂಶ.

ಬೇರೆ ಯಾವುದೇ ರಾಜ್ಯದಲ್ಲಿ ಇರದಂತಹ ಗಮನಾರ್ಹ ಸಂಗತಿಯೆಂದರೆ, 'ಎತ್ತ ಬೇಕಾದರೂ ವಾಲಬಹುದಾದ' ಕ್ಷೇತ್ರಗಳು ರಾಜಸ್ಥಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು. ಒಟ್ಟು 200 ಕ್ಷೇತ್ರಗಳಲ್ಲಿ 166ರಲ್ಲಿ ಇಂತಹ ಸ್ಥಿತಿ ಇದೆ. ಇವುಗಳ ಪೈಕಿ, 2013ರಲ್ಲಿ ಬಿಜೆಪಿ 135 ಅನ್ನು ಗೆದ್ದಿದ್ದರೆ, 2018ರಲ್ಲಿ ಕಾಂಗ್ರೆಸ್ 95 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಕಾರಣದಿಂದಾಗಿ, ಕೇಸರಿ ಪಕ್ಷಕ್ಕಾಗಲೀ ಕಾಂಗ್ರೆಸ್ ಪಕ್ಷಕ್ಕಾಗಲೀ 'ಸುರಕ್ಷಿತ' ಕ್ಷೇತ್ರಗಳ ಸಂಖ್ಯೆ ಕಡಿಮೆ– ಬಿಜೆಪಿಗೆ 43, ಕಾಂಗ್ರೆಸ್‌ಗೆ 31 ಇಂತಹ ಕ್ಷೇತ್ರಗಳಿವೆ. ಸುರಕ್ಷಿತ ಕ್ಷೇತ್ರವೆಂದರೆ, ಯಾವುದೇ ಪಕ್ಷ ಅಲ್ಲಿ ಸತತವಾಗಿ ಮೂರು ಅಥವಾ ಅದಕ್ಕಿಂತ ಹೆಚ್ಚು ಬಾರಿ ಗೆದ್ದಿರುವುದು. ಹೀಗಾಗಿ, ವಿಸ್ತೀರ್ಣದಲ್ಲಿ ದೇಶದ ಬಹುದೊಡ್ಡ ರಾಜ್ಯವಾಗಿರುವ ರಾಜಸ್ಥಾನದಲ್ಲಿ, ಹೆಚ್ಚಿನ ಕ್ಷೇತ್ರಗಳಲ್ಲಿ ಯಾವುದೇ ಪಕ್ಷ ಬೇಕಾದರೂ ಗೆಲ್ಲಬಹುದಾದಂತಹ ಪರಿಸ್ಥಿತಿ ಇದೆ. ಥಾರ್ ಮರುಭೂಮಿಯ ಮರಳು ಹೊರಳುವಂತೆ ಈ ಕ್ಷೇತ್ರಗಳಲ್ಲಿನ ಗೆಲುವು ಕೂಡ ಎತ್ತ ಬೇಕಾದರೂ ಹೊರಳಬಹುದು. ರಾಜ್ಯದಲ್ಲಿ ಆಡಳಿತಾರೂಢ ಪಕ್ಷವು ಪ್ರತಿ ಐದು ವರ್ಷಗಳಿಗೊಮ್ಮೆ ಬದಲಾಗುತ್ತಾ ಬಂದಿರುವುದಕ್ಕೆ ಇದು ಕೂಡ ಒಂದು ಕಾರಣವಾಗಿರಬಹುದು.

ಹಿಂದಿನ ಐದು ಬಾರಿಯ ಚುನಾವಣೆಗಳಲ್ಲಿ ಕಾಂಗ್ರೆಸ್ 53 ಕ್ಷೇತ್ರಗಳಲ್ಲಿ ಹಾಗೂ ಬಿಜೆಪಿ 19 ಕ್ಷೇತ್ರಗಳಲ್ಲಿ ಒಂದು ಸಲವೂ ಗೆದ್ದಿಲ್ಲ. ಈ ರಾಜ್ಯದಲ್ಲಿ ಸೋಲು, ಗೆಲುವಿನ ಅಂತರ ಕೂಡ ಕಡಿಮೆ. 2018ರ ಚುನಾವಣೆಯಲ್ಲಿ ಶೇ 38ರಷ್ಟು ಕ್ಷೇತ್ರಗಳಲ್ಲಿ ಈ ಅಂತರ 5,000 ಮತಗಳಿಗೂ ಕಡಿಮೆ ಇತ್ತು ಹಾಗೂ ಇಡೀ ರಾಜ್ಯದಲ್ಲಿ ಈ ಎರಡೂ ಪಕ್ಷಗಳಿಗೆ ಬಂದ ಒಟ್ಟು ಮತಗಳ ನಡುವಿನ ಅಂತರ ಬರೀ 1.5 ಲಕ್ಷ.

ಇದೇ ಮೊದಲ ಬಾರಿಗೆ ವೋಟ್ ಮಾಡುವ ಅರ್ಹತೆ ಪಡೆದಿರುವ ಮತದಾರರು ಈ ಬಾರಿಯ ಚುನಾವಣೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಈ 22 ಲಕ್ಷ ಯುವಕ, ಯುವತಿಯರ ಮತಗಳು ಚುನಾವಣೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂದು ನೋಡಬೇಕು.

ರಾಜಸ್ಥಾನದಲ್ಲಿ 59 ಮೀಸಲು ಕ್ಷೇತ್ರಗಳಿವೆ. ಇವುಗಳಲ್ಲಿ 34 ಪರಿಶಿಷ್ಟ ಜಾತಿ ಹಾಗೂ 25 ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿವೆ. ಇವುಗಳಲ್ಲಿ ಕಾಂಗ್ರೆಸ್ 2018ರಲ್ಲಿ 34 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು.

ಈ ರಾಜ್ಯಕ್ಕೆ ಸಂಬಂಧಿಸಿದ ಇನ್ನೊಂದು ಕುತೂಹಲಕರ ಸಂಗತಿಯೆಂದರೆ, ಇಲ್ಲಿ ಪ್ರಮುಖ ಪಕ್ಷಗಳು ಯಾವುದೇ ಜಾತಿಯನ್ನು ಸಂಪೂರ್ಣವಾಗಿ ನೆಚ್ಚಿಕೊಳ್ಳುವಂತಿಲ್ಲ. ಏಕೆಂದರೆ, ಇಲ್ಲಿ ಬಲಾಢ್ಯ ಜಾತಿಗಳಾದ ರಜಪೂತರು ಕಾಂಗ್ರೆಸ್‌ಗೆ ವೋಟ್ ಮಾಡಿದರೆ, ಜಾಟರು ಬಿಜೆಪಿಗೆ ಮತ ಹಾಕುತ್ತಾರೆ ಅಥವಾ ರಜಪೂತರು ಬಿಜೆಪಿಯನ್ನು ಬೆಂಬಲಿಸಿದರೆ, ಜಾಟರು ಕಾಂಗ್ರೆಸ್ ಪರವಾಗಿ ಇರುತ್ತಾರೆ. ಗುಜ್ಜರ್‌ಗಳು ಬಿಜೆಪಿಗೆ ಮತ ಚಲಾಯಿಸಿದರೆ, ಮೀನಾಗಳು ಕಾಂಗ್ರೆಸ್‌ಗೆ ಒಲಿಯುತ್ತಾರೆ ಅಥವಾ ಇದು ಉಲ್ಟಾ ಆಗುತ್ತದೆ.

ಇನ್ನು ಚುನಾವಣಾ ಪ್ರಣಾಳಿಕೆಗಳನ್ನು ಗಮನಿಸಿದರೆ, ಎಲ್ಲ ಪಕ್ಷಗಳೂ ಭರವಸೆಗಳ ಮಳೆಯನ್ನೇ ಸುರಿಸಿವೆ. ಕರ್ನಾಟಕದಲ್ಲಿ 5 ಗ್ಯಾರಂಟಿಗಳನ್ನು ಘೋಷಿಸಿದ್ದ ಕಾಂಗ್ರೆಸ್, ಇಲ್ಲಿ 6 ಗ್ಯಾರಂಟಿಗಳನ್ನು ಕೊಟ್ಟಿದೆ. ಭರಪೂರ ಭರವಸೆಗಳನ್ನು ನೀಡುವುದರಲ್ಲಿ ಬಿಜೆಪಿ ಕೂಡ ಹಿಂದೆ ಬಿದ್ದಿಲ್ಲ. ರಾಜಸ್ಥಾನದ ಪ್ರಜ್ಞಾವಂತ ಮತದಾರರು ಈ ಭರವಸೆಗಳಿಗೆ ಮಾರುಹೋಗುತ್ತಾರೋ ಅಥವಾ ವಿವೇಚನೆ ಬಳಸಿ ಮತದಾನ ಮಾಡುತ್ತಾರೋ ಎಂಬುದನ್ನು ಕಾದು ನೋಡಬೇಕು.

ಲೇಖಕ: ಹಿರಿಯ ಪತ್ರಕರ್ತ



ಚುರುಮುರಿ

ಜಾಹೀರಾತೂ

- ಲಿಂಗರಾಜು ಡಿ.ಎಸ್.

'ಟೀವಿ ಆನ್ ಮಾಡಿದ್ರೆ ಜಾಹೀರಾತುಗಳದ್ದೇ ರೋಸು. ಇವುಗಳ ಹೊಡೆತ ತಾಳಿಕ್ಯಂಡು ನ್ಯೂಸು ನೋಡಂಗಾಗದೆ' ಅಂತ ನನ್ನ ನೋವು ತೋಡಿಕೊಂಡೆ.

'ಜಾಹೀರಾತುಗಳ ಗೂಢಾರ್ಥ ಬ್ಯಾರೆ ಇರತವೆ ಕನೋ. ಪಾತ್ರೆ ತೊಳೆಯೋ ಸೋಪಿಗೆ ನೂರು ನಿಂಬೆಗಳ ಶಕ್ತಿ ಅದೆ ಅಂದ್ರೆ ಅದರಲ್ಲಿ ಜ್ಯೂಸ್ ಮಾಡಿಕ್ಯಂದು ಕುಡಿಯಕ್ಕಾದದೇ' ಅಂತ ತುರೇಮಣೆ ವೇದಾಂತ ತೆಗೆದರು.

'ಈ ಬೊಡ್ಡಿಹೈದನ ತಳ್ಳಿ ಮಾತು ಕೇಳಬೇಡ ಕಲಾ' ಯಂಟಪ್ಪಣ್ಣ ಬುದ್ಧಿಮಾತು ಹೇಳಿತು. ಹೇಳಿದಂಗೆ ಕೇಳಕ್ಕೆ, ಮಾಡಕ್ಕೆ ನಾನೇನು ರಾಜಕೀಯದೋನಾ?

'ಅದೇನೇಳಿ ಸಾ' ಅಂತಂದೆ.

'ಬೆಂಗಳೂರಗೆಲ್ಲಾ ಅಧಿಕಾರಿಗಳು, ರಾಜಕಾರಣಿಗಳು ನೂರಾರು ಅಕ್ರಮ ಜಾಹೀರಾತು ಬೋರ್ಡು ಹಾಕ್ಯಂದಿರತರೆ. ಅದರಗೆ ಅವುರ ಪವರ್ ಕರಂಟಿನಂಗೆ ಪಾಸಾಯ್ತಾ ಇರತದೆ. ಅದನ್ನ ಮುಟ್ಟದೋನು ಭಸ್ಮ ಆಯ್ತನ' ತುರೇಮಣೆ ಮಾತು ನನಗೆ ಅರ್ಥಾಗಲಿಲ್ಲ.

'ಜಾಹೀರಾತು ಅರ್ಥ ಮಾಡಿಕ್ಯಳದು ಯಂಗೆ ಸಾ' ಅಂದೆ.

'ಒಬ್ಬ ಕೌಂಟರಲ್ಲಿ ನಿಂತಿರತನೆ. 'ಎರಡೂ ಬಿಲ್ಲು ಪಾಸ್ ಮಾಡಿ ಅಣ್ಣ' ಅಂದಾಗ, ಕೌಂಟರಲ್ಲಿದ್ದೋನು 'ನೋ ಸಾರ್' ಅಂತನೆ. 'ಒಂದು ಬಿಲ್ಲಾದ್ರೂ ಪಾಸ್ ಮಾಡಿ. ಆಗ ಪರ್ಸೆಂಟೇಜ್ ಜಾಸ್ತಿ ಇತ್ತು ಕೊಡಕ್ಕಾಗಲಿಲ್ಲ. ಈಗ ಕೊಡಕ್ಕೆ ಹಣ ಇಲ್ಲ' ಅಂದ ಅಂತ ತಿಳಕೋ' ಈ ವಿವರಣೆಯಿಂದ ನನ್ನ ತಲೆ ಗಿರ್ ಅಂತು.

'ನಮಗೆ ರಾಜಕಾರಣಿಗಳದ್ದೇ ನೋವು ಜಾಸ್ತಿಯಾಗ್ಯದೆ. ನಡಂತರದೇಲಿ ನಿಂದು ಬ್ಯಾರೆ' ಯಂಟಪ್ಪಣ್ಣ ರೇಗಿತು.

'ಅಣೈ, 'ನೋವುರಹಿತ ಜೀವನಕ್ಕಾಗಿ ಪೇನ್ ರಿಲೀಫ್ ತೈಲ ತಕ್ಕಳಿ' ಅಂತ ಜಾಹೀರಾತಲ್ಲಿದ್ರೆ ನಿಮ್ಮ ರಾಜಕೀಯದ ನೋವಿಗೆ ಇದುನ್ನ ತಿಕ್ಕಿ ಕಳಗಿಲ್ಲ' ತುರೇಮಣೆ ಉವಾಚ.

'ಜಾಹೀರಾತು ಅಂದರೇನರ್ಥ ಸಾ?' ಅಂತ ಮಿಲಿಯನ್ ಡಾಲರ್ ಪ್ರಶ್ನೆ ಕೇಳಿದೆ.

'ನಮ್ಮ ದುಡ್ಡಲ್ಲೇ ನಮಗೆ ಜಾದೂ ತೋರಿಸೋ ಮಾಯಕವೇ ಜಾಹೀರಾತು ಕಯ್ಯಾ. ಅದುಕ್ಕೆ ಥೂ ಬುಡಬಕು!' ಅಂತ ಷರಾ ಬರೆದರು.

ಚರ್ಚೆ

ಗ್ರಂಥಾಲಯ ಸುಧಾರಣೆ: ನಿರಾಸಕ್ತಿ ಏಕೆ?

ಹಲವು ರಾಜ್ಯಗಳು ಹೆಚ್ಚಿನ ಗ್ರಂಥಾಲಯಗಳನ್ನೇ ಹೊಂದಿಲ್ಲದಿರುವುದು, ದೇಶದ ಗ್ರಂಥಾಲಯ ಅಭಿವೃದ್ಧಿಗೆ ಹಿಡಿದ ಕನ್ನಡಿಯಾಗಿದೆ

- ಬಿ.ಆರ್.ಸತ್ಯನಾರಾಯಣ

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ (ನ. 14- 21) ಅಂಗವಾಗಿ, ಗ್ರಂಥಾಲಯಗಳ ಮಹತ್ವದ ಬಗ್ಗೆ ಕಣ್ತೆರೆಸುವ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದು ಸ್ತುತ್ಯರ್ಹ. ಬಹುತೇಕ ಅಭಿವೃದ್ಧಿಶೀಲ ದೇಶಗಳು ತಮ್ಮ ತಮ್ಮ ಅಭಿವೃದ್ಧಿ ಮಾನದಂಡದಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯನ್ನು ಬಹುಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳುತ್ತವೆ. ಆದರೆ ಭಾರತದಲ್ಲಿ ಅಂತಹ ಯಾವುದೇ ಪದ್ಧತಿ ಇದ್ದಂತಿಲ್ಲ. ಈ ಕಾರಣದಿಂದ, ದೇಶದ ಸಾರ್ವಜನಿಕ ಗ್ರಂಥಾಲಯಗಳ ಲಭ್ಯ ಅಂಕಿಸಂಖ್ಯೆಯನ್ನು ಆಧರಿಸಿ, ಗ್ರಂಥಾಲಯ ಕ್ಷೇತ್ರದ ಸ್ಥಿತಿಗತಿ, ನೀತಿ ನಿರೂಪಣೆ, ಪ್ರಾದೇಶಿಕ ಅಸಮತೋಲನದ ಬಗ್ಗೆ ಚರ್ಚಿಸಬಹುದಾಗಿದೆ.

ಇಡೀ ದೇಶಕ್ಕೆ ಏಕರೂಪದ ಗ್ರಂಥಾಲಯ ನೀತಿ ಇಲ್ಲ. 19 ರಾಜ್ಯಗಳು ತಮ್ಮದೇ ಆದ ಗ್ರಂಥಾಲಯ ನೀತಿಗಳನ್ನು ರೂಪಿಸಿಕೊಂಡಿವೆ. ಉಳಿದವುಗಳಲ್ಲಿ ಅದೂ ಇಲ್ಲ! ಉತ್ತರಪ್ರದೇಶ, ಬಿಹಾರ, ರಾಜಸ್ಥಾನದಂತಹ ದೊಡ್ಡ ರಾಜ್ಯಗಳಲ್ಲಿ 2006ರವರೆಗೆ ಗ್ರಂಥಾಲಯ ನೀತಿಯೇ ಇರಲಿಲ್ಲ. ಮಧ್ಯಪ್ರದೇಶದಲ್ಲಿ ಈಗಲೂ ಇಲ್ಲ!

1661ರಿಂದಲೇ ದೇಶದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಬೆಳೆದು ಬಂದಿದ್ದರೂ, ಗ್ರಂಥಾಲಯ ನೀತಿ ರೂಪುಗೊಳ್ಳಲು 20ನೇ ಶತಮಾನದ ಪ್ರಾರಂಭದವರೆಗೂ ಕಾಯಬೇಕಾಯಿತು. ಅದೂ ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ್ ಅವರು ತಮ್ಮ ರಾಜ್ಯಕ್ಕೆ ಸೀಮಿತವಾಗಿ ರೂಪಿಸಿದ್ದ ನೀತಿ. ನಂತರ 1948ರಿಂದ ಒಂದೊಂದೇ ರಾಜ್ಯವು ಸ್ವತಂತ್ರ ಗ್ರಂಥಾಲಯ ನೀತಿಯನ್ನು ರೂಪಿಸಿಕೊಂಡಿದ್ದರೂ ಇನ್ನೂ ಅತ್ತ ಗಮನವನ್ನೇ ಹರಿಸದಿರುವ ರಾಜ್ಯಗಳು ಸಹ ಇರುವುದು ವಿಷಾದದ ಸಂಗತಿ.

ಕೇಂದ್ರ ಸರ್ಕಾರದಲ್ಲಿ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಚಿವಾಲಯವೇನಿಲ್ಲ. ಅದಿರಲಿ, ಅದಕ್ಕೊಂದು ಪ್ರತ್ಯೇಕ ಇಲಾಖೆಯೂ ಇಲ್ಲ. ಅದನ್ನು ಸಂಸ್ಕೃತಿ ಸಚಿವಾಲಯದ ವ್ಯಾಪ್ತಿಗೆ ತರಲಾಗಿದೆ. ಈ ಸಚಿವಾಲಯದ ಅಡಿಯಲ್ಲಿ, ರಾಜಾರಾಮ್ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನವು ನೋಡಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತಿದೆ. ಈ ಸಂಸ್ಥೆಯು ಪ್ರಕಟಿಸಿರುವ ಅಂಕಿಅಂಶಗಳ ಪ್ರಕಾರ, ದೇಶದಲ್ಲಿ 46,746 ಸಾರ್ವಜನಿಕ ಗ್ರಂಥಾಲಯಗಳಿವೆ. ಅವುಗಳಲ್ಲಿ, 19,075 ಗ್ರಂಥಾಲಯಗಳನ್ನು ಸ್ವಯಂಸೇವಾ ಸಂಸ್ಥೆಗಳು ನೋಡಿಕೊಳ್ಳುತ್ತಿವೆ. ಅಂದರೆ, ಸರಾಸರಿ 28,000 ಜನರಿಗೆ ಒಂದು ಗ್ರಂಥಾಲಯ ಇದೆ ಎಂದಾಯಿತು! 130 ಕೋಟಿಗೂ ಹೆಚ್ಚು ಜನಸಂಖ್ಯೆಯ ದೇಶಕ್ಕೆ ಇಷ್ಟು ಸಾಕೆ? ನಗರ ಪ್ರದೇಶದಲ್ಲಿ 4,580 ಗ್ರಂಥಾಲಯಗಳು ಇವೆ ಎನ್ನಲಾಗಿದ್ದು, ಅವು ಸರಾಸರಿ 80,000 ಜನರಿಗೆ ಒಂದು!

ಗ್ರಂಥಾಲಯ ನೀತಿಯನ್ನು ರೂಪಿಸಿಕೊಳ್ಳುವಲ್ಲಿ ಮುಂಚೂಣಿಯಲ್ಲಿರುವ ದಕ್ಷಿಣ ಭಾರತದ ರಾಜ್ಯಗಳು ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆಯಲ್ಲಿ ಸಿಂಹಪಾಲು ಹೊಂದಿವೆ. ಕೇರಳ (8,415), ಕರ್ನಾಟಕ (6,798), ತಮಿಳುನಾಡು (4,622) ಮೊದಲ ಮೂರು ಸ್ಥಾನದಲ್ಲಿರುವ ರಾಜ್ಯಗಳು. ಮಹಾರಾಷ್ಟ್ರದಲ್ಲಿ 12,191 ಗ್ರಂಥಾಲಯಗಳು ಇದ್ದರೂ, ಹೆಚ್ಚಿನವು ಸಾರ್ವಜನಿಕ ಸಂಘಸಂಸ್ಥೆಗಳಿಗೇ ಸೇರಿವೆ. ಅಲ್ಲಿ ಸರ್ಕಾರಿ ಸ್ವಾಮ್ಯದ ಗ್ರಂಥಾಲಯಗಳ ಸಂಖ್ಯೆ ಬರೀ 43. ಸುಮಾರು 20 ಕೋಟಿಗೂ ಅಧಿಕ ಜನಸಂಖ್ಯೆಯುಳ್ಳ ಉತ್ತರಪ್ರದೇಶದ ಗ್ರಂಥಾಲಯಗಳ ಸಂಖ್ಯೆ 573. ಬಿಹಾರ (192), ಮಧ್ಯಪ್ರದೇಶ (42), ರಾಜಸ್ಥಾನ (323) ಕಡಿಮೆ ಸಂಖ್ಯೆಯ ಗ್ರಂಥಾಲಯಗಳನ್ನು ಹೊಂದಿರುವುದು ಶೋಚನೀಯ.

ಕರ್ನಾಟಕದಲ್ಲಿ ಸರಾಸರಿ 9,000 ಜನರಿಗೆ ಒಂದು ಗ್ರಂಥಾಲಯವಿದ್ದರೆ, ಉತ್ತರಪ್ರದೇಶದಲ್ಲಿ 3.51 ಲಕ್ಷ ಜನರಿಗೆ ಒಂದು ಸಾರ್ವಜನಿಕ ಗ್ರಂಥಾಲಯ ಇದ್ದಂತಾಗಿದೆ! ಉತ್ತರ ಭಾರತದಲ್ಲಿ ಪಶ್ಚಿಮಬಂಗಾಳ (5,251) ಮತ್ತು ಗುಜರಾತ್ (3,464) ಬಿಟ್ಟರೆ ಇನ್ಯಾವುದೇ ರಾಜ್ಯವು ನಾಲ್ಕಂಕಿ ಸಂಖ್ಯೆಯ ಗ್ರಂಥಾಲಯಗಳನ್ನು ಹೊಂದಿಲ್ಲ ಎಂಬುದು ಭಾರತದ ಗ್ರಂಥಾಲಯ ಅಭಿವೃದ್ಧಿಗೆ ಹಿಡಿದ ಕನ್ನಡಿಯಾಗಿದೆ. ಇನ್ನು, ಅಸ್ತಿತ್ವದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ದುಃಸ್ಥಿತಿ ಮತ್ತು ಉಪಯೋಗದ ಪ್ರಮಾಣದ ಬಗ್ಗೆ ಬರೆದರೆ ಅದೇ ಒಂದು ಹೊತ್ತಿಗೆಯಾಗುತ್ತದೆ!

ರಾಷ್ಟ್ರೀಯ ಜ್ಞಾನ ಆಯೋಗವು 2006-09ರ ತನ್ನ ವರದಿಯಲ್ಲಿ ಮಾಡಿದ್ದ 10 ಶಿಫಾರಸುಗಳಲ್ಲಿ 'ನ್ಯಾಷನಲ್ ಮಿಷನ್ ಆನ್ ಲೈಬ್ರರೀಸ್' ಸ್ಥಾಪನೆಯಾಗಿ, 2014ರ ಮುಂಗಡಪತ್ರದಲ್ಲಿ ಸುಮಾರು ₹ 400 ಕೋಟಿ ತೆಗೆದಿರಿಸಲಾಗಿತ್ತು. ದೇಶದ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆಯನ್ನು 75,000ಕ್ಕೆ ಹೆಚ್ಚಿಸುವ ಯೋಜನೆಯೂ ಇತ್ತು. ಆದರೆ, ಸಂಪನ್ಮೂಲದ ಸದುಪಯೋಗವಾಗಿ, ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಹೆಚ್ಚಾಗಿರುವ ಬಗ್ಗೆ ಹತ್ತು ವರ್ಷಗಳ ನಂತರವೂ ಯಾವುದೇ ಮಾಹಿತಿ ಇಲ್ಲ!

ಪ್ರಾದೇಶಿಕ ಅಸಮಾನತೆ, ಜನಸಂಖ್ಯಾ ಬಾಹುಳ್ಯ, ಗ್ರಂಥಾಲಯದೆಡೆಗೆ ರಾಜ್ಯಗಳ ಅತೀವ ನಿರ್ಲಕ್ಷ್ಯ, ದೇಶದ ಜನಮಾನಸದಲ್ಲಿ ಎದ್ದು ಕಾಣುತ್ತಿರುವ ವಾಚನಾಭಿರುಚಿಯ ಕೊರತೆಯು ಭಾರತದ ಅಭಿವೃದ್ಧಿಯ ಹಾದಿಗೆ ತೊಡಕಾಗಿವೆ. ಈ ಕ್ಷೇತ್ರದ ಅಭಿವೃದ್ಧಿ, ಪರಿಣಾಮ, ಫಲಿತಾಂಶ ಎಲ್ಲವೂ ಅತ್ಯಂತ ದೀರ್ಘಕಾಲದ ಪ್ರಕ್ರಿಯೆಗಳಾಗಿರುವುದರಿಂದಲೋ ಏನೋ, ಆ ಕಡೆಗೆ ಜನರ ಹಾಗೂ ಆಡಳಿತದ ಆಸಕ್ತಿ ಕಡಿಮೆಯೇ ಇರುವುದು ಮಾತ್ರ ವಿಷಾದನೀಯ.

ಲೇಖಕ: ಮುಖ್ಯ ಗ್ರಂಥಪಾಲಕ
ಸುರಾನಾ ಕಾಲೇಜು, ಬೆಂಗಳೂರು

ವಾಚಕರ ವಾಣಿ

ಸ್ಮಾರಕ ಸಂರಕ್ಷಣೆ: ಮೂಡಲಿ ಜಾಗೃತಿ

ಯುನೆಸ್ಕೊದಿಂದ ವಿಶ್ವ ಪರಂಪರೆಯ ತಾಣಗಳೆಂಬ ಮನ್ನಣೆ ಗಳಿಸಿರುವ ಬೇಲೂರು, ಹಳೇಬೀಡು ದೇವಾಲಯಗಳಿಗೆ ಇತ್ತೀಚೆಗೆ ಭೇಟಿ ನೀಡಿದ್ದೆ. ಅಲ್ಲಿ ಪ್ರವಾಸಿಗರ ಸಂಖ್ಯೆಯೇನೋ ಹೆಚ್ಚುತ್ತಿದೆ. ಆದರೆ, ಬಹಳಷ್ಟು ಜನ ಆ ಸಂರಕ್ಷಿತ ದೇವಾಲಯಗಳ ಕೆತ್ತನೆ ಶಿಲ್ಪಗಳನ್ನು ಮುಟ್ಟುತ್ತಿದ್ದರು, ಕೈಯಿಂದ ಸವರುತ್ತಿದ್ದರು. ಅದನ್ನು ತಡೆಯಲು ಯಾರೂ ಪ್ರಯತ್ನಿಸುತ್ತಿರಲಿಲ್ಲ. ಕೆಲವು ಯುವಕರು ದೇವಾಲಯದ ಕಟ್ಟೆಯ ಮೇಲೆಯೇ ಮೊಬೈಲ್ ಫೋನ್ ನೋಡುತ್ತಾ ಕುಳಿತುಕೊಂಡಿದ್ದರು. ಅಲ್ಲಿನ ಸಿಬ್ಬಂದಿ ಅವರನ್ನು ಎಬ್ಬಿಸಿದಾಗ, ಗೊಣಗುತ್ತಲೇ ಎದ್ದುಹೋದದ್ದು ಕಂಡುಬಂತು. ಇದನ್ನೆಲ್ಲ ನೋಡಿದಾಗ, ಈ ಕೆತ್ತನೆಗಳು ಚೆನ್ನಾಗಿ ಕಾಣುವಂತೆ, ಆದರೆ ಯಾವ ರೀತಿಯಲ್ಲೂ ಧಕ್ಕೆಯಾಗದಂತೆ ಗೋಡೆಯ ಸುತ್ತ ಅವುಗಳಿಗೆ ತಂತಿಯ ಬೇಲಿ ಹಾಕುವುದು ಸಮಂಜಸ ಎನಿಸಿತು.

ಮತ್ತೊಂದೆಡೆ, ಹಂಪಿಯಲ್ಲಿ ಇತ್ತೀಚೆಗೆ ವಿದ್ಯುತ್ ಸಂಪರ್ಕ ಪಡೆಯಲು ದೇವಾಲಯವೊಂದರ ಗೋಡೆ ಕೊರೆದಿರುವುದು ಗಮನಕ್ಕೆ ಬಂದಿದೆ. ಇಂತಹ ಪ್ರಕರಣಗಳು ಏನನ್ನು ಸೂಚಿಸುತ್ತವೆ? ಪ್ರಾಚೀನ ಸ್ಮಾರಕಗಳ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲವೆಂದೇ ಅಥವಾ ಎಂದಿನ ನಿರ್ಲಕ್ಷ್ಯಧೋರಣೆ ಮನೆ ಮಾಡಿರುವುದರ ದ್ಯೋತಕವೇ? ಯಾವುದಾದರೂ ಇರಬಹುದೇನೊ. ಸ್ಮಾರಕಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡುವುದೆಂದು?

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ಹೊಸ ಪರೀಕ್ಷಾಂಗ ವ್ಯವಸ್ಥೆ ಜಾರಿಯಾಗಲಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇತ್ತೀಚೆಗೆ ನಡೆಸಿದ ಪರೀಕ್ಷೆಯಲ್ಲಿ ಶಿವಮೊಗ್ಗದ ಕಾಲೇಜೊಂದರ ಕೊಠಡಿಯೊಳಗೆ ಸಿ.ಸಿ. ಟಿ.ವಿ. ಕ್ಯಾಮೆರಾ ಇರಲಿಲ್ಲ. ಮೇಲ್ವಿಚಾರಕರನ್ನು ಪ್ರಶ್ನಿಸಿದರೆ, ವಿಡಿಯೊ ಮಾಡುವವರು ಬರುತ್ತಾರೆ ಎಂಬ ಉಡಾಫೆಯ ಉತ್ತರ. ವಿಡಿಯೊ ಮಾಡಲು ಬಂದವರು ಬಾಗಿಲ ಬಳಿ ನಿಂತು ಒಂದೆರಡು ನಿಮಿಷ ಕೈತಿರುಗಿಸಿದ್ದು ಬಿಟ್ಟರೆ ಮತ್ತೆ ಯಾವ ಕ್ಯಾಮೆರಾವೂ ಇಲ್ಲ. ಬೆಳಿಗ್ಗೆ ನಡೆದ ತಪಾಸಣೆ ಕಾರ್ಯ ಮಧ್ಯಾಹ್ನ ನಡೆಯಲಿಲ್ಲ. ಮಧ್ಯಾಹ್ನ ಅಕ್ರಮ ನಡೆಯುವುದಿಲ್ಲ ಎಂಬ ಖಾತರಿ ಇವರಿಗೆ ಇತ್ತೇ ಅಥವಾ ಅಕ್ರಮ ಎಸಗಲಿ ಎಂದೇ ಅವಕಾಶ ಮಾಡಿಕೊಟ್ಟರೇ ಎಂಬ ಪ್ರಶ್ನೆ ಕಾಡುತ್ತಿದೆ.

ಕೆಇಎ ಜಾರಿಗೆ ತಂದಿರುವ ವಸ್ತ್ರಸಂಹಿತೆ ನಿಯಮ ಪಾಲನೆಯಾಗದಿದ್ದರೂ ಮತ್ತೆ ಮತ್ತೆ ಯಾಕೆ ಇಂತಹ ನಿಯಮ ರೂಪಿಸಬೇಕು? ಸಿ.ಸಿ. ಟಿ.ವಿ. ಕ್ಯಾಮೆರಾ ಇರುವಂತಹ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲಾಗದ ಕೆಇಎಗೆ ಪರೀಕ್ಷಾಂಗದಿಂದ ಸರಿಯಾದ ರೀತಿಯಲ್ಲಿ ಪರೀಕ್ಷೆ ನಡೆಯುತ್ತದೆ ಎಂಬ ನಂಬಿಕೆಯಾದರೂ ಹೇಗೆ ಬಂದಿತು? ಇಷ್ಟೆಲ್ಲದರ ನಡುವೆಯೂ ಪಿ.ಎಸ್.ಐ ಮರು ಪರೀಕ್ಷೆಯ ಹೊಣೆಯನ್ನು ಕೆಇಎಗೇ ವಹಿಸಿದ್ದು ಎಷ್ಟು ಸರಿ? ಹಗರಣದ ಗೂಡಾಗಿರುವ ಕೆಪಿಎಸ್‌ಸಿ ಮತ್ತು ಕೆಇಎ ಬದಲಾಗಿ ಐಎಎಸ್ ಪರೀಕ್ಷೆಯಂತೆ ಪ್ರಾಮಾಣಿಕವಾಗಿ, ದಕ್ಷವಾಗಿ ಪರೀಕ್ಷೆ ನಡೆಸುವ ಹೊಸ ಪರೀಕ್ಷಾಂಗ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಹಣವಿಲ್ಲದೇ ಸರ್ಕಾರಿ ಉದ್ಯೋಗ ಪಡೆಯುವಂತೆ ಮಾಡುವ ಮೂಲಕ ಲಕ್ಷಾಂತರ ಬಡ ವಿದ್ಯಾರ್ಥಿಗಳ ಕಷ್ಟಕ್ಕೆ ಸ್ಪಂದಿಸಬೇಕು.

ಆಶಾ ಎ., ಶಿವಮೊಗ್ಗ

ವಿದ್ಯುತ್ ಅವಘಡ: ಭೂಗತ ಕೇಬಲ್ ಪರಿಹಾರ

ಬೆಂಗಳೂರಿನ ಫುಟ್‌ಪಾತೊಂದರಲ್ಲಿ ಕಡಿದುಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ತಾಯಿ, ಮಗಳು ಸುಟ್ಟು ಕರಕಲಾದ ಬೀಭತ್ಸ ದೃಶ್ಯ ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿದೆ. ಇಂತಹ ಪ್ರಕರಣ ಇದು ಮೊದಲನೆಯದೇನಲ್ಲ. ನಾಡಿನಾದ್ಯಂತ ಅಲ್ಲಲ್ಲಿ ನಡೆಯುತ್ತಲೇ ಇರುತ್ತದೆ, ಜೀವಹಾನಿ ಆಗುತ್ತಲೇ ಇರುತ್ತದೆ. ಆದರೂ, ಸಂಬಂಧಿಸಿದ ಇಲಾಖೆ ಇದುವರೆಗೆ ಗಂಭೀರವಾಗಿ ತೆಗೆದುಕೊಂಡಂತೆ ಕಾಣುತ್ತಿಲ್ಲ. ಈಗ ಅನೇಕ ಕಡೆ ಸ್ಮಾರ್ಟ್ ಸಿಟಿ ಯೋಜನೆ ಜಾರಿಯಲ್ಲಿದೆ. ಕೋಟಿಗಟ್ಟಲೆ ವ್ಯಯಿಸಿ ರಸ್ತೆಯನ್ನು ಸುಂದರಗೊಳಿಸಲಾಗುತ್ತಿದೆ. ಆದರೆ ಜೋತಾಡುವ ಅಪಾಯಕಾರಿ ವಿದ್ಯುತ್ ತಂತಿಗಳು ಹಾಗೆಯೇ ಇವೆ. ಇನ್ಸುಲೇಶನ್ ಇಲ್ಲದ ಈ ವಿದ್ಯುತ್ ತಂತಿಗಳು ಯಾವತ್ತಿದ್ದರೂ ಅಪಾಯಕಾರಿ. ಹಾಗಾಗಿ, ಕನಿಷ್ಠ ನಗರಗಳಲ್ಲಿಯಾದರೂ ಭೂಗತ ಕೇಬಲ್‌ಗಳ ಮೂಲಕ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಯಾಕೆ ಇಲಾಖೆ ಯೋಚಿಸಬಾರದು?!

ಶ್ರೀನಿವಾಸ ಕಾರ್ಕಳ, ಮಂಗಳೂರು

ವೃತ್ತಿಪರತೆ, ಬದ್ಧತೆಗೆ ಸಿಕ್ಕಿತೇ ಬೆಂಬಲ?

ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ಮಧ್ಯೆ ಅಹಮದಾಬಾದ್‌ನಲ್ಲಿ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅಂತಿಮ ಪಂದ್ಯ ನಡೆಯುವ ಕೆಲವು ದಿನಗಳ ಹಿಂದಿನಿಂದಲೂ ಭಾರತದ ಉದ್ದಗಲಕ್ಕೆ ದೊಡ್ಡ ಮಟ್ಟದಲ್ಲಿ ಕ್ರಿಕೆಟ್ ಅಲೆಯೇ ಎದ್ದಂತಿತ್ತು. ಸಾವಿರಾರು ಮಂದಿರಗಳಲ್ಲಿ ಹೋಮ, ಹವನ, ವಿಶೇಷ ಪೂಜೆಗಳು ನಡೆದವು. ಬಹಳಷ್ಟು ಭವಿಷ್ಯಕಾರರು ಭಾರತವೇ ಪ್ರಶಸ್ತಿ ಗೆಲ್ಲುತ್ತದೆ ಎಂದು ನುಡಿದಿದ್ದರು. ಇದಕ್ಕೆ ಕಳಶವಿಟ್ಟಂತೆ, ಪಂದ್ಯದ ವೇಳೆ ಮೈದಾನದಲ್ಲಿ ಒಂದು ಲಕ್ಷ ಜನ ಸೇರಿ, ಭಾರತ ತಂಡವನ್ನು ಬೆಂಬಲಿಸಿದರು. ಪ್ರಧಾನಮಂತ್ರಿ, ಗೃಹ ಸಚಿವ, ಬಾಲಿವುಡ್‌ನ ಖ್ಯಾತ ನಟನಟಿಯರು, ಉದ್ಯಮಿಗಳು ಒಳಗೊಂಡಂತೆ ಅತಿರಥ ಮಹಾರಥರ ಹಾಜರಾತಿಯ ಬೆಂಬಲವೂ ಭಾರತ ತಂಡಕ್ಕೆ ದೊರಕಿತ್ತು. ಆದರೆ, ಆಸ್ಟ್ರೇಲಿಯಾ ತಂಡಕ್ಕೆ ಇಂತಹ ಯಾವುದೇ ಬೆಂಬಲ ಇರಲಿಲ್ಲ. ಆದರೂ 'ದೇವರಿಗೆ' ಆಸ್ಟ್ರೇಲಿಯಾ ತಂಡದ ಹೆಗ್ಗುರುತಾದ ವೃತ್ತಿಪರತೆ ಮತ್ತು ಬದ್ಧತೆ ಭಾರತ ತಂಡಕ್ಕಿಂತಲೂ ಉತ್ತಮವಾಗಿದೆ ಎಂಬುದು ಗೊತ್ತಿತ್ತು. ಆ 'ದೇವರು', ಕ್ರಿಕೆಟ್ ಆಟದ ಕಲೆಗಾರಿಕೆಯಲ್ಲಿ ಆ ಗಳಿಗೆಗೆ ಮುಂದಿದ್ದ ಆಸ್ಟ್ರೇಲಿಯಾ ತಂಡವನ್ನು ಗೆಲ್ಲಿಸಿ ನಿಷ್ಪಕ್ಷಪಾತತನವನ್ನು ಮೆರೆದ. ಮೌನವಾಗಿದ್ದ ಆಸ್ಟ್ರೇಲಿಯಾ ತಂಡವು ಭಾರತ ತಂಡವನ್ನು ಮೌನವಾಗಿಸುವಂತೆ ಮಾಡಿತು ಎಂದು ಅರ್ಥೈಸಬಹುದೇ?

ಸಿ.ಎಚ್.ಹನುಮಂತರಾಯ, ಬೆಂಗಳೂರು

ಕ್ರಿಕೆಟ್ ದಿಗ್ಗಜರನ್ನು ಮರೆತಿದ್ದು ಸರಿಯಲ್ಲ

ಅಹಮದಾಬಾದ್‌ನಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯಕ್ಕೆ ಮಾಜಿ ನಾಯಕ ಕಪಿಲ್ ದೇವ್ ಅವರಂತಹ ಕ್ರಿಕೆಟ್ ದಿಗ್ಗಜರನ್ನು ಬಿಸಿಸಿಐ ಆಹ್ವಾನಿಸದೇ ಇರುವ ಮೂಲಕ ಸಂಪ್ರದಾಯ ಮುರಿದಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ನ. 20). 1983ರಲ್ಲಿ ಪ್ರಥಮ ಬಾರಿಗೆ ದೇಶಕ್ಕೆ ಕ್ರಿಕೆಟ್ ಪಂದ್ಯದಲ್ಲಿ ವಿಶ್ವಕಪ್ ತಂದುಕೊಟ್ಟ ಅಂದಿನ ಎಲ್ಲಾ ಆಟಗಾರರನ್ನೂ ಆಹ್ವಾನಿಸಬೇಕಿತ್ತು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಈ ವಿಚಾರದಲ್ಲಿ ತಪ್ಪು ಮಾಡಿದೆ. ಆದರೂ 'ಬಹುಶಃ ತನ್ನ ಕಾರ್ಯಬಾಹುಳ್ಯದ ಒತ್ತಡದಿಂದ ಬಿಸಿಸಿಐ ಆಹ್ವಾನಿಸಲು ಮರೆತಿರಬಹುದು' ಎಂಬ ಅಭಿಪ್ರಾಯವನ್ನು ಕಪಿಲ್ ದೇವ್ ವ್ಯಕ್ತಪಡಿಸಿದ್ದಾರೆ. ಇದು ಅವರ ದೊಡ್ಡತನವನ್ನು ತೋರಿಸುತ್ತದೆ.

ಡಿ.ಪ್ರಸನ್ನಕುಮಾರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಚಿತ ಕೊಡುಗೆಗಳ ಮೇಲಾಟ

ಮುಂದಿನ ವರ್ಷದಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಅದಕ್ಕೂ ಮೊದಲು ಛತ್ತೀಸಗಢ, ಮಿಜೋರಾಂ, ರಾಜಸ್ಥಾನ, ಮಧ್ಯಪ್ರದೇಶ ಹಾಗೂ ತೆಲಂಗಾಣದಲ್ಲಿ ಚುನಾವಣೆ ನಡೆಯುತ್ತಿದೆ. ಕೆಲವೆಡೆ ಮತದಾನ ನಡೆಯಬೇಕಿದೆ. ಕೆಲವೆಡೆ ಮತದಾನ ಪೂರ್ಣಗೊಂಡಿದೆ. ಡಿಸೆಂಬರ್ 3ಕ್ಕೆ ಫಲಿತಾಂಶ ಬರಲಿದೆ. ಮಧ್ಯಪ್ರದೇಶದಲ್ಲಿ ಅಧಿಕಾರ ಉಳಿಸಿಕೊಳ್ಳುವ, ಛತ್ತೀಸಗಢ ಹಾಗೂ ರಾಜಸ್ಥಾನದಲ್ಲಿ ಅಧಿಕಾರಕ್ಕೆ ಏರುವ ಬಯಕೆ ಬಿಜೆಪಿಗೆ ಇದೆ. ಕರ್ನಾಟಕದ ಚುನಾವಣೆ ಸೋತ ಬಳಿಕ ದಕ್ಷಿಣ ಭಾರತದಲ್ಲಿ ಮುಚ್ಚಿ ಹೋದ ಬಾಗಿಲನ್ನು ತೆಲಂಗಾಣ ಮುಖಾಂತರ ತೆರೆದುಕೊಳ್ಳುವ ಪ್ರಯತ್ನವನ್ನೂ ನಡೆಸುತ್ತಿದೆ. ಬಿಜೆಪಿಗೆ ಇದು ಪ್ರತಿಷ್ಠೆಯ ಚುನಾವಣೆಯೂ ಹೌದು. ರಾಜಸ್ಥಾನ ಹಾಗೂ ಛತ್ತೀಗಢದಲ್ಲಿ ಅಧಿಕಾರ ಉಳಿಸಿಕೊಳ್ಳುವುದು, ಉಳಿದ ಕಡೆ ಅಧಿಕಾರಕ್ಕೆ ಬರುವುದು ಕಾಂಗ್ರೆಸ್‌ಗೆ ಅತ್ಯಗತ್ಯವಾಗಿದೆ. ಈ ಎಲ್ಲಾ ಕಾರಣಗಳಿಂದ ಕಾಂಗ್ರೆಸ್ ಹಾಗೂ ಬಿಜೆಪಿಯು ಜನರನ್ನು ಸೆಳೆಯುವ ಪ್ರಣಾಳಿಕೆಯನ್ನು ಸಿದ್ಧಪಡಿಸಿವೆ. ಉಚಿತ ಕೊಡುಗೆ ಕೊಡುವುದರ ಕುರಿತು ಬಿಜೆಪಿ ಈ ಹಿಂದೆ ಕಡು ವಿರೋಧ ವ್ಯಕ್ತಪಡಿಸಿತ್ತು. ಆದರೆ, ಈ ಚುನಾವಣೆಯಲ್ಲಿ ಉಚಿತ ಕೊಡುಗೆಗಳ ಭರವಸೆ ನೀಡಿಕೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ನಡುವೆ ಪೈಪೋಟಿಯೇ ನಡೆದಿದೆ

ಆಧಾರ: ಪಿಟಿಐ

ಪ್ರಜಾ ಮತ
ಜನತಂತ್ರದ ಹಬ್ಬ
ಪಂಚ ರಾಜ್ಯ ಚುನಾವಣೆ - 2023

ಪ್ರಜಾವಾಣಿ ವಾರ್ತೆ

ಅಡುಗೆ ಅನಿಲ ಸಿಲಿಂಡರ್ ದರ ಕಡಿತ

ಮಿಜೋರಾಂ ಹೊರತುಪಡಿಸಿ ಉಳಿದ ನಾಲ್ಕೂ ರಾಜ್ಯಗಳಲ್ಲಿ ಅಡುಗೆ ಅನಿಲ ಸಿಲಿಂಡರ್ ದರವನ್ನು ₹500ಕ್ಕೆ ಹಾಗೂ ಮಿಜೋರಾಂನಲ್ಲಿ ₹750ಕ್ಕೆ ಇಳಿಸಲಾಗುವುದು ಎಂದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ. ಬಿಜೆಪಿ ಕೂಡ ಅಡುಗೆ ಅನಿಲ ಸಿಲಿಂಡರ್ ದರವನ್ನು ಕಡಿತ ಮಾಡುವುದಾಗಿ ಹೇಳಿದೆ. ಬಿಜೆಪಿಯ ಭರವಸೆಗಳು ಒಂದೊಂದು ರಾಜ್ಯಕ್ಕೆ ಒಂದೊಂದು ರೀತಿಯಲ್ಲಿವೆ. ಛತ್ತೀಸಗಢದಲ್ಲಿ ₹500ಕ್ಕೆ ಸಿಲಿಂಡರ್ ನೀಡುವುದಾಗಿ ಹೇಳಿದ್ದರೆ, ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ₹450ಕ್ಕೆ ನೀಡುವುದಾಗಿ ಹೇಳಿದೆ. ತೆಲಂಗಾಣದಲ್ಲಿ ಸಿಲಿಂಡರ್ ದರವನ್ನು ಕಡಿತ ಮಾಡುವ ಬದಲು, ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಇರುವ ಪ್ರಮಾಣಕ್ಕೆ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ವ್ಯಾಟ್ ಅನ್ನು ಕಡಿತಗೊಳಿಸುವುದಾಗಿ ಬಿಜೆಪಿ ಭರವಸೆ ನೀಡಿದೆ.

ಅಡುಗೆ ಅನಿಲ ಸಿಲಿಂಡರ್‌ಗೆ ಸಂಬಂಧಿಸಿ ಬಿಜೆಪಿಯ ಭರವಸೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಪಕ್ಷವೇ ಅಧಿಕಾರದಲ್ಲಿ ಇದೆ. ಅಡುಗೆ ಅನಿಲ ಸಿಲಿಂಡರ್ ದರವನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಕಡಿತಗೊಳಿಸಬಹುದು. ಇದನ್ನು ಮಾಡದೇ ರಾಜ್ಯವೊಂದರಲ್ಲಿ ಅಧಿಕಾರಕ್ಕೆ ಬಂದರೆ ಮಾತ್ರವೇ ದರ ಕಡಿತ ಮಾಡುತ್ತೇವೆ ಎನ್ನುವುದು ಸರಿಯೇ ಎನ್ನುವುದು ಹಲವರ ಪ್ರಶ್ನೆ. ಜೊತೆಗೆ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಲ್ಲಿ ದರ ಕಡಿತದ ಭರವಸೆ ಬಗ್ಗೆಯೂ ಪ್ರಶ್ನೆಗಳು ಮೂಡುತ್ತಿವೆ. ಈ ಎರಡೂ ಪಕ್ಷಗಳಿಗಿಂತ ಕಡಿಮೆ ದರದಲ್ಲಿ ಅಂದರೆ, ₹400ಕ್ಕೆ ಅಡುಗೆ ಅನಿಲ ಸಿಲಿಂಡರ್ ನೀಡುವುದಾಗಿ ತೆಲಂಗಾಣದಲ್ಲಿ ಬಿಆರ್‌ಎಸ್ ಭರವಸೆ ನೀಡಿದೆ

ಕಾಂಗ್ರೆಸ್ ಗ್ಯಾರಂಟಿ ಮತ್ತು ಮೋದಿ ಗ್ಯಾರಂಟಿ

ಕರ್ನಾಟಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್, ಐದು ‘ಗ್ಯಾರಂಟಿ’ಗಳನ್ನು ನೀಡಿತ್ತು. ಇದೇ ರೀತಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿಯೂ ಕಾಂಗ್ರೆಸ್ ಹಲವು ಗ್ಯಾರಂಟಿಗಳನ್ನು ಘೋಷಿಸಿದೆ. ಆದರೆ, ಕಾಂಗ್ರೆಸ್‌ನ ಗ್ಯಾರಂಟಿಗಳ ಬಗ್ಗೆ ಅಣಕ ಮಾಡಿದ್ದ ಬಿಜೆಪಿ ಕೂಡ ಈ ಬಾರಿ ‘ಮೋದಿ ಗ್ಯಾರಂಟಿ’ ಎನ್ನುವ ಮೂಲಕ ಮತದಾರರಿಗೆ ನಗದು ನೀಡುಲು ಮುಂದಾಗಿದೆ.

ಮನೆ ಯಜಮಾನಿಗೆ ವರ್ಷಕ್ಕೆ ₹10,000 ನೀಡುವುದಾಗಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಘೋಷಿಸಿದ್ದಾರೆ. ತೆಲಂಗಾಣದಲ್ಲಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್, ಮಧ್ಯಪ್ರದೇಶದಲ್ಲಿ 100 ಯೂನಿಟ್‌ವರೆಗೆ ಉಚಿತ, 200 ಯೂನಿಟ್‌ವರೆಗೆ ಶೇ ಐವತ್ತರಷ್ಟು ಶುಲ್ಕ ಹಾಗೂ ಐದು ಎಚ್‌ಪಿ ಪಂಪ್‌ಸೆಟ್ ಇರುವ ರೈತರಿಗೆ ಉಚಿತ ವಿದ್ಯುತ್ ನೀಡುವುದಾಗಿ ಕಾಂಗ್ರೆಸ್ ಹೇಳಿದೆ. ‘ಮೋದಿ ಅವರ ಗ್ಯಾರಂಟಿ’ಗಳ ಅಡಿಯಲ್ಲಿ, ಈ ಬಾರಿ ಛತ್ತೀಸಗಢದಲ್ಲಿ ಮಹಿಳೆಯರಿಗೆ ವರ್ಷಕ್ಕೆ ₹12,000 ನೀಡುವುದಾಗಿ ಬಿಜೆಪಿ ಘೋಷಿಸಿದೆ. ‘ಪಿಎಂ ಕಿಸಾನ್ ನಿಧಿ’ ಯೋಜನೆ ಅಡಿ ರೈತರ ಖಾತೆಗಳಿಗೆ ಹಾಕುತ್ತಿದ್ದ ಮೊತ್ತವನ್ನು ಬಿಜೆಪಿ ಏರಿಸಿದೆ. ಜೊತೆಗೆ ಛತ್ತೀಸಗಢದಲ್ಲಿ ಭೂಮಿ ಇಲ್ಲದ ಕೃಷಿ ಕಾರ್ಮಿಕರಿಗೆ ವರ್ಷಕ್ಕೆ ₹10,000 ನೀಡುವುದಾಗಿಯೂ ಹೇಳಿದೆ

ವಿವಿಧ ರಾಜ್ಯಗಳಲ್ಲಿ ಬಂಡವಾಳ ಹೂಡಿಕೆ

ಮಧ್ಯಪ್ರದೇಶ, ಛತ್ತೀಸಗಢ ಹಾಗೂ ರಾಜಸ್ಥಾನಗಳ ಆರ್ಥಿಕತೆಯನ್ನು ಹಿಗ್ಗಿಸುವ ಭರವಸೆಯನ್ನು ಬಿಜೆಪಿ ನೀಡಿದೆ. ರಾಜಸ್ಥಾನವನ್ನು ₹29.05 ಲಕ್ಷ ಕೋಟಿ ಆರ್ಥಿಕತೆ ಮಾಡುವುದಾಗಿ ಬಿಜೆಪಿ ಹೇಳಿದೆ. ಜೊತೆಗೆ, ರಾಜಸ್ಥಾನ ಆರ್ಥಿಕ ಪುನಶ್ಚೇತನ ಕಾರ್ಯಪಡೆಯೊಂದನ್ನು ಸ್ಥಾಪಿಸಲಾಗುವುದು. ಜೈಪುರ, ಉದಯಪುರ, ಕೋಟ, ಅಜ್ಮೀರ್ ಸೇರಿದಂತೆ ಹಲವು ನಗರಗಳನ್ನು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಸ್ಮಾರ್ಟ್‌ಸಿಟಿಯನ್ನಾಗಿ ಮಾಡಲಾಗುವುದು ಎಂದೂ ಹೇಳಿದೆ. ಛತ್ತೀಸಗಢದ ರಾಯಪುರವನ್ನು ಮಧ್ಯ ಭಾರತದ ‘ಇನ್ನೋವೇಷನ್ ಹಬ್’ ಅನ್ನಾಗಿ ಮಾಡಲಾಗುವುದು. ಈ ಮೂಲಕ 6 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು ಎಂದು ಬಿಜೆಪಿ ಹೇಳಿದೆ. ಇದರೊಂದಿಗೆ, ಇನ್ವೆಸ್ಟ್ ಇಂಡಿಯಾ ಮಾದರಿಯಲ್ಲಿ, ಇನ್ವೆಸ್ಟ್ ಛತ್ತೀಸಗಢವನ್ನು ಪ್ರತೀ ವರ್ಷವೂ ಆಯೋಜಿಸಲಾಗುವುದು ಎಂದೂ ಬಿಜೆಪಿ ಭರವಸೆ ನೀಡಿದೆ.

ಮಧ್ಯಪ್ರದೇಶದ ಆರ್ಥಿಕತೆಯನ್ನು ₹45 ಲಕ್ಷ ಕೋಟಿಯಷ್ಟನ್ನಾಗಿ ರೂಪಿಸಿ, ದೇಶದ ಮೊದಲ ಮೂರು ಅತಿ ದೊಡ್ಡ ಆರ್ಥಿಕತೆಯ ರಾಜ್ಯವನ್ನಾಗಿ ಮಾಡಲಾಗುವುದು. ₹20 ಲಕ್ಷ ಕೋಟಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ, ಜನರ ಆದಾಯವನ್ನು ದ್ವಿಗುಣ ಮಾಡಲಾಗುವುದು ಎಂದೂ ಬಿಜೆಪಿ ಹೇಳಿದೆ.

ರಾಮ ಮಂದಿರ ಭೇಟಿ ಮತ್ತು ಯುಸಿಸಿ

ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಎರಡೂ ಪಕ್ಷಗಳು ಕೆಲವು ಭರವಸೆಗಳನ್ನು ನೀಡಿವೆ. ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ತಮ್ಮ ಚುನಾವಣಾ ರ‍್ಯಾಲಿಗಳಲ್ಲಿ ಜನರನ್ನು ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರಕ್ಕೆ ಕರೆದುಕೊಂಡು ಹೋಗುವ ಬಗ್ಗೆ ಹಲವು ಬಾರಿ ಪ್ರಸ್ತಾಪಿಸಿದ್ದಾರೆ. ಛತ್ತೀಸಗಢ ಹಾಗೂ ತೆಲಂಗಾಣದಲ್ಲಿ ಬಿಜೆಪಿ ಈ ಭರವಸೆ ನೀಡಿದೆ.

ಜೈನ ಮುನಿಗಳ ‘ಚಾತುರ್ಮಾಸ’ ಆಚರಣೆಗಾಗಿ ಭೂಮಿಯನ್ನು ನೀಡುವುದು, ಐತಿಹಾಸಿಕ ಮಹತ್ವ ಇರುವ ಸಿಖ್ಖರ ಧಾರ್ಮಿಕ ಕೇಂದ್ರಗಳನ್ನು ರಕ್ಷಿಸುವುದು, ಹಿಂದೂ ವಲಸಿಗರ ಅಭಿವೃದ್ಧಿಗೆ ‘ಸಿಎಂ ಶರಣಾರ್ಥಿ ಕಲ್ಯಾಣ ಯೋಜನೆ’ ರೂಪಿಸುವುದು, ಹಿಂದೂ ವಲಸಿಗರ ಮನೆಗಳನ್ನು ಕಾಂಗ್ರೆಸ್ ಸರ್ಕಾರ ಧ್ವಂಸ ಮಾಡಿತ್ತು. ಆದ್ದರಿಂದ ಹಿಂದೂ ವಲಸಿಗರಿಗೆ ಜೋಧಪುರದಲ್ಲಿ ಕಾಲೊನಿಯನ್ನು ನಿರ್ಮಾಣ ಮಾಡುವುದು ಸೇರಿ ಹಲವು ಭರವಸೆಗಳನ್ನು ಬಿಜೆಪಿ ರಾಜಸ್ಥಾನದಲ್ಲಿ ನೀಡಿದೆ. ಮಧ್ಯಪ್ರದೇಶದ ಉಜ್ಜಯಿನಿಯ ಹರಿಸಿದ್ಧಿ ಮಠ ಶಕ್ತಿಪೀಠ ಮತ್ತು ಮೈಹರದ ಶಾರದ ಶಕ್ತಿಪೀಠವನ್ನು ನವೀಕರಿಸಲಾಗುವುದು ಎಂದೂ ಬಿಜೆಪಿ ಹೇಳಿದೆ.

‘ಅಲ್ಪಸಂಖ್ಯಾತ ಓಲೈಕೆ’ ಆರೋಪದಿಂದ ಬಿಡುಗಡೆ ಪಡೆದುಕೊಳ್ಳುವುದಕ್ಕಾಗಿ ಕಾಂಗ್ರೆಸ್ ಮಧ್ಯಪ್ರದೇಶದಲ್ಲಿ ನರ್ಮದಾ ಪರಿಕ್ರಮಣ ಯಾತ್ರೆಯನ್ನು ಆರಂಭಿಸುವುದಾಗಿ ಹೇಳಿದೆ. ಇದಕ್ಕಾಗಿ ನರ್ಮದಾ ಪರಿಕ್ರಮಣ ಪರಿಷತ್ ಅನ್ನು ಸ್ಥಾಪಿಸುವುದಾಗಿಯೂ ಹೇಳಿದೆ.

ಯುಸಿಸಿ ಜಾರಿ: ತೆಲಂಗಾಣದಲ್ಲಿ ಅಧಿಕಾರಕ್ಕೆ ಬಂದರೆ, ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿ ಮಾಡಲಾಗುವುದು ಎಂದು ಬಿಜೆಪಿ ಭರವಸೆ ನೀಡಿದೆ. ಯುಸಿಸಿ ಜಾರಿಗೊಳಿಸಲು, ನಾನಾ ಧರ್ಮಗಳ ವೈಯಕ್ತಿಕ ಕಾನೂನುಗಳನ್ನು ಕ್ರೋಡೀಕರಿಸಿ ಕರಡು ರೂಪಿಸಲು ಸಮಿತಿಯೊಂದನ್ನು ರಚಿಸುವುದಾಗಿಯೂ ಬಿಜೆಪಿ ಹೇಳಿದೆ. ದೇಶದಾದ್ಯಂತ ಯುಸಿಸಿ ಜಾರಿಗೊಳಿಸಲು ಬಿಜೆಪಿ ಹಲವು ಕ್ರಮಗಳನ್ನು ಕೈಗೊಂಡಿದೆ. ಈ ಬಗ್ಗೆ ದೊಡ್ಡ ಮಟ್ಟದ ವಿರೋಧವೂ ವ್ಯಕ್ತವಾಗಿದೆ. ಈ ಹೊತ್ತಿನಲ್ಲಿ ಒಂದು ರಾಜ್ಯಕ್ಕೆ ಮಾತ್ರವೇ ಯುಸಿಸಿ ಜಾರಿ ಮಾಡುವುದಾಗಿ ಹೇಳಿರುವುದು ಎಷ್ಟರ ಮಟ್ಟಿಗೆ ಕಾರ್ಯಸಾಧು ಎನ್ನುವುದು ಪ್ರಶ್ನಾರ್ಥಕ.

ಜಾತಿಗಣತಿ ಮತ್ತು ಮೀಸಲಾತಿ

ಜಾತಿಗಣತಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ದೊಡ್ಡ ಅಸ್ತ್ರವಾಗಿ ಪ್ರಯೋಗವಾಗಲಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮ್ಮ ಚುನಾವಣಾ ಭಾಷಣ, ಪ್ರತಿಕಾ ಗೋಷ್ಠಿಗಳಲ್ಲಿ ಈ ಬಗ್ಗೆ ಪದೇ ಪದೇ ಮಾತನಾಡುತ್ತಲೇ ಇದ್ದಾರೆ. ಜಾತಿಗಣತಿ ನಡೆಸುವುದಕ್ಕೆ ಬಿಜೆಪಿಯ ವಿರೋಧವಿದೆ. ಪ್ರಧಾನಿ ಮೋದಿ ಅವರು ಈ ಕುರಿತು ಕಾಂಗ್ರೆಸ್ ಅನ್ನು ಟೀಕಿಸುತ್ತಲೇ ಬಂದಿದ್ದಾರೆ. ‘ಹಿಂದೂಗಳನ್ನು ಒಡೆಯುವ ತಂತ್ರ’ ಎಂದೂ ಬಣ್ಣಿಸಿದ್ದಾರೆ. ಆದರೆ, ತೆಲಂಗಾಣದಲ್ಲಿ ಮಾತ್ರ ಮೀಸಲಾತಿ ಪ್ರಮಾಣವನ್ನು ಏರಿಸುವುದಾಗಿ ಬಿಜೆಪಿ ಹೇಳಿದೆ.

ಮಧ್ಯಪ್ರದೇಶ, ಛತ್ತೀಸಗಢದಲ್ಲಿ ಸರ್ಕಾರ ರಚಿಸಿದರೆ, ಜಾತಿಗಣತಿ ಮಾಡುವುದಾಗಿ ಕಾಂಗ್ರೆಸ್ ಘೋಷಿಸಿದೆ. ಮಧ್ಯಪ್ರದೇಶದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿ ನೀಡುವುದಾಗಿಯೂ ಕಾಂಗ್ರೆಸ್ ಹೇಳಿದೆ.

ತೆಲಂಗಾಣದಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿರುವ ಬಿಜೆಪಿಯು, ಧರ್ಮಾಧಾರಿತ ಮೀಸಲಾತಿಯು ಅಸಾಂವಿಧಾನಿಕವಾದುದು. ಆದ್ದರಿಂದ ಧರ್ಮಾಧಾರಿತ ಮೀಸಲಾತಿಯನ್ನು ತೆಗೆದುಹಾಕಲಾಗುವುದು. ಆದರೆ, ಇತರೆ ಹಿಂದುಳಿದ ವರ್ಗಗಳಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮೀಸಲಾತಿಯನ್ನು ಹೆಚ್ಚಿಸಲಾಗುವುದು ಎಂದು ಭರವಸೆ ನೀಡಿದೆ.

ಸಿನಿ ಬಿಟ್ಸ್

‘ಹಾಸ್‌ಪಿಸ್’ನೊಳಗಿನ ‘ಸ್ವಾತಿ ಮುತ್ತು..’

ರಾಜ್ ಬಿ. ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು, ಸಿನಿಮಾ ನ.24ರಂದು ಬಿಡುಗಡೆಯಾಗುತ್ತಿದೆ. ಈ ಕಥೆ ಹುಟ್ಟಿದ ಬಗ್ಗೆ ರಾಜ್ ಇತ್ತೀಚೆಗೆ ಮಾಹಿತಿ ಬಿಚ್ಚಿಟ್ಟರು.

‘ಈ ಕಥೆಯನ್ನು ‘ಗರುಡ ಗಮನ ವೃಷಭ ವಾಹನ’ ಸಿನಿಮಾ ಆದ ನಂತರ ಬರೆದಿದ್ದೆ. ನಾನು ಸೋಷಿಯಲ್ ವರ್ಕ್ ವಿದ್ಯಾರ್ಥಿ. ಕಾಲೇಜು ದಿನಗಳಲ್ಲಿ ನಮ್ಮನ್ನು ಮಾದಕ ವ್ಯಸನ ವರ್ಜನ ಶಿಬಿರಗಳಿಗೆ ಹಾಗೂ ‘ಹಾಸ್‌ಪಿಸ್’, ಎಂದರೆ ಗುಣ ಆಗದಂಥ ಕಾಯಿಲೆ ಇರುವವರು ತಂಗಿರುವ ಕೇಂದ್ರಕ್ಕೆ ಕರೆದೊಯ್ಯುತ್ತಿದ್ದರು. ನಾವೆಲ್ಲರೂ ಶಾಶ್ವತ ಎಂದುಕೊಂಡೇ ಬದುಕುತ್ತಿರುತ್ತೇವೆ. ಆದರೆ ಶುಶ್ರೂಷೆ ನೀಡಿದರೂ, ಇಂದಲ್ಲ ನಾಳೆ ನಾವಿಲ್ಲ ಎನ್ನುವುದು ಹಾಸ್‌ಪಿಸ್‌ನಲ್ಲಿರುವವರಿಗೆ ತಿಳಿದಿರುತ್ತದೆ. ಇದುವೇ ನನ್ನ ಕಥೆಗೆ ಆಧಾರ. ಇನ್ನು ಸ್ವಾತಿ ಮಳೆಯ ನೀರು ಸರಿಯಾದ ಚಿಪ್ಪಿನೊಳಗೆ ಸೇರಿದರೆ ಮುತ್ತಾಗುತ್ತದೆ. ಎಲ್ಲ ಹನಿಗಳೂ ಮುತ್ತಾಗಬೇಕೆಂದಿಲ್ಲ. ಹಾಗೆಯೇ ಆ ಕೇಂದ್ರದೊಳಗೆ ಇರುವ ‘ಪ್ರೇರಣಾ’ ಎಂಬಾಕೆ ಮುತ್ತಾಗುತ್ತಾಳೆಯೇ ಎನ್ನುವುದು ಕಥೆ. ನಮ್ಮ ಚಿತ್ರದ ಕಥೆಗೆ ಈ ಶೀರ್ಷಿಕೆ ಸರಿ ಹೊಂದುವುದರಿಂದ ಇಟ್ಟಿದ್ದೇವೆ. ಇದರಲ್ಲಿ ನಾನು ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ‘ಅನಿಕೇತ್’ ಎಂಬ ಪಾತ್ರ ಮಾಡಿದ್ದೇನೆ’ ಎನ್ನುತ್ತಾರೆ ರಾಜ್.

ನಟಿ ರಮ್ಯಾ ಅವರ ಆ್ಯಪಲ್ ಬಾಕ್ಸ್ ಸ್ಟುಡಿಯೋಸ್, ಲೈಟರ್ ಬುದ್ಧ ಫಿಲ್ಮ್ಸ್ ಸಹಯೋಗದೊದಿಗೆ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಕೆ.ಆರ್.ಜಿ. ಸ್ಟುಡಿಯೋಸ್ ಮೂಲಕ ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿದೆ. ಚಿತ್ರದಲ್ಲಿ ‘ಪ್ರೇರಣಾ’ ಎಂಬ ಪಾತ್ರದಲ್ಲಿ ನಟಿ ಸಿರಿ ರವಿಕುಮಾರ್ ನಟಿಸಿದ್ದಾರೆ.

ಸಿರಿ ರವಿಕುಮಾರ್ ಹಾಗೂ ರಾಜ್ ಬಿ.ಶೆಟ್ಟಿ

ಶೂಟಿಂಗ್ ಪೂರ್ಣಗೊಳಿಸಿದ ‘ಝೀಬ್ರಾ

‘ಡಾಲಿ’ ಧನಂಜಯ ಹಾಗೂ ಸತ್ಯದೇವ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ ‘ಝೀಬ್ರಾ’ದ ಚಿತ್ರೀಕರಣ ಪೂರ್ಣಗೊಂಡಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದ್ದು, ಸಿನಿಮಾ ಶೀಘ್ರದಲ್ಲೇ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

‘ಝೀಬ್ರಾ’ ಮಾಸ್ ಎಂಟರ್‌ಟೇನ್ಮೆಂಟ್ ಚಿತ್ರವಾಗಿದ್ದು, ಡಾಲಿ ಜೊತೆ ಸತ್ಯದೇವ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಆದರೆ ಈ ಚಿತ್ರದಲ್ಲಿ ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಸತ್ಯದೇವ್ ಮತ್ತು ಡಾಲಿ ಇಬ್ಬರೂ ಚಿತ್ರದ ನಾಯಕರಾಗಿದ್ದು, ಇಬ್ಬರದ್ದೂ ಇದು 26ನೇ ಸಿನಿಮಾ ಎಂಬುದು ವಿಶೇಷ ಎಂದಿದೆ ಚಿತ್ರತಂಡ. ಈ ಸಿನಿಮಾದಲ್ಲಿ ಪ್ರಿಯಾ ಭವಾನಿ ಶಂಕರ್, ಸತ್ಯರಾಜ್, ಸುನೀಲ್ ವರ್ಮ, ಜೆನಿಫರ್, ಸುರೇಶ್‌ಚಂದ್ರ ಮೆನನ್, ಕಲ್ಯಾಣಿ ನಟರಾಜ್ ಸೇರಿ ಹಲವು ಕಲಾವಿದರು ನಟಿಸಿದ್ದಾರೆ.

ಸಿನಿಮಾವನ್ನು ಈಶ್ವರ್ ಕಾರ್ತಿಕ್ ನಿರ್ದೇಶನ ಮಾಡಿದ್ದು, ಕತೆ-ಚಿತ್ರಕಥೆಯೂ ಅವರದ್ದೇ. ರವಿ ಬಸ್ರೂರು ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಧನಂಜಯ ಹಾಗೂ ಸತ್ಯದೇವ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

☒ ‘ಬಯಲಾಯ್ತು ಶಕ್ತಿ ಯೋಜನೆ ಅಸಲಿಯತ್ತು..! ಫ್ರೀ ಬಸ್ ಟಿಕೆಟ್ ಅಂತಾ ನಂಬಿಸಿ 3 ಬಾರಿ ಬಸ್ ಟಿಕೆಟ್ ದರ ಏರಿಸಲಾಗಿದೆ. ಮೈಸೂರು–ಬೆಂಗಳೂರಿಗೆ ₹160 ಇದ್ದ ಟಿಕೆಟ್ ದರ ಈಗ ₹200 ಆಗಿದೆ. ಒಂದು ಕಡೆ ಸುಲಿಗೆ.. ಇನ್ನೊಂದು ಕಡೆ ಉಚಿತ.. ಇದು ಫ್ರೀ ಭಾಗ್ಯವಲ್ಲ, ಹಗಲು ದರೋಡೆ!’ ಎಂದಿರುವ ಪೋಸ್ಟರ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಜ್ಯದ ಕೆಲವೆಡೆ ಸಾರ್ವಜನಿಕವಾಗಿ ಗೋಡೆಗಳ ಮೇಲೆ ಈ ಪೋಸ್ಟರ್ ಅನ್ನು ಅಂಟಿಸಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಬಯಲಾಯ್ತು ಶಕ್ತಿ ಯೋಜನೆ ಅಸಲಿಯತ್ತು..!

ಫ್ರೀ ಬಸ್ ಟಿಕೆಟ್ ಅಂತಾ ನಂಬಿಸಿ 3 ಬಾರಿ ಬಸ್ ಟಿಕೆಟ್ ದರ ಏರಿಸಲಾಗಿದೆ.

ಮೈಸೂರು-ಬೆಂಗಳೂರಿಗೆ ₹160 ಇದ್ದ ಟಿಕೆಟ್ ದರ ಈಗ ₹200 ಆಗಿದೆ.

ಒಂದು ಕಡೆ ಸುಲಿಗೆ.. ಇನ್ನೊಂದು ಕಡೆ ಉಚಿತ..

ಇದು ಫ್ರೀ ಭಾಗ್ಯವಲ್ಲ, ಹಗಲು ದರೋಡೆ!

☑ **ದಸರಾ** ನಿಮಿತ್ತ 10 ದಿನ ಅಥವಾ ಸೀಮಿತ ಅವಧಿಗೆ ಅನ್ವಯ ವಾಗುವಂತೆ ಕಳೆದ 4 ದಶಕಗಳಿಂದಲೂ ಪ್ರತಿ ವರ್ಷ ಮೈಸೂರು- ಬೆಂಗಳೂರು ಬಸ್ ಪ್ರಯಾಣ ದರವನ್ನು ಶೇ 20ರಷ್ಟು ಏರಿಸಲಾಗುತ್ತದೆ. ಅಂತೆಯೇ ಈ ದರ ಏರಿಕೆಯು ಅಕ್ಟೋಬರ್ 30ಕ್ಕೆ ಅಂತ್ಯಗೊಂಡಿದೆ. ಪೋಸ್ಟರ್‌ನಲ್ಲಿರುವ ಟಿಕೆಟ್‌ನಲ್ಲಿ ಅ. 23ರಂದು ಪ್ರಯಾಣಿಸಿದ ಮಾಹಿತಿ ಇದೆ. ಬೆಂಗಳೂರಿನಿಂದ ಬಸ್‌ಗಳಲ್ಲಿ ಜನಸಂದಣಿ ಇದ್ದು, ಮೈಸೂರಿನಿಂದ ವಾಪಸು ಬರುವಾಗ ಖಾಲಿ ಬರಬೇಕಾಗಿರುವ ಕಾರಣದಿಂದ ಈ ಏರಿಕೆಯನ್ನು ಮಾಡಲಾಗುತ್ತದೆ ಎಂದು ಕೆಎಸ್‌ಆರ್‌ಟಿಸಿ ಸ್ಪಷ್ಟನೆ ನೀಡಿದೆ. ಆದ್ದರಿಂದ, ಶಕ್ತಿ ಯೋಜನೆಗೂ ಬಸ್ ಪ್ರಯಾಣ ದರ ಹೆಚ್ಚಳಕ್ಕೂ ಯಾವುದೇ ಸಂಬಂಧ ಇಲ್ಲ.

ಗುಂಡಣ್ಣ



ನಮ್ಮ ಕಚೇರಿಯಲ್ಲಿ ಇಂದು ಪಾರ್ಟಿ ಇದೆ ಲೂ
ಹಾಗಾದರೆ ನೀನು ಸರಿಯಾದ ಸ್ಥಳಕ್ಕೆ ಬಂದಿದ್ದೀಯಾ
ನಮ್ಮ ಹೋಟೆಲ್‌ನಲ್ಲಿ ಹೊಸ ತಿನಿಸು ಮಾಡಿರುವೆ
ಗ್ರಿಲ್ಡ್ ಚೀಸ್, ಚೀಸ್ ಆಮ್ಲೆಟ್, ಚೀಸ್ ಬ ಗರ್
© 2014 by King Features Syndicate, Inc. World Rights reserved
www.Blondie.com
6-6
YOUNG & MARSHALL

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಮಂಗಳವಾರ ನವೆಂಬರ್ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ನವಮಿ ಗಂ. 25-10 ನಕ್ಷತ್ರ: ಶತಭಿಷ ಗಂ. 20-01 ಯೋಗ: ವ್ಯಾಘಾತ ಗಂ 17-40 ಕರಣ: ಬಾಲವ ಗಂ 14-14, ವೃಶ್ಚಿಕ ಮಾಸದ 05 ನೇ ದಿನ, ಮಳೆನಕ್ಷತ್ರ: ಅನುರಾಧ 1.
ರಾಹುಕಾಲ : ಮಧ್ಯಾಹ್ನ 03-00 - 04-30,
ಸೂರ್ಯೋದಯ : 06-36 ಸೂರ್ಯಾಸ್ತ : 05-57,
ಮುಸ್ಲಿಂ ದಿನಾಂಕ : 06 ಜುಮಾದುಲ್ಲಾವಲ್
ದಿನ ವಿಶೇಷ : ಜಗದ್ಧಾತ್ರಿ ಪೂಜಾ, ಅಕ್ಷಯ ನವಮಿ, ಅದೃಷ್ಟ ಸಂಖ್ಯೆ : 6, 2

ಮೇಷ: ಪಾಲುದಾರಿಕೆ ವ್ಯವಹಾರದವರಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇಂದು ಬರುವುದು. ನಿಮ್ಮಲ್ಲಿದ್ದ ಅನಿಶ್ಚಿತತೆಯ ಭಾವ ನಿವಾರಣೆಯಾಗುವುದು. ದಾಯಾದಿಗಳ ಉಪಟಳದಿಂದಾಗಿ ವೈರತ್ವ ಹೆಚ್ಚಾಗುವ ಸಾಧ್ಯತೆಗಳಿವೆ.

ವೃಷಭ: ಮನಸ್ಸಿನ ಸ್ಥಿತಿ ಬದಲಾಗಲು ಕೆಲದಿನ ವಾಸಸ್ಥಳ ಬದಲಾವಣೆ ಮಾಡಬೇಕಾಗಬಹುದು. ಭಾಷಣ, ಚಿತ್ರಕಲೆಯಲ್ಲಿನ ನಿಮ್ಮ ಆಸಕ್ತಿಯಿಂದಾಗಿ, ಹೆಚ್ಚಿನ ಕಲಿಕೆಗಾಗಿ ಸಮಯವನ್ನು ಮೀಸಲಿಡುವ ತೀರ್ಮಾನ ಮಾಡಿ.

ಮಿಥುನ: ಸಹೋದರರಲ್ಲಿ ಸಣ್ಣ ಸಣ್ಣ ವಿಚಾರದಲ್ಲೂ ಅನರ್ಥಗಳು ನಡೆಯುವ ಸಂಭವವಿದೆ, ಅದರ ಪರಿಣಾಮವಾಗಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡುವುದು. ದುರ್ಘಟನೆಯ ನೋವುಗಳು ಪುನಃ ಪುನಃ ಕಾಡುವುದು.

ಕರ್ಕಾಟಕ: ಸಂಬಂಧವಿರದ ಕೆಲಸಕ್ಕಾಗಿ ತಿರುಗಾಟ ಆದರೂ, ಹೊಸ ಜನರ ಪರಿಚಯ, ಹೊಸ ಅನುಭವ ನೆಮ್ಮದಿ ತರುತ್ತದೆ. ನ್ಯಾಯಾಂಗ ಇಲಾಖೆಯವರಿಗೆ ವಿಚಿತ್ರ ಅನುಭವವಾಗುವುದು. ಗೊಂದಲದ ಗೂಡಿಗೆ ಸಿಲುಕಿದಂತಾಗುವುದು.

ಸಿಂಹ: ಮೇಲಧಿಕಾರಿಗಳೊಂದಿಗೆ ವ್ಯವಹರಿಸುವಾಗ ನಿರ್ಧಾರಗಳನ್ನು ಅವರಿಗೆ ಅರ್ಥವಾಗುವ ರೀತಿಯಲ್ಲಿ ಸರಿಯಾಗಿ ತಿಳಿಸುವುದು ಒಳ್ಳೆಯದು. ಕಾರ್ಮಿಕರಿಂದ ಕೆಲಸದಲ್ಲಿ ಮೋಸ ಹೋಗುವಿರಿ. ಎಚ್ಚರವಿರಲಿ.

ಕನ್ಯಾ: ಕಾರ್ಖಾನೆಯಲ್ಲಿ ವಿದ್ಯುತ್ ಶಕ್ತಿಯ ಲೋಪದಿಂದಾಗಿ ನಷ್ಟ ಸಂಭವಿಸಬಹುದು. ದಿನದ ಆರಂಭ ಸ್ವಲ್ಪ ಗೊಂದಲಮಯವಾದರೂ, ತಪ್ಪಿದ ಪ್ರಯಾಣದಿಂದ ವಿರಾಮಕ್ಕೆ ಅವಕಾಶವಿರುವುದು. ಕೆಲಸದಲ್ಲಿ ಶ್ರದ್ಧೆಯಿರಲಿ.

ತುಲಾ: ಉತ್ತಮ ಅವಕಾಶ ಜಾರಿ ಹೋಗದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಉದ್ಯೋಗದಲ್ಲಾಗುವ ಕಿರಿಕಿರಿಗೆ ನಿಮ್ಮ ಮಾನಸಿಕ ಸ್ಥಿತಿಯೇ ಕಾರಣವಾಗಿರುತ್ತದೆ. ರಾಜಕೀಯಕ್ಕೆ ಪ್ರವೇಶಿಸಲು ಆಹ್ವಾನ ಸಿಗಲಿದೆ.

ವೃಶ್ಚಿಕ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳುವುದರಿಂದ ನೋವು ಕಡಿಮೆಯಾಗುವುದು. ಪಿತ್ರಾರ್ಜಿತ ಆಸ್ತಿಯಿಂದಾಗಿ ನಿಮ್ಮ ಆರ್ಥಿಕತೆ ಅಭಿವೃದ್ಧಿಯಾಗುವುದು. ಸ್ವಂತ ಉದ್ಯೋಗದವರಿಗೆ ಹೆಚ್ಚಿನ ಪ್ರಗತಿ.

ಧನು: ವಿದ್ಯಾಭ್ಯಾಸದಲ್ಲಿ ಹಿನ್ನಡೆಯಾಗಿ ವಿದ್ಯಾರ್ಥಿಗಳಿಗೆ ನಿರಾಸೆ, ಕೋಪ ಕಾಡಲಿದೆ. ಅದನ್ನು ಎದುರಿಸುವುದು ಸವಾಲಿನ ದಿನವಾಗಲಿದೆ. ಅನಾರೋಗ್ಯವಾದ ಕೆಲವರಿಗೆ ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗಬಹುದು.

ಮಕರ: ಯಾವುದೇ ವಿಷಯದಲ್ಲಿ ಮುಂದುವರಿಯುವ ಮೊದಲು ಅದರ ಉದ್ದಗಲದ ಬಗ್ಗೆ ತಿಳಿದುಕೊಳ್ಳಿ. ಕಾರ್ಯಗಳು ವಿಳಂಬವಾಗುವ ಸಂಭವವಿದೆ. ಯಾರಲ್ಲಿಯೂ ಗಲಾಟೆಯನ್ನು ಮಾಡಿಕೊಳ್ಳಬೇಡಿ.

ಕುಂಭ: ಉದ್ಯೋಗ ಬದಲಾವಣೆಯ ವಿಚಾರವನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದು ಒಳ್ಳೆಯದು. ತೆಂಗಿನಕಾಯಿ ವ್ಯಾಪಾರಿಗಳಿಗೆ ಲಾಭ ಸಿಗಲಿದೆ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿದೆ.

ಮೀನ: ವಿನ್ಯಾಸಕಾರ ಸಲಹೆಗಾರರಾಗಿ ಕಟ್ಟಡ ನಿರ್ಮಾಣ ಸಂಸ್ಥೆಯೊಂದಕ್ಕೆ ನೇಮಕಗೊಳ್ಳುವಿರಿ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿ ಮನಸ್ಸಿಗೆ ನಿರಾಳವಾಗುವುದು. ಮಾನಸಿಕ ದೌರ್ಬಲ್ಯ ದೂರಾಗುವುದು.

ನುಡಿ ಬೆಳಗು

ಪಿ. ಚಂದ್ರಿಕಾ

ಜೀವ-ಜೀವನ ದೊಡ್ಡದು

ಪ್ರೀತಿಸಿದ ಹುಡುಗಿಯೊಬ್ಬಳು ಕೈಕೊಟ್ಟು ಹೋಗಿದ್ದಕ್ಕೆ ಬೇಸರಗೊಂಡು ಯುವಕ ಆತ್ಮಹತ್ಯೆಗೆ ನಿರ್ಧರಿಸುತ್ತಾನೆ. ಈಜು ಬಾರದ ತಾನು ನೀರಿನಲ್ಲಿ ಬಿದ್ದರೆ ಖಂಡಿತಾ ಸಾಯುವೆ ಎಂದು ಕೆರೆಯ ದಂಡೆಯ ಮೇಲೆ ನಿಲ್ಲುತ್ತಾನೆ. ಅಲ್ಲಿಗೆ ವಯಸ್ಸಾದ ವ್ಯಕ್ತಿಯೊಬ್ಬ ಬರುತ್ತಾನೆ. ಯುವಕನ ಸ್ಥಿತಿಯನ್ನು ನೋಡಿ ಅವನ ಯೋಚನೆಗಳು ಅರ್ಥವಾಗುತ್ತದೆ. ನೋವಿಗೆ ಸಂತೈಕೆ ಬೇಕಿದ್ದ ಯುವಕ ಎಲ್ಲವನ್ನೂ ಹೇಳಿಕೊಳ್ಳುತ್ತಾನೆ. ಆಗ ಇದ್ದಕ್ಕಿದ್ದ ಹಾಗೆ ‘ಎಲಾ ದುಷ್ಟ ಕಿಡ್ನಿಯೇ ನೀನು ಇಷ್ಟು ವಿಶ್ವಾಸದ್ರೋಹಿಯಾ?’ ಎಂದು ಬೈಯ್ಯತೊಡಗುತ್ತಾನೆ.

ಯುವಕನಿಗೆ ಅಚ್ಚರಿ ತಾನು ಸಾಯಲು ಹೊರಟಿದ್ದಕ್ಕೂ ಈ ಮುದುಕ ಕಿಡ್ನಿಯನ್ನು ಬಯ್ಯುವುದಕ್ಕೂ ಕಾರಣ ತಿಳಿಯದೆ ಕಿಡ್ನಿಯನ್ನು ಯಾಕೆ ಬಯ್ಯುತ್ತಿರುವೆ’ ಎಂದು ಕೇಳುತ್ತಾನೆ. ‘ಅಲ್ಲಪ್ಪಾ ನೀನು ಎಷ್ಟು ಗ್ರೇಟ್, ಈ ಕಿಡ್ನಿ ಇದೆಯಲ್ಲಾ ಇದಕ್ಕೆ ಸ್ವಲ್ಪವೂ ಪ್ರೀತಿಯಿಲ್ಲ ಈಗ ಆರು ತಿಂಗಳ ಹಿಂದಷ್ಟೇ ಆರೋಗ್ಯದಲ್ಲಿ ಏರುಪೇರಾಗಿ ನನ್ನ ಒಂದು ಕಿಡ್ನಿ ತೆಗೆದರು. ಜೊತೆಯಲ್ಲಿ ಹುಟ್ಟಿದಾಗಿನಿಂದ ಇದ್ದ ಇನ್ನೊಂದು ಕಿಡ್ನಿಗೆ ಏನೂ ಅನ್ನಿಸಲೇ ಇಲ್ಲವಲ್ಲ. ಅದು ಅದರ ಪಾಡಿಗೆ ಕೆಲಸ ಮಾಡುತ್ತಲೇ ಇದೆ’ ಎಂದನು.

ಯುವಕ, ‘ಅದು ಕೆಲಸ ಮಾಡುತ್ತಿರುವುದರಿಂದಲೇ ನೀವು ಬದುಕಿರುವುದಲ್ಲವಾ? ಅದಕ್ಕೂ ನನ್ನ ಜೀವನಕ್ಕೂ ಏನು ಸಂಬಂಧ’ ಎಂದ.

ಆಗ ಮುದುಕ ಹೇಳಿದ: ‘ಇದೆ ಸಂಬಂಧ ಇದೆ. ಜೊತೆಜೊತೆಯಾಗಿ ಹುಟ್ಟಿದ ಅಂಗವನ್ನೇ ಕಳೆದುಕೊಂಡರೂ ಅದು ನಿನ್ನಷ್ಟು ದುಃಖಿಸಲಿಲ್ಲ ತನ್ನ ಕೆಲಸ ಏನಿದೆ ಅದರ ಜೊತೆಗೆ, ಹೋದ ಕಿಡ್ನಿಯ ಕೆಲಸವನ್ನೂ ಅದೇ ಮಾಡುತ್ತಿದೆ. ನೀನು ನೋಡು ಎರಡು ವರ್ಷಗಳ ಹಿಂದೆ ಸಿಕ್ಕ ಹುಡುಗಿ ತಪ್ಪಿ ಹೋದಳು ಎಂದು ಆತ್ಮಹತ್ಯೆಗೆ ಹೊರಟಿರುವೆ. ಒಳ್ಳೆಯದು ನಿನ್ನ ಪ್ರೀತಿ ದೊಡ್ಡದು ಎಂದು ನಿರೂಪಿಸಿಕೊಳ್ಳಲು ನೀನು ಸಾಯುವುದು ಒಳಿತು’ ಎನ್ನುತ್ತಾನೆ.

ಯುವಕನಿಗೆ ಏನು ಹೇಳಬೇಕೆನ್ನುವುದು ತೋಚದೆ ಕಸಿವಿಸಿಗೊಂಡ. ಇದನ್ನು ಗಮನಿಸುತ್ತಿದ್ದ ಮುದುಕ ‘ಹುಟ್ಟಿದಾಗಿನಿಂದ ಜೊತೆಯಲ್ಲಿದ್ದವರೆಲ್ಲಾ ಸತ್ತರೂ ನಾವಿರುತ್ತೇವೆ. ಹುಟ್ಟಿದಾಗಿಂದ ನಮ್ಮ ಜೊತೆಯಲ್ಲೆ ಇದ್ದ ಅಂಗವೊಂದರಿಂದ ನಮ್ಮ ಜೀವಕ್ಕೆ ಅಪಾಯ ಆಗುತ್ತೆ ಅಂದಾಗ ಅದನ್ನೂ ನಾವೇ ಕತ್ತರಿಸಲು ಅನುಮತಿಸುತ್ತೇವೆ. ಯಾಕೆಂದರೆ ಎಲ್ಲಕ್ಕಿಂತ ಜೀವ ದೊಡ್ಡದು. ಅಂಥಾದ್ದರಲ್ಲಿ ನಿನ್ನೆ ಮೊನ್ನೆ ಪ್ರೀತಿಸಿ ಕೈಕೊಟ್ಟಳು ಎಂದು ನಿನ್ನ ಜೀವವನ್ನು ಕಳೆದುಕೊಳ್ಳುತ್ತೀಯಲ್ಲಾ ಇದು ನ್ಯಾಯವಾ?’ ಎಂದ.

ಯುವಕ ಗೊಂದಲದಲ್ಲೇ ಇದ್ದಾನೆ. ಅದನ್ನು ನೋಡಿ ಮುದುಕ ಮತ್ತೆ ಸಮಾಧಾನ ಹೇಳುವವನಂತೆ ‘ನೀನಷ್ಟೇ ಮುಖ್ಯ, ನೀನು ಮಾತ್ರವೇ ಮುಖ್ಯ ಎಂದುಕೋ. ಆಗ ಎಲ್ಲವೂ ಸರಿಯಾಗುತ್ತೆ. ಯಾರಿಂದಲೂ ನೀನು ಬದುಕು ನಡೆಸುತ್ತಿಲ್ಲ. ಎರಡು ವರ್ಷಗಳ ಹಿಂದೆಯೂ ನೀನಿದ್ದೆ. ಈಗಲೂ ಇದ್ದೀಯ. ಅವಳು ಬಂದಳು ಹೋದಳು. ದೇವರು ಜೀವಕೊಡುತ್ತಾನೆ. ಜೀವನ ಮಾತ್ರ ನೀನೇ ಮಾಡಬೇಕು. ಸಾಯುವ ಎಲ್ಲ ಯೋಚನೆಯನ್ನು ಬದುಕುವ ಕಡೆಗೆ ತಿರುಗಿಸು. ಸಾಧಿಸಬೇಕಾಗಿರುವ ಅದ್ಭುತ ದಾರಿಗಳು ತೆರೆದು ಕೊಳ್ಳುತ್ತವೆ. ಸಾಧನೆ ಮಾಡು ಹುಡುಗಿ ಮಾತ್ರವೇನು? ಇಡೀ ಜಗತ್ತೇ ನಿನ್ನ ಹಿಂದಿರುತ್ತದೆ’ ಎಂದ. ಯುವಕನಿಗೆ ತಪ್ಪಿನ ಅರಿವಾಗಿ ಇನ್ನೆಂದೂ ಸಾಯುವ ಯೋಚನೆಯನ್ನೂ ಮಾಡದೆ ಬದುಕಿನ ಕಡೆಗೆ ಮುಖ ಮಾಡುತ್ತಾನೆ.

❖

ಪದಬಂಧ 5506

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರದೊಳಗಿರುವ ಚಿನ್ನ (4)
3.ಹಿಸ್ಸೆದಾರ ಇಲ್ಲಿದ್ದಾನೆ (4)
5.ತಾರ ನುಡಿಸಿದ ತಂತಿವಾದ್ಯ (3)
6.ಸ್ವರ್ಗವನ್ನು ಹೀಗೂ ಕರೆವರು (4)
8.ಜೀರ್ಣಾಂಗವಿದು (3)
10.ಈ ಲಾಯರ್ ಕನ್ನಡಿಗ! (3)
12.ತಮ್ಮ ತೋರಿರುವ ಭೇದಭಾವ (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಅವಾರ (3)
16.ಪಣದೊಳಗಿರುವ ಅಳತೆ (4)
17.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)

ಮೇಲಿಂದ ಕೆಳಕ್ಕೆ
1.ಇನ್ನೂ ಕರು ಹಾಕದ ಹಸು (3)
2.ವಿಷಯಾಸಕ್ತನಿವನು (3)
3.ಪಾದರಸವನ್ನು ಹೀಗೂ ಕರೆವರು (3)
4.ನೇಸರನ ಇನ್ನೊಂದು ಹೆಸರು (2)
7.ಬೆಳ್ಳಿ ಹಬ್ಬವಿದು (5)
9.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದ್ದು (5)
11.ಲವ ಹಿಡಿದಿರುವ ಉಪ್ಪು (3)
12.ಒಣಗಿದ ವಸ್ತು (3)
13.ಸವಿಯಾದುದು ಮರದೊಳಗಿದೆ (3)
14.ತಾಪತ್ರಯದಲ್ಲಿದ್ದಾಗ ತಟ್ಟದ ಬಿಸಿ! (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

5505ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪದಕ 3.ವದನ
5.ರಕ್ತಸಂಚಾರ 6.ಶವ
8.ನಾಕ 9.ಮಾನ
10.ಕದ
14.ಗಾಳಿಗೋಪುರ
15.ಗರತಿ 16.ಬಯಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ಕರಡು
3.ವರಸೆ 4.ನಕ್ಷತ್ರಿಕ
7.ವಸನ 8.ನಾವಿಕ
9.ಮಾವಟಿಗ 11.ದಬ್ಬಾಳಿಕೆ
12.ಸಂಗಾತಿ 13.ಡುರಬ

ಸುಡೊಕು 5892

2		9			7	1		4
	6			3				
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5891 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಕೋಚಿಂಗ್ ಕೇಂದ್ರಗಳ ನಿಯಂತ್ರಣಕ್ಕೆ ನಿರ್ದೇಶನ ನೀಡಲಾಗದು: ಸುಪ್ರೀಂ ಕೋರ್ಟ್

‘ಮಕ್ಕಳ ಆತ್ಮಹತ್ಯೆಗೆ ಪಾಲಕರ ಒತ್ತಡ ಕಾರಣ’

ನವದೆಹಲಿ(ಪಿಟಿಐ): ತೀವ್ರವಾದ ಪೈಪೋಟಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವ ತಮ್ಮ ಮಕ್ಕಳ ಮೇಲೆ ಪಾಲಕರು ಹೇರುವ ಒತ್ತಡವೇ ದೇಶದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಹೆಚ್ಚಲು ಪ್ರಮುಖ ಕಾರಣಗಳು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಕೋಚಿಂಗ್ ಕೇಂದ್ರಗಳ ನಿಯಂತ್ರಣಕ್ಕಾಗಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ವಿಚಾರಣೆ ವೇಳೆ ನ್ಯಾಯಾಲಯ ಈ ಮಾತು ಹೇಳಿದೆ.

‘ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪಾಲಕರ ಒತ್ತಡವೇ ಪ್ರಮುಖ ಕಾರಣ. ಇಂತಹ ಸನ್ನಿವೇಶದಲ್ಲಿ ನ್ಯಾಯಾಲಯ ನಿರ್ದೇಶನ ನೀಡುವುದಾದರೂ ಹೇಗೆ’ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್.ಭಟ್ಟಿ ಅವರಿದ್ದ ನ್ಯಾಯಪೀಠವು ಅರ್ಜಿದಾರರ ಪರ ವಕೀಲರನ್ನು ಪ್ರಶ್ನಿಸಿತು.

ಮುಂಬೈ ಮೂಲದ ವೈದ್ಯ ಅನಿರುದ್ಧ ನಾರಾಯಣ ಮಾಲ್ಪಾನಿ ಅವರು ವಕೀಲೆ ಮೋಹಿನಿ ಪ್ರಿಯಾ ಅವರ ಮೂಲಕ ಈ ಕುರಿತು ಅರ್ಜಿ ಸಲ್ಲಿಸಿದ್ದಾರೆ.

‘ದೇಶದಲ್ಲಿ ಕೋಚಿಂಗ್ ಕೇಂದ್ರಗಳೇ ಇರಬಾರದು ಎಂಬುದು ನಮ್ಮಲ್ಲಿನ ಬಹುತೇಕರ ಬಯಕೆ. ಆದರೆ, ಶಾಲೆಗಳ ಸ್ಥಿತಿ ನೋಡಿ ಹೇಗಿದೆ. ಇನ್ನೊಂದೆಡೆ ತೀವ್ರವಾದ ಸ್ಪರ್ಧೆ ಇದೆ. ಈ ಎಲ್ಲ ಕಾರಣಗಳಿಂದಾಗಿ ಕೋಚಿಂಗ್ ಕೇಂದ್ರಗಳ ಕದ ತಟ್ಟುವುದನ್ನು ಬಿಟ್ಟರೆ ವಿದ್ಯಾರ್ಥಿಗಳ ಮುಂದೆ ಬೇರೆ ಆಯ್ಕೆ ಇಲ್ಲ’ ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

‘ದೇಶದಲ್ಲಿ ಸಂಭವಿಸಿದ ವಿದ್ಯಾರ್ಥಿಗಳ ಸಾವುಗಳ ಪೈಕಿ ಶೇ 8.2ರಷ್ಟು ಮಂದಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊದ (ಎನ್‌ಸಿಆರ್‌ಬಿ) 2020ರ ದತ್ತಾಂಶಗಳು ಹೇಳುತ್ತವೆ’ ಎಂದು ವಕೀಲೆ ಮೋಹಿನಿಪ್ರಿಯಾ ಅವರು ನ್ಯಾಯಪೀಠಕ್ಕೆ ತಿಳಿಸಿದರು.

‘ಈ ವಿಚಾರವಾಗಿ ದೇಶದಲ್ಲಿರುವ ಪರಿಸ್ಥಿತಿಯ ಅರಿವು ನ್ಯಾಯಪೀಠಕ್ಕಿದೆ. ಈ ವಿಷಯವಾಗಿ ನೀವು ಸರ್ಕಾರಕ್ಕೆ ಮನವಿ ಸಲ್ಲಿಸಿ’ ಎಂದು ಮೋಹಿನಿ ಪ್ರಿಯಾ ಅವರಿಗೆ ಉದ್ದೇಶಿಸಿ ನ್ಯಾಯಪೀಠ ಹೇಳಿತು. ಆಗ, ಅರ್ಜಿಯನ್ನು ವಾಪಸ್ ಪಡೆಯುವುದಾಗಿ ಪ್ರಿಯಾ ತಿಳಿಸಿದರು.

ಅರ್ಜಿದಾರರ ವಾದ ಏನಿತ್ತು: ಐಐಟಿ–ಜೆಇಇ, ನೀಟ್‌ನಂತಹ ಪರೀಕ್ಷೆಗಳಿಗೆ ತರಬೇತಿ ನೀಡುವ ಹೆಸರಿನಲ್ಲಿ ಸಾಕಷ್ಟು ಕೋಚಿಂಗ್ ಕೇಂದ್ರಗಳು ತಲೆಯೆತ್ತುತ್ತಿವೆ. ಹಣ ಗಳಿಸುವುದೇ ಇವುಗಳ ಮುಖ್ಯ ಉದ್ದೇಶ ಎಂದು ಅರ್ಜಿದಾರರು ವಿವರಿಸಿದ್ದರು.

‘ಕೋಚಿಂಗ್ ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಮಕ್ಕಳು, ಘೋರವಾದ ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಳ್ಳುತ್ತಾರೆ. ಮಕ್ಕಳ ಸುರಕ್ಷತೆ ಬಗ್ಗೆ ಕೋಚಿಂಗ್ ಕೇಂದ್ರಗಳು ಗಮನ ಕೊಡುವುದಿಲ್ಲ. ಲಾಭವಷ್ಟೇ ಅವುಗಳ ಗುರಿಯಾಗಿರುತ್ತದೆ. ಈ ಅಂಶಗಳು ದೇಶದ ಯುವ ಸಮುದಾಯದ ಮೇಲೆ ವಿಪರೀತ ಒತ್ತಡಕ್ಕೆ ಕಾರಣವಾಗುತ್ತವೆ. ಕೊನೆಗೆ ಅವರು ಆತ್ಮಹತ್ಯೆಗೆ ಶರಣವಾಗುವಂತೆ ಮಾಡುತ್ತವೆ’ ಎಂದು ಅವರು ಅರ್ಜಿಯಲ್ಲಿ ವಿವರಿಸಿದ್ದರು.

ನ್ಯಾಯಮೂರ್ತಿಗಳ ವರ್ಗಾವಣೆ ಕೇಂದ್ರದ ಧೋರಣೆ ಪ್ರಶ್ನಿಸಿದ ಕೋರ್ಟ್

ನವದೆಹಲಿ (ಪಿಟಿಐ): ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ ವಿಚಾರದಲ್ಲಿ ಕೊಲಿಜಿಯಂ ನೀಡುವ ಶಿಫಾರಸುಗಳಲ್ಲಿ ಕೆಲವನ್ನು ಮಾತ್ರ ಒಪ್ಪಿಕೊಳ್ಳುವ ಕೇಂದ್ರ ಸರ್ಕಾರದ ಪ್ರವೃತ್ತಿಯು ಒಳ್ಳೆಯ ಸಂದೇಶವನ್ನು ರವಾನಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ವರ್ಗಾವಣೆಗೆ ಸೂಚಿಸಿ ಕೊಲಿಜಿಯಂ 11 ಹೆಸರುಗಳನ್ನು ಶಿಫಾರಸು ಮಾಡಿತ್ತು. ಆದರೆ ಈ ಪೈಕಿ ಐವರು ನ್ಯಾಯಮೂರ್ತಿಗಳನ್ನು ಮಾತ್ರ ವರ್ಗಾವಣೆ ಮಾಡಲಾಗಿದೆ. ಇನ್ನುಳಿದ ಆರು ಮಂದಿಯ ಹೆಸರುಗಳು ಇನ್ನೂ ಬಾಕಿ ಉಳಿದಿವೆ ಎಂದು ಕೋರ್ಟ್ ಹೇಳಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಕ್ಕೆ ಈಚೆಗೆ ಶಿಫಾರಸು ಮಾಡಲಾಗಿರುವ ಹೆಸರುಗಳ ಪೈಕಿ, ಎಂಟು ಹೆಸರುಗಳಿಗೆ ಇನ್ನೂ ಒಪ್ಪಿಗೆ ಸಿಕ್ಕಿಲ್ಲ. ಇವರಲ್ಲಿ ಕೆಲವರು, ಈಗಲೇ ನೇಮಕ ಆದವರಿಗಿಂತ ಹಿರಿಯರೂ ಇದ್ದಾರೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠ ಹೇಳಿದೆ.

‘ಐವರು ನ್ಯಾಯಮೂರ್ತಿಗಳಿಗೆ ವರ್ಗಾವಣೆ ಆದೇಶ ಹೊರಡಿಸಲಾಗಿದೆ. ಆರು ಮಂದಿ ನ್ಯಾಯಮೂರ್ತಿಗಳಿಗೆ ಆದೇಶ ಆಗಿಲ್ಲ. ಇವರಲ್ಲಿ ನಾಲ್ಕು ಮಂದಿ ಗುಜರಾತ್‌ನವರು’ ಎಂದು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಸದಸ್ಯರೂ ಆಗಿರುವ ನ್ಯಾಯಮೂರ್ತಿ ಕೌಲ್ ಅವರು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಉದ್ದೇಶಿಸಿ ಹೇಳಿದರು.

ವರ್ಗಾವಣೆಗೆ ಕೊಲಿಜಿಯಂ ಶಿಫಾರಸು ಮಾಡಿದ ಹೆಸರುಗಳ ಪೈಕಿ ಕೆಲವನ್ನು ಮಾತ್ರ ಸರ್ಕಾರ ಒಪ್ಪಿಕೊಳ್ಳುತ್ತಿದೆ. ಸರ್ಕಾರ ಯಾವ ಸಂದೇಶ ರವಾನಿಸುತ್ತಿದೆ ಎಂದು ಪೀಠ ಕೇಳಿದೆ.

ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆಗೆ ಕೊಲಿಜಿಯಂ ಶಿಫಾರಸು ಮಾಡಿದ ಹೆಸರುಗಳ ವಿಚಾರವಾಗಿ ಕೇಂದ್ರವು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ದೂರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸುತ್ತಿದೆ.

ಕೆಲವರನ್ನು ಮಾತ್ರ ನೇಮಕ ಮಾಡಿದಾಗ, ಇತರರು ತಮ್ಮ ಸೇವಾ ಹಿರಿತನವನ್ನು ಕಳೆದುಕೊಳ್ಳುತ್ತಾರೆ. ಆಗ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಪೀಠ ಹೇಳಿದೆ. ಪ್ರಕರಣದ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ಮುಂದೂಡಲಾಗಿದೆ.

ಸುದ್ದಿ 2 ನಿಮಿಷ

‘ಅರ್ಜೆಂಟೀನಾ ಮರುನಿರ್ಮಾಣ’

ಬ್ಯೂನಸ್ ಐರಿಸ್ (ಅರ್ಜೆಂಟೀನಾ) (ಎಎಫ್‌ಪಿ): ‘ಕಳೆದ ಕೆಲ ದಶಕಗಳಿಂದ ದೇಶದ ಆರ್ಥಿಕ ಸ್ಥಿತಿ ಇಳಿಮುಖವಾಗುತ್ತಲೇ ಇತ್ತು. ಹಣದುಬ್ಬರ ಪ್ರಮಾಣ ಮೂರಂಕಿ ಗಡಿ ದಾಟಿತ್ತು. ಇನ್ನು ಮುಂದೆ, ದೇಶ ಆರ್ಥಿಕವಾಗಿ ಕುಸಿಯುವುದಕ್ಕೆ ಅಂತ್ಯ ಹಾಡುವುದಾಗಿ ಅರ್ಜೆಂಟೀನಾದ ನೂತನ ಚುನಾಯಿತ ಅಧ್ಯಕ್ಷ ಜೇವಿಯರ್ ಮಿಲಿ ಶಪಥ ಮಾಡಿದ್ದಾರೆ.

ಈಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ, ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಮರುನಿರ್ಮಾಣ ಆರಂಭವಾಗಲಿದೆ ಎಂದರು.

ಶೇ 55.7 ರಷ್ಟು ಮತ ಗಳಿಸುವ ಮೂಲಕ ಅರ್ಜೆಂಟೀನಾ ರಾಜಕಾರಣದಲ್ಲಿ ದೀರ್ಘಕಾಲದಿಂದಲೂ ಪ್ರಾಬಲ್ಯ ಹೊಂದಿದ್ದ ಎಡಪಕ್ಷಗಳ ಮೈತ್ರಿಕೂಟವನ್ನು ಜೇವಿಯರ್ ಅಧಿಕಾರದಿಂದ ಕೆಳಗಿಳಿಸಿದ್ದಾರೆ. ಅವರ ಪ್ರತಿಸ್ಪರ್ಧಿ, ಹಣಕಾಸು ಸಚಿವರಾಗಿದ್ದ ಸರ್ಗಿಯೊ ಮಸ್ಸಾ ಶೇ 44 ರಷ್ಟು ಮತ ಪಡೆದು, ಸೋಲನುಭವಿಸಿದ್ದಾರೆ.

‘ಈ ದಿನ ಅರ್ಜೆಂಟೀನಾದ ಮರುನಿರ್ಮಾಣ ಆರಂಭವಾಗಲಿದೆ. ದೇಶ ಆರ್ಥಿಕವಾಗಿ ಕುಸಿಯುವುದರ ಅಂತ್ಯವೂ ಆರಂಭವಾಗಲಿದೆ. ದೇಶವನ್ನು ಅಧೋಗತಿಗೆ ತಳ್ಳುವ ಮಾದರಿ ಅಂತ್ಯಗೊಂಡಿದ್ದು, ಹಿಂದಿರುಗಿ ನೋಡುವುದಿಲ್ಲ’ ಎಂದರು.

ಲ್ಯಾಟಿನ್ ಅಮೆರಿಕದ ಮೂರನೇ ದೊಡ್ಡ ಆರ್ಥಿಕತೆಯಾಗಿರುವ ಅರ್ಜೆಂಟೀನಾದ ಆರ್ಥಿಕತೆ ಇತ್ತೀಚಿನ ಕೆಲ ದಶಕಗಳಲ್ಲಿ ಕುಸಿಯುತ್ತಾ ಬಂದಿದೆ.

ಪನ್ನೂ, ಎಸ್‌ಎಫ್‌ಜೆ ವಿರುದ್ಧ ಪ್ರಕರಣ ದಾಖಲಿಸಿದ ಎನ್‌ಐಎ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುವವರಿಗೆ ಹಾಗೂ ನವೆಂಬರ್ 19ರಿಂದ ಸಂಸ್ಥೆಯ ಕಾರ್ಯಾಚರಣೆ ಸ್ಥಗಿತಗೊಳಿಸುವುದಾಗಿ ಬೆದರಿಕೆ ಹಾಕಿದ್ದಕ್ಕಾಗಿ, ಕೆನಡಾದಲ್ಲಿ ನೆಲೆಸಿರುವ ಘೋಷಿತ ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ಹೇಳಿದೆ.

ಉಗ್ರ ಪನ್ನೂ ಹಾಗೂ ಸಿಖ್ಸ್ ಫಾರ್ ಜಸ್ಟಿಸ್ (ಎಸ್‌ಎಫ್‌ಜೆ) ಸಂಘಟನೆ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಎನ್‌ಐಎ ತಿಳಿಸಿದೆ.

ನವೆಂಬರ್ 4ರಂದು ವಿಡಿಯೊ ಸಂದೇಶ ಬಿಡುಗಡೆ ಮಾಡಿದ್ದ ಪನ್ನೂ, ನವೆಂಬರ್ 19ರ ನಂತರ ಏರ್ ಇಂಡಿಯಾ ವಿಮಾನಗಳಲ್ಲಿ ಸಂಚರಿಸುವುದನ್ನು ನಿಲ್ಲಿಸುವಂತೆ ಸಿಖ್ಖರಿಗೆ ಸೂಚನೆ ನೀಡಿದ್ದ. ಸಾಮಾಜಿಕ ಮಾಧ್ಯಮಗಳ ವಿವಿಧ ವೇದಿಕೆಗಳಲ್ಲಿ ಈ ವಿಡಿಯೊ ಹಂಚಿಕೊಂಡಿದ್ದ.

ಇದರ ಬೆನ್ನಲ್ಲೇ, ಕೆನಡಾ, ಭಾರತ ಸೇರಿದಂತೆ ಏರ್ ಇಂಡಿಯಾ ವಿಮಾನಗಳು ಸಂಚರಿಸುವ ಇತರ ದೇಶಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿತ್ತಲ್ಲದೇ, ತನಿಖೆಯನ್ನೂ ಆರಂಭಿಸಲಾಗಿತ್ತು.

‘ಆ್ಯಮ್‌ವೇ ಇಂಡಿಯಾದಿಂದ ₹4 ಸಾವಿರ ಕೋಟಿ ವಂಚನೆ’

ನವದೆಹಲಿ (ಪಿಟಿಐ): ನೇರ ಮಾರಾಟದ ಗ್ರಾಹಕ ಸರಕುಗಳ ಕಂಪನಿ ಆ್ಯಮ್‌ವೇ ಇಂಡಿಯಾವು ಬಹುಹಂತದ ಮಾರುಕಟ್ಟೆ ಯೋಜನೆಯಡಿ ಸುಮಾರು ₹4 ಸಾವಿರ ಕೋಟಿಯಷ್ಟು ವಂಚನೆ ನಡೆಸಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ಆ್ಯಮ್‌ವೇ ಇಂಡಿಯಾ ಕಂಪನಿ ನಡೆಸಿರುವ ಅವ್ಯವಹಾರ ಹಾಗೂ ವಂಚನೆಗೆ ಸಂಬಂಧಿಸಿದಂತೆ ಹೈದರಾಬಾದ್‌ನ ಹಣ ಅಕ್ರಮ ವರ್ಗಾವಣೆ ತಡೆ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಈ ಕುರಿತು ವಿವರಿಸಿದೆ. ಸಾಗರೋತ್ತರ ಬ್ಯಾಂಕ್‌ಗಳ ಖಾತೆಗಳಲ್ಲೂ ಕಂಪನಿಯು ಹಣವನ್ನು ಲೂಟಿ ಮಾಡಿದೆ ಎಂದು ಇದರಲ್ಲಿ ಪ್ರಸ್ತಾಪಿಸಿದೆ.

ಬಹುಹಂತದ ಮಾರುಕಟ್ಟೆ ಹಗರಣಕ್ಕೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರ ವಿರುದ್ಧ ತೆಲಂಗಾಣ ಪೊಲೀಸರು ವಿವಿಧೆಡೆ ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಇದರ ಆಧಾರದ ಮೇಲೆ ಜಾರಿ ನಿರ್ದೇಶನಾಲಯವು ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿತ್ತು.

ಸರಕುಗಳ ಮಾರಾಟದ ಸೋಗಿನಲ್ಲಿ ಕಂಪನಿಯು ಹಣದ ಅಕ್ರಮ ವರ್ಗಾವಣೆ ದಂಧೆ ನಡೆಸಿದೆ. ಹೆಚ್ಚು ಹೆಚ್ಚು ಹೊಸ ಸದಸ್ಯರನ್ನು ನೋಂದಣಿ ಮಾಡಿದರೆ ಅತಿಹೆಚ್ಚಿನ ಕಮಿಶನ್ ಹಾಗೂ ಪ್ರೋತ್ಸಾಹಧನ ನೀಡುವುದಾಗಿ ಹೇಳಿ ಪಿರಮಿಡ್ ವಂಚನೆ ನಡೆಸಿದೆ ಎಂದು ಇ.ಡಿ ಹೇಳಿದೆ.

ವಿಶಾಖಪಟ್ಟಣ: ಅಗ್ನಿ ಅವಘಡಕ್ಕೆ 35 ದೋಣಿ ಭಸ್ಮ

ವಿಶಾಖಪಟ್ಟಣ (ಪಿಟಿಐ): ಇಲ್ಲಿನ ಜೆಟ್ಟಿ ಪ್ರದೇಶದಲ್ಲಿ ಬೆಂಕಿ ಅವಘಡ ಸಂಭವಿಸಿ, ಕನಿಷ್ಠ 35 ಮೀನುಗಾರಿಕಾ ದೋಣಿಗಳು ಸುಟ್ಟು ಕರಕಲಾಗಿವೆ.

ಭಾನುವಾರ ತಡರಾತ್ರಿ ಬಾಲಾಜಿ ಒಡೆತನದ ದೋಣಿಯಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿತು. ನಂತರ ಅದರ ಕೆನ್ನಾಲಿಗೆ ಸಮೀಪದ ದೋಣಿಗಳಿಗೂ ವ್ಯಾಪಿಸಿತು. ಅಗ್ನಿಶಾಮಕ ದಳದ ಪ್ರಯತ್ನದಿಂದ ಬೆಳಿಗ್ಗೆ 4 ಗಂಟೆಯ ವೇಳೆಗೆ ಅಗ್ನಿಯನ್ನು ನಂದಿಸಲಾಯಿತು. ಅದೃಷ್ಟವಶಾತ್ ಈ ದುರಂತದಲ್ಲಿ ಸಾವು, ನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಅವಘಡಕ್ಕೆ ಕಾರಣರೂ ಎನ್ನಲಾದ 10ರಿಂದ 15 ಜನರ ಪತ್ತೆಗಾಗಿ ಪೊಲೀಸರು ಸೋಮವಾರ ಶೋಧ ಕಾರ್ಯ ಕೈಗೊಂಡಿದ್ದಾರೆ.

‘ವಹಿವಾಟಿನ ವಿಷಯಕ್ಕೆ ಸಂಬಂಧಿಸಿದಂತೆ ಜಗಳವಾಡಿದ 10ರಿಂದ 15 ಜನರ ಗುಂಪಿನ ಪಾತ್ರದ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದು ವಿಶಾಖಪಟ್ಟಣ ಬಂದರು ವಿಭಾಗದ ಎಸಿಪಿ ಬಿ. ಮೋಸೆಸ್ ಪೌಲ್ ತಿಳಿಸಿದ್ದಾರೆ.

‘ದೋಣಿಗೆ ಬೆಂಕಿ ಹೊತ್ತಿಕೊಂಡ ಬಳಿಕ ಈ ಗುಂಪು, ದೋಣಿಯನ್ನು ಸಮುದ್ರದತ್ತ ತಳ್ಳಿದೆ. ಆದರೆ, ಆ ದೋಣಿಯು ಇತರ ದೋಣಿಗಳಿದ್ದ ಕಡೆಗೆ ತಿರುಗಿದ ಪರಿಣಾಮ, ಬೆಂಕಿಯ ಜ್ವಾಲೆ ಅವುಗಳಿಗೂ ವ್ಯಾಪಿಸಿ ಅವಘಡ ಹೆಚ್ಚಾಗುವಂತೆ ಮಾಡಿದೆ’ ಎಂದು ಅವರು ಹೇಳಿದ್ದಾರೆ.

‘ಈ ಗುಂಪಿನಲ್ಲಿದ್ದವರ ಹೆಸರು ಗೊತ್ತಾಗಿದ್ದು, ಅವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದ ಬಳಿಕವಷ್ಟೇ ಈ ಅವಘಡದ ಕಾರಣಗಳ ಬಗ್ಗೆ ಸ್ಪಷ್ಟತೆ ಮೂಡುತ್ತದೆ’ ಎಂದು ಅವರು ತಿಳಿಸಿದ್ದಾರೆ.

‘ಆರಂಭದಲ್ಲಿ ಬೆಂಕಿಯನ್ನು ನಂದಿಸುವುದು ಕಷ್ಟವಾಯಿತು. ಏಕೆಂದರೆ ಪ್ರತಿ ದೋಣಿಯೂ ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಹೊಂದಿದ್ದವು. ಅವು ಪ್ರತಿ 10ರಿಂದ 15 ನಿಮಿಷಗಳಿಗೊಮ್ಮೆ ಸ್ಫೋಟಗೊಳ್ಳುತ್ತಿದ್ದವು’ ಎಂದು ಅವರು ವಿವರಿಸಿದ್ದಾರೆ.

‘ಮೀನುಗಾರರು ವಾರಗಟ್ಟಲೆ ಸಮುದ್ರದಲ್ಲಿ ಇರಬೇಕಾಗುತ್ತದೆ. ಹೀಗಾಗಿ ಪ್ರತಿ ದೋಣಿಗಳಲ್ಲಿಯೂ ಸುಮಾರು 5,000 ಲೀಟರ್‌ಗಳಷ್ಟು ಡೀಸೆಲ್ ಶೇಖರಿಸಲಾಗಿರುತ್ತದೆ. ಅಲ್ಲದೆ ಅಡುಗೆಗೆ ಬಳಸುವ ಉದ್ದೇಶಕ್ಕಾಗಿ ಅಡುಗೆ ಸಿಲಿಂಡರ್‌ಗಳನ್ನೂ ಈ ದೋಣಿಗಳು ಹೊಂದಿರುತ್ತವೆ’ ಎಂದು ವಿಶಾಖಪಟ್ಟಣ ಡಿಸಿಪಿ (ವಲಯ–2) ಕೆ. ಆನಂದ ರೆಡ್ಡಿ ತಿಳಿಸಿದ್ದಾರೆ.

ಅವಘಡದಲ್ಲಿ ಅಗ್ನಿಗೆ ಆಹುತಿಯಾದ ಪ್ರತಿ ದೋಣಿಗಳು ಸುಮಾರು ₹ 35 ಲಕ್ಷದಿಂದ ₹50 ಲಕ್ಷದೊಳಗಿನ ಮೌಲ್ಯದ್ದು ಎಂದು ಅವರು ಹೇಳಿದ್ದಾರೆ.

‘ಅಗ್ನಿ ದುರಂತದ ಕುರಿತು ಸಮಗ್ರ ತನಿಖೆ ನಡೆಸುವಂತೆ’ ಸೂಚಿಸಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರು, ‘ದುರಂತದಲ್ಲಿ ದೋಣಿ ಕಳೆದುಕೊಂಡಿರುವ ಜನರಿಗೆ, ಸಾಧ್ಯವಾದಷ್ಟು ನೆರವು ಒದಗಿಸಲು ಕ್ರಮ ತೆಗೆದುಕೊಳ್ಳುವಂತೆ’ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘4 ಟ್ರಿಲಿಯನ್ ಡಾಲರ್ ದಾಟಿದ ಜಿಡಿಪಿ’: ಕಾಂಗ್ರೆಸ್ ಟೀಕೆ

‘ಸುಖದ ಭ್ರಮೆ ಸೃಷ್ಟಿಸುವ ಯತ್ನ’

ನವದೆಹಲಿ (ಪಿಟಿಐ): ‘ದೇಶದ ಜಿಡಿಪಿ ನಾಲ್ಕು ಟ್ರಿಲಿಯನ್ ಡಾಲರ್ ದಾಟಿದೆ’ ಎಂಬ ಆಡಳಿತ ಪಕ್ಷ ಬಿಜೆಪಿಯ ಪ್ರತಿಪಾದನೆಯು, ‘ಒಂದು ಬೋಗಸ್ ಸುದ್ದಿಯಾಗಿದ್ದು, ಸುಖದ ಭ್ರಮೆಯನ್ನು ಸೃಷ್ಟಿಸುವ ಉದ್ದೇಶದ್ದಾಗಿದೆ’ ಎಂದು ಕಾಂಗ್ರೆಸ್ ಪಕ್ಷ ಟೀಕಿಸಿದೆ.

ಕೇಂದ್ರದ ಕೆಲ ಸಚಿವರು ಹಾಗೂ ಮಹಾರಾಷ್ಟ್ರದ ಡಿಸಿಎಂ ಈ ಬಗ್ಗೆ ಸುಳ್ಳು ಪ್ರತಿಪಾದನೆ ಮಾಡಿದ್ದಾರೆ ಎಂದು ‘ಎಕ್ಸ್’ನಲ್ಲಿ ಸಂದೇಶ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟೀಕಿಸಿದ್ದಾರೆ.

‘ಭಾನುವಾರ ಮಧ್ಯಾಹ್ನ 2.45ರಿಂದ ಸಂಜೆ 6.45ರವರೆಗೆ ಇಡೀ ದೇಶ ಕ್ರಿಕೆಟ್ ವೀಕ್ಷಿಸುತ್ತಿರುವಾಗ, ರಾಜಸ್ಥಾನ, ತೆಲಂಗಾಣದ ಕೆಲ ಹಿರಿಯ ಸಚಿವರು, ಮಹಾರಾಷ್ಟ್ರ ಉಪ ಮುಖ್ಯಮಂತ್ರಿ, ಪ್ರಧಾನಿಯವರ ಅಚ್ಚುಮೆಚ್ಚಿನ ಉದ್ಯಮಿ ಸೇರಿದಂತೆ ಸರ್ಕಾರದ ಕೆಲ ಹೊಗಳುಭಟ್ಟರು, ಭಾರತದ ಜಿಡಿಪಿ 4 ಟ್ರಿಲಿಯನ್ ಡಾಲರ್ ದಾಟಿದೆ ಎಂದು ಟ್ವೀಟ್ ಮಾಡಿದ್ದರು’ ಎಂದೂ ಟೀಕಿಸಿದ್ದಾರೆ.

‘ಇದು, ಸಂಪೂರ್ಣವಾಗಿ ಸುಳ್ಳಾಗಿರುವ, ನಕಲಿ ಸುದ್ದಿ. ಸರ್ಕಾರದ ಪರ ಸುದ್ದಿಯ ನಿರ್ವಹಣೆ ಮಾಡುವವರು ಮತ್ತು ಭಟ್ಟಂಗಿಗಳಿಂದ ನಡೆದ ಸುಖದ ಭ್ರಮೆಯನ್ನು ಸೃಷ್ಟಿಸುವ, ಮರುಕ ಉಂಟುಮಾಡುವ ಪ್ರಯತ್ನವಷ್ಟೇ’ ಎಂದೂ ಆರೋಪಿಸಿದ್ದಾರೆ.

ದೇಶದ ಜಿಡಿಪಿ 4 ಟ್ರಿಲಿಯನ್ ಡಾಲರ್ ದಾಟಿದೆ ಎಂಬ ಸುದ್ದಿಯನ್ನು ಹಂಚಿಕೊಂಡಿದ್ದ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ‘ದೂರದೃಷ್ಟಿ ನಾಯಕತ್ವ ಎಂದರೆ ಹೀಗಿರಬೇಕು. ನವಭಾರತದ ಪ್ರಗತಿಯು ಸುಂದರವಾಗಿ ಕಾಣುತ್ತಿದೆ’ ಎಂದಿದ್ದರು.

‘ಅಭಿನಂದನೆಗಳು ಭಾರತ. ದೇಶ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲು ಇನ್ನೂ ಎರಡು ವರ್ಷಗಳು ಸಾಕು. ತ್ರಿವರ್ಣ ಧ್ವಜ ಎತ್ತರದಲ್ಲಿ ಹಾರುತ್ತಿದೆ. ಜೈ ಹಿಂದ್’ ಎಂದು ಅದಾನಿ ಎಕ್ಸ್‌ನಲ್ಲಿ ಸಂದೇಶ ಹಂಚಿಕೊಂಡಿದ್ದರು. ‘ಜಿಡಿಪಿ 5 ಟ್ರಿಲಿಯನ್ ಡಾಲರ್ ಗಡಿ ದಾಟುವತ್ತ ಸಾಗುತ್ತಿದೆ. ಇದು, ಮೋದಿಯವರ ಗ್ಯಾರಂಟಿ’ ಎಂದು ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಸಂದೇಶ ಹಂಚಿಕೊಂಡಿದ್ದರು.

ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್, ಉದ್ಯಮಿ ಗೌತಮ್ ಅದಾನಿ ಅವರೂ ಈ ಕುರಿತ ಸಂದೇಶಗಳನ್ನು ಹಂಚಿಕೊಂಡಿದ್ದರು. ಈ ಸಂದೇಶ ಸಾಕಷ್ಟು ಹಂಚಿಕೆಯಾಗಿತ್ತು. ಈ ಬಗ್ಗೆ ಕೇಂದ್ರ ವಿತ್ತ ಸಚಿವಾಲಯ ಪ್ರತಿಕ್ರಿಯೆ ನೀಡಿರಲಿಲ್ಲ.

‘ಕಾಣಿಕೆ ಹುಂಡಿಗಳು ಇಲ್ಲದಿದ್ದರೆ ದೇಗುಲದಲ್ಲಿ ಪೂಜಾರಿಗಳು ಇರಲ್ಲ’

ನಾಗ್ಪುರ (ಪಿಟಿಐ): ‘ದೇಗುಲಗಳಲ್ಲಿ ಕಾಣಿಕೆ ಹುಂಡಿಗಳು ಇರುವುದರಿಂದ ಅಲ್ಲಿ ಪೂಜಾರಿಗಳು ನೆಲೆಯೂರಿದ್ದಾರೆ. ಒಂದು ವೇಳೆ ಅವುಗಳನ್ನು ಅಲ್ಲಿಂದ ತೆಗೆದುಹಾಕಿದರೆ ದೇವಸ್ಥಾನದಲ್ಲಿ ಅವರು ಪೂಜೆಯನ್ನೂ ಪರಿತ್ಯಜಿಸುತ್ತಾರೆ’ ಎಂದು ಮಹಾರಾಷ್ಟ್ರ ವಿಧಾನಸಭಾ ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್ ನೀಡಿರುವ ಹೇಳಿಕೆಯು ವಿವಾದಕ್ಕೆ ಕಾರಣವಾಗಿದೆ.

ಪರ್ಭಾನಿ ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ವಿಜಯ್, ‘ಹುಂಡಿಗಳನ್ನು ತೆಗೆದುಹಾಕಿದರೆ ಅಲ್ಲಿ ಪಂಡಿತರು ಉಳಿಯಲು ಇಚ್ಛಿಸುವುದಿಲ್ಲ. ದೇವಸ್ಥಾನಗಳಿಂದ ಅವರು ಕಣ್ಮರೆಯಾಗುತ್ತಾರೆ. ಕೇವಲ ದೇವರಷ್ಟೇ ಗರ್ಭಗುಡಿಯಲ್ಲಿ ಉಳಿಯಬೇಕಿದೆ’ ಎಂದು ಹೇಳಿದ್ದಾರೆ.

ಬಳಿಕ ಮಾತು ಮುಂದುವರಿಸಿದ್ದ ಅವರು, ‘ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಒಂದು ವೇಳೆ ಬೌದ್ಧ ಧರ್ಮದ ಬದಲಾಗಿ ಇಸ್ಲಾಂ ಧರ್ಮ ಸ್ವೀಕರಿಸಿದ್ದರೆ ಇಂದಿನ ಪರಿಸ್ಥಿತಿಯಲ್ಲಿ ಭಾರತವು ಎರಡು ಭಾಗವಾಗಿ ಇಬ್ಭಾಗವಾಗುತ್ತಿತ್ತು. ಧರ್ಮಗಳು ಮತ್ತು ಜಾತಿಗಳ ನಡುವೆ ಸಂಘರ್ಷ ಏರ್ಪಡುತ್ತಿತ್ತು’ ಎಂದಿದ್ದಾರೆ.

‘ಕೇಂದ್ರದಲ್ಲಿ ಅಧಿಕಾರ ಹಿಡಿದಿರುವವರ ಸಿದ್ಧಾಂತವು ದೇಶವನ್ನು ಇಬ್ಭಾಗಿಸುತ್ತಿದೆ. ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸ್ವೀಕರಿಸಿದ್ದರೆ ಈ ಅಧಿಕಾರಸ್ಥರು ಸಮಾಜದಲ್ಲಿ ದ್ವೇಷ ಬಿತ್ತುತ್ತಿದ್ದರು. ಇದರಿಂದ ದೇಶವು ಎರಡು ಹೋಳಾಗುತ್ತಿತ್ತು. ಹಲವು ಸಾಹಿತಿಗಳು ಕೂಡ ಇದನ್ನೇ ಪ್ರತಿಪಾದಿಸಿದ್ದಾರೆ’ ಎಂದು ವಿಜಯ್ ಹೇಳಿದ್ದಾರೆ.

‘ಆದರೆ, ಅಂಬೇಡ್ಕರ್ ಅವರ ಸಿದ್ಧಾಂತವು ದೇಶದ ಶಾಂತಿ ಮತ್ತು ಅಭ್ಯುದಯವನ್ನು ಪ್ರತಿಪಾದಿಸುತ್ತದೆ. ಅದಕ್ಕಾಗಿಯೇ ಅವರು ಬೌದ್ಧ ಧರ್ಮ ಸ್ವೀಕರಿಸಿದರು. ಇದನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

Multiple Vacancy

ಅಪೇಕ್ಷಾ ಪ್ರೈವೇಟ್ ಲಿಮಿಟೆಡ್ ನಮ್ಮ ಕಂಪನಿಗೆ ಟೀಮ್ ಲೀಡರ್, ಅಸಿಸ್ಟೆಂಟ್ ಮ್ಯಾನೇಜರ್ ಮತ್ತು ಮ್ಯಾನೇಜರ್ ಪೋಸ್ಟ್ ಗೆ ಕೂಡಲೆ ಯುವತಿಯರು ಮಾತ್ರ ಬೇಕಾಗಿದ್ದಾರೆ. ವಯಸ್ಸು 18 ರಿಂದ 28 ವರ್ಷ, ಶಿಕ್ಷಣ ಎಸ್.ಎಸ್.ಎಲ್.ಸಿ, ಪಿಯುಸಿ, ಬಿಎ ಪಾಸ್/ ಫೇಲ್, ಊಟ, ವಸತಿ ಉಚಿತ. ಸ್ಥಳ: ತುಮಕೂರು ರಸ್ತೆ, ಮಾದನಾಯಕನಹಳ್ಳಿ, ಬೆಂಗಳೂರು 562162. ಸಂಪರ್ಕಿಸಿ: 9741918542

REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

General

✓ ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಯುವಕ ಯುವತಿಯರು ಕಂಪನಿ ಕೆಲಸಕ್ಕೆ ಬೇಕಾಗಿದ್ದಾರೆ. 20,000–65,000/–. ಊಟ ವಸತಿಯೊಂದಿಗೆ. 9686687380, 9945791526

Situation Required

ಕರ್ನಾಟಕದಲ್ಲಿ ತುರ್ತು ಅಗತ್ಯವಿರುವ ಟೆಲಿಕಾಲರ್ (ಪುರುಷ ಮತ್ತು ಮಹಿಳೆ) ಸಂಬಳ-16200/- CTC ಕೌಶಲ್ಯಗಳು: ಕನ್ನಡ ಓದಲು ಬರೆಯಿರಿ ಮತ್ತು ಮಾತನಾಡಿ - ಆಸಕ್ತ ಅಭ್ಯರ್ಥಿ ಈ ಸಂಖ್ಯೆಗೆ ಮಿಸ್ ಕಾಲ್ ಮಾಡಿ.: 7669250202

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಪ್ರವಾಸ

Travel

3.12.2023 ಗುಜರಾತ್, ಮಧ್ಯಪ್ರದೇಶ. 23.12.2023 ಗುರುವಾಯೂರು, ಮುನ್ನಾರ್, ಕೊಚ್ಚಿನ್, ಅಲಪೇ, ಜಟಾಯು, ತಿರುವನಂತಪುರಂ, ಕನ್ಯಾಕುಮಾರಿ,ರಾಮೇಶ್ವರಂ, ಮದುರೈ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796

ಭವಿಷ್ಯ

Astrology

ಓಂ ಶ್ರೀ.ಮಹಾಗಣಪತಿ ಜೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ. ಗಣೇಶರಾವ್ ಶಾಸ್ತ್ರಿ ಜಿ: 9226506660/ 9960147770

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಅವಧಿಪೂರ್ವ ಜನಿಸಿದ 29 ಶಿಶುಗಳ ಸ್ಥಳಾಂತರ

ಅಲ್ ಶಿಫಾ ಸುತ್ತಮುತ್ತ ಕದನ ಬಿರುಸು



ಆಲ್ ಶಿಫಾ ಆಸ್ಪತ್ರೆ ಕೆಳಗೆ ಹಮಾಸ್ ಹೊಂದಿದ್ದ ಸುರಂಗದ ಪ್ರವೇಶ ಮಾರ್ಗ ಎಂದು ಗುರುತಿಸಿ, ಇಸ್ರೇಲ್ ಸೇನೆ ಸೋಮವಾರ ಚಿತ್ರ ಬಿಡುಗಡೆ ಮಾಡಿದೆ. (ಎಡಚಿತ್ರ) ರಫಾ ಪಟ್ಟಣದಲ್ಲಿ ಗಾಯಗೊಂಡ ಮಗುವನ್ನು ಚಿಕಿತ್ಸೆಗೆ ವ್ಯಕ್ತಿಯೊಬ್ಬರು ಕರೆತಂದರು —ಎಎಫ್‌ಪಿ ಚಿತ್ರ

ಗಾಜಾ ಪಟ್ಟಿ (ಎ.ಪಿ): ಹಮಾಸ್ ನೆಲೆಯಾಗಿದೆ ಎಂದು ಇಸ್ರೇಲ್ ಬಲವಾಗಿ ಪ್ರತಿಪಾದಿಸಿರುವ ಅಲ್ ಶಿಫಾ ಆಸ್ಪತ್ರೆಯಲ್ಲಿ ವೈದ್ಯಕೀಯ ಸೌಲಭ್ಯಗಳ ತೆರವಿಗೆ ಸೇನೆ ಮುಂದಾಗಿದೆ. ಆಸ್ಪತ್ರೆ ಆಸುಪಾಸಿನಲ್ಲಿ ಕದನ ಇನ್ನಷ್ಟು ಬಿರುಸುಗೊಂಡಿದೆ.

ಆಸ್ಪತ್ರೆಯ ಸುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ಜನರು ಆಶ್ರಯ ಪಡೆದಿದ್ದಾರೆ. ಗಾಜಾ ಪಟ್ಟಿಯಲ್ಲಿನ ಇಂಡೊನೇಷ್ಯಾ ಆಸ್ಪತ್ರೆಯೊಂದರ 2ನೇ ಮಹಡಿಯ ಮೇಲೆ ಶೆಲ್ ದಾಳಿ ನಡೆದಿದ್ದು, ಕನಿಷ್ಠ 12 ಜನರು ಸಾವಿಗೀಡಾಗಿದ್ದಾರೆ.

12ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಸುಮಾರು 700 ಜನರು ಆಸ್ಪತ್ರೆಯಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಆರೋಗ್ಯ ಸಚಿವಾಲಯದ ವಕ್ತಾರ ಅಶ್ರಫ್ ಅಲ್ ಖುದ್ರಾ ತಿಳಿಸಿದ್ದಾರೆ. ಇಸ್ರೇಲ್ ಸೇನೆ ಈ ಬಗ್ಗೆ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಹಮಾಸ್ ಬಂಡುಕೋರರು ಜನರನ್ನೇ ರಕ್ಷಣಾ ಕವಚವಾಗಿ ಬಳಸುತ್ತಿದ್ದಾರೆ ಎಂದು ಸೇನೆ ದೂರಿದ್ದು, ಗಾಜಾದಲ್ಲಿ ಆಸ್ಪತ್ರೆಗಳನ್ನೇ ಗುರಿಯಾಗಿಸಿ ಕಾರ್ಯಾಚರಣೆ ಮುಂದುವರಿಸಿದೆ. ಇನ್ನೊಂದೆಡೆ, ಇಸ್ರೇಲ್ ಸೇನೆಯು ಗಾಜಾಪಟ್ಟಿಯಲ್ಲಿನ ಸುಮಾರು 23 ಲಕ್ಷ ಪ್ಯಾಲೆಸ್ಟೀನಿಯರನ್ನೇ ಗುರಿಯಾಗಿಸಿ ವೈಮಾನಿಕ ದಾಳಿ ನಡೆಸುತ್ತಿದೆ ಎಂಬ ಟೀಕೆಗಳು ವ್ಯಾಪಕವಾಗಿ ಕೇಳಿಬರುತ್ತಿದೆ.

ಶಿಶುಗಳ ಸ್ಥಳಾಂತರ: ಅಲ್ ಶಿಫಾ ಆಸ್ಪತ್ರೆಯಿಂದ 31 ಶಿಶುಗಳನ್ನು ವಿಶ್ವ ಆರೋಗ್ಯ ಸಂಸ್ಥೆ ಸ್ಥಳಾಂತರಿಸಿದ್ದು, ಈ ಪೈಕಿ ಅವಧಿ ಪೂರ್ವ ಜನಿಸಿದ್ದ 29 ಶಿಶುಗಳನ್ನು ಈಜಿಪ್ಟ್‌ಗೆ ಸ್ಥಳಾಂತರಿಸಿದೆ ಎಂದು ಆಸ್ಪತ್ರೆ ನಿರ್ದೇಶಕ ಮಹಮ್ಮದ್ ಜಖೌತ್ ತಿಳಿಸಿದ್ದಾರೆ.

ಸ್ಥಳಾಂತರಕ್ಕೆ ಮುನ್ನ ನಾಲ್ಕು ಶಿಶುಗಳು ಮೃತಪಟ್ಟಿವೆ. ಗಂಭೀರ ಸ್ಥಿತಿಯಲ್ಲಿರುವ 250 ರೋಗಿಗಳು ಶಿಫಾದಲ್ಲಿದ್ದಾರೆ. ನೀರು, ವೈದ್ಯಕೀಯ ಸೌಲಭ್ಯಗಳು, ಇಂಧನ ಪೂರೈಕೆ ಸ್ಥಗಿತವಾಗಿದೆ. ಅವರಿಗೆ ಚಿಕಿತ್ಸೆ ನೀಡುವ ಸ್ಥಿತಿಯಲ್ಲಿ ಆಸ್ಪತ್ರೆ ಇಲ್ಲ.

‘29 ಶಿಶುಗಳನ್ನು ರಫಾ ಗಡಿಯ ಮೂಲಕ ಈಜಿಪ್ಟ್‌ಗೆ ತರಲಾಗಿದೆ. ಈ ಎಲ್ಲ ಶಿಶುಗಳಿಗೆ ಚಿಕಿತ್ಸೆ ನೀಡುವಷ್ಟು ಇನ್‌ಕ್ಯುಬೇಟರ್ ಆಸ್ಪತ್ರೆಯಲ್ಲಿ ಇಲ್ಲ. ಕೆಲ ಶಿಶುಗಳನ್ನು ಇಸ್ಲಾಮಿಯಾ ಅಥವಾ ಕೈರೊಗೆ ಒಯ್ಯಲಾಗುವುದು’ ಎಂದು ಕೈರೊ ವರದಿ ತಿಳಿಸಿದೆ.

ಗಾಜಾದ ಉತ್ತರವನ್ನು ಗುರಿಯಾಗಿಸಿ ನಿರಂತರ ವೈಮಾನಿಕ ದಾಳಿ ನಡೆಸುತ್ತಿರುವ ಇಸ್ರೇಲ್ ಸೇನೆ, ದಕ್ಷಿಣದಲ್ಲಿ ಆಶ್ರಯ ಪಡೆಯಬೇಕು ಎಂದು ಪ್ಯಾಲೆಸ್ಟೀನಿಯರಿಗೆ ಸೂಚಿಸಿದೆ. ಈವರೆಗೆ ಅಂದಾಜು 17 ಲಕ್ಷ ನಿವಾಸಿಗಳು ಅತ್ತ ಗುಳೆ ಹೋಗಿದ್ದಾರೆ. ನಿರಾಶ್ರಿತರಾಗಿ ವಿಶ್ವಸಂಸ್ಥೆ ತೆರೆದಿರುವ ಶಿಬಿರಗಳಲ್ಲಿಯೇ ಸುಮಾರು 9 ಲಕ್ಷ ಜನರು ಉಳಿದಿದ್ದಾರೆ ಎಂದು ವರದಿ ತಿಳಿಸಿದೆ.

ನಾಲ್ವರು ಒತ್ತೆಯಾಳು ಬಿಡುಗಡೆ, ಒಬ್ಬರ ರಕ್ಷಣೆ

ಗಾಜಾಪಟ್ಟಿ: ಹಮಾಸ್ ಬಂಡುಕೋರರು ಒತ್ತೆ ಇರಿಸಿಕೊಂಡಿದ್ದ ನಾಗರಿಕರ ಪೈಕಿ ನಾಲ್ವರನ್ನು ಬಿಡುಗಡೆ ಮಾಡಿದ್ದರೆ, ಇಸ್ರೇಲ್ ಸೇನೆಯು ಒಬ್ಬರನ್ನು ರಕ್ಷಿಸಿದೆ. ಶಿಫಾ ಆಸ್ಪತ್ರೆಯ ಬಳಿ ಇಬ್ಬರು ಒತ್ತೆಯಾಳುಗಳ ಶವ ಪತ್ತೆಯಾಗಿದೆ.

ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್ ಜೊತೆಗೆ ಇಸ್ರೇಲ್, ಅಮೆರಿಕ ಮತ್ತು ಕತಾರ್ ಮಧ್ಯಸ್ಥಿಕೆ ವಹಿಸಿ ಮಾತುಕತೆ ನಡೆಸುತ್ತಿವೆ. ಇಸ್ರೇಲ್ ಯುದ್ಧ ಸಂಪುಟದ ತ್ರಿಸದಸ್ಯರ ಸಮಿತಿಯು ಹಮಾಸ್ ಬಂಡುಕೋರರ ಜೊತೆಗೆ ಆದಷ್ಟು ಶೀಘ್ರ ಸಂಧಾನ ನಡೆಸಲಿದೆ ಎಂದು ವರದಿ ತಿಳಿಸಿದೆ.

ಭಾರತ ತಲುಪಬೇಕಿದ್ದ ಹಡಗು ಹೈಜಾಕ್

ಗಾಜಾಪಟ್ಟಿ (ಎ.ಪಿ): ಯೆಮನ್‌ನ ಹುತಿ ಬಂಡುಕೋರರು ದಕ್ಷಿಣ ಕೆಂಪು ಸಮುದ್ರದಲ್ಲಿ ಇಸ್ರೇಲ್‌ನ ಸರಕು ಸಾಗಣೆ ಹಡಗು ಹೈಜಾಕ್ ಮಾಡಿದ್ದು, 25 ಸಿಬ್ಬಂದಿಯನ್ನು ಒತ್ತೆ ಇರಿಸಿಕೊಂಡಿದ್ದಾರೆ.

ಈ ಹಡಗು ಭಾರತವನ್ನು ತಲುಪಬೇಕಿತ್ತು. ಇಸ್ರೇಲ್ ಹಡಗುಗಳನ್ನು ಗುರಿಯಾಗಿಸಿ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಇರಾನ್ ಬೆಂಬಲಿತ, ಬಂಡುಕೋರ ಸಂಘಟನೆ ಹುತಿ ತಿಳಿಸಿದೆ. ಜಪಾನ್‌ನ ಕಂಪನಿಯೊಂದರ ನಿರ್ವಹಣೆಯಲ್ಲಿದ್ದ ಈ ಹಡಗಿನಲ್ಲಿ ಇಸ್ರೇಲ್‌ನ ಪ್ರಜೆ ಅಥವಾ ಸರಕು ಇರಲಿಲ್ಲ. ಇದ್ದ ಸಿಬ್ಬಂದಿ ಫಿಲಿಪ್ಪೀನ್ಸ್, ಬಲ್ಗೇರಿಯಾ, ರೊಮಾನಿಯಾ, ಉಕ್ರೇನ್, ಮೆಕ್ಸಿಕೊದವರು ಎಂದು ತಿಳಿಸಿದೆ. ಹಡಗಿನ ಚಲನೆ ಕುರಿತ ಉಪಗ್ರಹ ಮಾಹಿತಿಯನ್ನು ಆಧರಿಸಿ ಸುದ್ದಿಸಂಸ್ಥೆ ವರದಿ ಮಾಡಿರುವಂತೆ, ಈ ಹಡಗು ಟರ್ಕಿಗೆ ಭೇಟಿ ನೀಡಿ ನಿರ್ಗಮಿಸಿದ್ದು, ಭಾರತದ ಪಿಪಾವವ್‌ಗೆ ಬರಬೇಕಿತ್ತು.

ಆಸ್ಪತ್ರೆ ನೆಲದಲ್ಲಿ ಹಮಾಸ್ ನೆಲೆ: ವಿಡಿಯೊ ಬಿಡುಗಡೆ

ಗಾಜಾಪಟ್ಟಿ (ಎ.ಪಿ): 20 ಎಕರೆ ವಿಸ್ತೀರ್ಣದಲ್ಲಿರುವ ಆಸ್ಪತ್ರೆಯ ಕಟ್ಟಡದ ಕೆಳಗೇ ಹಮಾಸ್‌ನ ಬಂಡುಕೋರರು ನೆಲೆ ಮಾಡಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷ್ಯಗಳಿವೆ ಎಂದು ಇಸ್ರೇಲ್ ಸೇನೆಯು ಪುನರುಚ್ಚರಿಸಿದೆ. ಅದರ ಪ್ರಕಾರ, ನೆಲೆಯಲ್ಲಿ ಹಲವು ಕಟ್ಟಡಗಳು, ಗ್ಯಾರೇಜ್ ಮತ್ತು ಪ್ಲಾಜಾ ಇದೆ.

ಸುರಂಗಮಾರ್ಗ ಎಂದು ಪ್ರತಿಪಾದಿಸಿರುವ ವಿಡಿಯೊ ಅನ್ನು ಇಸ್ರೇಲ್ ಬಿಡುಗಡೆ ಮಾಡಿದೆ. ಗುರುತಿಸಲಾದ ಸುರಂಗ 60 ಮೀಟರ್ ಉದ್ದ, 10 ಮೀಟರ್ ಅಗಲದ್ದಾಗಿದೆ. ಇಲ್ಲಿ ಮೆಟ್ಟಿಲು, ಗುಂಡಿನ ದಾಳಿಗೆ ನೆರವಾಗುವ ರಂಧ್ರ ಇದೆ. ಸ್ಫೋಟಕ ನಿರೋಧಕ ಬಾಗಿಲು ಇದ್ದು, ಸೇನೆ ಇನ್ನು ಅದನ್ನು ತೆರೆಯಬೇಕಾಗಿದೆ ಎಂದು ತಿಳಿಸಿದೆ. ಇಸ್ರೇಲ್ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ, ಹಮಾಸ್ ಒತ್ತೆ ಇರಿಸಿಕೊಂಡಿರುವ ನೇಪಾಳ ಮತ್ತು ಥಾಯ್ಲೆಂಡ್‌ನ ತಲಾ ಒಬ್ಬ ಪ್ರಜೆಯಿರುವ ದೃಶ್ಯಗಳಿವೆ. ಆದರೆ, ಆಸ್ಪತ್ರೆ ಕೆಳಗೆ ನೆಲೆ ಇದೆ ಎಂಬುದನ್ನು ಆಸ್ಪತ್ರೆಯ ಅಧಿಕಾರಿ ಒಸಾಮಾ ಹಮ್ದನ್ ನಿರಾಕರಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,732
ಇಂದಿನ ಅಂತ್ಯ	19,694
▼	38
ದಿನದ ಕನಿಷ್ಠ	19,670

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹965 (970)
ಪಾಮೋಲಿನ್	₹842 (842)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹11600
ಎಸಿ	₹6300
ಆರ್‌ಪಿ	₹9800
ಆರ್‌ಸಿ	₹6075

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹320-490
ದ್ವಿತಳಿ (ಬಿ.ವಿ)	₹244-608

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹7500-8200
ತುರುವೇಕೆರೆ	₹8100-8100

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹131

ನವೆಂಬರ್‌ನಲ್ಲಿ ಕ್ವಿಂಟಲ್‌ಗೆ ₹2,300 ದಾಟಿದ ದರ • ಮಾರುಕಟ್ಟೆಗೆ 51,164 ಕ್ವಿಂಟಲ್ ಮಾತ್ರ ಮೆಕ್ಕೆಜೋಳ ಆವಕ

ಮೆಕ್ಕೆಜೋಳಕ್ಕೆ ಬಂತು ಬಂಪರ್ ಬೆಲೆ

• ಡಿ.ಕೆ.ಬಸವರಾಜು

ದಾವಣಗೆರೆಯ ಎಪಿಎಂಸಿಯಲ್ಲಿ ಸೋಮವಾರ ರೈತರು ಮೆಕ್ಕೆಜೋಳವನ್ನು ಚೀಲಕ್ಕೆ ತುಂಬುತ್ತಿರುವುದು– ಪ್ರಜಾವಾಣಿ ಚಿತ್ರ

ದಾವಣಗೆರೆ: 'ಮೆಕ್ಕೆಜೋಳದ ಕಣಜ' ಎಂದೇ ಹೆಸರಾಗಿರುವ ದಾವಣಗೆರೆ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಬರ ಆವರಿಸಿದ್ದರಿಂದ ಇಳುವರಿ ತೀವ್ರ ಕುಸಿದಿದ್ದು, ಮಾರುಕಟ್ಟೆಗೆ ಆವಕವೂ ಕಡಿಮೆಯಾಗಿದೆ. ಕಳೆದ ವರ್ಷ ನವೆಂಬರ್ ತಿಂಗಳು ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ನಿತ್ಯ 10,000 ಕ್ವಿಂಟಲ್ ಆವಕವಾಗುತ್ತಿತ್ತು. ಆದರೆ, ಈ ವರ್ಷ ಅದು 4,000 ಕ್ವಿಂಟಲ್‌ಗೆ ಕುಸಿದಿದೆ.

ಕಳೆದ ವರ್ಷದ ನವೆಂಬರ್ ಅಂತ್ಯಕ್ಕೆ ಸ್ಥಳೀಯ ಎಪಿಎಂಸಿಯಲ್ಲಿ ಒಟ್ಟು 1.81 ಲಕ್ಷ ಕ್ವಿಂಟಲ್ ಆವಕವಾಗಿತ್ತು. ಈ ಬಾರಿ ನವೆಂಬರ್ 20ರವರೆಗೆ ಬರೀ 51,164 ಕ್ವಿಂಟಲ್ ಆವಕವಾಗಿದೆ. ಸೋಮವಾರ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹ 2,100ರಿಂದ ಗರಿಷ್ಠ ₹ 2,365ರವೆಗೂ ದರ ದೊರೆತಿದೆ. ಕಳೆದ ವರ್ಷದ ದರ ₹ 1,800ರಿಂದ ₹ 2,100ರವರೆಗೆಇತ್ತು.

1.25 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ: ಜಿಲ್ಲೆಯಲ್ಲಿ ಈ ಬಾರಿ 1.25 ಲಕ್ಷ ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಬೆಳೆಯಲಾಗಿತ್ತು. ಮಳೆ ಕೊರತೆಯಿಂದ ಶೇ 75ರಷ್ಟು ಬೆಳೆ ಹಾನಿಗೀಡಾಗಿದೆ ಎಂದು ರೈತ ಮುಖಂಡರು ಅಂದಾಜಿಸಿದ್ದಾರೆ.

ಕಳೆದ ವರ್ಷದ ಮುಂಗಾರು ಹಂಗಾಮಿನಲ್ಲಿ ದಾವಣಗೆರೆ ಎಪಿಎಂಸಿಯಲ್ಲಿ 10.72 ಲಕ್ಷ ಕ್ವಿಂಟಲ್ ಮೆಕ್ಕೆಜೋಳ ಆವಕವಾಗಿತ್ತು. ಈ ಬಾರಿ ಅದರ ಪ್ರಮಾಣ ಶೇ 75ರಷ್ಟು ಕಡಿಮೆಯಾಗುವ ಸಂಭವ ಇದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

'ಮಳೆ ಕೈಕೊಟ್ಟಿರುವುದರ ನಡುವೆಯೂ ಕೈಗೆ ಸಿಕ್ಕ ಮೆಕ್ಕೆಜೋಳದ ಗುಣಮಟ್ಟವೂ ಕಳಪೆ ಇದೆ. ಈಗ ಎಪಿಎಂಸಿಯಲ್ಲಿ ಶೇ 5ರಷ್ಟು ಮಾತ್ರ ಆವಕವಾಗುತ್ತಿದ್ದು, ಉಳಿದ ಶೇ 95ರಷ್ಟು ಮೆಕ್ಕೆಜೋಳವನ್ನು ರೈತರು ಖಾಸಗಿ ಖರೀದಿದಾರರಿಗೇ ಮಾರಾಟ ಮಾಡುತ್ತಿದ್ದಾರೆ. ಎಪಿಎಂಸಿ ಪ್ರಾಂಗಣದಲ್ಲಿ ಮೆಕ್ಕೆಜೋಳ ಒಣಗಿಸಲು ಸ್ಥಳಾವಕಾಶ ಇರುವುದರಿಂದ ಕೆಲವು ರೈತರು ಮಾತ್ರ ಇಲ್ಲಿಗೆ ಬರುತ್ತಾರೆ' ಎಂದು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕ ಜೆ.ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.

' ಈ ಬಾರಿ 4 ಎಕರೆ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆದಿದ್ದೆ. ಮಳೆ ಕೈಕೊಟ್ಟಿದ್ದು, ವಿದ್ಯುತ್ ಅಭಾವದಿಂದಾಗಿ ಕೊಳವೆ ಬಾವಿ ನೀರು ಹರಿಸಲೂ ಆಗದ್ದರಿಂದ ಎಕರೆಗೆ 10ರಿಂದ 15 ಕ್ವಿಂಟಲ್ ಇಳುವರಿ ದೊರೆತಿದೆ. ಉತ್ತಮ ಮಳೆ ಸುರಿದಿದ್ದಲ್ಲಿ ಎಕರೆಗೆ 25ರಿಂದ 30 ಕ್ವಿಂಟಲ್ ಇಳುವರಿ ದೊರೆಯುತ್ತಿತ್ತು' ಎಂದು ದಾವಣಗೆರೆ ತಾಲ್ಲೂಕಿನ ಅಗಸನಕಟ್ಟೆಯ ರೈತ ರುದ್ರಪ್ಪ ಅಳಲು ತೋಡಿಕೊಂಡರು.

ಸ್ಥಳೀಯವಾಗಿ ಹೆಚ್ಚು ಬಳಕೆ; ತಗ್ಗಿದ ರಫ್ತು

'ಇಳುವರಿ ತಗ್ಗಿರುವುದರಿಂದ ಜಿಲ್ಲೆಯಲ್ಲಿ ಬೆಳೆದ ಮೆಕ್ಕೆಜೋಳ ಸ್ಥಳೀಯವಾಗಿಯೇ ಹೆಚ್ಚು ಬಳಕೆಯಾಗುತ್ತಿದೆ. ರಫ್ತು ಕಡಿಮೆಯಾಗಿದೆ. ಮಲೇಷ್ಯಾ, ಥಾಯ್ಲೆಂಡ್‌ಗೆ ರಫ್ತಾಗುತ್ತಿತ್ತು. ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್ ರಾಜ್ಯಗಳಿಗೂ ಹೋಗುತ್ತಿತ್ತು' ಎಂದು ಜಿಲ್ಲಾ ಮೆಕ್ಕೆಜೋಳ ವರ್ತಕರ ಸಂಘದ ಕಾರ್ಯದರ್ಶಿ ಕೆ.ಜಾವೇದ್ ತಿಳಿಸಿದರು.

ಪಶು, ಕೋಳಿ ಆಹಾರದ ಬೆಲೆ ಹೆಚ್ಚಳ ನಿರೀಕ್ಷೆ: 'ಕೋಳಿ ಹಾಗೂ ಪಶು ಆಹಾರವಾಗಿ ಮೆಕ್ಕೆಜೋಳ ಬಳಕೆಯಾಗುತ್ತಿದೆ. ಮದ್ಯ ಹಾಗೂ ಔಷಧ ತಯಾರಿಕೆಗೂ ಮೆಕ್ಕೆಜೋಳ ಬಳಸಲಾಗುತ್ತದೆ. ಈ ಬಾರಿ ನಿರೀಕ್ಷಿತ ಪ್ರಮಾಣದ ಇಳುವರಿ ಇಲ್ಲದ್ದರಿಂದ ಸಹಜವಾಗಿಯೇ ಬೆಲೆ ಏರಿಕೆಯ ಸಾಧ್ಯತೆ ಇದೆ. ಚಿತ್ರದುರ್ಗ ಹಾಗೂ ಹಿರಿಯೂರುಗಳಲ್ಲಿನ ಪೌಲ್ಟ್ರಿ ಫಾರಂನವರೂ ಮೆಕ್ಕೆಜೋಳ ಖರೀದಿಸುತ್ತಾರೆ' ಎಂದು ಅವರು ಹೇಳಿದರು.

ಹಬ್ಬದ ಬೇಡಿಕೆ: ಅಕ್ಟೋಬರ್‌ನಲ್ಲಿ 123 ಟನ್ ಆಮದು

ಚಿನ್ನದ ಆಮದು ಶೇ 60 ಏರಿಕೆ



ಮುಂಬೈ (ರಾಯಿಟರ್ಸ್): ಹಬ್ಬದ ಋತುವಿನಲ್ಲಿ ಚಿನ್ನಾಭರಣಗಳಿಗೆ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಭಾರತವು ಅಕ್ಟೋಬರ್ ತಿಂಗಳಿನಲ್ಲಿ 123 ಟನ್‌ನಷ್ಟು ಚಿನ್ನವನ್ನು ಆಮದು ಮಾಡಿಕೊಂಡಿದೆ ಎಂದು ಸರ್ಕಾರದ ಮೂಲಗಳು ಮಾಹಿತಿ ನೀಡಿವೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ 73 ಟನ್‌ನಷ್ಟು ಚಿನ್ನ ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಆಮದು ಶೇ 60ರಷ್ಟು ಏರಿಕೆ ಕಂಡಿದ್ದು, 31 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಹಬ್ಬಕ್ಕೂ ಮುನ್ನ ಚಿನ್ನದ ಬೆಲೆ ತುಸು ಇಳಿಕೆ ಕಂಡಿದ್ದು ಸಹ ಚಿನ್ನಾಭರಣ ಖರೀದಿಯನ್ನು ಹೆಚ್ಚಿಸುವಂತೆ ಮಾಡಿತು ಎಂದೂ ತಿಳಿಸಿವೆ. ಚಿನ್ನದ ಆಮದು ಹೆಚ್ಚಾದರೆ ವ್ಯಾಪಾರ ಕೊರತೆ ಏರಿಕೆ ಆಗುತ್ತದೆ. ರೂಪಾಯಿ ಮೇಲೆಯೂ ಒತ್ತಡ ಹೆಚ್ಚಾಗುತ್ತದೆ ಎಂದೂ ಹೇಳಿವೆ. ಅಕ್ಟೋಬರ್ ಆರಂಭದಲ್ಲಿ ಚಿನ್ನದ ಸ್ಥಳೀಯ ದರವು 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡವು. ಇದು ಹಬ್ಬದ ಖರೀದಿಯನ್ನು ಹೆಚ್ಚಾಗುವಂತೆ ಮಾಡಿತು ಎಂದು ಮುಂಬೈನ ಚಿನ್ನಾಭರಣ ವಿತರಕರೊಬ್ಬರು ಹೇಳಿದ್ದಾರೆ.

ಮೈಕ್ರೊಸಾಫ್ಟ್‌ಗೆ ಸ್ಯಾಮ್ ಆಲ್ಟ್‌ಮನ್

ಸ್ಯಾಮ್ ಆಲ್ಟ್‌ಮನ್

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ/ಪಿಟಿಐ): ಓಪನ್‌ಎಐ ಕಂಪನಿಯ ಮಾಜಿ ಸಿಇಒ ಸ್ಯಾಮ್ ಆಲ್ಟ್‌ಮನ್ ಅವರು ಮೈಕ್ರೊಸಾಫ್ಟ್ ಸೇರಲಿದ್ದು, ಸುಧಾರಿತ ಎ.ಐ. ಸಂಶೋಧನಾ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ಮೈಕ್ರೊಸಾಫ್ಟ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸತ್ಯ ನಾದೆಲ್ಲ ಸೋಮವಾರ ತಿಳಿಸಿದ್ದಾರೆ.

ಈ ಕುರಿತು ನಾದೆಲ್ಲ ಅವರು 'ಎಕ್ಸ್' ನಲ್ಲಿ ಬರೆದುಕೊಂಡಿದ್ದಾರೆ.ಓಪನ್‌ಎಐನ ಸಂಸ್ಥಾಪಕ ಆಲ್ಟ್‌ಮನ್ ಮತ್ತು ಮಾಜಿ ಅಧ್ಯಕ್ಷ ಗ್ರೆಗ್ ಬ್ರೋಕ್‌ಮನ್ ಅವರು ಮೈಕ್ರೊಸಾಫ್ಟ್ ಸೇರುತ್ತಿರುವ ಸುದ್ದಿಯನ್ನು ತಿಳಿಸಲು ಅತೀವ ಸಂತೋಷ ಆಗುತ್ತಿದೆ. ಅವರ ಯಶಸ್ಸಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಆದಷ್ಟೂ ಬೇಗ ಒದಗಿಸುವತ್ತ ಗಮನ ಹರಿಸಲಾಗುತ್ತಿದೆ ಎಂದು ಹೇಳಿದ್ದಾರೆ. 'ಕೆಲಸ ಮುಂದುವರಿಯಲಿದೆ' ಎಂದು ಆಲ್ಟ್‌ಮನ್ ಕೂಡಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆಲ್ಟ್‌ಮನ್ ಅವರನ್ನು ಓಪನ್‌ಎಐ ಕಂಪನಿಯ ಶುಕ್ರವಾರ ವಜಾ ಮಾಡಿತ್ತು.

ಹೊಸ ಸಿಇಒ: ಆಲ್ಟ್‌ಮನ್ ಅವರನ್ನು ಮರಳಿ ಕರೆತರುವಂತೆ ಮೈಕ್ರೊಸಾಫ್ಟ್ ಮತ್ತು ಪ್ರಮುಖ ಹೂಡಿಕೆದಾರರ ಒತ್ತಾಯದ ನಡುವೆಯೂ ಓಪನ್‌ಎಐ ಕಂಪನಿಯು ಎಮೆಟ್ ಶಿಯರ್ ಅವರನ್ನು ಹೊಸ ಸಿಇಒ ಆಗಿ ನೇಮಿಸಿಕೊಂಡಿದೆ.

ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ ಲೈಫ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾಂಕ್ ತನ್ನ ಗ್ರಾಹಕರಿಗೆ ಜೀವ ವಿಮಾ ಉತ್ಪನ್ನ ಒದಗಿಸಲು ಎಚ್‌ಡಿಎಫ್‌ಸಿ ಲೈಫ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಹೊಸ ಒಡಂಬಡಿಕೆಯ ಕುರಿತು ಮಾತನಾಡಿದ ಕರ್ನಾಟಕ ಬ್ಯಾಂಕ್‌ನ ಎಂಡಿ ಮತ್ತು ಸಿಇಒ ಶ್ರೀಕೃಷ್ಣನ್ ಎಚ್. ಅವರು, 'ಡಿಜಿಟಲ್ ನೆಟ್‌ವರ್ಕ್ ಮೂಲಕ ನಮ್ಮ ಗ್ರಾಹಕರು ಮತ್ತು ಅವರ ಕುಟುಂಬದ ಯೋಗಕ್ಷೇಮ ಮತ್ತು ಸುರಕ್ಷತೆಯನ್ನು ಬಲಪಡಿಸಲು ಈ ಒಡಂಬಡಿಕೆ ಪೂರಕವಾಗಿದೆ' ಎಂದರು.

ದೇಶದಲ್ಲಿ ಜೀವ ವಿಮೆ ವ್ಯಾಪ್ತಿಗೆ ಒಳಪಡದೇ ಇರುವ ವರನ್ನು ವಿಮೆ ವ್ಯಾಪ್ತಿಗೆಬರುವಂತೆ ಮಾಡಬೇಕಿದೆ. ಇದಕ್ಕಾಗಿ ಕರ್ನಾಟಕ ಬ್ಯಾಂಕ್‌ನೊಂದಿಗೆ ಕೈಜೋಡಿಸಿದ್ದೇವೆ' ಎಂದು ಎಚ್‌ಡಿಎಫ್‌ಸಿ ಲೈಫ್ ಇನ್ಶುರೆನ್ಸ್ ಕಂಪನಿ ತಿಳಿಸಿದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹4000-5000
ಮಧ್ಯಮ	₹3000-4000
ಸಣ್ಣ	₹2000-3000

ದೇಶದಾದ್ಯಂತ ಅಡಿಕೆ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಕುಮಟ	
ಚಿಪ್ಪು	27009-34309
ಕೋಕ	18029-32690
ಫ್ಯಾಕ್ಟರಿ	11499-25699
ಹಳೆಚಾಲಿ	37390-40009
ಹೊಸಚಾಲಿ	32749-34109
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಬಿಳಿಗೋಟು	15211-32600
ಚಾಲಿ	33099-38678
ಕೋಕ	14699-34699
ಕೆಂಪುಗೋಟು	30899-36699
ರಾಶಿ	37299-47269
ಸಿಪ್ಪೆಗೋಟು	16119-21169
ಶಿವಮೊಗ್ಗ	
ಬೆಟ್ಟೆ	45559-52699
ಗೊರಬಾಳು	28300-38209
ಹೊಸತು	45039-47119
ರಾಶಿ	45169-47179
ಸರಕು	56000-84550
ಸಿದ್ದಾಪುರ	
ಬಿಳಿಗೋಟು	31819-33899
ಚಾಲಿ	37809-39940
ಕೋಕ	29219-32599
ಕೆಂಪುಗೋಟು	31899-33289
ರಾಶಿ	42699-45309
ತಟ್ಟಿಬೆಟ್ಟೆ	34899-35299
ಶಿರಸಿ	
ಬೆಟ್ಟೆ	38699-44699
ಬಿಳಿಗೋಟು	28099-36426
ಚಾಲಿ	37099-40799
ರಾಶಿ	44399-47609
ಯಲ್ಲಾಪುರ	
ಬಿಳಿಗೋಟು	25012-35501
ಚಾಲಿ	36860-40460
ಕೋಕ	20999-32699
ಕೆಂಪುಗೋಟು	28101-34109
ರಾಶಿ	44609-53980
ತಟ್ಟಿಬೆಟ್ಟೆ	37100-44121

ರೂಪಾಯಿ: ಸಾರ್ವಕಾಲಿಕ ಕನಿಷ್ಠ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 12 ಪೈಸೆ ಇಳಿಕೆ ಕಂಡು ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹83.38ಕ್ಕೆ ತಲುಪಿತು. ದೇಶಿ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟು ಮತ್ತು ತಶಿ ಬಂಡವಾಳ ಹೊರಹರಿವು ರೂಪಾಯಿ ಇಳಿಕೆಗೆ ಕಾರಣವಾಗಿವೆ.

ಮುಂಬೈ ಧಾರಣೆ

ಶೇಂಗಾ

20-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	937 (930)
ಪಾಮ್ ವಾರದ ಡೆಲಿವರಿ	840(840)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,700 (60,700)
ಬೆಳ್ಳಿ ಕೆ.ಜಿ	72,600 (73,050)

ಆವರಣದಲ್ಲಿ ಶನಿವಾರದ ಧಾರಣೆ

ದೀರ್ಘಾವಧಿ ಹೂಡಿಕೆಯತ್ತ ಗಮನ ಹರಿಸಿ: ಸೆಬಿ ಅಧ್ಯಕ್ಷೆ

ಮಾಧವಿ ಪುರಿ

ಮುಂಬೈ (ಪಿಟಿಐ): ಹೂಡಿಕೆದಾರರು ವಾಯಿದಾ ವಹಿವಾಟಿನಲ್ಲಿ (ಎಫ್ ಆ್ಯಂಡ್ ಒ) ಹೊಂದಿರುವ ಆಸಕ್ತಿಯು ಗೊಂದಲ ಮತ್ತು ಅಚ್ಚರಿ ಮೂಡಿಸುತ್ತಿದೆ. ಏಕೆಂದರೆ ಇಲ್ಲಿ ವಹಿವಾಟು ನಡೆಸುವವರಲ್ಲಿ ಶೇ 90ರಷ್ಟು ಮಂದಿ ಹಣ ಕಳೆದುಕೊಳ್ಳುತ್ತಿದ್ದಾರೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರು ಸೋಮವಾರ ಹೇಳಿದ್ದಾರೆ.

ಹೂಡಿಕೆದಾರರು ದೀರ್ಘಾವಧಿಯ ಹೂಡಿಕೆಯತ್ತ ಗಮನ ಹರಿಸಬೇಕು. ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚಿನ ಲಾಭ ತಂದುಕೊಡುವ ಸಾಧ್ಯತೆ ಇರುವ ಹೂಡಿಕೆ ಸೂಕ್ತ ಎಂದೂ ಅವರು ಸಲಹೆ ನೀಡಿದ್ದಾರೆ.

ಎನ್‌ಎಸ್‌ಇನಲ್ಲಿ ಹೂಡಿಕೆದಾರರ ಅಪಾಯ ಕಡಿಮೆ ಮಾಡುವ 'ಇನ್‌ವೆಸ್ಟರ್ಸ್ ರಿಸ್ಕ್ ರಿಡಕ್ಷನ್ ಅಕ್ಸೆಸ್ (ಐಆರ್‌ಆರ್‌ಎ) ವೇದಿಕೆಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಬಂಡವಾಳ ಮಾರುಕಟ್ಟೆಯ ಈಚಿನ ಸಂಶೋಧನಾ ವರದಿಯ ಪ್ರಕಾರ, 'ಎಫ್ ಆ್ಯಂಡ್ ಒ'ನಲ್ಲಿ ಒಟ್ಟು 45.24 ಲಕ್ಷ ಹೂಡಿಕೆದಾರರು ವಹಿವಾಟು ನಡೆಸಿದ್ದು ಅವರಲ್ಲಿ ಶೇ 11ರಷ್ಟು ಹೂಡಿಕೆದಾರರಿಗೆ ಮಾತ್ರವೇ ಲಾಭ ಆಗಿದೆ ಎಂದರು.

ಪಾರ್ಸೆಲ್‌ಗೆ ಡಿಜಿಟಲ್ ಲಾಕರ್ ಸೌಲಭ್ಯ

ನವದೆಹಲಿ (ಪಿಟಿಐ): ಅಂಚೆ ಕಚೇರಿಯಲ್ಲಿ ಪಾರ್ಸಲ್‌ಗಳಿಗೆ ಡಿಜಿಟಲ್ ಲಾಕರ್ ಸೌಲಭ್ಯ ಕಲ್ಪಿಸಲು ಬ್ಲೂಡಾರ್ಟ್ ಕಂಪನಿಯು ಭಾರತೀಯ ಅಂಚೆ ಇಲಾಖೆಯೊಂದಿಗೆ ಪಾಲುದಾರಿಕೆ ಮಾಡಿಕೊಂಡಿದೆ.

ಆಯ್ದ ಅಂಚೆ ಕಚೇರಿಗಳಲ್ಲಿ ಈ ಸೌಲಭ್ಯ ಸಿಗಲಿದೆ. ಡಿಜಿಟಲ್ ಲಾಕರ್ ಬಳಸುವುದರಿಂದ ವಸ್ತುಗಳು ಸುರಕ್ಷಿತವಾಗಿ ಇರುತ್ತವೆ. ಗ್ರಾಹಕರು ತಮಗೆ ಬೇಕಾದಾಗ ಕೋಡ್ ಬಳಸಿ ಲಾಕರ್‌ನಿಂದ ವಸ್ತುವನ್ನು ಸುಲಭವಾಗಿ ಪಡೆಯಬಹುದು. ಪಾರ್ಸಲ್ ಪಡೆಯಲು ಸಹಿ ಮಾಡುವ ಅಗತ್ಯ ಇರುವುದಿಲ್ಲ ಎಂದು ಕಂಪನಿಯು ತಿಳಿಸಿದೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885795 CIN: U40109 KA 2002 SGC 030425

ಕ್ರಮ ಸಂಖ್ಯೆ: MESCOM/PROC/WORK/177/2022-PROC ದಿನಾಂಕ: 17.11.2023

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ ಯು ತಾಂತ್ರಿಕ ವಿವರಣೆಗಳನ್ವಯ ಈ ಕೆಳಗಿನ ಸಾಮಾಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/ 2023-24/ IND0023	ತಾಂತ್ರಿಕ ಗೊತ್ತುಪಾಡುಗಳನ್ವಯ, ಒ.ಎಲ್.ಟಿ.ಸಿ, ಆರ್.ಟಿ.ಸಿ.ಸಿ ಹಾಗೂ ಇತರ ಪರಿಕರಗಳೊಂದಿಗೆ 12.5 ಎಂ.ವಿ.ಎ, 33/11ಕೆ.ವಿ ಶಕ್ತಿ ಪರಿವರ್ತಕ	3 ಸಂಖ್ಯೆ

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ 21.11.2023 ಅಥವಾ ನಂತರ ವೆಬ್‌ಸೈಟ್ www.kppp.karnataka.gov.in/ ಗೆ ಲಾಗ್ ಆನ್ ಮಾಡಬಹುದು
ಸಹಿ/–ಅಧೀಕ್ಷಕ ಇಂಜಿನಿಯರ್(ವಿ)(ಖರೀದಿ)

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ,
ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: bannerghattazoo@gmail.com

ಸಂಖ್ಯೆ: ಎ3/ಬಜಪಾ/ಸಿಬ್ಬಂದಿ/ಕಾಫಿ/ಚಹಾ/2023–24 ದಿನಾಂಕ: 17–11–2023

ಮರು ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬನ್ನೇರುಘಟ್ಟ ಜೈವಿಕ ಉದ್ಯಾನವನದ ವಿವಿಧ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಕಾಫಿ / ಚಹಾ ವನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಸಲುವಾಗಿ ಸಾರ್ವಜನಿಕರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ರೂ. 50,000/–** ಗಳ ಇ.ಎಂ.ಡಿ ಹಾಗೂ ಟೆಂಡರ್ ಫೀಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **02–12–2023 ರಂದು ಸಂಜೆ 4.00 ಗಂಟೆಯಾಗಿರುತ್ತದೆ.** ಟೆಂಡರ್‌ನ್ನು ದಿನಾಂಕ: **04–12–2023 ರಂದು ಬೆಳಿಗ್ಗೆ 11.30 ಕ್ಕೆ ತೆರೆಯಲಾಗುವುದು.**
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ವಾ.ಪ್ರ/2193/ಅಡ್ವರ್ಟೋರ್/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬ್ಯಾಟರಾಯನಪುರ ವಿಭಾಗ, ಸಂಖ್ಯೆ 2152/20, ಡಿಫೆನ್ಸ್ ಕಾಲೋನಿ, ಬೆಂಗಳೂರು
ಜಲಮಂಡಳಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೃ.ಬೆಂ.ಮ.ಪಾಲಿಕೆ ಕಚೇರಿ, ಬ್ಯಾಟರಾಯನಪುರ, ಬೆಂಗಳೂರು – 560 092
ಸಂಖ್ಯೆ: ಕಾಪಾಅ/ಬ್ಯಾಪು/ಬೃಬೆಂಮಪಾ/ಕೆಪಿಪಿಪಿ/12/2023–24 ದಿನಾಂಕ: 20.11.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. **ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4.**

ಕ್ರ ಸಂ	ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಲಕ್ಷಗಳಲ್ಲಿ)
1.	**ಪ್ಯಾಕೇಜ್ ಸಂ.01 (ಪ್ಯಾಕೇಜ್ 07 ಕಾಮಗಾರಿಗಳನ್ನು ಒಳಗೊಂಡಿದೆ ರೂ.1000.00 ಲಕ್ಷಗಳು)** 1. ವಾರ್ಡ್ ಸಂಖ್ಯೆ.07 ಥಣಿಸಂದ್ರದ ಮಂಜುನಾಥ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ಕಲ್ವರ್ಟ್‌ಗಳ ನಿರ್ಮಾಣ ಮಾಡುವುದು. 2. ವಾರ್ಡ್ ಸಂಖ್ಯೆ.07 ಥಣಿಸಂದ್ರದ ಸಾರಾಯಿಪಾಳ್ಯ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ಕಲ್ವರ್ಟ್‌ಗಳ ನಿರ್ಮಾಣ ಮಾಡುವುದು. 3. ವಾರ್ಡ್ ಸಂಖ್ಯೆ.08 ಅಮೃತಹಳ್ಳಿಯ ಹೊಯ್ಸಳ ಬಡಾವಣೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 4. ವಾರ್ಡ್ ಸಂಖ್ಯೆ.08 ಅಮೃತಹಳ್ಳಿಯ ಜಕ್ಕೂರು ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 5. ವಾರ್ಡ್ ಸಂಖ್ಯೆ.08 ಅಮೃತಹಳ್ಳಿಯ ವರದರಾಜು ಬಡಾವಣೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 6. ವಾರ್ಡ್ ಸಂಖ್ಯೆ.08 ಅಮೃತಹಳ್ಳಿಯ ಕರಿಮುನಿಯಪ್ಪ ಬಡಾವಣೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 7. ವಾರ್ಡ್ ಸಂಖ್ಯೆ.09 ಹೆಬ್ಬಾಳ ಕೆಂಪಾಪುರದ ವಿನಾಯಕ ಬಡಾವಣೆ 1ನೇ ಹಂತ, ಡಿಫೆನ್ಸ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	1000.00	15.00
2.	**ಪ್ಯಾಕೇಜ್ ಸಂ.02 (ಪ್ಯಾಕೇಜ್ 05 ಕಾಮಗಾರಿಗಳನ್ನು ಒಳಗೊಂಡಿದೆ ರೂ.1000.00 ಲಕ್ಷಗಳು)** 1. ವಾರ್ಡ್ ಸಂಖ್ಯೆ.09 ಕೆಂಪಾಪುರದ ಶ್ರೀನಿಧಿ ಕಾಲೇಜು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 2. ವಾರ್ಡ್ ಸಂಖ್ಯೆ.09 ಹೆಬ್ಬಾಳ ಕೆಂಪಾಪುರದ ಎಫ್ ಬ್ಲಾಕ್ ಸಹಕಾರನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3. ವಾರ್ಡ್ ಸಂಖ್ಯೆ.09 ಹೆಬ್ಬಾಳ ಕೆಂಪಾಪುರದ ಸಂಜೀವಿನಿನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4. ವಾರ್ಡ್ ಸಂಖ್ಯೆ.10 ಬ್ಯಾಟರಾಯನಪುರದ ಕಾವೇರಿ ಎನ್‌ಕ್ಲೇವ್, ಸಂಪಿಗೆ ರಸ್ತೆ, ತಿಂಡ್ಲು ಗ್ರಾಮ, ಇಂಡಿಯನ್ ಎಕ್ಸ್‌ಪ್ರೆಸ್ ಬಡಾವಣೆ, ಧನಲಕ್ಷ್ಮಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 5. ವಾರ್ಡ್ ಸಂಖ್ಯೆ.10 ಬ್ಯಾಟರಾಯನಪುರದ ಬ್ಯಾಟರಾಯನಪುರ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	1000.00	15.00
3.	**ಪ್ಯಾಕೇಜ್ ಸಂ.03 (ಪ್ಯಾಕೇಜ್ 06 ಕಾಮಗಾರಿಗಳನ್ನು ಒಳಗೊಂಡಿದೆ ರೂ.1000.00 ಲಕ್ಷಗಳು)** 1. ವಾರ್ಡ್ ಸಂಖ್ಯೆ.10 ಬ್ಯಾಟರಾಯನಪುರದ ಕೆಂಪೇಗೌಡ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು ಮತ್ತು ತಿಂಡ್ಲು ಗ್ರಾಮದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಾಣ ಮಾಡುವುದು. 2. ವಾರ್ಡ್ ಸಂಖ್ಯೆ.10 ಬ್ಯಾಟರಾಯನಪುರದ ಕೆನರಾ ಬ್ಯಾಂಕ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3. ವಾರ್ಡ್ ಸಂಖ್ಯೆ.10 ಬ್ಯಾಟರಾಯನಪುರ ಸಹಕಾರನಗರದ ಎ ಬ್ಲಾಕ್, ಯಶೋಧಾನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4. ವಾರ್ಡ್ ಸಂಖ್ಯೆ.11 ಕೊಡಿಗೆಹಳ್ಳಿಯ ಟಾಟಾನಗರ, ಟಿ ಬಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 5. ವಾರ್ಡ್ ಸಂಖ್ಯೆ.11 ಕೊಡಿಗೆಹಳ್ಳಿಯ ಸೊಣ್ಣೇಗೌಡ ಬಡಾವಣೆ, ಪಿಳ್ಳಪ್ಪ ಬಡಾವಣೆ, ಮಾರುತಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 6. ಹೊಸ ವಾರ್ಡ್ ಸಂಖ್ಯೆ.12 ಮತ್ತು (ದೊಡ್ಡಬೊಮ್ಮಸಂದ್ರ)ದ ಹನುಮಾನ್ ಬಡಾವಣೆ, ಆರ್‌ಆರ್ ಶಾಲೆ ಸುತ್ತಮುತ್ತ, ಯಲಗಮ್ಮ ಬಡಾವಣೆ, ದೊಡ್ಡಬೊಮ್ಮಸಂದ್ರದ ಗ್ರಾಮ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	1000.00	15.00
4.	**ಪ್ಯಾಕೇಜ್ ಸಂ.04 (ಪ್ಯಾಕೇಜ್ 04 ಕಾಮಗಾರಿಗಳನ್ನು ಒಳಗೊಂಡಿದೆ ರೂ.1000.00 ಲಕ್ಷಗಳು)** 1. ವಾರ್ಡ್ ಸಂಖ್ಯೆ.09 ಹೆಬ್ಬಾಳ ಕೆಂಪಾಪುರದ ಕಾಫಿ ಬೋರ್ಡ್ ಬಡಾವಣೆಯ ಬೆಂಗಳೂರು ಒನ್ ಕಟ್ಟಡದಲ್ಲಿ 2ನೇ ಮಹಡಿ ನಿರ್ಮಾಣ ಮಾಡುವುದು. 2. ವಾರ್ಡ್ ಸಂಖ್ಯೆ.11 ಕೊಡಿಗೆಹಳ್ಳಿಯ ಸಹಕಾರನಗರದ ಸಿ ಬ್ಲಾಕ್, ಸಿಕ್ಯೂಎಎಲ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3. ಹೊಸ ವಾರ್ಡ್ ಸಂಖ್ಯೆ.13 (ವಿದ್ಯಾರಣ್ಯಪುರ)ದ ಸಪ್ತಗಿರಿ ಬಡಾವಣೆ, ಸೋಮಣ್ಣ ಗಾರ್ಡನ್, ವೆಂಕಟಸ್ವಾಮಪ್ಪ ಬಡಾವಣೆ, ಹೆಚ್‌ಎಂಟಿ ಬಡಾವಣೆ, ಬಿ.ಇ.ಎಲ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 4. ಹೊಸ ವಾರ್ಡ್ ಸಂಖ್ಯೆ.14 (ಕುವೆಂಪುನಗರ)ದ ಸಿಂಗಾಪುರ, ಕುವೆಂಪುನಗರ, ರಾಮಚಂದ್ರಪುರ, ಎಂ.ಎಸ್ ಪಾಳ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	1000.00	15.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **11.12.2023**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ಬ್ಯಾಟರಾಯನಪುರ ವಿಭಾಗ) ಇಲ್ಲಿ ದಿನಾಂಕ: **04.12.2023**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಬಿಡ್‌ಗಳನ್ನು ದಿನಾಂಕ: **13.12.2023**ರ ಬೆಳಿಗ್ಗೆ **11:00** ಗಂಟೆಯ ನಂತರ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/–ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ

INNOVATE KARNATAKA K-tech

ಬಿಡ್ ಆಹ್ವಾನ ಪ್ರಕಟಣೆ

KITS/ADMN/MIS/16/2023-AA-KITS

ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು "ಮಾನವ ಸಂಪನ್ಮೂಲ ಏಜೆನ್ಸಿಗಳಿಂದ" ಪರಿಚಾರಕರು ಹಾಗೂ ಚಾಲಕರ (ಗ್ರೂಪ್–ಡಿ) ಹೊರಗುತ್ತಿಗೆ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಭಾಗ ಬಿಡ್ ವ್ಯವಸ್ಥೆಯಲ್ಲಿ (ಟೆಕ್ನೋ–ಕಮರ್ಷಿಯಲ್ & ಆರ್ಥಿಕ ಬಿಡ್) ಪ್ರತಿಷ್ಠಿತ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಿಟ್ಸ್ ಕಛೇರಿಗಾಗಿ ಅಗತ್ಯವಿರುವ ಮಾನವ ಸಂಪನ್ಮೂಲ ಕೆಳಕಂಡಂತಿದೆ.

ಘಟಕ	ಅಗತ್ಯವಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ		ಬಿಡ್ ಮೌಲ್ಯ (ರೂ. ಲಕ್ಷಗಳಲ್ಲಿ)	ಇಎಂಡಿ ಬಿಡ್ ಮೌಲ್ಯದ 1.5% (ರೂ. ಲಕ್ಷಗಳಲ್ಲಿ)
	ಪರಿಚಾರಕರು	ಚಾಲಕರು		
ಕಿಟ್ಸ್–ಬೆಂಗಳೂರು	10 ಸಂಖ್ಯೆಗಳು	5 ಸಂಖ್ಯೆಗಳು	32.89	0.49

ಹೆಚ್ಚಿನ ವಿವರಗಳು https://kppp.karnataka.gov.in & https://itbtst.karnataka.gov.in ನಲ್ಲಿ ಲಭ್ಯವಿರುತ್ತವೆ. ದಾಖಲೆಗಳನ್ನು ಸಲ್ಲಿಸಲು ಕಡೆಯ ದಿನಾಂಕ **18.12.2023 ರಂದು ಸಂಜೆ 5.00** ಗಂಟೆ ಅಥವಾ ಮುಂಚಿತವಾಗಿ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ,
ಬೆಂಗಳೂರು–560027. ದೂರವಾಣಿ: 080–2223–1006/8. https://itbtst.karnataka.gov.in
ವಾ.ಸಾ.ಸಂ.ಇ/ವಾಪ್ರ/2186/ಆಕಾರ್/2023–24

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಿಭಾಗ, ಕಲಬುರಗಿ,
ಮಿನಿ ವಿಧಾನ ಸೌಧ ಎದುರುಗಡೆ, ಐವಾನ–ಎ–ಶಾಹಿ ರಸ್ತೆ, ಕಲಬುರ್ಗಿ –585102, ದೂರವಾಣಿ 08472–220815
ಸಂಖ್ಯೆ:ಕಜಮ/ಕಾಪಾಅ/ವಿಕ/ತಾಂತ್ರಿಕ/ಡಿ.ಸಿ ವರ್ಕ್ಸ್/ಯು.ಜಿ.ಡಿ ವರ್ಕ್ಸ್/2023–24/2342–2343 ದಿ.:20–11–2023

:: ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ) ::

ಕೆಳಗೆ ನಮೂದಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಸ್ಥೆಗಳು / ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ
1) ಕಾಮಗಾರಿಯ ಹೆಸರು : 1. ಮಹಾನಗರ ಪಾಲಿಕೆಯ ಠೇವಣಿ ಆಧಾರದ ಅಡಿಯಲ್ಲಿ ವಾಡಿ ಪಟ್ಟಣದ ಬಲರಾಮ ಚೌಕವರೆಗಿನ ಓವರ ಬ್ರಿಡ್ಜ್ ಬಳಿ ಟ್ರೆಂಚ್‌ಲೆಸ್ ತಂತ್ರಜ್ಞಾನದ ಮೂಲಕ 600 ಎಂ.ಎಂ. ವ್ಯಾಸದ ಎಂ.ಎಸ್. ಕೇಸಿಂಗ್ ಪೈಪನೊಂದಿಗೆ 250 ಎಂ.ಎಂ. ವ್ಯಾಸದ ಪೈಪಲೈನ್ ಮತ್ತು 273.10 ಎಂ.ಎಂ. ವ್ಯಾಸದ ಎಂ.ಎಸ್. ಪೈಪಲೈನ್ ಒದಗಿಸುವುದು ಮತ್ತು ಹಾಕುವುದು ಕಾಮಗಾರಿ (ಲಂಪ್ಸಮ್ – ಯಾವುದೇ ವೇರಿಯೇಶನ್ ಇರುವುದಿಲ್ಲ) ಕಾಮಗಾರಿ– **ರೂ. 46,34,590.00,** 2) ಸೇಡಂ ಪಟ್ಟಣಕ್ಕೆ ಯುಜಿಡಿ ಯೋಜನೆಯಡಿಯಲ್ಲಿ ವೆಟ್ ವೆಲ್‌ಗಳಿಗೆ ಮಿತ್ರ ಪರಿಕರಗಳು ಮತ್ತು ಡೀಸೆಲ್ ಜನರೇಟರಗಳ ಜೊತೆಗೆ ಒಳಚರಂಡಿ ಪಂಪ್‌ಸೆಟ್‌ಗಳ ಪೂರೈಕೆ, ನಿರ್ಮಾಣ, ವಿದ್ಯುದೀಕರಣ ಮತ್ತು ಕಾರ್ಯರಂಭ ಮಾಡುವ ಕಾಮಗಾರಿ (ಲಂಪ್ಸಮ್ – ಯಾವುದೇ ವೇರಿಯೇಶನ್ ಇರುವುದಿಲ್ಲ) – **ರೂ. 94,86,390.00** 2) ಕೆಲಸದ ಅಂದಾಜು ಮೊತ್ತ (ರೂ.ಗಳಲ್ಲಿ) : 1. 1ನೇ ಕಾಮಗಾರಿಗೆ **ರೂ: 46,34,590.00,** 2. 2ನೇ ಕಾಮಗಾರಿಗೆ **ರೂ. 94,86,390.00,** 3) ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) : 1. 1ನೇ ಕಾಮಗಾರಿಗೆ ರೂ: 93,000.00, 2. 2ನೇ ಕಾಮಗಾರಿಗೆ ರೂ. 1,90,000.00, 4) ಟೆಂಡರ ಪ್ರಕ್ರಿಯೆ ಶುಲ್ಕ : ಇ–ಪ್ರೋಕ್ಯೂರಮೆಂಟ್, 5) ಕೆಲಸ ಪೂರ್ಣಗೊಳಿಸುವ ಕಾಲಾವಧಿ : 1. 1ನೇ ಕಾಮಗಾರಿ ಎರಡು ತಿಂಗಳು (ಮಳೆಗಾಲ ಸೇರಿ), 2. 2ನೇ ಕಾಮಗಾರಿ ನಾಲ್ಕು ತಿಂಗಳು (ಮಳೆಗಾಲ ಸೇರಿ), 6) ಗುತ್ತಿಗೆದಾರರ ಅರ್ಹತೆ: ಮೇಲಿನ ಕಾಮಗಾರಿಗೆ ಇದೇ ರೀತಿ ಕಾಮಗಾರಿಯನ್ನು ನಿರ್ವಹಿಸಿದ ಅನುಭವ ಹೊಂದಿರುವ ಟೆಂಡರದಾರರು ಟೆಂಡರ ಸಲ್ಲಿಸಬಹುದಾಗಿದೆ, 7) ಟೆಂಡರನ್ನು ಡೌನಲೋಡ್ ಮಾಡಲು ಪ್ರಾರಂಬಿಸಲು ದಿನಾಂಕ ಮತ್ತು ಸಮಯ: **21/11/2023 ಬೆ. 11.00 ಗಂಟೆಯಿಂದ,** 8) ಟೆಂಡರನ್ನು ಇ–ಪ್ರಾಕ್ಯೂರಮೆಂಟ್ ಮೂಲಕ ಸಲ್ಲಿಸಲು / ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **05/12/2023 ಸಾ. 16:30ರ ವರೆಗೆ,** 9) ತಾಂತ್ರಿಕ ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ: **06/12/2023 ಬೆ. 17.00 ಗಂಟೆ ನಂತರ,** 10) ಆರ್ಥಿಕ ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ: ಅರ್ಹತೆ ಹೊಂದಿರುವ ಟೆಂಡರದಾರರಿಗೆ ತಿಳಿಸಲಾಗುವುದು, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ ಕಲಬುರಗಿ, ಮಿನಿ ವಿಧಾಸ ಸೌಧ ಎದುರುಗಡೆ, ಐವಾನ–ಎ–ಶಾಹಿ ರಸ್ತೆ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.eproc.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/484/ಕೆ.ಎಸ್.ಎಂ.ಸಿ.&ಎ/2023–24

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಆಶ್ರಯ ವಿಭಾಗ ಹುಬ್ಬಳ್ಳಿ
ನಂ ಎಚಡಿಎಮ್‌ಸಿ/95/01/2023–24/ಪತ್ರಿಕಾ ಪ್ರಕಟಣೆ ದಿನಾಂಕ:18/11/2023

ಪತ್ರಿಕಾ ಪ್ರಕಟಣೆ

ಮಹಾತ್ಮಾಗಾಂಧಿ ನಗರ ವಿಕಾಸ ಯೋಜನೆಯಡಿ (MGNVY) ಅನುಷ್ಠಾನಗೊಳಿಸುವ ಯೋಜನೆಗಳನ್ವಯ ಪರಿಶಿಷ್ಟ ಜಾತಿ/ಗಿರಿಜನ ಉಪಯೋಜನೆಗಳಿಗೆ ಮೀಸಲಿಟ್ಟ ಶೇ 24.10 ರಷ್ಟು ಮತ್ತು ಪೌರಕಾರ್ಮಿಕ ಕಲ್ಯಾಣ ಯೋಜನೆಗಳಿಗೆ ಮಿಸಲಿಟ್ಟ 20% ರಷ್ಟು ಅನುದಾನದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ (ಸ್ವಚ್ಚತೆ ಹಾಗೂ ನೈರ್ಮಲ್ಯ ಕಾರ್ಯದಲ್ಲಿ ತೊಡಗುವ ಖಾಯಂ/ಹೊರಗುತ್ತಿಗೆ ಪೌರಕಾರ್ಮಿಕರು /ಲೋಡರ್ಸ, ಡ್ರೈವರ್ಸ, ಸಫಾಯಿ ಕರ್ಮಚಾರಿ ಸ್ಕ್ಯಾವೆಂಜರುಗಳಿಗೆ) ವಸತಿ ಇಲ್ಲದೇ ಇರುವ ನೌಕರರಿಗೆ ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಜಮೀನು ಖರೀದಿಗಾಗಿ ರೂ. **3.00** ಲಕ್ಷಗಳಂತೆ **100** ಜನರಿಗೆ ಒಟ್ಟು ನಿಗದಿಪಡಿಸಿದ ಅನುದಾನ ರೂ. **3.00** ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು ಇರುತ್ತದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 3 ರಿಂದ 4 ಎಕರೆ ಜಾಗೆಯನ್ನು ಜಮೀನುನನ್ನು ಖರೀದಿ ನೀಡಲು ಆಸಕ್ತಿಯುಳ್ಳ ಜಮೀನಿನ ಮಾಲೀಕರು ಅಥವಾ ಜಮೀನ ಖರೀದಿ ಮಾಡಿ LAY-OUT (ರೂಪರೇಷ) ರಚನೆ ಮಾಡಿಕೊಡಲು ಆಸಕ್ತಿಯುಳ್ಳವರು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಶ್ರಯ ಯೋಜನೆ ವಿಭಾಗಕ್ಕೆ ಈ ಪ್ರಕಟಣೆ ಪ್ರಕಟಗೊಂಡ 30 ದಿನದೊಳಗಾಗಿ ಸಂಪೂರ್ಣ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.
ಸಂಪರ್ಕ ಮಾಧ್ಯಮ:0830-2213848 Extn 230
ಈ ಮೇಲ್ ವಿಳಾಸ :asharyhubli@yahoo.com
ಸಹಿ/– ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿಗಳು ಆಶ್ರಯ ಸಮಿತಿ
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ
ವಾ.ಸಾ.ಇ/ಧಾ/505/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ
ಫೋನ್: 08182-257189 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

1)No.EE/UTPDN/SMG/KNNL/PB-3/T.N.NO.11Call-2/2023-24 Dated: 18.11.2023.
2)No.EE/UTPDN/SMG/KNNL/PB-3/T.N.NO.12Call-2/2023-24 Dated: 18.11.2023.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 ರಡಿ ಬರುವ 03 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ **ಮೊತ್ತ ರೂ. 84.64, 101.49 ಮತ್ತು 93.05 ಲಕ್ಷಗಳು. (ಜಿ.ಎಸ್.ಟಿ ಹೊರತುಪಡಿಸಿ)** (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ : **23.11.2023 at 17.30 hrs.** (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ: 18.11.2023 ರಿಂದ 27.11.2023 ಘಂಟೆ 17.29 ಯವರೆಗೆ.**

ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ **https://kppp.karnataka.gov.in/** ವೆಬ್‌ಸೈಟ್‌ನಲ್ಲಿ ಪಡೆಯಬಹುದು.
ಸಹಿ/– **ಕಾರ್ಯಪಾಲಕ ಇಂಜಿನಿಯರ್,**
ಕ.ನೀ.ನಿ.ನಿ., ತುಂ.ಮೇ.ಯೋ. ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.73-11
ಝೇಂಕಾರ್/2023-24

ಪ್ಯಾಟ್ ಕಮಿನ್ಸ್ ಬಳಗ ವಿಶ್ವಕಪ್ ಜಯಿಸಲು ಚುರುಕಿನ ಕ್ಷೇತ್ರರಕ್ಷಣೆಯೂ ಕಾರಣ

ಬಿಗಿ ಫೀಲ್ಡಿಂಗ್‌ನಿಂದಾಗಿ 'ಕಿಂಗ್'

● ಗಿರೀಶ ದೊಡ್ಡಮನಿ

ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಟ್ರಾವಿಸ್ ಹೆಡ್ ಅವರು ರೋಹಿತ್ ಶರ್ಮಾ ಹೊಡೆದ ಚೆಂಡನ್ನು ಡೈವ್ ಹೊಡೆದು ಹಿಡಿತಕ್ಕೆ ಪಡೆದ ಕ್ಷಣ –ಪಿಟಿಐ ಚಿತ್ರ

ಅಹಮದಾಬಾದ್: ಗುಜರಾತ್‌ನ ಮಹಾನಗರಿ ಅಹಮದಾಬಾದಿನಲ್ಲಿ ಭಾನುವಾರ ರಾತ್ರಿಯಿಂದ ನೀರವ ಮೌನ ಆವರಿಸಿದೆ. ಭಾರತ ಕ್ರಿಕೆಟ್ ತಂಡವು ವಿಶ್ವಕಪ್ ಗೆದ್ದರೆ ನೃತ್ಯ, ಗಾಯನ, ಮೆರವಣಿಗೆಗಳು ಮತ್ತು ಸಿಹಿಯೂಟ ಹಂಚಿಕೆಯ ಮೂಲಕ ಸಂಭ್ರಮಿಸಲು ಸಜ್ಜಾಗಿದ್ದ ಅಭಿಮಾನಿಗಳೆಲ್ಲ ನಿರಾಶೆಯ ಪರದೆಯೊಳಗೆ ಸೇರಿಹೋಗಿದ್ದಾರೆ.

ಸದಾ ಲವಲವಿಕೆಯ ಈ ನಗರಿಯಲ್ಲಿ ಈಗ ಮೌನವೇ ಮಾತನಾಡುತ್ತಿದೆ. ಭಾರತದ ಸೋಲಿಗೆ ಪ್ರಮುಖ ಕಾರಣವಾದ ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅವರ ಬಗ್ಗೆ ಮಾತ್ರ ಮಾತುಗಳು ಕೇಳಿಬರುತ್ತಿವೆ. ಆದರೆ ಅದು ಅವರು ಫೈನಲ್ ಪಂದ್ಯದಲ್ಲಿ ಹೊಡೆದ ಶತಕ ಅಥವಾ ಮಾರ್ನಸ್ ಲಾಬುಷೇನ್ ಅವರೊಂದಿಗಿನ ಜೊತೆಯಾಟದ ಬಗ್ಗೆ ಅಲ್ಲ. ಅವರು ಅದ್ಭುತವಾಗಿ ಪಡೆದ ರೋಹಿತ್ ಶರ್ಮಾ ಅವರ ಕ್ಯಾಚ್ ಬಗ್ಗೆ ಮಾತುಗಳು ಜೋರಾಗಿವೆ.

'ರೋಹಿತ್ ಒಳ್ಳೆ ಫ್ಲೋನಲ್ಲಿದ್ದರು. ಆ ಓವರ್‌ನಲ್ಲಿ ಹೆಚ್ಚು ರನ್‌ಗಳು ಬಂದಿದ್ದವು. ಅಂತಹ ಶಾಟ್ ಹೊಡೆಯುವ ಅಗತ್ಯವಿರಲಿಲ್ಲ. ಆದರೂ ರನ್ ಆಸೆಗೆ ಬಿದ್ದು ಪ್ರಯೋಗ ಮಾಡಿದರು. ಏನೇ ಹೇಳಿ, ಟ್ರಾವಿಸ್ ಹೆಡ್ ಓಡಿ ಹೋಗಿ ಪಡೆದ ಆ ಕ್ಯಾಚ್ ಪಂದ್ಯದಲ್ಲಿ ಪ್ರಮುಖ ತಿರುವಾಯಿತು. ರೋಹಿತ್ ಇನ್ನೊಂದು ಹತ್ತು ಓವರ್‌ಗಳಷ್ಟು ಹೊತ್ತು ಕ್ರೀಸ್‌ನಲ್ಲಿದ್ದಿದ್ದರೆ ಭಾರತದ ಸ್ಕೋರು 300ರ ಆಸುಪಾಸಿಗೆ ಬರುತ್ತಿತ್ತು. ಆಗ ಮಜಾ ಇತ್ತು' ಎಂದು ಟ್ಯಾಕ್ಸಿ ಚಾಲಕ ಕಲ್ಪೇಶ್ ಗುಜರಾತಿ ಧಾಟಿಯ ಹಿಂದಿಯಲ್ಲಿ ಪಟಪಟನೇ ವಿಶ್ಲೇಷಿಸಿದರು.

ಭಾರತ ತಂಡದ ವಿಶ್ವಕಪ್ ವಿಜಯದ ದೃಶ್ಯ ಕಣ್ತುಂಬಿಕೊಳ್ಳಲು ಬಂದವರೆಲ್ಲ ನಿರಾಶೆಯಿಂದ ಮರಳಲು ವಿಮಾನ ನಿಲ್ದಾಣದಲ್ಲಿ ಸೇರಿದ್ದರು. ಅವರ ಮಧ್ಯೆಯೂ ಇದೇ ಚರ್ಚೆ ನಡೆದಿತ್ತು. ಒಂದಂತೂ ದಿಟವಾಗಿದ್ದು ಬ್ಯಾಟಿಂಗ್ ಮತ್ತು ಬೌಲಿಂಗ್‌ನಷ್ಟೇ ಮುಖ್ಯ ಫೀಲ್ಡಿಂಗ್ ಎಂಬುದು. ಚುರುಕಾದ ಫೀಲ್ಡಿಂಗ್ ಮತ್ತು ಸಾಹಸಭರಿತ ಕ್ಯಾಚ್‌ಗಳನ್ನು ಪಡೆಯುವ ಸಾಮರ್ಥ್ಯವಿರುವ ತಂಡವೇ ವಿಶ್ವ ಕಿರೀಟ ಧರಿಸಲು ಸಾಧ್ಯ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ರೋಹಿತ್ ಔಟಾಗುವವರೆಗೂ ಒಂದು ರೀತಿಯ ಒತ್ತಡದಲ್ಲಿದ್ದ ಆಸ್ಟ್ರೇಲಿಯ ಆಟಗಾರರು ನಂತರ ಅತೀವ ಚುರುಕಾಗಿ ಆಡತೊಡಗಿದರು. ಅವರ ಹಾವಭಾವಗಳಲ್ಲಿ ಉತ್ಸಾಹ ಕಾಣುತ್ತಿತ್ತು. ಇದು ಬೌಲರ್‌ಗಳ ವಿಶ್ವಾಸ ಇಮ್ಮಡಿಸಿತು. ಹೀಗಾಗಿಯೇ ರೋಹಿತ್ ನಂತರ ಉಳಿದ ಯಾವ ಬ್ಯಾಟರ್‌ಗಳೂ ಸಿಕ್ಸರ್ ಹೊಡೆಯಲಿಲ್ಲ. ವಿರಾಟ್ ಮತ್ತು ಕೆ.ಎಲ್. ರಾಹುಲ್ ತಾಳ್ಮೆಯ ಚಿಪ್ಪಿನೊಳಗೆ ಸೇರಿಕೊಂಡರು. ವೇಗವಾಗಿ ಆಡಿದರೆ ವಿಕೆಟ್ ಚೆಲ್ಲಬೇಕಿತ್ತು. ಆದ್ದರಿಂದ ಒಂದು ಮತ್ತು ಎರಡು ರನ್ ಪಡೆಯುವಲ್ಲಿಯೇ ಮಗ್ನರಾದರು. ಸೆಮಿಫೈನಲ್‌ನಲ್ಲಿ ಬ್ಯಾಟ್ ಬೀಸಿದ್ದ ರಾಹುಲ್ ಇಲ್ಲಿ ತಮ್ಮನ್ನು ನಿಯಂತ್ರಿಸಿಕೊಂಡರು. ಅವರು 40ಕ್ಕೂ ಹೆಚ್ಚು ಡಾಟ್ ಬಾಲ್ ಎದುರಿಸಿದರು.

ಇದರಿಂದಾಗಿ ಭಾರತ ತಂಡವನ್ನು 240 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಪ್ಯಾಟ್ ಕಮಿನ್ಸ್ ಬಳಗದ ಬೌಲಿಂಗ್‌ನಷ್ಟೇ ಫೀಲ್ಡಿಂಗ್ ಕೂಡ ಕಾರಣವಾಗಿತ್ತು. ನಾಲ್ಕು ರನ್‌ಗಳು ಲಭಿಸುವಲ್ಲಿ ಒಂದು ಅಥವಾ ಎರಡು ರನ್ ಬಿಟ್ಟುಕೊಟ್ಟ ಆಸ್ಟ್ರೇಲಿಯಾ ತನ್ನ ಕ್ಷೇತ್ರರಕ್ಷಣೆಯಿಂದಲೇ ಸುಮಾರು 40–45 ರನ್‌ಗಳನ್ನು ಉಳಿಸಿತು. ಆದರೆ ಭಾರತದ ಫೀಲ್ಡಿಂಗ್ ಅಷ್ಟೇನೂ ಉನ್ನತ ಮಟ್ಟದಲ್ಲಿ ಇರಲಿಲ್ಲ. ಇನಿಂಗ್ಸ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಹಾಕಿನ ಮೊದಲ ಓವರ್‌ನ ಮೊದಲ ಎಸೆತದಲ್ಲಿ ಸ್ಲಿಪ್‌ನಲ್ಲಿದ್ದ ವಿರಾಟ್ ಕೊಹ್ಲಿ ಮತ್ತು ಶುಭಮನ್ ಗಿಲ್ ಅವರಲ್ಲಿ ಒಬ್ಬರು ಕ್ಯಾಚ್ ಪಡೆಯಬಹುದಿತ್ತು. ಆದರೆ ಅವರಿಬ್ಬರೂ ತಮ್ಮ ಸ್ಥಾನದಿಂದ ಮಿಸುಕಲಿಲ್ಲ.

ನಂತರದ ಆಟದಲ್ಲಿಯೂ ದೊಡ್ಡಮಟ್ಟದ ಡೈವ್‌ಗಳು ಕಾಣಲಿಲ್ಲ. ಓವರ್ ಥ್ರೋ, ಕೀಪರ್ ಪಕ್ಕದಲ್ಲಿ ಹಾದು ಹೋದ ಚೆಂಡು ಬೌಂಡರಿ ಸೇರುವುದು ನಡೆಯಿತು. ಇದರಿಂದಾಗಿ ಟ್ರಾವಿಸ್ ಹೆಡ್ ಶತಕ ಗಳಿಸಲು ಸುಲಭವಾಯಿತು.

ಟೂರ್ನಿಯ ಲೀಗ್ ಪಂದ್ಯದಲ್ಲಿ ಕೊಹ್ಲಿ ಕ್ಯಾಚ್ ಬಿಟ್ಟದ್ದ ಮಿಚೆಲ್ ಮಾರ್ಷ್ ಅವರಿಂದಾಗಿ ಆಸ್ಟ್ರೇಲಿಯಾ ಸೋತಿತ್ತು. ಆ ಪಂದ್ಯದಲ್ಲಿ 2 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ಭಾರತ ಗೆದ್ದಿತ್ತು. ಅಫ್ಗನ್ ವಿರುದ್ಧದ ಪಂದ್ಯದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಕ್ಯಾಚ್ ಬಿಟ್ಟ ಆಟಗಾರರು ಪರಿತಪಿಸಿದ್ದರು. ಬೆಂಗಳೂರಿನ ಪಂದ್ಯದಲ್ಲಿ ಡೇವಿಡ್ ವಾರ್ನರ್ ಕ್ಯಾಚ್ ಬಿಟ್ಟದ ಪಾಕಿಸ್ತಾನ ನಂತರ ಕೈಕೈ ಹಿಸುಕಿಕೊಂಡಿತ್ತು. ಈ ಎಲ್ಲದರಿಂದ ಪಾಠ ಕಲಿತ ಆಸ್ಟ್ರೇಲಿಯಾ ಫೈನಲ್‌ನಲ್ಲಿ ಗೆದ್ದಿತು.

ಹಾಗೇ ನೋಡಿದರೆ, ಈ ಟೂರ್ನಿಯುದ್ದಕ್ಕೂ ಸುಮಾರು 12 ಕ್ಯಾಚ್‌ಗಳನ್ನು ಆಸ್ಟ್ರೇಲಿಯಾ ನೆಲಕ್ಕೆ ಚೆಲ್ಲಿತ್ತು. ಆದರೆ, ಭಾರತವು ಆರು ಕ್ಯಾಚ್‌ಗಳನ್ನು ಮಾತ್ರ ಬಿಟ್ಟಿತ್ತು. ಫೀಲ್ಡಿಂಗ್ ಕೂಡ ಉಳಿದ ಪಂದ್ಯಗಳಲ್ಲಿ ಚುರುಕಾಗಿಯೇ ಇತ್ತು. ಆದರೆ ಫೈನಲ್‌ನಲ್ಲಿ ಎಲ್ಲವೂ ತಿರುವುಮುರುವಾಯಿತು.

1983ರಲ್ಲಿ ಕಪಿಲ್ ದೇವ್ ಅವರು ವಿವಿಯನ್ ರಿಚರ್ಡ್ಸ್ ಕ್ಯಾಚ್ ಪಡೆಯದೇ ಹೋಗಿದ್ದರೆ ಇತಿಹಾಸ ನಿರ್ಮಾಣವಾಗುತ್ತಿರಲಿಲ್ಲ. ಕ್ರಿಕೆಟ್ ಈ ಮಟ್ಟಕ್ಕೆ ಬೆಳೆಯುವುದು ಅನುಮಾನವಿತ್ತು. ಆದ್ದರಿಂದ ಮಹೇಂದ್ರ ಸಿಂಗ್ ಧೋನಿ ಕೂಡ ತಮ್ಮ ಅವಧಿಯಲ್ಲಿ ಫೀಲ್ಡಿಂಗ್‌ಗೆ ಹೆಚ್ಚು ಒತ್ತು ಕೊಟ್ಟಿದ್ದರು. ಅದೇ ಪರಂಪರೆ ಮುಂದುವರೆದರೆ ತಂಡಕ್ಕೆ ಲಾಭವಾಗಬಹುದೇನೋ?

ಐಸಿಸಿ ತಂಡಕ್ಕೆ ರೋಹಿತ್ ನಾಯಕ

ಕೊಹ್ಲಿ ಸೇರಿದಂತೆ ತಂಡದಲ್ಲಿ ಭಾರತದ 6 ಮಂದಿಗೆ ಸ್ಥಾನ

ದುಬೈ (ಪಿಟಿಐ): ಏಕದಿನ ವಿಶ್ವಕಪ್ ಟೂರ್ನಿಯ ಮುಕ್ತಾಯದ ಬೆನ್ನಿಗೇ ಸೋಮವಾರ ಪ್ರಕಟಿಸಲಾದ ಐಸಿಸಿ ತಂಡದ ನಾಯಕರನ್ನಾಗಿ ಭಾರತದ ಬಿರುಸಿನ ಬ್ಯಾಟರ್ ರೋಹಿತ್ ಶರ್ಮಾ ಅವರನ್ನು ಹೆಸರಿಸಲಾಗಿದೆ. ರೋಹಿತ್ ಸೇರಿದಂತೆ ಭಾರತದ ಆರು ಮಂದಿ ಆಟಗಾರರು 11 ಮಂದಿಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಅಹಮದಾಬಾದಿನಲ್ಲಿ ಭಾನುವಾರ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಏಳು ವಿಕೆಟ್‌ಗಳಿಂದ ಆಸ್ಟ್ರೇಲಿಯಾಕ್ಕೆ ಮಣಿದಿತ್ತು. ನಿರ್ಭೀತಿಯಿಂದ ಬ್ಯಾಟ್ ಬೀಸಿದ್ದ ರೋಹಿತ್ ಟೂರ್ನಿಯಲ್ಲಿ ಎರಡನೇ ಅತಿ ಹೆಚ್ಚು ರನ್ ಹೊಡೆದ ಆಟಗಾರ ಎನಿಸಿದ್ದರು. ಅವರು 11 ಪಂದ್ಯಗಳಿಂದ 54.27ರ ಸರಾಸರಿಯಲ್ಲಿ 597 ರನ್ ಕಲೆಹಾಕಿದ್ದರು.

ವಿಶ್ವಕಪ್‌ನಲ್ಲಿ ಮೂರು ಶತಕ ಸೇರಿದಂತೆ 765 ರನ್ ಗಳಿಸಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದ ವಿರಾಟ್ ಕೊಹ್ಲಿ ಅವರೂ ಈ ತಂಡದಲ್ಲಿ ನಿರೀಕ್ಷೆಯಂತೆ ಸ್ಥಾನ ಪಡೆದಿದ್ದಾರೆ. ವಿಕೆಟ್ ಕೀಪರ್–ಬ್ಯಾಟರ್ ಕೆ.ಎಲ್.ರಾಹುಲ್, ವೇಗದ ಬೌಲರ್‌ಗಳಾದ ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮತ್ತು ರವೀಂದ್ರ ಜಡೇಜಾ ಅವರು ಉಳಿದ ನಾಲ್ವರು.

ರಾಹುಲ್ 75.33 ಸರಾಸರಿಯಲ್ಲಿ 452 ರನ್ ಗಳಿಸಿದ್ದರು. ಲೀಗ್‌ನ ಆರಂಭದಲ್ಲಿ ಮೊದಲ ನಾಲ್ಕು ಪಂದ್ಯಗಳನ್ನು ಕಳೆದುಕೊಂಡಿದ್ದರೂ, ಶಮಿ ಆಡಿದ ಏಳು ಪಂದ್ಯಗಳಲ್ಲಿ 24 ವಿಕೆಟ್‌ಗಳನ್ನು (12.20 ಸರಾಸರಿ) ಪಡೆದು ಮಿಂಚಿದ್ದರು.

ರೋಹಿತ್ ಶರ್ಮಾ

ಏಕದಿನ ವಿಶ್ವಕಪ್ ಇತಿಹಾಸದಲ್ಲಿ ಕೇವಲ ನಾಲ್ವರು ಮಾತ್ರ ವಿಶ್ವಕಪ್‌ನಲ್ಲಿ ಶಮಿ ಅವರಿಗಿಂತ (55 ವಿಕೆಟ್) ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರೆಂದರೆ– ಲಸಿತ್ ಮಾಲಿಂಗ (56), ಮಿಚೆಲ್ ಸ್ಟಾರ್ಕ್ (65), ಮುತ್ತಯ್ಯ ಮುರಳೀಧರನ್ (68) ಮತ್ತು ಗ್ಲೆನ್ ಮೆಕ್‌ಗ್ರಾ (71). ಆದರೆ ಇವರಿಗೆ ಹೋಲಿಸಿದರೆ ಶಮಿ ಹತ್ತು ಕಡಿಮೆ ಪಂದ್ಯಗಳನ್ನು ಆಡಿದ್ದಾರೆ ಎಂದು ಐಸಿಸಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಬೂಮ್ರಾ 11 ಪಂದ್ಯಗಳಿಂದ 20 ವಿಕೆಟ್‌ಗಳನ್ನು (ಪ್ರತಿ ಓವರಿಗೆ ಕೊಟ್ಟ ರನ್ 4.06) ಪಡೆದಿದ್ದರು. ಟ್ರೋಫಿ ಗೆಲ್ಲಲಾಗದಿದ್ದರೂ ತಂಡದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಭಾರತದ ಆಟಗಾರರು ಸ್ಥಾನ ಪಡೆದಿರುವುದು ಟೂರ್ನಿಯಲ್ಲಿ ಭಾರತ ಅತ್ಯುತ್ತಮ ತಂಡವಾಗಿತ್ತು ಎನ್ನುವುದಕ್ಕೆ ನಿದರ್ಶನವಾಗಿದೆ.

ನಾಲ್ಕನೇ ಕ್ರಮಾಂಕದಲ್ಲಿ ನ್ಯೂಜಿಲೆಂಡ್‌ನ ಮಧ್ಯಮ ಕ್ರಮಾಂಕದ ಆಟಗಾರ ಡೇರಿಲ್ ಮಿಚೆಲ್ ಆಯ್ಕೆಯಾಗಿದ್ದಾರೆ. ಅವರು ಲೀಗ್‌ನಲ್ಲೂ, ಸೆಮಿಫೈನಲ್‌ನಲ್ಲೂ ಭಾರತದ ವಿರುದ್ಧ ಉತ್ತಮ ಪ್ರದರ್ಶನ ನೀಡಿದ್ದರು.

ಐಸಿಸಿ ತಂಡ

- ರೋಹಿತ್ ಶರ್ಮಾ (ನಾಯಕ)
- ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)
- ವಿರಾಟ್ ಕೊಹ್ಲಿ
- ಡೇರಿಲ್ ಮಿಚೆಲ್ (ನ್ಯೂಜಿಲೆಂಡ್)
- ಕೆ.ಎಲ್.ರಾಹುಲ್ (ವಿಕೆಟ್ ಕೀಪರ್)
- ಗ್ಲೆನ್ ಮ್ಯಾಕ್ಸ್‌ವೆಲ್ (ಆಸ್ಟ್ರೇಲಿಯಾ)
- ರವೀಂದ್ರ ಜಡೇಜ
- ಜಸ್‌ಪ್ರೀತ್ ಬೂಮ್ರಾ
- ಮೊಹಮ್ಮದ್ ಶಮಿ
- ಆ್ಯಡಂ ಜಂಪಾ (ಆಸ್ಟ್ರೇಲಿಯಾ)
- ದಿಲ್ಶಾನ್ ಮಧುಶಂಕ (ಶ್ರೀಲಂಕಾ)
- 12ನೇ ಆಟಗಾರ: ಜೆರಾಲ್ಡ್ ಕೋಯೆಟ್ಜಿ (ದಕ್ಷಿಣ ಆಫ್ರಿಕಾ)

'ವಿರಾಟ್ ವಿಕೆಟ್ ಬಿದ್ದಾಗ ನೆಲೆಸಿದ ಮೌನ ಅತ್ಯಂತ ತೃಪ್ತಿಯ ಕ್ಷಣ'

ಅಹಮದಾಬಾದ್ (ಪಿಟಿಐ): ವಿಶ್ವ ಕಪ್ ಫೈನಲ್‌ನಲ್ಲಿ ತಾವು ವಿರಾಟ್ ಕೊಹ್ಲಿ ಅವರ ವಿಕೆಟ್ ಪಡೆದಾಗ, ಕಿಕ್ಕಿರಿದ್ದಿದ್ದ ಕ್ರೀಡಾಂಗಣದಲ್ಲಿ ಆವರಿಸಿದ ಮೌನ, ಕ್ರಿಕೆಟ್ ಅಂಗಳದಲ್ಲಿ ತಮ್ಮ ಪಾಲಿಗೆ ಅತ್ಯಂತ ಸುಮಧುರ ಕ್ಷಣ ಎಂದು ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದಾರೆ.

54 ರನ್ ಗಳಿಸಿದ್ದಾಗ ಪುಟಿದ್ದೆದ್ದ ಚೆಂಡನ್ನು ಕೊಹ್ಲಿ ಆಡಲು ಹೋದಾಗ, ಅದು ಬ್ಯಾಟ್‌ಗೆ ತಗುಲಿ ನೆಲಕ್ಕೆ ಬಡಿದು ಬೇಲ್ಸ್‌ಗಳನ್ನು ಉರುಳಿಸಿತ್ತು. ಕ್ರೀಡಾಂಗಣದ ನಿಶ್ಶಬ್ದವಾಯಿತು. ಅಧಿಕೃತ ಮಾಹಿತಿಯಂತೆ ಕ್ರೀಡಾಂಗಣದಲ್ಲಿ 92,543 ಮಂದಿ ಪ್ರೇಕ್ಷಕರಿದ್ದರು.

'ಕ್ರೀಡಾಂಗಣ ಮೌನಕ್ಕೆ ಜಾರಿದ ಆ ಕ್ಷಣವನ್ನು ನಾವು ಎರಡು ಸಲ ಸಂಭ್ರಮಿಸಿದೆವು. ಅದಕ್ಕೆ ಮೊದಲು ಕೊಹ್ಲಿ ಎಂದಿನಂತೆ ಮತ್ತೊಂದು ಶತಕದತ್ತ ಸಾಗಿದ್ದಂತೆ ಕಂಡಿತು. ಹೀಗಾಗಿ ಆ ಕ್ಷಣ ತೃಪ್ತಿದಾಯಕ' ಎಂದು ಕಮಿನ್ಸ್ ಭಾನುವಾರ ಆಸ್ಟ್ರೇಲಿಯಾ ಆರನೇ ಬಾರಿ ವಿಶ್ವಕಪ್ ಗೆದ್ದ ನಂತರ ಹೇಳಿದರು.

'ನಾವು ವಿಶ್ವಕಪ್ ಗೆದ್ದಿರಬಹುದು ನಿಜ. ಆದರೆ ಏಕದಿನ ಮಾದರಿಯ ಮೇಲೆ ತಮಗೆ ಮತ್ತೆ ಪ್ರೀತಿ ಮೂಡಿದೆ' ಎಂದು ಅವರು ಹೇಳಿದರು. ಏಕದಿನ ವಿಶ್ವಕಪ್ ಟೂರ್ನಿ ಮುಂದೆಯೂ ಇರಲಿದೆ ಎಂಬುದು ಅವರ ವಿಶ್ವಾಸ. 'ಇದಕ್ಕೆ ತನ್ನದೇ ಆದ ಪರಂಪರೆಯಿದೆ. ಆಟಗಾರರಿಗೆ ತಮ್ಮದೇ ಆದ ಸವಿನೆನಪುಗಳಿರುತ್ತವೆ. ಆದರೆ ದ್ವಿಪಕ್ಷೀಯ ಸರಣಿಗಳದ್ದೇ ಸಮಸ್ಯೆ' ಎಂದರು.

CHAMPIONS
2023

ಪ್ಯಾಟ್ ಕಮಿನ್ಸ್ ಅವರು ಅಹಮದಾಬಾದ್‌ನ ಸಾಬರಮತಿ ನದಿ ಬಳಿ ಟ್ರೋಫಿಯೊಂದಿಗೆ ಫೋಟೊಗೆ ಪೋಸ್ ನೀಡಿದರು –ಪಿಟಿಐ ಚಿತ್ರ

ಕಳೆದ ಮಾರ್ಚ್‌ನಲ್ಲಿ ಭಾರತ ಪ್ರವಾಸದ ವೇಳೆ ಕಮಿನ್ಸ್ ಅವರ ತಾಯಿ ನಿಧನರಾಗಿದ್ದರು. ಅವರು ಪ್ರವಾಸದಿಂದ ಅರ್ಧಕ್ಕೇ ತವರಿಗೆ ಮರಳಿದ್ದರು. ನಂತರ ಅವರು ಆಸ್ಟ್ರೇಲಿಯಾ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಕಿರೀಟ ಧರಿಸಲು ನೆರವಾದರು.

'ನೀಲಿ ಬಣ್ಣದ ಉಡುಗೆಯಲ್ಲಿ ಭಾರತದ ಬೆಂಬಲಿಗರು ಕ್ರೀಡಾಂಗಣದತ್ತ ಹರಿದುಬರುವ ರೀತಿಯನ್ನು ಹೋಟೆಲ್ ಕೊಠಡಿಯಿಂದ ನೋಡುವಾಗ ಕ್ಷಣಕಾಲ ನರ್ವಸ್ ಆಗಿದ್ದೆ' ಎಂದು ಅವರು ಒಪ್ಪಿಕೊಂಡರು.

ಹೆಡ್ ಗಾಯಾಳಾಗಿದ್ದರೂ, ತಂಡದ ವೈದ್ಯಕೀಯ ಸಿಬ್ಬಂದಿ ಅವರ ಕಡೆ ನಿಗಾಯಿಟ್ಟರು. ತಂಡದ ಆಯ್ಕೆಗಾರರೂ ವಿಶ್ವಾಸವಿಟ್ಟರು. ಅವರ ಬೆರಳಿಗೆ ಗಾಯವಾಗಿತ್ತು. ಟೂರ್ನಿಯ ಅರ್ಧದಷ್ಟು ಸಮಯ ಅವರು ಕೈ ನೋವಿನಿಂದ ಬಳಲಿದ್ದರು. ಆದರೆ ನಾವು ಅವರನ್ನು ಉಳಿಸಿಕೊಂಡಿದ್ದು ಫಲ ನೀಡಿತು' ಎಂದರು.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಸೆಮಿಗೆ ಕರ್ನಾಟಕ ತಂಡ

ಬೆಂಗಳೂರು: ಮೆಕ್‌ನೀಲ್ ಹ್ಯಾಡ್ಲಿ ನೊರೋನಾ (60 ರನ್ ಹಾಗೂ 33ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡದವರು ಬಿಸಿಸಿಐ 23 ವರ್ಷದೊಳಗಿನವರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ರಾಜ್ಯ ತಂಡ 7 ವಿಕೆಟ್‌ಗಳಿಂದ ಮುಂಬೈ ತಂಡವನ್ನು ಮಣಿಸಿತು. ಮೊದಲು ಬ್ಯಾಟ್ ಮಾಡಿದ ಎದುರಾಳಿಗಳನ್ನು 257 ರನ್‌ಗಳಿಗೆ ಆಲೌಟ್ ಮಾಡಿದ ಕರ್ನಾಟಕ, 39.4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಮೆಕ್‌ನೀಲ್ ಅಲ್ಲದೆ ಕೆ.ವಿ.ಅನೀಶ್ (75) ಮತ್ತು ಅನೀಶ್ವರ್ ಗೌತಮ್ (69) ಅವರು ಅರ್ಧಶತಕ ಗಳಿಸಿ ಗಮನ ಸೆಳೆದರು.

ಮೆಸ್ಸಿ ಧರಿಸಿದ್ದ ಜೆರ್ಸಿ ಹರಾಜಿನಿಂದ ₹83 ಕೋಟಿ ನಿರೀಕ್ಷೆ

2022ರ ವಿಶ್ವಕಪ್ ಟೂರ್ನಿಯಲ್ಲಿ ಧರಿಸಿದ್ದ ಜರ್ಸಿಯೊಂದಿಗೆ ಮೆಸ್ಸಿ

ನ್ಯೂಯಾರ್ಕ್ (ಎಎಫ್‌ಪಿ): ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ಅವರು 2022ರ ವಿಶ್ವಕಪ್ ಟೂರ್ನಿಯಲ್ಲಿ ಧರಿಸಿದ್ದ ಆರು ಜರ್ಸಿಗಳ ಸೆಟ್ ಡಿಸೆಂಬರ್‌ನಲ್ಲಿ ಹರಾಜಿಗೆ ಹೋಗಲಿದೆ ಎಂದು ಹರಾಜು ಸಂಸ್ಥೆ ಸೊದೆಬಿ ಸೋಮವಾರ ಪ್ರಕಟಿಸಿದೆ. ಹರಾಜಿನಲ್ಲಿ ಇವುಗಳ ಮೌಲ್ಯ ಸುಮಾರು ₹83.36 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

ಅರ್ಜೆಂಟೀನಾದ ಫಾರ್ವರ್ಡ್ ಮೆಸ್ಸಿ, ಈ ಶರ್ಟ್‌ಗಳನ್ನು ವಿಶ್ವಕಪ್‌ನ ಗುಂಪು ಪಂದ್ಯಗಳ ವೇಳೆ (ಸೌದಿ ಅರೇಬಿಯಾ, ಮೆಕ್ಸಿಕೊ) ಮತ್ತು ನಂತರ ನಾಕೌಟ್ ಪಂದ್ಯಗಳ ವೇಳೆ ಧರಿಸಿದ್ದರು. ಕತಾರ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಅರ್ಜೆಂಟೀನಾ ತಂಡ ಚಾಂಪಿಯನ್ ಆಗಿತ್ತು.

ಜೊಕೊವಿಚ್‌ಗೆ ಏಳನೇ ಪ್ರಶಸ್ತಿ

ಟ್ಯೂರಿನ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಎಟಿಪಿ ಫೈನಲ್ಸ್ ಟೂರ್ನಿಯಲ್ಲಿ ದಾಖಲೆಯ ಏಳನೇ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಅವರು 6–3, 6–3 ರಿಂದ ಇಟಲಿಯ ಯಾನಿಕ್ ಸಿನೆರ್ ಅವರನ್ನು ಮಣಿಸಿದರು.

ಇಲ್ಲಿ ಪ್ರಶಸ್ತಿ ಜಯಿಸಿದ ಇಟಲಿಯ ಮೊದಲ ಆಟಗಾರ ಎನಿಸಿಕೊಳ್ಳುವ ಅವಕಾಶವನ್ನು ಸಿನೆರ್ ಕಳೆದುಕೊಂಡರು.

ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ಭಾರತ ತಂಡ

ಸೂರ್ಯಕುಮಾರ್ ನಾಯಕ

ನವದೆಹಲಿ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರನ್ನು, ಆಸ್ಟ್ರೇಲಿಯಾ ವಿರುದ್ಧ ಇದೇ ತಿಂಗಳ 23ರಂದು ಆರಂಭವಾಗುವ ಐದು ಪಂದ್ಯಗಳ ಟಿ–20 ಸರಣಿಗೆ ಭಾರತ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಮೊದಲ ಪಂದ್ಯ ವಿಶಾಖಪಟ್ಟಣದಲ್ಲಿ ನಡೆಯಲಿದೆ.

ಏಕದಿನ ವಿಶ್ವಕಪ್‌ನಲ್ಲಿ ಆಡಿದ ಬಹುತೇಕ ಆಟಗಾರರಿಗೆ ವಿಶ್ರಾಂತಿ ನೀಡಲಾಗಿದ್ದು, ಮೂವರು ಆಟಗಾರರು ಈ ತಂಡಕ್ಕೂ ಆಯ್ಕೆಯಾಗಿದ್ದಾರೆ. ಸೂರ್ಯಕುಮಾರ್ ಜೊತೆಗೆ ವಿಶ್ವಕಪ್ ತಂಡಲ್ಲಿದ್ದ ಪ್ರಸಿದ್ಧಕೃಷ್ಣ ಮತ್ತು ಇಶಾನ್ ಕಿಶನ್ ಈ ಸರಣಿಯಲ್ಲಿ ಆಡಲಿದ್ದಾರೆ.

ಆರಂಭ ಆಟಗಾರ ಋತುರಾಜ್ ಗಾಯಕವಾಡ್ ಅವರು ಉಪನಾಯಕರಾಗಿದ್ದಾರೆ. ಆದರೆ ಕೊನೆಯ ಎರಡು ಪಂದ್ಯಗಳಿಗೆ ಶ್ರೇಯಸ್ ಅಯ್ಯರ್ ಅವರು ಉಪನಾಯಕರಾಗಲಿದ್ದಾರೆ. ಕೇರಳದ ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ ಅವರಿಗೆ ಸ್ಥಾನ ಲಭಿಸಿಲ್ಲ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಋತುರಾಜ್ ಗಾಯಕವಾಡ್ (ಉಪನಾಯಕ), ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಶಿವಂ ದುಬೆ, ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್ ಮತ್ತು ಮುಕೇಶ್ ಕುಮಾರ್.

ಸೂರ್ಯಕುಮಾರ್ ಯಾದವ್

ವೇಳಾಪಟ್ಟಿ

- ನ.23: ಮೊದಲ ಟಿ20 (ವಿಶಾಖಪಟ್ಟಣ)
- ನ.26: 2ನೇ ಪಂದ್ಯ (ತಿರುವನಂತಪುರಂ)
- ನ.28: 3ನೇ ಪಂದ್ಯ (ಗುವಾಹಟಿ)
- ಡಿ.1: 4ನೇ ಪಂದ್ಯ (ರಾಯ್‌ಪುರ)
- ಡಿ.3: 5ನೇ ಪಂದ್ಯ (ಬೆಂಗಳೂರು)

ಪಿಚ್‌ಗೆ ನುಗ್ಗಿದ ವ್ಯಕ್ತಿಗೆ ಒಂದು ದಿನದ ಕಸ್ಟಡಿ

ಅಹಮದಾಬಾದ್ (ಪಿಟಿಐ): ಭಾರತ–ಆಸ್ಟ್ರೇಲಿಯಾ ವಿಶ್ವಕಪ್ ಫೈನಲ್ ಪಂದ್ಯದ ವೇಳೆ ರಕ್ಷಣಾ ಕೋಟೆ ಭೇದಿಸಿ ಮೊಟೇರಾ ಕ್ರೀಡಾಂಗಣದ ಪಿಚ್‌ನತ್ತ ನುಗ್ಗಿದ ಆಸ್ಟ್ರೇಲಿಯಾದ ವ್ಯಕ್ತಿಯನ್ನು ಪೊಲೀಸರು ಗಾಂಧಿನಗರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆತನಿಗೆ ಒಂದು ದಿನದ ಪೊಲೀಸ್ ಕಸ್ಟಡಿ ವಿಧಿಸಲಾಗಿದೆ.

ಪ್ಯಾಲೆಸ್ಟೀನ್ ಪರ ಬರಹವಿದ್ದ ಟೀ ಶರ್ಟ್ ಧರಿಸಿ ವೆನ್ ಜಾನ್ಸನ್ (24) ಎಂಬ ಈ ವ್ಯಕ್ತಿ ಆಟ ನಡೆಯುತ್ತಿದ್ದಾಗ (ಮಧ್ಯಾಹ್ನ 3 ಗಂಟೆಗೆ) ಕ್ರೀಡಾಂಗಣಕ್ಕೆ ಓಡಿಬಂದು ವಿರಾಟ್ ಕೊಹ್ಲಿ ಅವರ ಹೆಗಲ ಮೇಲೆ ಕೈಹಾಕಿದ್ದ. ಆತನನ್ನು ಭದ್ರತಾ ಸಿಬ್ಬಂದಿ ಸುತ್ತುವರಿದು ವಶಕ್ಕೆ ಪಡೆದಿದ್ದರು.

ಅಕ್ರಮ ಪ್ರವೇಶ ಆರೋಪದ ಮೇಲೆ ಆತನನ್ನು ಪೊಲೀಸರು ಬಂಧಿಸಿದ್ದರು. ಟೀ ಶರ್ಟ್ ಮೇಲೆ 'ಪ್ಯಾಲೆಸ್ಟೀನ್‌ನಲ್ಲಿ ಬಾಂಬಿಂಗ್ ನಿಲ್ಲಿಸಿ', 'ಪ್ಯಾಲೆಸ್ಟೀನ್ ಉಳಿಸಿ' ಎಂಬ ಬರಹಗಳಿದ್ದವು.

'ನಾನು ಕೊಹ್ಲಿ ಅಭಿಮಾನಿ. ಅವರನ್ನು ಭೇಟಿಯಾಗಲು ಬಯಸಿದ್ದೆ. ಆ ಕಾರಣಕ್ಕೇ ಇಂಥ ಗಮನಸೆಳೆಯುವ ಶರ್ಟ್ ಧರಿಸಿದ್ದ ಎಂದು ಜಾನ್ಸನ್ ತಮಗೆ ತಿಳಿಸಿರುವುದಾಗಿ' ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕ್ರಿಕೆಟಿಗರಿಗೆ ಮೋದಿ ಸಾಂತ್ವನ

ನವದೆಹಲಿ (ಪಿಟಿಐ): ಭಾನುವಾರ ರಾತ್ರಿ, ಅಹಮದಾಬಾದಿನಲ್ಲಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಸೋತ ನಂತರ ನಿರಾಶೆಯ ಮಡುವಿನಲ್ಲಿದ್ದ ಭಾರತ ತಂಡದ ಆಟಗಾರರಿಗೆ ಪ್ರಧಾನಿ ನರೇಂದ್ರ ಮೋದಿ ಸಾಂತ್ವನದ ಮಾತುಗಳನ್ನು ಆಡಿ ಧೈರ್ಯ ತುಂಬಿದ್ದಾರೆ.

ಭಾರತ ತಂಡದ ಆಟಗಾರರು ಸೋಲಿನ ಆಘಾತದಿಂದ ಮೌನಕ್ಕೆ ಶರಣಾಗಿದ್ದರು. ಈ ವೇಳೆ ಭಾರತ ತಂಡದ ಡ್ರೆಸಿಂಗ್ ರೂಮ್‌ಗೆ ಭೇಟಿಯಿತ್ತ ಮೋದಿ, ಟೂರ್ನಿಯಲ್ಲಿ ಅತ್ಯಧಿಕ ವಿಕೆಟ್ ಪಡೆದಿದ್ದ ಮೊಹಮ್ಮದ್ ಶಮಿ ಅವರನ್ನು ಆಲಂಗಿಸಿ ಧೈರ್ಯ ಹೇಳಿದರು. ರವೀಂದ್ರ ಜಡೇಜಾ ಜೊತೆಯೂ ಮಾತನಾಡಿದರು.

ಮೋದಿ ಭೇಟಿ ಕೊಟ್ಟು ಮಾತನಾಡಿದ ದೃಶ್ಯಗಳನ್ನು ಕ್ರಿಕೆಟಿಗರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

'ಟೂರ್ನಿಯಲ್ಲಿ ಉತ್ತಮವಾಗಿ ಆಡಿದೆವು. ಫೈನಲ್‌ನಲ್ಲಿ ಸೋತಿದ್ದು, ಎಲ್ಲರೂ ಎದೆಗುಂದಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಡ್ರೆಸಿಂಗ್ ರೂಮ್‌ಗೆ ಭೇಟಿ ನೀಡಿದ್ದು ವಿಶೇಷ ಮತ್ತು ಪ್ರೇರಣಾದಾಯಕವಾದುದು' ಎಂದು ಜಡೇಜಾ 'ಎಕ್ಸ್'ನಲ್ಲಿ ಮೋದಿ ಜೊತೆಗಿನ ಚಿತ್ರ ಹಂಚಿಕೊಂಡಿದ್ದಾರೆ. ಶಮಿ ಅವರೂ ಮೋದಿ ಜೊತೆಗಿನ ಚಿತ್ರವನ್ನು ಸಂದೇಶದೊಡನೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೋದಿ ಅವರೂ ಭಾರತ ತಂಡಕ್ಕೆ 'ಎಕ್ಸ್'ನಲ್ಲಿ ಸಂದೇಶ ನೀಡಿದ್ದಾರೆ. 'ಪ್ರಿಯ ಟೀಮ್ ಇಂಡಿಯಾ, ನಿಮ್ಮ ಪ್ರತಿಭೆ ಮತ್ತು ದೃಢಸಂಕಲ್ಪ ಅಸಾಧಾರಣವಾದುದು. ತುಂಬಾ ಸ್ಫೂರ್ತಿಯಿಂದ ಆಡಿ, ದೇಶಕ್ಕೆ ಹೆಮ್ಮೆ ಮೂಡಿಸಿದ್ದೀರಿ. ನಾವು ಇಂದು ಮತ್ತು ಎಂದೆಂದೂ ನಿಮ್ಮ ಜೊತೆಗಿರುತ್ತೇವೆ' ಎಂದು ಬರೆದಿದ್ದಾರೆ. ಮೋದಿ ಅವರ ನಡೆಯನ್ನು ಜಾಲತಾಣಗಳಲ್ಲಿ ಹಲವರು ಶ್ಲಾಘಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ರವೀಂದ್ರ ಜಡೇಜ ಅವರೊಂದಿಗೆ ಮಾತನಾಡಿದರು –ಪಿಟಿಐ ಚಿತ್ರ

ಮಹಿಳಾ ಕ್ರಿಕೆಟ್: ನಾಲ್ಕರಘಟ್ಟಕ್ಕೆ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕ ತಂಡದವರು ಬಿಸಿಸಿಐ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮಧ್ಯಪ್ರದೇಶ ತಂಡವನ್ನು 6 ರನ್‌ಗಳಿಂದ ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು.

ಹಿಮಾಚಲಪ್ರದೇಶದ ಊನಾದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ, 20 ಓವರ್‌ಗಳಲ್ಲಿ ಏಳು ವಿಕೆಟ್ ಕಳೆದುಕೊಂಡು 126 ರನ್ ಕಲೆಹಾಕಿತು. ಮಧ್ಯಪ್ರದೇಶ ನಿಗದಿತ ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 120 ರನ್ ಗಳಿಸಲಷ್ಟೇ ಶಕ್ತವಾಯಿತು.

ನಿಕಿ ಪ್ರಸಾದ್ (42 ರನ್), ಎಚ್. ಭವಿಕಾ ರೆಡ್ಡಿ (27 ರನ್), ಶ್ರೀನಿಧಿ (20ಕ್ಕೆ 2) ಅವರು ಕರ್ನಾಟಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

'ವರ್ಷದ ಗೋಲ್ ಕೀಪರ್': ಹ್ಯಾಟ್ರಿಕ್ ಪ್ರಶಸ್ತಿ ಪೈಪೋಟಿಯಲ್ಲಿ ಸವಿತಾ

ಸವಿತಾ

ಬೆಂಗಳೂರು: ಭಾರತ ತಂಡದ ನಾಯಕಿ ಸವಿತಾ ಪೂನಿಯಾ ಸತತ ಮೂರನೇ ಬಾರಿಗೆ 'ವರ್ಷದ ಗೋಲ್ ಕೀಪರ್' ಪ್ರಶಸ್ತಿಯ ಪೈಪೋಟಿಯಲಿದ್ದಾರೆ. ಈ ವರ್ಷದ 'ಎಫ್‌ಐಎಚ್ ಹಾಕಿ ಸ್ಟಾರ್ ಅವಾರ್ಡ್ಸ್'ನಲ್ಲಿ ಈ ಪ್ರಶಸ್ತಿಗಾಗಿ ಸವಿತಾ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

'ನಾನು ಸತತ ಎರಡು ವರ್ಷ ಈ ಪ್ರಶಸ್ತಿ ಗೆಲ್ಲುತ್ತೇನೆಂದು ನಿರೀಕ್ಷಿಸಿಯೇ ಇರಲಿಲ್ಲ. ಮತ್ತೆ ನಾಮನಿರ್ದೇಶನ ಮಾಡಲಾಗಿದೆ' ಎಂದು ಸವಿತಾ ಹೇಳಿದರು. ಅವರು 2021 ಮತ್ತು 2022ರಲ್ಲಿ 'ವರ್ಷದ ಗೋಲ್‌ಕೀಪರ್' ಪ್ರಶಸ್ತಿಗೆ ಪಾತ್ರರಾಗಿದ್ದರು.

'ಇದು ನನಗೆ ಹೆಮ್ಮೆಯ ಕ್ಷಣ. ನನ್ನ ಕುಟುಂಬಕ್ಕೆ ಮತ್ತು ಸಹ ಆಟಗಾರ್ತಿಯರಿಗೂ ಸಹ' ಎಂದು ಹೇಳಿದರು.

ಸವಿತಾ ನೇತೃತ್ವದ ತಂಡ 2022ರ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ ಸೇರಿದಂತೆ ಕೆಲವು ಟೂರ್ನಿಗಳಲ್ಲಿ ಯಶಸ್ಸು ಸಾಧಿಸಿದೆ. ನೇಷನ್ಸ್ ಕಪ್ ವಿಜಯದಿಂದ ಭಾರತ 2023–24ನೇ ಸಾಲಿಗೆ ಪ್ರೊ ಲೀಗ್‌ಗೆ ಬಡ್ತಿ ಪಡೆದಿದೆ.

ಪ್ರಶಸ್ತಿಗೆ ಪಂಕಜ್– ಕೊಠಾರಿ ಸೆಣಸು

ದೋಹಾ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಮತ್ತು ಸೌರವ್ ಕೊಠಾರಿ ಅವರು ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಹಣಾಹಣಿ ನಡೆಸಲಿದ್ದಾರೆ.

ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಪಂಕಜ್ 900–273 ರಿಂದ ರೂಪೇಶ್ ಶಾ ಅವರನ್ನು ಮಣಿಸಿದರೆ, ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಕೊಠಾರಿ 900–756 ರಿಂದ ಧ್ರುವ್ ಸಿತ್ವಾಲ ಎದುರು ಗೆದ್ದರು.

ಪಂಕಜ್ ಅವರು ಸ್ನೂಕರ್ ಮತ್ತು ಬಿಲಿಯರ್ಡ್ಸ್‌ನಲ್ಲಿ ಇದುವರೆಗೆ 25 ವಿಶ್ವ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಐಟಿಎಫ್ ಮಹಿಳಾ ಟೆನಿಸ್: ಇಂದಿನಿಂದ ಪ್ರಧಾನ ಸುತ್ತಿನ ಹಣಾಹಣಿ

ಭಾರತದ ಎಂಟು ಮಂದಿಗೆ ಅರ್ಹತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಟಿಎಫ್ ಮಹಿಳೆಯರ ವಿಶ್ವ ಟೂರ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಗಮನ ಸೆಳೆದ ಭಾರತದ ಎಂಟು ಆಟಗಾರ್ತಿಯರು ಪ್ರಧಾನ ಹಂತ ಪ್ರವೇಶಿಸಿದರು.

ಬೌರಿಂಗ್ ಇನ್‌ಸ್ಟಿಟ್ಯೂಟ್ ಟೆನಿಸ್ ಕೋರ್ಟ್‌ನಲ್ಲಿ ಆಯೋಜನೆಯಾಗಿರುವ ಟೂರ್ನಿಯ ಪ್ರಧಾನ ಸುತ್ತಿನ ಪಂದ್ಯಗಳು ಮಂಗಳವಾರ ಆರಂಭವಾಗಲಿದೆ. ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ರುತುಜಾ ಭೋಸಲೆ ಅವರಿಗೆ ಮೂರನೇ ಶ್ರೇಯಾಂಕ ಲಭಿಸಿದ್ದು, ಭಾರತದ ಭರವಸೆ ಎನಿಸಿದ್ದಾರೆ.

ರುತುಜಾ ಅವರು ಮೊದಲ ಸುತ್ತಿನಲ್ಲಿ ಭಾರತದವರೇ ಆದ ಸ್ಮೃತಿ ಭಸೀನ್ ಅವರ ಸವಾಲನ್ನು ಎದುರಿಸುವರು. ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದ ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಜತೆ ಆಡಿದ್ದ ರುತುಜಾ ಚಿನ್ನ ಜಯಿಸಿದ್ದರು.

ನಾಲ್ಕನೇ ಶ್ರೇಯಾಂಕ ಪಡೆದಿರುವ ವೈದೇಹಿ ಚೌಧರಿ ಮೊದಲ ಸುತ್ತಿನಲ್ಲಿ ಅಂಜಲಿ ಎದುರು ಆಡಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ 209ನೇ ಸ್ಥಾನದಲ್ಲಿರುವ ಉಜ್ಬೇಕಿಸ್ತಾನದ ನಿಗಿನಾ ಅಬ್ದುರೈಮೋವಾ ಅವರು ಅಗ್ರ ಶ್ರೇಯಾಂಕ ಪಡೆದಿದ್ದಾರೆ.

ಸೋಮವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಕುಂಡಲಿ ಮಜ್ಗೇನ್ ಅವರು 6–3, 2–6, 10–6 ರಿಂದ ಸಂದೀಪ್ತಿ ಸಿಂಗ್ ರಾವ್ ವಿರುದ್ಧ ಅಚ್ಚರಿಯ ಗೆಲುವು ಸಾಧಿಸಿದರು. ಇನ್ನೊಂದು ಪಂದ್ಯದಲ್ಲಿ ಸೋನಲ್ ಪಾಟೀಲ್ 6–4, 6–2 ರಿಂದ ಶ್ರಾವ್ಯ ಶಿವಾನಿಗೆ ಆಘಾತ ನೀಡಿ ಪ್ರಧಾನ ಹಂತ ಪ್ರವೇಶಿಸಿದರು.

ಅರ್ಹತಾ ಸುತ್ತಿನ ಇತರ ಪಂದ್ಯಗಳಲ್ಲಿ ಯಶಸ್ವಿನಿ ಪನ್ವಾರ್ 6–1, 6–3 ರಿಂದ ಅಪೂರ್ವ ವೇಮುರಿ ವಿರುದ್ಧ; ಸೌಮ್ಯಾ ವಿ. 6–0, 6–3 ರಿಂದ ನೇಪಾಳದ ಅಭಿಲಾಷಾ ಬಿಸ್ತಾ ವಿರುದ್ಧ; ಪಾವನಿ ಪಾಠಕ್ 7–6, 6–4 ರಿಂದ ಸೆಜಲ್ ಗೋಪಾಲ್ ವಿರುದ್ಧ; ವಂಶಿತಾ ಪಠಾನಿಯಾ 0–6, 6–4, 10–7 ರಿಂದ ಆರತಿ ಮುನಿಯನ್ ವಿರುದ್ಧ; ಪೂಜಾ ಇಂಗಳೆ 6–3, 7–5 ರಿಂದ ಸೋಹಾ ಸಾದಿಕ್ ವಿರುದ್ಧ ಮತ್ತು ಲಕ್ಷ್ಮಿ ಪ್ರಭಾ ಅರುಣ್‌ಕುಮಾರ್ 6–1, 6–4 ರಿಂದ ನಿಧಿತಾ ರಾಜಮೋಹನ್ ವಿರುದ್ಧವೂ ಗೆದ್ದು ಪ್ರಧಾನ ಸುತ್ತಿಗೆ ಲಗ್ಗೆಯಿಟ್ಟರು.

ADVAITH HYUNDAI

ಅರ್ಹತಾ ಸುತ್ತಿನಲ್ಲಿ ಪೂಜಾ ಇಂಗಳೆ ಆಟದ ವೈಖರಿ

ಭಾರತ– ಕತಾರ್ ಪಂದ್ಯ ಇಂದು

ಭುವನೇಶ್ವರ (ಪಿಟಿಐ): ಭಾರತ ತಂಡದವರು ಮಂಗಳವಾರ ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಫುಟ್‌ಬಾಲ್ ಎರಡನೇ ಸುತ್ತಿನ ಅರ್ಹತಾ ಪಂದ್ಯದಲ್ಲಿ ಪ್ರಬಲ ಕತಾರ್ ತಂಡವನ್ನು ಎದುರಿಸಲಿದ್ದಾರೆ. ನಾಲ್ಕು ವರ್ಷಗಳ ಹಿಂದೆ, ಏಷ್ಯನ್ ಚಾಂಪಿಯನ್ಸ್ ಕತಾರ್ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡ ಸಾಧನೆ ಈಗ ಭಾರತ ತಂಡಕ್ಕೆ ಪಂದ್ಯಕ್ಕಿಳಿಯುವಾಗ ಸ್ಫೂರ್ತಿಯಾಗಲಿದೆ.

ಇದಕ್ಕೆ ಮೊದಲು, ನವೆಂಬರ್ 16ರಂದು ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತ 1–0 ಯಿಂದ ಕುವೈತ್ ತಂಡವನ್ನು ಅದರ ತವರಿನಲ್ಲೇ ಸೋಲಿಸಿದ್ದು, ತಂಡದ ವಿಶ್ವಾಸ ವೃದ್ಧಿಸಿದೆ. ಕತಾರ್ ತಂಡವೇ ಗೆಲ್ಲುನ ನೆಚ್ಚಿನ ತಂಡದಂತೆ ಕಾಣಿಸಿದರೂ, ಭಾರತ ಪ್ರಬಲ ಪೈಪೋಟಿ ನೀಡುವ ನಿರೀಕ್ಷೆಯಲ್ಲಿದೆ.

2019ರ ಸೆಪ್ಟೆಂಬರ್ 10ರಂದು ನಡೆದಿದ್ದ 2022ರ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತ ತಂಡ, ಕತಾರ್ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡಿದ್ದು, ಕೊಲ್ಲಿ ರಾಷ್ಟ್ರದ ತಂಡವನ್ನು ಅಚ್ಚರಿಯಲ್ಲಿ ಕೆಡವಿತ್ತು. ಆ ವರ್ಷದ ಆರಂಭದಲ್ಲೇ ಏಷ್ಯನ್ ಚಾಂಪಿಯನ್ ಆಗಿದ್ದ ಕತಾರ್ ಆ ಪಂದ್ಯವನ್ನು ಸುಲಭವಾಗಿ ಗೆಲ್ಲಬಹುದೆಂಬ ನಿರೀಕ್ಷೆಯಿತ್ತು. ದೋಹಾದಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಅನುಭವಿ ಸುನೀಲ್ ಚೆಟ್ರಿ ಅನಾರೋಗ್ಯದ ಕಾರಣ ಆಡಿರಲಿಲ್ಲ. ಈಗ ಈ ಅನುಭವಿ ಆಟಗಾರ ಕಳಿಂಗ ಕ್ರೀಡಾಂಗಣದಲ್ಲಿ ತಮ್ಮ ಆಟವನ್ನು ತೋರಿಸಲು ಕಾತರದಲ್ಲಿದ್ದಾರೆ.

ಚುರುಕು ಬುದ್ಧಿ
ಉಜ್ವಲ ಭವಿಷ್ಯ
Baidyanath
SHANKHA PUSHPI syrup
Enriched with Bramhi

ಜೀವನದಲ್ಲಿ ಎರಡು ಹೆಜ್ಜೆ ಮುಂದೆ ಇರಿ

- ಸ್ಮರಣ ಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ.
- ಗ್ರಹಿಕಾ ಸಾಮರ್ಥ್ಯ ಸುಧಾರಣೆ
- ಶಿಕ್ಷಣ ಸಂಬಂಧಿತ ಒತ್ತಡಗಳನ್ನು ನಿವಾರಿಸುತ್ತದೆ

ಬೈದ್ಯನಾಥ್ ಶಂಖ ಪುಷ್ಪಿ ಸಿರಪ್

Customer Care : 844 844 4935
www.baidyanath.co